ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.



13-06-2017

ವಿಸ:13-06-2017 10-50 (3) ಎಂಕೆಕೆ:ವಿಆರ್

# ಕರ್ನಾಟಕ ವಿಧಾನಸಭೆ
## ಮಂಗಳವಾರ, ದಿನಾಂಕ 13ನೇ ಜೂನ್ 2017
## 14ನೇ ವಿಧಾನಸಭೆ, 14ನೇ ಅಧಿವೇಶನ
## ವಿಷಯಾನುಕ್ರಮಣಿಕೆ
## (INDEX)

**1.ಪ್ರಶ್ನೋತ್ತರಗಳು.**

**ಅ.ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.**

ಶ್ರೀ ಸಿ.ಟಿ.ರವಿ (91/1120)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಕೆ.ಎಂ.ಶಿವಲಿಂಗೇಗೌಡ (92/1585)
ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)
ಶ್ರೀ ಎಸ್.ತಿಪ್ಪೇಸ್ವಾಮಿ (95/1344)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (96/722)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)
ಶ್ರೀ ಜೆ.ಟಿ.ಪಾಟೀಲ್(97/1579)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಡಾ: ಎಸ್. ಶಿವರಾಜ್ ಪಾಟೀಲ್ (98/1583)
ಶ್ರೀ ಆರ್. ರೋಷನ್‌ಬೇಗ್ (ನಗರಾಭಿವೃದ್ಧಿ ಸಚಿವರು)
ಶ್ರೀ ಎಸ್. ಸುರೇಶ್ ಕುಮಾರ್ (99//86)
ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)
ಶ್ರೀ ಹೆಚ್.ಸಿ.ಬಾಲಕೃಷ್ಣ (101/824)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಬಿ.ಎ.ಮೋಹಿಯುದ್ದೀನ್ ಬಾವಾ (102/1605)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)
ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (103/821)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಸಂಜಯ್ ಬಿ. ಪಾಟೀಲ್ (104/1046)
ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಯು.ಬಿ.ಬಣಕಾರ್ (105/716)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು. 

13-06-2017

ಡಾ:ಜಿ.ಪರಮೇಶ್ವರ್ (ಗೃಹ ಸಚಿವರು)
ಶ್ರೀ ಶ್ರೀನಿವಾಸ್ಎಸ್.ಆರ್.(100/1316)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

**ದಿನಾಂಕ: 06-06-2017 ರ 2ನೇ ಪಟ್ಟಿಯಿಂದ ತಡೆಯಿಡಿಯಲಾದ ಪ್ರಶ್ನೆ**
ಶ್ರೀ ಎಸ್.ಚಿಕ್ಕಮಾದು (29/537)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

**ಆ.ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ದಿನಾಂಕ:13.06.2017ರ ಏಳನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 162 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದಸನದಲ್ಲಿ ಮಂಡಿಸಲಾಯಿತು. (ಅನುಬಂಧ-1) (3-10)

## 2.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

1.ವಿಷಯ:ರಾಜ್ಯದ ವಿವಿಧ ನಗರ ಪಾಲಿಕೆ, ಪುರಸಭೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ.
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)

2.ವಿಷಯ:ಶಿವಮೊಗ್ಗ ನಗರದಲ್ಲಿ ದಿನಾಂಕ 12.06.2017ರ ರಾತ್ರಿ ಪಲ್ಸರ್ ಬೈಕನ್ನು ಸುಟ್ಟು ಹಾಕಿದ್ದು, ರಂಜಾನ್ ಮತ್ತು ಗಣಪತಿ ಹಬ್ಬಗಳ ಸಂದರ್ಭದಲ್ಲಿಯೇ ಈ ರೀತಿಯ ಕೃತ್ಯಗಳು ನಡೆಯುತ್ತಿರುವ ಬಗ್ಗೆ.
ಶ್ರೀ ಕೆ.ಬಿ.ಪಸನ್ನ ಕುಮಾರ್
ಡಾ:ಜಿ.ಪರಮೇಶ್ವರ (ಗೃಹ ಸಚಿವರು)

## 3.ವರದಿಯನ್ನೊಪ್ಪಿಸುವುದು.

ಶ್ರೀ ಬಿ.ಆರ್.ಯಾವಗಲ್ (ಅಧ್ಯಕ್ಷರು, ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಮಿತಿ)
ವಿಷಯ:ನಗರಾಭಿವೃದ್ಧಿ ಮತ್ತು ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 20,21 ಮತ್ತು 22ನೇ ವರದಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**4. ವಿತ್ತೀಯ ಕಾರ್ಯಕಲಾಪಗಳು.**

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ.ಜಿ.ಬೋಪಯ್ಯ (11-21)

**5.ಶಾಸನ ರಚನೆ.**

ವಿಧೇಯಕಗಳನ್ನು ಮಂಡಿಸಲು ಅನುಮತಿ ಕೋರಿಕೆ

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2017.**

ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-2)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2017**

ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-3)

**6 ವಿತ್ತೀಯ ಕಾರ್ಯಕಲಾಪಗಳು.**

2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ.ಎಂ.ಶಿವಲಿಂಗೇಗೌಡ (25-31)

**7.ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಮೇಲೆ ಅಲ್ಪ ಕಾಲಾವಧಿ ಚರ್ಚೆ.**

1.ವಿಷಯ:ರಾಜ್ಯದಲ್ಲಿನ ಕಬ್ಬು ಬೆಳೆಗಾರರ ಸಮಸ್ಯೆಗಳು ಮತ್ತು ಅವರುಗಳಿಗೆ ಆಗಿರುವ ಅನ್ಯಾಯದ ಬಗ್ಗೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಗೋವಿಂದ ಎಂ. ಕಾರಜೋಳ
ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)(ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ)

2.ವಿಷಯ:ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಎತ್ತಿನಹೊಳೆ ಯೋಜನೆಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಬಗ್ಗೆ.
ಶ್ರೀ ಎಂ. ರಾಜಣ್ಣ
ಶ್ರೀ ಎಂ. ಕೃಷ್ಣಾರೆಡ್ಡಿ
ಶ್ರೀ ಎಸ್.ಎನ್.ಸುಬ್ಬಾರೆಡ್ಡಿ
ಶ್ರೀ ಕೆ.ಎಸ್. ಮಂಜುನಾಥಗೌಡ
ಶ್ರೀ ವೈ.ಎ.ನಾರಾಯಣಸ್ವಾಮಿ
ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು) (31-42)

## 8.ಗಮನ ಸೆಳೆಯುವ ಸೂಚನೆಗಳು.

1.ವಿಷಯ:ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಡೆಯುತ್ತಿರುವ ಕಳಪೆ ಕಾಮಗಾರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.
ಶ್ರೀ ಎಂ. ರಾಜಣ್ಣ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

2.ವಿಷಯ:ಹಾವೇರಿ ಜಿಲ್ಲೆಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಭಾರಿ ಮಳೆಯಿಂದಾಗಿ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಬಗ್ಗೆ.
ಶ್ರೀ ಯು.ಬಿ.ಬಣಕಾರ್
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

3.ವಿಷಯ:ಮಡಿಕೇರಿ ತಾಲ್ಲೂಕು ಭಾಗಮಂಡಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಅಡ್ಡಿಪಡಿಸುತ್ತಿರುವ ಬಗ್ಗೆ.
ಶ್ರೀ ಕೆ.ಜಿ.ಬೋಪಯ್ಯ
ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು)

4.ವಿಷಯ:ಸುರಪುರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವಸತಿ ಯೋಜನೆಯಡಿ ಮಂಜೂರಾದ ಮನೆಗಳಿಗೆ ಬೋಗಸ್ ಬಿಲ್ಲನ್ನು ಸೃಷ್ಟಿಸಿ ಹಣ ಪಡೆದಿರುವವರ ವಿರುದ್ಧ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ.
ಶ್ರೀ ರಾಜಾ ವೆಂಕಟಪ್ಪ ನಾಯಕ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

(ವಸತಿ ಸಚಿವರ ಪರವಾಗಿ)

5.ವಿಷಯ:ತರೀಕೆರೆ ವಿಧಾನಸಭಾ ಕ್ಷೇತ್ರದ ಕೆಲವು ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಯೋಜನೆ ಲಭ್ಯವಾಗದೆ ವಿಫಲವಾಗಿರುವ ಬಗ್ಗೆ.
ಶ್ರೀ ಜಿ.ಹೆಚ್. ಶ್ರೀನಿವಾಸ
ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

6.ವಿಷಯ:ಕೊಡಗು ಜಿಲ್ಲೆಯಲ್ಲಿ 94ಸಿ ಅಡಿಯಲ್ಲಿ ಈವರೆಗೆ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಬಗ್ಗೆ.
ಶ್ರೀ ಎಂ.ಪಿ. ಅಪ್ಪಚ್ಚು ರಂಜನ್
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
7.ವಿಷಯ: ನಗರೋತ್ಥಾನ 3ನೇ ಹಂತದ ಯೋಜನೆ ಬಗ್ಗೆ.
ಶ್ರೀ ಗುರುಪಾಟೀಲ ಶಿರವಾಳ
ಶ್ರೀ ಈಶ್ವರ ಬಿ. ಖಂಡ್ರೆ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಸಚಿವರು)

8.ವಿಷಯ:ಪರಿಸರ ರಕ್ಷಣೆಯಲ್ಲಿ ವಿಶ್ವಕ್ಕೆ ಮಾದರಿಯಾಗಿ ರಾಜ್ಯಕ್ಕೆ ಕೀರ್ತಿ ತಂದಿರುವ ಸಾಲುಮರದ ತಿಮ್ಮಕ್ಕ ಅವರ ಜೀವನ ನಿರ್ವಹಣೆಯ ಜವಾಬ್ದಾರಿ ಭರವಸೆಯನ್ನು ಈಡೇರಿಸುವ ಬಗ್ಗೆ.
ಶ್ರೀ ವಿ.ಸುನೀಲ್ ಕುಮಾರ್
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

9.ವಿಷಯ:ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೆ:ಪೆಬಲ್ ಬೈ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಇವರು ಕಾನೂನು ಬಾಹಿರವಾಗಿ ವಸತಿ ಸಮುಚ್ಚಯ ನಿರ್ಮಾಣ ಮಾಡಿದ್ದು, ಸದರಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.
ಶ್ರೀ ವೈ.ಎ.ನಾರಾಯಣಸ್ವಾಮಿ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ವಸತಿ ಸಚಿವರ ಪರವಾಗಿ)

10.ವಿಷಯ: ಕೆ.ಆರ್.ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿ ಮುರುಕನಹಳ್ಳಿ ಗ್ರಾಮದಲ್ಲಿ ನಡೆದಿರುವ ಕೊಲೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಡಿವೈಎಸ್‌ಪಿ ಯವರು ಕರ್ತವ್ಯ ಲೋಪ ಎಸಗಿರುವುದರಿಂದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ.
ಡಾ: ನಾರಾಯಣಗೌಡ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಗೃಹ ಸಚಿವರ ಪರವಾಗಿ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

11.ವಿಷಯ:ತುಮಕೂರು ತಾಲ್ಲೂಕು ಡಣನಾಯಕನಪುರ ಮತ್ತು ವದೇಕಲ್ಲು ಗ್ರಾಮಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಜಲ್ಲಿ ಕ್ರಷರ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.
ಶ್ರೀ ಬಿ. ಸುರೇಶ್‌ಗೌಡ
ಶ್ರೀ ವಿನಯ ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

12.ವಿಷಯ:ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯ ವ್ಯಾಪ್ತಿಯಲ್ಲಿ ಯಗಚಿ ಜಲಾಶಯ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ರೈತರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.
ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

13.ವಿಷಯ:ಕುಷ್ಟಗಿ ಪಟ್ಟಣದ ವ್ಯಾಪ್ತಿಯಲ್ಲಿ ಕೈಗಾರಿಕೆ ವಸಾಹತು ಪ್ರಾರಂಭಿಸಲು ಭೂ ಸ್ವಾಧೀನ ಪಡಿಸಿಕೊಂಡ ರೈತರ ಜಮೀನುಗಳಿಗೆ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ಒದಗಿಸುವ ಬಗ್ಗೆ.
ಶ್ರೀ ದೊಡ್ಡನಗೌಡ ಹೆಚ್.ಪಾಟೀಲ್
ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

14.ವಿಷಯ:ಹೊಳೆನರಸೀಪುರ ಸಾರ್ವಜನಿಕ ಕಟ್ಟಡದ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು ಮತ್ತು ಅಲ್ಲಿನ ನೂತನ ಹೆರಿಗೆ ಆಸ್ಪತ್ರೆ ಕಟ್ಟಡದ ಮರುವಿನ್ಯಾಸ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ನಬಾರ್ಡ್ 23ರ ಯೋಜನೆಯಡಿ ಸೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ.
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

15.ವಿಷಯ:ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅವ್ಯಾಹತವಾಗಿ ನಡೆದಿರುವ ಸೆಕೆಂಡ್ಸ್ ಮದ್ಯದ ಹಾವಳಿಯನ್ನು ತಡೆದು ಎಂ.ಎಸ್.ಐ.ಎಲ್. ವತಿಯಿಂದ ಮದ್ಯದ ಅಂಗಡಿಗಳನ್ನು ಮಂಜೂರು ಮಾಡುವ ಬಗ್ಗೆ.
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಮುಖ್ಯ ಮಂತ್ರಿಯವರ ಪರವಾಗಿ)

16.ವಿಷಯ: ಹಾಸನ ಜಿಲ್ಲೆ ಉಲಿವಾಲ ಗ್ರಾಮದ ಸರ್ವೆ ನಂ.20 ರಲ್ಲಿ ಫಾರಂ ನಿರ್ಮಾಣಕ್ಕಾಗಿ ರೂ.100 ಲಕ್ಷಗಳ ಅನುದಾನವನ್ನು ಮತ್ತು ಹೇಮಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಎರಡು ಸೇತುವೆಗಳ ನಡುವಿನ ಸರ್ಕಾರಿ ಜಾಗದಲ್ಲಿ ಉದ್ಯಾನವನವನ್ನು ನಿರ್ಮಿಸುವ ಕಾಮಗಾರಿಗೆ ರೂ.50 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ.
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

17.ವಿಷಯ:ರಾಜ್ಯದಲ್ಲಿ ಸರ್ಕಾರಿ ಜಮೀನುಗಳನ್ನು ಅವೈಜ್ಞಾನಿಕವಾಗಿ ಡೀಮ್ಡ್ ಫಾರೆಸ್ಟ್ ಪಟ್ಟಿಗೆ ಸೇರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಬಗ್ಗೆ.
ಶ್ರೀ ವಿ. ಸುನೀಲ್ ಕುಮಾರ್
ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು)

18.ವಿಷಯ:ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ದೊಡ್ಡಬೆಲೆ ಗ್ರಾಮದ ಸರ್ಕಾರಿ ಸರ್ವೆ ನಂಬರ್ 07ರಲ್ಲಿ ಸುಮಾರು 20 ವರ್ಷದಿಂದ ವಾಸವಿರುವ ಎಸ್‌ಸಿ/ಎಸ್‌ಟಿ ಜನಾಂಗದ 300 ಕುಟುಂಬದವರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ.
ಶ್ರೀ ಗೋವಿಂದ ಎಂ. ಕಾರಜೋಳ
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

19.ವಿಷಯ:ಮೂಡಿಗೆರೆ ತಾಲ್ಲೂಕಿನಲ್ಲಿ ಮಲೆನಾಡು ಸರ್ಕ್ಯೂಟ್ ಯೋಜನೆಗೆ ಅಪೂರ್ಣಗೊಂಡಿರುವ ಕಟ್ಟಡವನ್ನು ಪೂರ್ಣಗೊಳಿಸಲು ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ.
ಶ್ರೀ ಬಿ.ಬಿ.ನಿಂಗಯ್ಯ
ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು)

20.ವಿಷಯ:ತುಮಕೂರು ವ್ಯಾಪ್ತಿಯ ಬುಗುಡನಹಳ್ಳಿಯ ಕೆರೆಯಿಂದ ದೇವರಾಯಪಟ್ಟಣ ಮೂಲಕ ಮೈದಾಳ ಕೆರೆಯಲ್ಲಿ ನೀರು ಸಂಗ್ರಹಿಸಿ ಕೈಗಾರಿಕಾ ಪ್ರದೇಶಗಳಿಗೆ ನೀರು ಪೂರೈಸುವ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ.
ಶ್ರೀ ಬಿ. ಸುರೇಶ್‌ಗೌಡ
ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

21.ವಿಷಯ:ಯಾದಗಿರಿ ಜಿಲ್ಲೆ ಸುರಪುಪರದ ನಾಗನೂರ ವಿ.ಎಸ್.ಎಸ್.ಬ್ಯಾಂಕ್ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿಕೊಂಡಿದ್ದರೂ ಅವರ ವಿರುದ್ಧ ಈವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ.
ಶ್ರೀ ಗುರು ಪಾಟೀಲ ಶಿರವಾಳ
ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಮುಖ್ಯ ಮಂತ್ರಿಯವರ ಪರವಾಗಿ)

22.ವಿಷಯ:ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಆರಂಭಗೊಂಡಿರುವ ಮೆಡಿಕಲ್ ಕಾಲೇಜಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೇ ಕಟ್ಟಡ ನಿರ್ಮಾಣ ಮಾಡಿರುವ ಹಾಗೂ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು)

23.ವಿಷಯ:ಮೂಡಿಗೆರೆ ತಾಲ್ಲೂಕಿನ ಕಳಸ ಪಟ್ಟಣದ ಮಹಾವೀರ ರಸ್ತೆಯ ದುರಸ್ತಿ ಮತ್ತು ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡದೇ ಇರುವ ಬಗ್ಗೆ.

ಶ್ರೀಬಿ.ಬಿ.ನಿಂಗಯ್ಯ

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ

24.ವಿಷಯ:ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಎಂ.ಎಸ್.ಐ.ಎಲ್.ಮದ್ಯದಂಗಡಿಗಳನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಎಂ. ರಾಜಣ್ಣ

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಮುಖ್ಯ ಮಂತ್ರಿಯವರಪರವಾಗಿ) (42-51)

**9.ಅನುಬಂಧಗಳು-3.**

************

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು. 

13-06-2017

**<u>ಕರ್ನಾಟಕ ವಿಧಾನ ಸಭೆ</u>**

**13ನೇ ಜೂನ್ 2017 ರ ಮಂಗಳವಾರದಂದು ಸದನವು**

**ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ**

**ಬೆಳಗ್ಗೆ 10-54 ಗಂಟೆಗೆ ಸಮಾವೇಶಗೊಂಡಿತು.**

**ಅಧ್ಯಕ್ಷರು : ಶ್ರೀ ಕೆ.ಬಿ. ಕೋಳಿವಾಡ್‌ರವರು**

**ಅಧ್ಯಕ್ಷ ಪೀಠವನ್ನು ಅಲಂಕರಿಸಿದರು**

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಅಧ್ಯಕ್ಷರು: ಈಗ ಪ್ರಶ್ನೋತ್ತರ.

## ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂ.91(1120)**

**(ಉತ್ತರದ ಪ್ರತಿ ಲಗತ್ತಿಸಿದೆ)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಸಿ.ಟಿ. ರವಿ: ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ನಾನು ಕೇಳಿದ್ದೆ. ಅವರು ಕೇವಲ ಅಥಣಿ ಶಹರದಲ್ಲಿ ಮಾತ್ರ ಪೊಲೀಸ್ ಠಾಣೆ ಕುರಿತ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದರೆ, ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಸ್ಥಳಗಳಲ್ಲಿ ಅಂದರೆ ದೇವನೂರು ಮತ್ತು ಕಳಸಾಪುರದಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇದೆ ಎನ್ನುವುದು ನಮ್ಮ ಜನಸಂಪರ್ಕ ಸಭೆಗಳಲ್ಲಿ ಜನರಿಂದ ಬಂದಿರುವ ಬೇಡಿಕೆ. ಹಾಗಾಗಿ, ಆ ಭಾಗದಲ್ಲಿ ಪೊಲೀಸ್ ಠಾಣೆ ತೆರೆಯುವುದಕ್ಕೆ ಕ್ರಮವಹಿಸುತ್ತಾರೆಯೇ? ಎಂಬ ಬಗ್ಗೆ ಉತ್ತರಬಯಸುತ್ತೇನೆ.

ಡಾ:ಜಿ. ಪರಮೇಶ್ವರ: ಪೊಲೀಸ್ ಠಾಣೆಗಳಿಗೆ ಬಹಳಷ್ಟು ಕಡೆ ಬೇಡಿಕೆಯಂತೂ ಇದೆ. ಆದರೆ, ಪೊಲೀಸ್ ಠಾಣೆ ಕೊಡುವುದಕ್ಕೆ, ಪೊಲೀಸ್ ಠಾಣೆ ಪ್ರಾರಂಭ ಮಾಡುವುದಕ್ಕೆ ರಾಷ್ಟ್ರೀಯ ಪೊಲೀಸ್ ಆಯೋಗದ ಪ್ರಕಾರ ಒಂದು ನಿಯಮ ಮಾಡಿದ್ದಾರೆ. ಪೊಲೀಸ್ ಠಾಣೆಯನ್ನು ಹೊಸದಾಗಿ ತೆರೆಯಬೇಕಾದರೆ ಆ ನಿಯಮದ ಚೌಕಟ್ಟಿನಲ್ಲಿ ಬರಬೇಕಾಗುತ್ತದೆ. ಆ ನಿಯಮ ಹೇಗಿದೆ ಎಂದರೆ, ವಿಸ್ತೀರ್ಣ 150 Sq. kilometre ಇರಬೇಕು, ಆಮೇಲೆ, ಜನಸಂಖ್ಯೆ 50 ಸಾವಿರದಿಂದ 60 ಸಾವಿರ ಇರಬೇಕು. ಅಪರಾಧಗಳ ಸಂಖ್ಯೆ ಒಂದು ವರ್ಷಕ್ಕೆ 300ಕ್ಕೂ ಹೆಚ್ಚು ಇರಬೇಕೆಂದು ಒಂದು ನಿಯಮ ಮಾಡಿದ್ದಾರೆ. ಎಲ್ಲಿಯಾದರೂ ಪ್ರಸ್ತಾವನೆ ಅಥವಾ ಬೇಡಿಕೆ ಬಂದಾಗ ಈ ನಿಯಮದ ಚೌಕಟ್ಟಿನಲ್ಲಿ ಅದು ಬಂದಿದ್ದರೆ ಆಗ ನಾವು ಪ್ರಾರಂಭ ಮಾಡುತ್ತೇವೆ. ಒಂದು ವೇಳೆ, ಈ ನಿಯಮಗಳ ಚೌಕಟ್ಟಿನಲ್ಲಿ ಬರದೇಹೋದರೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಅದೇರೀತಿ, ತಾವು ಹೇಳತಕ್ಕಂಥ

ದೇವನೂರು ಮತ್ತು ಕಳಸಾಪುರದಲ್ಲಿ ಈ ನಿಯಮಾವಳಿಯ ಚೌಕಟ್ಟಿಗೆ ಬರುವುದಿಲ್ಲ. ಅದಕ್ಕಾಗಿ ನಾವು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ ಅಷ್ಟೇ ಬಿಟ್ಟರೆ ಬೇರೆ ಏನೂ ಇಲ್ಲ.

ಶ್ರೀ ಸಿ.ಟಿ. ರವಿ: ಈ ರೀತಿಯ ನಿಯಮಗಳಿಗೆ ವ್ಯತಿರಿಕ್ತವಾಗಿ ಪೊಲೀಸ್ ಠಾಣೆಗಳನ್ನು ತೆರೆದಿರತಕ್ಕಂಥ ಉದಾಹರಣೆ ರಾಜ್ಯದಲ್ಲಿ ಇಲ್ಲವೇ?

ಡಾ: ಜಿ. ಪರಮೇಶ್ವರ: ಆ ರೀತಿ ಯಾವುದೂ ನನ್ನ ಗಮನದಲ್ಲಂತೂ ಇಲ್ಲ. ಒಂದುವೇಳೆ, ಆ ರೀತಿ ಇದ್ದರೆ, verify ಮಾಡುತ್ತೇನೆ. ತಮಗೆ ಗೊತ್ತಿದ್ದರೆ, ಇಂಥ ಕಡೆ ಕೊಟ್ಟಿದ್ದಾರೆ, ಹಾಗಾಗಿ, ಇದನ್ನೂ ಕೂಡ ನೀವು ಕೊಡಿ ಎಂದು ಹೇಳಿದರೆ ನಾವು ಪರಿಶೀಲನೆ ಮಾಡುವುದಕ್ಕೆ ಬರುತ್ತದೆ. ಆದರೆ, ನಾವು ಆ ರೀತಿ. . .

ಅಧ್ಯಕ್ಷರು: ನೋಡೋಣ, ಅಂಥವು ಇದ್ದರೆ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ...cancel ಮಾಡುವುದಕ್ಕೆ ಹೋಗಬೇಡಿ.

ಡಾ: ಜಿ. ಪರಮೇಶ್ವರ: Cancel ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಈ ಚೌಕಟ್ಟಿನಲ್ಲಿ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೃಹ ಸಚಿವರೆ, ನಿಜವಾಗಿ ಪೊಲೀಸ್ ಠಾಣೆಗೆ ಹೆಚ್ಚಿಗೆ ಬೇಡಿಕೆ ಬರಬಾರದು. ಆ ರೀತಿಯ ಒಂದು ವ್ಯವಸ್ಥೆ ಮಾಡಿ.

ಡಾ: ಜಿ. ಪರಮೇಶ್ವರ: ನಾನು ಅದನ್ನೇ ಹೇಳುವುದಕ್ಕೆ ಹೊರಟಿದ್ದೆ.

ಶ್ರೀ ಜಗದೀಶ್ ಶೆಟ್ಟರ್: ಜನರು ಪೊಲೀಸ್ ಠಾಣೆ ಬೇಕೆಂದು ಕೇಳಲೇಬಾರದು, ಆ ರೀತಿಯ ವ್ಯವಸ್ಥೆ ಮಾಡಿ.

ಅಧ್ಯಕ್ಷರು: ಸಿ.ಟಿ. ರವಿ ಬೇಕೆಂದು ಹೇಳುತ್ತಾರೆ, ನೀವು ಬೇಡವೆನ್ನುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್: ಬೇಡವೆನ್ನುವುದಿಲ್ಲ. ಪೊಲೀಸ್ ಠಾಣೆಯ ಬೇಡಿಕೆ ಬರಬಾರದು. ಮಾನ್ಯ ಗೃಹ ಸಚಿವರು, ಇಷ್ಟು crimes rate ಆದರೆ ನಾವು ಕೊಡುತ್ತೇವೆ ಎನ್ನುತ್ತಾರೆ. ಅದಾಗುವುದೇ ಬೇಡ ಎಂದು ನಾನು ಹೇಳುವುದು. ಆ ವ್ಯವಸ್ಥೆ ತನ್ನಿ.

ಶ್ರೀ ಗೋವಿಂದ ಎಂ. ಕಾರಜೋಳ: Guidelines ಪ್ರಕಾರ 50 ರಿಂದ 60 ಸಾವಿರ ಜನಸಂಖ್ಯೆ ಇರಬೇಕು ಎಂದು ಹೇಳಿದರು. ಇವತ್ತು ನಮ್ಮ ಮುಧೋಳ ನಗರದಲ್ಲಿ 56 ಸಾವಿರ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಜನಸಂಖ್ಯೆ ಇದೆ. ಕಳೆದ 3 ವರ್ಷಗಳಿಂದ ನಾವು ಪದೇ ಪದೇ ಕೇಳುತ್ತಿದ್ದೇವೆ. ಈ House ನಲ್ಲೂ ಕೂಡ ಪ್ರಸ್ತಾಪ ಮಾಡಿದ್ದೆ. ತಾವು ಉತ್ತರ ಕೊಟ್ಟಿದ್ದೀರಿ.

ಅಧ್ಯಕ್ಷರು: ನೀವು ಈಗ ಮುಧೋಳದ ಬಗ್ಗೆ ಹೊಸದಾಗಿ ಕೇಳುತ್ತಿದ್ದೀರಿ. ಅವರು ಮಾಹಿತಿ ತರಿಸಿದ್ದಾರೋ,ಇಲ್ಲವೋ?

ಶ್ರೀ ಗೋವಿಂದ ಎಂ. ಕಾರಜೋಳ: ಅದಕ್ಕೆ ನಾನು ಸರ್ಕಾರವನ್ನು ತಮ್ಮ ಮುಖಾಂತರ ವಿನಂತಿಸುವುದೇನೆಂದರೆ, ಮುಧೋಳದಲ್ಲಿ traffic ಸಮಸ್ಯೆಯೂ ಜಾಸ್ತಿ ಇದೆ ಮತ್ತು accidents ಜಾಸ್ತಿ ಆಗುತ್ತಿವೆ. ಸಕ್ಕರೆ ಕಾರ್ಖಾನೆಗಳಿರುವುದರಿಂದ ಜಾಸ್ತಿ traffic ಇರುವುದರಿಂದ ಅವಶ್ಯವಿದೆ, ಅದಕ್ಕೆ ಮುಧೋಳಕ್ಕೆ ಒಂದು ಪೊಲೀಸ್ ಠಾಣೆ ಕೊಡುತ್ತಾರೆಯೇ ಎಂದು ಹೇಳಬೇಕು.

ಡಾ: ಜಿ. ಪರಮೇಶ್ವರ: ಮುಧೋಳದ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ನಾವು ನಮ್ಮ ಸರ್ಕಾರದಲ್ಲಿ ಕಳೆದ ವರ್ಷ 40 police station ಕೊಟ್ಟಿದ್ದೆವು. ತಾವು ಹೇಳಿದಹಾಗೆ, ಈ ವರ್ಷದ ಬಜೆಟ್‌ನಲ್ಲಿ ಒಂದು police station ಕೂಡ ಕೊಡುವುದಕ್ಕೆ ನಾವು ಪ್ರಸ್ತಾವನೆ ಮಾಡಲಿಲ್ಲ. ಏಕೆಂದರೆ, law and order situation ಉತ್ತಮವಾಗಿದೆ ಎಂದು ಆ ರೀತಿ ಮಾಡಲಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು(ರಂಜನ್): . . . . ಹೊಸದಾಗಿ ಕೇಂದ್ರಗಳು ಜಾಸ್ತಿಯಾಗುತ್ತವೆ.

(ಗೊಂದಲ)

ಅಧ್ಯಕ್ಷರು: ನೀವು ಯಾವ ಉದ್ದೇಶದಿಂದ ಹೇಳಿದಿರಿ. . .

(ಗೊಂದಲ)

ಶ್ರೀ ವಿ. ಸುನೀಲ್‌ಕುಮಾರ್: . . . . ಒಳ್ಳೆಯ ಮಾತು ಹೇಳಿದಿರಿ ಸಾರ್.

ಶ್ರೀ ಕೆ. ಶಿವಮೂರ್ತಿ : ನ್ಯಾಯ ಪಂಚಾಯಿತಿ ತಂದುಬಿಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ರವಿಯವರೆ, ಅದು ಮುಗಿಯತಲ್ಲ.

ಶ್ರೀ ಸಿ.ಟಿ. ರವಿ: ಕನಿಷ್ಠ out post ಅನ್ನಾದರೂ ಅಲ್ಲಿಗೆ ಕೊಡುವುದರ ಬಗ್ಗೆ consider ಮಾಡಬೇಕು.

ಅಧ್ಯಕ್ಷರು: Consider ಮಾಡುತ್ತಾರೆ.

ಡಾ: ಜಿ. ಪರಮೇಶ್ವರ: ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ನ್ಯಾಯ ಪಂಚಾಯಿತಿ ಕೊಡಿ. ಪೊಲೀಸ್ ಸ್ಟೇಷನ್ ಬೇಡ.

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಯವರು): ಒಂದು ಕಡೆ ಜನಸಂಖ್ಯೆ ಬೆಳೆಯುತ್ತಿದೆ. ಇನ್ನೊಂದು ಕಡೆ ನಾವು ಅಪರಾಧಗಳನ್ನು ನಿಯಂತ್ರಣ ಮಾಡಬೇಕು. ಅಪರಾಧ ಮುಕ್ತ ಸಮಾಜ ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲ ಕಾಲದಲ್ಲೂ ಇರುತ್ತವೆ, ಮುಂದೆಯೂ ಇರುತ್ತವೆ, ಆ ಮುಂದೆಯೂ ಇರುತ್ತವೆ.

ಶ್ರೀ ಕೆ. ಶಿವಮೂರ್ತಿ : ನ್ಯಾಯ ಪಂಚಾಯಿತಿ ತಂದುಬಿಡಿ.

ಶ್ರೀ ಸಿದ್ದರಾಮಯ್ಯ: ನೀವು ನ್ಯಾಯ ಪಂಚಾಯಿತಿ ಮಾಡುತ್ತೀರಾ?

ಅಧ್ಯಕ್ಷರು: ಶಿವಮೂರ್ತಿಯವರೆ, C.M. ಏನು ಹೇಳುತ್ತಾರೆ, ಕೇಳೋಣ. ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ನ್ಯಾಯ ಪಂಚಾಯಿತಿ ಮಾಡಿ, ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಬೇಕಾಗುತ್ತದಷ್ಟೇ. ನಿಮಗೆ ಗೊತ್ತಿರಬಹುದು. 1983-1984ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾದ ನಜೀರ್‌ಸಾಬ್‌ರವರು ಇದ್ದರು.

ಅಧ್ಯಕ್ಷರು: ಗೊತ್ತು.

ಶ್ರೀ ಸಿದ್ದರಾಮಯ್ಯ: ಆಗ ಮಂಡಲ್ ಪಂಚಾಯತ್, ಜಿಲ್ಲಾ ಪರಿಷತ್, ನ್ಯಾಯ ಪಂಚಾಯಿತಿ ಎಂದು ಏನೋ ಒಂದು Act ಮಾಡಿದ್ದರು. ಅಲ್ಲವೇ? ಮಾಡಿತ್ತು. ಏಕೆಂದರೆ, ಹಳ್ಳಿಗಳಲ್ಲಿರುವ ಅನೇಕ civil ಗೆ ಸಂಬಂಧಪಟ್ಟವು ಇರಬಹುದು, ಸಣ್ಣಪುಟ್ಟ criminal ಮೊಕದ್ದಮೆಗಳಿರಬಹುದು. ಅವೆಲ್ಲವನ್ನೂ ಅಲ್ಲೇ ಇತ್ಯರ್ಥ ಮಾಡಬೇಕೆಂದು ಮಾಡಿದ್ದು.

ಅಧ್ಯಕ್ಷರು: ಪಂಚಾಯಿತಿ ಮುಖಾಂತರ ಇತ್ಯರ್ಥ ಆಗಬೇಕೆಂದು ಇತ್ತು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಸಿದ್ದರಾಮಯ್ಯ: ಆ bill ತಂದಾಗ, ಆ ವಿಧೇಯಕ ಮಂಡಿಸಿದಾಗ, ಅಲ್ಲೇ ಚರ್ಚೆ ಮಾಡಬೇಕೆಂದು ಎನ್ನುವ ಒಂದು ಉದ್ದೇಶವಿತ್ತು.

(ಮುಂದು)

ವಿಸ:13-06-2017-(4)-11-00-ಎಸ್ಕೆಂಕೆ-ವಿಆರ್

ಶ್ರೀ ಸಿದ್ದರಾಮಯ್ಯ : ಮುಂದು.,

ಅದು ಕಾನೂನು ಆಯಿತು ಆಮೇಲೆ ಅದನ್ನು ಜಾರಿ ಮಾಡಲಿಕ್ಕಾಗಲಿಲ್ಲ. ಆಮೇಲೆ ನ್ಯಾಯ ಪಂಚಾಯಿತಿ ಮಾಡುವುದನ್ನು ತೆಗೆದು ಹಾಕಿ ಬಿಟ್ಟರು. ಈಗ ಗ್ರಾಮೀಣಾಭಿವೃದ್ಧಿ ಕಾಯಿದೆಯಲ್ಲಿ ಅದು ಇಲ್ಲ. ಇದನ್ನು ರದ್ದು ಮಾಡಬೇಕೆಂದು ಬಹಳ ವಿರೋಧ ಬಂತು. ಶಿವಮೂರ್ತಿಯವರೇ ಇಲ್ಲಿ ಕೇಳಿ. ಸಮಾಜದಲ್ಲಿರತಕ್ಕಂಥ ದುರ್ಬಲವರ್ಗದ ಜನಗಳಿಗೆ ಅನ್ಯಾಯವಾಗುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ತೆಗೆದು ಬಿಟ್ಟರು. ಇದರ ಪರಿಣಾಮ ನೋಡಿಕೊಂಡಿಲ್ಲ ಏನಿಲ್ಲ ನೀವು ಯಾರ ಪರವಾಗಿ ಮಾತನಾಡುತ್ತಿದ್ದೀರಿ? ದುರ್ಬಲ ವರ್ಗದ ಪರವಾಗಿ ಮಾತನಾಡುತ್ತೀದ್ದೀರೋ ಅಥವಾ ಪ್ರಬಲರ ಪರವಾಗಿ ಮಾತನಾಡುತ್ತಿದ್ದೀರೋ?

(ಗೊಂದಲ)

ಶ್ರೀ ಕೆ.ಶಿವಮೂರ್ತಿ : ಇಲ್ಲ sir ತಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ. Three tier system ನಲ್ಲಿ ಆ time ನಲ್ಲಿ ನ್ಯಾಯ ಪಂಚಾಯಿತಿಯನ್ನು ತೆಗೆದು ಹಾಕಿದರು.

ಶ್ರೀ ಸಿದ್ದರಾಮಯ್ಯ : ನೀವು ಮಾತನಾಡಿದ ರೀತಿ ನೋಡಿದರೆ ಪ್ರಬಲರ ಪರವಾಗಿ ಇದ್ದ ಹಾಗೆ ಕಾಣಿಸುತ್ತದೆ.

ಶ್ರೀ ಸಿ.ಟಿ.ರವಿ : ಶಿವಮೂರ್ತಿಯವರು, ಮುಂದಿನ ವಿಸ್ತರಣೆಯಲ್ಲಾದರೂ ಒಂದು ಮಂತ್ರಿ ಭಾಗ್ಯ ಕರುಣಿಸಲಿ ಎಂದು ನಿಮ್ಮ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಂತ್ರಿ ಮಾಡುವುದು ಬಿಡುವುದು ಅದು ನನಗೆ ಸೇರಿದ್ದು. ನೀವು ಏಕೆ ಅದೆಲ್ಲಾ ಕೇಳುತ್ತೀರಿ?

ಶ್ರೀ ಸಿ.ಟಿ.ರವಿ : ತಮ್ಮ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

SRI SIDDARAMAIAH: It is my prerogative.

(ಗೊಂದಲ)

ಶ್ರೀ ಸಿ.ಟಿ.ರವಿ : ಒಳ್ಳೆಯ ಮನುಷ್ಯ ವಕಾಲತ್ತು ಮಾಡುವ ಕೆಲಸ ಮಾಡಬೇಕಲ್ಲವೇ? ನಮಗೆಲ್ಲ ಬೇಕಾದವರು ಒಳ್ಳೆಯ ಮನುಷ್ಯ.

ಶ್ರೀ ಸಿದ್ದರಾಮಯ್ಯ : ನಿಮ್ಮ ವಕಾಲತ್ತು ಬೇಡ. ನಮ್ಮಲ್ಲಿ ಬಹಳ ಜನ ವಕಾಲತ್ತು ಹಾಕುವವರು ಇದ್ದಾರೆ. ನಿಮ್ಮ ವಕಾಲತ್ತು ಬೇಡ. ಬಿಜೆಪಿ ಯವರ ವಕಾಲತ್ತು ನಮಗೆ ಬೇಡವೇ ಬೇಡ. ನಮಗೆ ವಕಾಲತ್ತು ಹಾಕುವವರು ಇದ್ದಾರೆ, ಒಳ್ಳೆಯ advocates ಇದ್ದಾರೆ, ಚೆನ್ನಾಗಿ argument ಮಾಡುವವರು ಇದ್ದಾರೆ, ಅದ್ದರಿಂದ ಅವೆಲ್ಲಾ ಏನೂ ಬೇಕಿಲ್ಲ. ನಾನು ಏನು ಹೇಳುತ್ತೇನೆಂದರೆ, ಈಗ police stationಗಳನ್ನು ಒಂದು guidelines ಪ್ರಕಾರ ಮಾಡಿ ಬಿಟ್ಟಿದ್ದಾರೆ. ಇಷ್ಟು ಜನ ಸಂಖ್ಯೆ ಇರಬೇಕು, ಇಷ್ಟು ಅಪರಾಧಗಳು ಅಲ್ಲಿ ಆಗಬೇಕು, ಎಂದು guidelines ನಲ್ಲಿ ಮಾಡಿದ್ದಾರೆ. ಅಪರಾಧಗಳು ಕಡಿಮೆ ಮಾಡುವಂತೆ ಮಾಡಿ ನಿಯಂತ್ರಣ ಮಾಡಿ police stationಗಳನ್ನು ಕಡಿಮೆ ಮಾಡಬೇಕು. Free society ಆಗಬೇಕು ಎನ್ನುವ ಉದ್ದೇಶ ಇರಬೇಕು. Free society ಗಳಾಗಬೇಕಾದರೆ ಈ ತರಹ ಕಾನೂನುಗಳು police station ಗಳೇ ಇರಬಾರದು, ಅಂಥ ಅಪರಾಧ ಮುಕ್ತವಾಗಬೇಕು. ಆ ಕಡೆಗೆ ನಾವು ಹೋಗಬೇಕೆ ಹೊರತು ಇನ್ನು police stations ಹೆಚ್ಚು ಮಾಡಿ, police stations ಹೆಚ್ಚು ಮಾಡಿ ಎಂದು ಕೇಳಬಾರದು. ಗೊತ್ತಾಯಿತೇ ರವಿಯವರೆ?

ಶ್ರೀ ಸಿದ್ದರಾಮಯ್ಯ : ನೀವು ಲಾಯರ್, ಅಪರಾಧಗಳೇ ಇಲ್ಲದಿದ್ದರೆ ಲಾಯರ್‌ಗಳ ಗತಿ ಏನಾಗಬೇಕು?



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಸಿದ್ದರಾಮಯ್ಯ : ಆಗ ಬೇರೆ ಇನ್ನೇನ್ನಾದರೂ ಮಾಡುತ್ತಾರೆ. ಈಗ arrack ನಿಲ್ಲಿಸಿದೆವು. Arrack ತಯಾರಿಸತಕ್ಕಂಥವರೆಲ್ಲ ಸತ್ತು ಹೋದರೆ? ಈ ತರಹದ್ದು ಬಹಳ ಆಗಿವೆ. ಅದ್ದರಿಂದ, ಲಾಯರ್‌ಗಳಿಗೆ ಬೇರೆ ಕೆಲಸ ಇವೆಯಲ್ಲವೇ? Criminal sideನಲ್ಲಿಯೇ practice ಮಾಡಬೇಕೇ? ಹಾಗಾದರೆ ನೀವು ಲಾಯರ್‌ಗೋಸ್ಕರ ಅಪರಾಧಗಳು ಇರಬೇಕು ಎನ್ನುತ್ತೀರಾ?

ಶ್ರೀ ಸಿ.ಟಿ.ರವಿ : ಇಲ್ಲ ಇಲ್ಲ ಇರಬೇಕು ಎಂದು ನಾನು ಬಯಸುವುದಿಲ್ಲ. ಅಕಸ್ಮಾತ್ ನೀವು ಲಾಯರ್ ಆಗದಿದ್ದರೆ ವಿಧಾನ ಸೌಧಕ್ಕೆ ಬರುತ್ತಿದ್ದಿರೋ ಇಲ್ಲವೋ ಎಂದು ಯೋಚನೆ ಶುರುವಾಯಿತು ಅಷ್ಟೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಲಾಯರ್ ಕೆಲಸ ಚೆನ್ನಾಗಿ ಆಗಲಿಲ್ಲ ಎಂದು ಈ ಕಡೆ ರಾಜಕೀಯ ನಾನು ಬಂದೆ.

ಅಧ್ಯಕ್ಷರು : ಆಯಿತು ಬಿಡಿ, ಮುಂದಿನ ಪ್ರಶ್ನೆ ಶಿವಲಿಂಗೇಗೌಡರವರು ಕೇಳಿ.

**ಪ್ರಶ್ನೆ ಸಂಖ್ಯೆ:1585**

**ಉತ್ತರದ ಪ್ರತಿ ಲಗತ್ತಿಸಿದೆ**

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳಿದ ಉದ್ದೇಶ ಏನೆಂದರೆ, ನಾನು ಒಂದೊಂದು ಸಾರಿ ನಮ್ಮ ಬೆಂಗಳೂರು ಹೊರ ವಲಯಕ್ಕೆ ಹೋಗುತ್ತೇನೆ. ಆ ಸಂದರ್ಭದಲ್ಲಿ ನಮ್ಮ ಕಡೆಯಿಂದ ಬಹಳ ಜನ ಬಂದು ಅಲ್ಲಿ ಸೇರಿಕೊಂಡಿರುವುದನ್ನು ನೋಡುತ್ತೇವೆ. ಅವರಿಗೆ site ಕೊಂಡುಕೊಳ್ಳುವುದಕ್ಕೆ ಆಗುತ್ತಿಲ್ಲ, ಸ್ವಂತ ಮನೆ ಇಲ್ಲದೇ ಬಾಡಿಗೆ ಕಟ್ಟಿ ಕಟ್ಟಿ ಸಾಯುತ್ತಿದ್ದಾರೆ. ಅದಕೋಸ್ಕರ ಏನಾದರೂ ಮಾಡಿ ಸರ್ಕಾರದವರು ಈಗ site ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ Flatಗಳ ಮೂಲಕ ಮನೆಗಳನ್ನು ಆರ್ಥಿಕ ಸಂಕಷ್ಟದಲ್ಲಿರತಕ್ಕಂಥವರಿಗೆ ಕೊಟ್ಟರೆ ಅನುಕೂಲವಾಗುತ್ತದೆ. Factory ಮತ್ತಿತರ ಕಡೆಗೆ ಕೆಲಸಕ್ಕೆಂದು ಜನ ಬಂದು ಸೇರಿಕೊಂಡುಬಿಟ್ಟಿದ್ದಾರೆ. ಅವರು ಇಲ್ಲಿ ಜೀವನ ಮಾಡುವುದೇ ಕಷ್ಟ ಹೀಗಾಗಿ ಸ್ವಂತ ಮನೆ ಕಟ್ಟಲಿಕ್ಕೆ



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗುತ್ತಿಲ್ಲ. ಅದ್ದರಿಂದ, ಅವರಿಗೆ ಸರ್ಕಾರ flat ಗಳನ್ನು ಕಟ್ಟಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಅಲ್ಲಿನ ಜನಗಳು ನನಗೆ ಹೇಳಿದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳಬೇಕಾಯಿತು, ಇಲ್ಲದಿದ್ದರೆ ನಾನು ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ, ಆ ಜನಗಳ ಪರವಾಗಿ ನಾನು ಈ ಪ್ರಶ್ನೆ ಕೇಳಿದೆ. ನೀವು 3,512 flat ಗಳು ನಮ್ಮ ಹತ್ತಿರ ready ಇದೆ, ಆದರೆ 890 ಜನ ಮಾತ್ರ ಬಂದಿದ್ದಾರೆಂದು ಹೇಳಿದಿರಿ. ಅದಕ್ಕೆ ಕಾರಣ ಏನು? ಅವುಗಳು ಆರ್ಥಿಕ ವಲಯದಲ್ಲಿ ಇಲ್ಲವೆ? ಜನಗಳ ಆರ್ಥಿಕ ಮಿತಿಯನ್ನು ಮೀರಿದೆಯೇ? ಆಮೇಲೆ ಅದರ ಗುಣಮಟ್ಟ ಚೆನ್ನಾಗಿಲ್ಲವೇ? ಏತಕ್ಕಾಗಿ ಜನಗಳು ಬರುತ್ತಿಲ್ಲ? ಈ ಎಲ್ಲಾ ಮಹಾನಗರಗಳಲ್ಲಿ ನಿವೇಶನಗಳನ್ನು ಮಾಡುತ್ತಿಲ್ಲ ನಿಲ್ಲಿಸಿದ್ದಾರೆ. ನೀವು ನಿವೇಶನಗಳನ್ನು ಮಾಡುವುದನ್ನು ನಿಲ್ಲಿಸಿ ಲಭ್ಯವಿರತಕ್ಕಂಥ ಜಮೀನುಗಳಲ್ಲಿ flats ಗಳನ್ನೇ ಮಾಡಿ ಆರ್ಥಿಕವಾಗಿ ಹಿಂದುಳಿದವರಿಗೆ ಕೊಡುವುದಕ್ಕೆ ಏನೇನು ಮಾನದಂಡಗಳನ್ನು ಮಾಡಿದಿರಿ? ಆ ಮಾನದಂಡಗಳ ಆಧಾರದ ಮೇಲೆ ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಕಟ್ಟ ಕಡೆಯ ಮನುಷ್ಯರಿಗೂ ಕೂಡ ಬೆಂಗಳೂರಿನಲ್ಲಿ ಒಂದು ಸ್ವಂತ ವಸತಿಯನ್ನು ಹೊಂದಬೇಕೆನ್ನುವ ಭಾವನೆ ಏನು ಇದೆ, ಅದಕ್ಕೆ ಪೂರಕವಾದ ಕೆಲಸ ಈ ಸರ್ಕಾರದಿಂದ ಆಗುತ್ತಾ ಎಂದು ನಾನು ಪ್ರಶ್ನೆ ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ನಮ್ಮ ಶಿವಲಿಂಗೇಗೌಡರವರು ಒಂದು ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ನಮ್ಮ ಸರ್ಕಾರದ ಉದ್ದೇಶ, ಆರ್ಥಿಕವಾಗಿ ಹಿಂದುಳಿದವರಿಗೆ ತಮಗೆ ಗೊತ್ತಿದೆ, drivers, cooks, servants, workers, workshop ನಲ್ಲಿ ಕೆಲಸ ಮಾಡುವಂಥವರು, ಆರ್ಥಿಕವಾಗಿ ಹಿಂದುಳಿದವರಿಗೋಸ್ಕರವಾಗಿಯೇ ಮನೆ ಕಟ್ಟಲಿಕ್ಕೆ BDA ದವರು ಒಂದು plan ಮಾಡಿದ್ದಾರೆ. ಅದರ ಜೊತೆಗೆ ನಾನು ಮತ್ತು ನಮ್ಮ Housing Minister ರವರು ಚರ್ಚೆ ಮಾಡಿದ್ದೇವೆ. ಈಗಾಗಲೇ ನಮ್ಮ DC ಯವರು ಒತ್ತುವರಿ ಜಾಗವನ್ನು ತೆರವು ಗೊಳಿಸಿದ್ದಾರೆ, ಅಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಜನರಿಗೆ ಮನೆಗಳನ್ನು ಕಟ್ಟುವಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆದಷ್ಟು ಬೇಗನೆ ಅದನ್ನು ಮಾಡುತ್ತೇವೆ. ಇನ್ನೊಂದು ವಿಷಯ ಏನೆಂದರೆ, ಈ metro ಎಲ್ಲಿಲ್ಲಿಗೆ ಹೋಗುತ್ತದೆಯೋ ಆ ಜಾಗಗಳಲ್ಲಿ ಕೆಲವು townshipಗಳನ್ನು ಮಾಡಿ economically weaker sectionಗೆ ಮಾಡಬೇಕೆಂದು ಈಗಾಗಲೇ ಆದೇಶ ಕೊಡಲಾಗಿದ್ದು ಅದನ್ನು ಕೂಡ ಮಾಡುತ್ತಿದ್ದೇವೆ. BDA ದವರು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಟ್ಟಿರುವ flats ಒಳ್ಳೆಯ ಗುಣ ಮಟ್ಟದಿಂದ ಕೂಡಿದ್ದು ಬಹುಶ: ಅವರಿಗೆ ಕೇಂದ್ರ ಸರ್ಕಾರದಿಂದ ಎರಡು award ಗಳು ಕೂಡ ಬಂದಿವೆ. ಅಲ್ಲಿ ತೊಂದರೆ ಏನಾಗಿದೆ ಎಂದರೆ, 3,500 ಕ್ಕೂ ಹೆಚ್ಚು flats ಗಳನ್ನು ready ಮಾಡಿ ಅರ್ಜಿ ಕರೆದಾಗ demonetization ಬಂದಿದ್ದರಿಂದ ಕೆಲವು ಬೇಡಿಕೆಗಳು ಕಡಿಮೆಯಾಗಿವೆ. ಈಗ ಯಾರು economically weaker section ನಲ್ಲಿ ಬರುತ್ತಾರೆ ಅವರಿಗೆ cost subsidy ಮಾಡಿ ಅವರಿಗೆ 25% ಕಡಿಮೆ ದರದಲ್ಲಿ ಕೊಡಲಿಕ್ಕೆ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸುಮಾರು 44% ನಷ್ಟು ಈ ದರದಲ್ಲಿ ಕಡಿಮೆ ಕೊಡಲಿಕ್ಕೆ ಮಾಡುತ್ತಿದ್ದೇವೆ. ತಮ್ಮ ಒಳ್ಳೆಯ ಸಲಹೆಯನ್ನು ತೆಗೆದುಕೊಳ್ಳುತ್ತೇವೆ. ಇನ್ನು ಮುಂದೆ ಹೆಚ್ಚು ಜನರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ಕಟ್ಟತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಆದಷ್ಟು ಬೇಗನೆ ಜಾರಿಗೆ ತರುತ್ತೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈಗೇನು flats ಗಳನ್ನು ಕಟ್ಟಿ rate ಇಂತಿಷ್ಟು ಎಂದು fix ಮಾಡಿದಿರಿ, ಅದು ಈ note ban ಆದ ಮೇಲೆ ಖಾಸಗಿಯವರು ಕಟ್ಟಿರುವ flatsಗಳಲ್ಲಿಯೂ ಸಹ rate ಬಹಳ ಮಟ್ಟಿಗೆ ಇಳಿದು ಹೋಗಿದೆ. ನಿಮ್ಮ rate ಜಾಸ್ತಿ ಇದೆ, ಆ rate ಕುಸಿದಿದೆ, ಅಲ್ಲಿಗೂ ಇಲ್ಲಿಗೂ ಹೋಲಿಸಿದರೆ ನಿಮ್ಮ rate ಜಾಸ್ತಿ ಇದೆ, ಎಂದು ಜನ ಹೇಳುತ್ತಾರೆ. ಅದಕೋಸ್ಕರ ಇದಕ್ಕೆ ಏನಾದರೂ ಮಾಡಿ. ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಜನಗಳಿಗೆ ಸಹಾಯ ಮಾಡಲೇಬೇಕು ಎಂದಾಗ ಸರ್ಕಾರ ಸ್ವಲ್ಪ ನಷ್ಟ ಅನುಭವಿಸಿದರೂ ಪರವಾಗಿಲ್ಲ ಅವರಿಗೆ ವಸತಿ ಕೊಡತಕ್ಕಂಥದ್ದು ಸೂಕ್ತವಿದೆ. ಅದಕೋಸ್ಕರ ಏನಾದರೂ subsidy ಲೆಕ್ಕದಲ್ಲಾದರೂ ಮಾಡಿ ಖಾಸಗಿ ರಂಗಕ್ಕಿಂತ ಕಡಿಮೆ ದರದಲ್ಲಿ ವಿತರಣೆ ಮಾಡತಕ್ಕಂಥ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ.ಜೆ.ಜಾರ್ಜ್ : ಅಧ್ಯಕ್ಷರೇ, ಈಗಾಗಲೇ ನಮ್ಮಲ್ಲಿ ಒಂದು bed room house ಗೆ 12 ಲಕ್ಷ ರೂಪಾಯಿ charge ಮಾಡುತ್ತೇವೆ. ಆರ್ಥಿಕವಾಗಿ ಹಿಂದುಳಿದವರಿಗೆ 9 ಲಕ್ಷ ರೂಪಾಯಿಗಳ ದರದಲ್ಲಿ ಕೊಡುತ್ತೇವೆ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 6.75 ಲಕ್ಷ ರೂಪಾಯಿಗಳ ದರದಲ್ಲಿ ಕೊಡುತ್ತೇವೆ. ನಮ್ಮ ದರ 12 ಲಕ್ಷ ರೂಪಾಯಿಗಳು ಕೂಡ ಬಹಳ ಕಡಿಮೆ ಇದೆ. ಏಕೆಂದರೆ, private ನವರು ನಮ್ಮ ದರಕ್ಕಿಂತ ಸುಮಾರು 60 ಪಟ್ಟು ಜಾಸ್ತಿ ಇರುತ್ತದೆ. ಇಲ್ಲಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಏನಾಗುತ್ತದೆ ಎಂದರೆ, ಹಣ ಎಲ್ಲಾ bank through ಬರಬೇಕಾಗುತ್ತದೆ, bank ಸಾಲ ಕೊಡಬೇಕಾಗುತ್ತದೆ. ಇದರಿಂದಾಗಿ, ಕೆಲವು ಕಡೆ ತಡವಾಗಿರಬಹುದು. ನನಗೆ ಅನ್ನಿಸಿದ ಪ್ರಕಾರ ಮುಖ್ಯಮಂತ್ರಿಗಳು ಕೂಡ ಈಗಾಗಲೇ ಆದೇಶ ಕೊಟ್ಟಿದ್ದಾರೆ, ಇದು ಕೂಡ ಹೆಚ್ಚಾಗುತ್ತದೆ. ಅದಕೋಸ್ಕರವಾಗಿ ಸರ್ಕಾರಿ ಜಾಗ encroachment ಆಗಿರುವುದನ್ನು ನಾವು ತೆರವುಗೊಳಿಸಿದ್ದೇವೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮನೆಗಳನ್ನು ಕಟ್ಟಿದರೆ ಇನ್ನು ಕಡಿಮೆ ದರದಲ್ಲಿ ನಾವು ಅವರಿಗೆ ಮನೆಗಳನ್ನು ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ಒಂದು announcement.

ANNOUNCEMENT

HON'BLE SPEAKER : The officers of Srilankan Parliament are witnessing the proceedings of this August Session from the distinguishers gallery. On behalf of the Hon'ble Members, I welcome them and I wish them a pleasant stay in Karnataka.

***

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಅಧ್ಯಕ್ಷರು : Next question No.3 Dr.Sudhakar, ಅವರು ಇಲ್ಲ. Next Mr.Narayana swamy, ಅವರು ಇಲ್ಲ. ತಿಪ್ಪೇಸ್ವಾಮಿ ತಾವು ಕೇಳಿ.

**ಪ್ರಶ್ನೆ ಸಂಖ್ಯೆ:1344**

**ಉತ್ತರದ ಪ್ರತಿ ಲಗತ್ತಿಸಿದೆ**

ಶ್ರೀ ತಿಪ್ಪೇಸ್ವಾಮಿ ಎಸ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ನಮ್ಮ ನೇರಲಗುಂಟೆ ಗ್ರಾಮದ ಪಕ್ಕದಲ್ಲಿ DRDO, Indian Institute of Science ಮತ್ತು Solar park ಎಲ್ಲಾ ಇರುವುದರಿಂದ, ಮಾನ್ಯ ಗೃಹ ಸಚಿವರಿಗೆ ನಾನೊಂದು ಪತ್ರ ಕೊಟ್ಟಿದ್ದೆ. SP ಯವರು inspection ಮಾಡಿ ಅಲ್ಲಿ Out Police Station ಅವಶ್ಯಕತೆ ಇದೆ ಎಂದು report ಕೊಟ್ಟಿದ್ದಾರೆ. ದಯಮಾಡಿ, ಅಲ್ಲಿ ಒಂದು Out Police Station ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಡಾ:ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಈ ಹಿಂದಿನ ಪ್ರಶ್ನೆಗೆ ಉತ್ತರ ನೀಡಿದ ರೀತಿಯಲ್ಲಿಯೇ ಇಲ್ಲಿಯೂ ಕೂಡ ಅದೇ ಪರಿಸ್ಥಿತಿ ಇದೆ. ಆದರೆ, ಇಲ್ಲಿ ಒಂದು ಹೊಸ development ಏನೆಂದರೆ, DRDO, defence establishment ಬಹಳ ದೊಡ್ಡ ಪ್ರಮಾಣದಲ್ಲಿ ಅವರ ಕ್ಷೇತ್ರದಲ್ಲಿ ಬರುತ್ತಿದೆ. ಅದೇ ರೀತಿಯಾಗಿ Indian Institute of Science ದ್ದು second campus ಮಾಡಬೇಕೆಂದು ಅಲ್ಲಿ ಕೂಡ ಪ್ರಾರಂಭವಾಗಿದೆ. ಹೀಗಾಗಿ ಅಲ್ಲಿ ಅಗತ್ಯತೆಯ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ. ಅದನ್ನು ನಾನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

(ಮುಂದು)

13.06.2017 11.10 (5) KS:PS

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 96(722)**
**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಗಡಿಭಾಗದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಚೆಕ್ ಪೋಸ್ಟ್‌ಗಳಲ್ಲಿ ಗಣಕೀಕರಣಗೊಳಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಗಣಕೀಕರಣಗೊಳಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇವತ್ತಿನದಿವಸ ಅಲ್ಲಿ ಏನಾಗುತ್ತಿದೆ ಎಂದರೆ, ಮಹಾರಾಷ್ಟ್ರದಿಂದ ಕರ್ನಾಟಕ ರಾಜ್ಯಕ್ಕೆ ಕೋಲ್ ಮತ್ತು ಸಕ್ಕರೆ ಹಾಗೂ ಇನ್ನಿತರ materials ಬರುತ್ತವೆ. ಆದರೆ ಅವುಗಳನ್ನು ತೂಕ ಮಾಡುವುದಕ್ಕೆ ಅಲ್ಲಿ weigh bridge ಇಲ್ಲ. ತೊಂದರೆ ಏನಾಗುತ್ತಿದೆ ಎಂದರೆ, ಅಲ್ಲಿ weigh bridge ಇಲ್ಲದೆ ಇರುವುದರಿಂದ private weigh bridgeಗೆ ಹೋದರೆ ಅಲ್ಲಿ charge ಜಾಸ್ತಿ ಆಗುತ್ತದೆ. ಅದನ್ನು ಒಪ್ಪುವುದಿಲ್ಲ. ಈ ರೀತಿಯಾದ ತೊಂದರೆಗಳು ನಿಪ್ಪಾಣಿಯಲ್ಲಿ ನಡೆಯುತ್ತಿವೆ. ಆದ್ದರಿಂದ, ಇದನ್ನು ಸರಿ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ? ಸರ್ಕಾರದ ಕಡೆಯಿಂದ weigh bridge ಹಾಕಿದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿ):- ಮಾನ್ಯ ಉಮೇಶ್ ವಿಶ್ವನಾಥ್ ಕತ್ತಿಯರವರೆ, ಕರ್ನಾಟಕ ರಾಜ್ಯದಲ್ಲಿ ಒಟ್ಟು 20 ಚೆಕ್‌ಪೋಸ್ಟ್‌ಗಳಿವೆ. ನಿಮ್ಮ ಬೆಳಗಾವಿ ವಿಭಾಗದಲ್ಲಿ ನಾಲ್ಕು ಚೆಕ್‌ಪೋಸ್ಟ್‌ಗಳಿವೆ. ಚೆಕ್‌ಪೋಸ್ಟ್‌ಗಳಲ್ಲಿ computerization ಆಗಿವೆಯೇ ಎಂದು ತಾವು ಪ್ರಶ್ನೆ ಕೇಳಿದ್ದೀರಿ. ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಈಗಾಗಲೇ computerization ಆಗಿವೆ. ಜುಲೈ 1ನೇ ತಾರೀಖಿನಿಂದ G.S.T. ಜಾರಿಗೆ ಬರುತ್ತದೆ. ಆಗ ಎಲ್ಲಾ check postಗಳು ರದ್ದಾಗುತ್ತವೆ. ಇದು ನಿಮಗೆ ಗೊತ್ತಾಯಿತೆ? ನಿಮ್ಮ ಪ್ರಶ್ನೆ ಮತ್ತು ಇದಕ್ಕೆ ಬೇಕಾಗಿರುವ ಉತ್ತರ ಅಪ್ರಸ್ತುತ. Ok. Thank you.

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ:- ಮಾನ್ಯ ಮುಖ್ಯ ಮಂತ್ರಿಗಳೆ, ಮಹಾರಾಷ್ಟ್ರದ ಕಡೆಯಿಂದ ಕಲ್ಲಿದ್ದಲು ಬರುತ್ತಿದೆ. ಅದನ್ನು ತೂಕ ಮಾಡುವುದಕ್ಕೆ ಅಲ್ಲಿ weigh bridge ಇಲ್ಲ. ಆದ್ದರಿಂದ, ರಸ್ತೆಗಳಲ್ಲಿ ಟ್ರಕ್‌ಗಳನ್ನು ನಿಲ್ಲಿಸಿ ತೊಂದರೆ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಚೆಕ್‌ಪೋಸ್ಟ್‌ಗಳಲ್ಲಿ ಗಣಕೀಕರಣ ಮಾಡಿ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆದರೆ, ಈಗ weigh bridge ಗೆ ಹೊರಟು ಹೋಗಿದ್ದಾರೆ. ಅದರ ಬಗ್ಗೆ ನೋಡೋಣ.

13-06-2017

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ:- ಮಾನ್ಯ ಮುಖ್ಯಮಂತ್ರಿಗಳೆ, ಸರ್ಕಾರದ ಕಡೆಯಿಂದ weigh bridge ಮಾಡುವುದಕ್ಕೆ ಏನು ತೊಂದರೆ?

ಅಧ್ಯಕ್ಷರು:- ಮಾನ್ಯ ಉಮೇಶ್ ವಿಶ್ವನಾಥ್ ಕತ್ತಿರವರೆ, ತಾವು ಈಗಾಗಲೇ ಕೇಳಿರುವ ಪ್ರಶ್ನೆ ಬೇರೆ ಇದೆ. ಆದರೆ, ತಾವು ಇನ್ನೊಂದು ವಿಷಯದ ಬಗ್ಗೆ ಪ್ರಶ್ನೆ ಕೇಳುತ್ತಿದ್ದೀರಿ. ಸರ್ಕಾರ ಈ ಬಗ್ಗೆ ವಿಚಾರ ಮಾಡುತ್ತದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, weigh bridge ಮಾಡತಕ್ಕಂಥದು commercial tax departmentಗೆ ಸಂಬಂಧಪಟ್ಟಿಲ್ಲ. ಇದು motor vehicles tax departmentಗೆ ಸಂಬಂಧಪಡುತ್ತದೆ. ಆದ್ದರಿಂದ, ತಾವು ಕೇಳಿರುವ ವಿಚಾರದ ಬಗ್ಗೆ ಬೇರೆ ಪರಿಶೀಲನೆ ಮಾಡೋಣ. ಚೆಕ್‌ಪೋಸ್ಟ್‌ಗಳ ಬಗ್ಗೆ ತಾವು ಈಗ ಪ್ರಶ್ನೆ ಕೇಳಿದ್ದೀರಿ. ಜುಲೈ 1ನೇ ತಾರೀಖಿನಿಂದ G.S.T. ಜಾರಿಗೆ ಬರುತ್ತದೆ. ಈಗ 20 ಚೆಕ್‌ಪೋಸ್ಟ್‌ಗಳನ್ನು ನಾವು abolish ಮಾಡುತ್ತೇವೆ. ಈ ಬಗ್ಗೆ ಮತ್ತೆ ಏನಾದರೂ ಉತ್ತರ ಬೇಕಾಗಿದೆಯೇ? ಬೇರೆ ಏನೂ ಉತ್ತರ ಬೇಕಾಗಿಲ್ಲ ಅನಿಸುತ್ತೆ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಮುಖ್ಯಮಂತ್ರಿಗಳೆ, ಶೆಟ್ಟರ್‌ಗೆ ತಕ್ಕಡಿ ಬೇಕಾಗುತ್ತದೆ. ಆದ್ದರಿಂದ, ಅವರು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಈ ಶೆಟ್ರು ವ್ಯಾಪಾರ ಮಾಡುವುದನ್ನು ಬಿಟ್ಟು ಎಷ್ಟೋ ವರ್ಷಗಳಾಗಿವೆ. ಈಗ ಕೇವಲ ಶುಗರ್ ಫ್ಯಾಕ್ಟರಿಯನ್ನು ಹಿಡಿದುಕೊಂಡಿದ್ದಾರೆ ಹೊರತು ಬೇರೆ ಯಾವುದೇ ವ್ಯಾಪಾರವನ್ನು ಮಾಡುತ್ತಿಲ್ಲ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1579**

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಶ್ರೀ ಜೆ.ಟಿ.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 1351 ಪೊಲೀಸ್ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ಮತ್ತು 141 ಸಿಬ್ಬಂದಿಗಳ ಕೊರತೆ ಇದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಒಟ್ಟು 1492 ಪೊಲೀಸ್ ಹುದ್ದೆಗಳ ಮಂಜೂರಾತಿ ಆಗಿದ್ದು, ಇದು ಎಷ್ಟನೇ ಸಾಲಿನಲ್ಲಿ ಮಂಜೂರಾತಿ ಆಗಿದೆ ಹಾಗೆಯೇ ಆ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅವಧಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಜನಸಂಖ್ಯೆ ಎಷ್ಟಿತ್ತು? ಈಗ ಬಾಗಲಕೋಟೆ ಜಿಲ್ಲೆಯಲ್ಲಿ ಜನಸಂಖ್ಯೆ ಹೆಚ್ಚಾಗಿರುವುದರಿಂದ ಹೆಚ್ಚಿನ ಸಿಬ್ಬಂದಿಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಡಾ: ಜಿ.ಪರಮೇಶ್ವರ:- ಮಾನ್ಯ ಅಧ್ಯಕ್ಷರೆ, ಬಹುಶ: ಹಿಂದೆ ಎಂದೂ ಕೂಡ ಇಲ್ಲದೆ ಇರುವಷ್ಟು ಹುದ್ದೆಗಳನ್ನು ಕಳೆದ ಮೂರು ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಮಾಡಿದ್ದೇವೆ. ಸುಮಾರು 21,000 ಹುದ್ದೆಗಳನ್ನು recruit ಮಾಡಿದ್ದು, ಇದರಲ್ಲಿ constables, Sub inspectors ಹುದ್ದೆಗಳೆಲ್ಲಾ ಸೇರಿವೆ. ಜಿಲ್ಲಾವಾರು ಎಲ್ಲೆಲ್ಲಿ vacancy ಇದೆ ಎಂಬುದನ್ನು ನಾವು ನೋಡಿಕೊಂಡು recruitment ಮಾಡುತ್ತಿದ್ದೇವೆ. ಬಾಗಲಕೋಟೆ ಜಿಲ್ಲೆಯಲ್ಲಿ ನಮಗೆ 1492 strength ಇರಬೇಕಾಗಿತ್ತು. ಅದರಲ್ಲಿ 1351 strength ಇದೆ. 141 vacancy ಇದೆ. ಈ ಹುದ್ದೆಗಳಿಗೆ 2017-18ನೇ ಸಾಲಿನಲ್ಲಿ ನೋಟಿಫಿಕೇಷನ್ ಮಾಡಿದ್ದೇವೆ. 2018-19ನೇ ಸಾಲಿನ vacancy ಗಳನ್ನು ಕೂಡ ಈ ವರ್ಷಕ್ಕೆ ಸೇರಿಸಿಕೊಂಡು ಕೊಡಬೇಕೆಂದು ನಮ್ಮ Finance Department ಗೆ ನಾವು request ಮಾಡಿದ್ದೇವೆ. ಅದು ಅಪ್ರೂವಲ್ ಆಗಿ ಬಂದ ಮೇಲೆ 141 vacancyಗಳನ್ನು ತುಂಬುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜೆ.ಟಿ.ಪಾಟೀಲ್:- ಮಾನ್ಯ ಸಚಿವರೆ, ನಾನು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ, 1492 ಹುದ್ದೆಗಳು ಎಷ್ಟು ವರ್ಷಗಳ ಹಿಂದೆ ಮಂಜೂರಾತಿ ಆಗಿತ್ತು? ಈಗ ಬಾಗಲಕೋಟೆ ಜಿಲ್ಲೆಯಲ್ಲಿ ಜನಸಂಖ್ಯೆ ಜಾಸ್ತಿ ಆಗಿರುವುದರಿಂದ, ಹಾಲಿ ಇರುವ ಮಂಜೂರಾತಿ ಹುದ್ದೆಗಳನ್ನು ಹೆಚ್ಚು ಮಾಡಿಕೊಡುತ್ತೀರಾ ಎಂದು ನಾನು ಉಪ ಪ್ರಶ್ನೆಯನ್ನು ಕೇಳಿದ್ದೇನೆ.

ಡಾ:ಜಿ.ಪರಮೇಶ್ವರ:- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ re-examine ಮಾಡಬೇಕಾಗುತ್ತದೆ. ಇತ್ತೀಚೆಗೆ ಎಲ್ಲಾ ಕಡೆ ಜನಸಂಖ್ಯೆ ಜಾಸ್ತಿ ಆಗಿದೆ. ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಇರುವ ಸಿಬ್ಬಂದಿಗಳ ಸಂಖ್ಯೆಯನ್ನು ಪುನರ್‌ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ, ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:98(1583)**

13-06-2017

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಡಾ: ಎಸ್. ಶಿವರಾಜ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 24x7 approval ಮಾಡುವ ಸಂದರ್ಭದಲ್ಲಿ consultant ಅವರು plan ಮಾಡಿದ್ದಾರೆ. ಆದರೆ, consultant ಮಾಡಿರುವ plan ತಪ್ಪು ಇದೆ ಎಂದು ಈಗ ಹೇಳುತ್ತಿದ್ದಾರೆ. ಎರಡನೇ ವಿಚಾರ ಏನೆಂದರೆ, Contractor ಮಾತನ್ನು officers ಕೇಳಬೇಕೋ ಅಥವಾ consultant ಮಾತನ್ನು officers ಕೇಳಬೇಕೋ? ಈ consultant ಹೇಳತಕ್ಕಂಥ ಮಾತನ್ನು ಅವರು ಒಪ್ಪುತ್ತಿಲ್ಲ. ಮೂರನೇ ವಿಚಾರ ಏನೆಂದರೆ, ಈಗ ಅಮೃತ್ ಯೋಜನೆ ಬಗ್ಗೆ ಹೇಳುತ್ತಿದ್ದಾರೆ. ಅಮೃತ್ ಯೋಜನೆ ಆಗಿರಬಹುದು ಮತ್ತು ADB Assisted NKUSIP ಯೋಜನೆ ಆಗಿರಬಹುದು. ಇಲ್ಲಿ distribution and raising main ತೆಗೆದುಕೊಂಡಿದ್ದೇವೆ. ಆದರೆ, ಅಮೃತ್ ಯೋಜನೆಯಲ್ಲಿ ನಾವು ಏನೂ ತೆಗೆದುಕೊಂಡಿಲ್ಲ. Distribution line and tanks ತೆಗೆದುಕೊಂಡಿದ್ದೇವೆ. ಅದಕ್ಕೆ ಇದಕ್ಕೆ ಏನು ವ್ಯತ್ಯಾಸ ಆಗುತ್ತದೆ? NKUSIP ನಲ್ಲಿ ಕಂಪನಿಗೆ ಇವರು ಕೊಟ್ಟಿರುವ ಯೋಜನೆಗಳು ಯಾವ ಊರಿನಲ್ಲಿಯೂ ಕೂಡ ಅವರು ಕಾಮಗಾರಿಯನ್ನು ಪೂರ್ಣ ಮಾಡಿಲ್ಲ. ರಾಯಚೂರಿನಲ್ಲಿ 45 ಕೋಟಿ ರೂಪಾಯಿ ಎಂದು Financial Progress ತೋರಿಸಿದ್ದಾರೆ. ಅವರು ಕೇವಲ ಪೈಪ್‌ಗಳನ್ನು ತಂದು ಅಲ್ಲಿ ಕೆಡವಿದ್ದಾರಷ್ಟೆ. ಆದರೆ, Physical progress in the site ಏನೂ ಆಗಿಲ್ಲ. NKUSIP ಯಲ್ಲಿ ಏನಾಗುತ್ತಿದೆ ಎಂಬುದು ನಮಗೆ ಬಹಳ ಸಮಸ್ಯೆ ಆಗಿದೆ. ಬೆಂಗಳೂರಿನಲ್ಲಿ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ MDR ಅಧ್ಯಕ್ಷತೆಯಲ್ಲಿ ಸುಮಾರು 30 ರಿಂದ 40 ಸಭೆಗಳನ್ನು ಮಾಡಿದ್ದರೂ ಕೂಡ ಅಲ್ಲಿನ ಸೈಟ್‌ನಲ್ಲಿ ಏನೂ ಬದಲಾವಣೆ ಆಗುತ್ತಿಲ್ಲವೆಂದರೆ ಹೇಗೆ? ಸರ್ಕಾರದಿಂದ 120 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಆದ್ದರಿಂದ, ಸರ್ಕಾರಕ್ಕೆ ನಾವು ಬಹಳ ಧನ್ಯವಾದಗಳನ್ನರ್ಪಿಸುತ್ತೇವೆ. ಆದರೆ, ನಮಗೆ ಕುಡಿಯುವ ನೀರಿನ ಯೋಜನೆ ಬಹಳ ಮುಖ್ಯವಾಗಿದೆ. ಆದ್ದರಿಂದ, ಇದನ್ನು ಸರ್ಕಾರ ಯಾವ ರೀತಿಯಲ್ಲಿ ಪೂರೈಸುತ್ತದೆ ಎಂಬ ಬಗ್ಗೆ ಸದನದಲ್ಲಿ ಇವತ್ತು ಉತ್ತರ ಕೊಡಬೇಕಾಗುತ್ತದೆ. ಹಾಗೆಯೇ, NKUSIP ಗೆ ತಾವು ಏನು ಸೂಚನೆ ಕೊಟ್ಟು ಅಲ್ಲಿ ಏನು ಬದಲಾವಣೆ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಅಲ್ಲಿ contractor



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹಿಡಿತದಲ್ಲಿ NKUSIP ಇದೆಯೋ ಅಥವಾ NKUSIP ಹೇಳಿದ ಹಾಗೆ contractor ಕೇಳುತ್ತಾನೆಯೋ ಎಂಬ ಬಗ್ಗೆ ಮಾನ್ಯ ಸಚಿವರು ಇಲ್ಲಿ ಸ್ಪಷ್ಟಪಡಿಸಬೇಕು.

ಶ್ರೀ ಆರ್.ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾನು ಬಹಳ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಈ ಕೆಲಸ ದಿನಾಂಕ:28-02-2015ರಲ್ಲಿ ಪ್ರಾರಂಭವಾಗಿದೆ. ಸದರಿ ಕೆಲಸ ದಿನಾಂಕ 27-08-2017ರಲ್ಲಿ ಮುಗಿಯಬೇಕಾಗಿದೆ. ಅಂದರೆ, ಆಗಸ್ಟ್ ತಿಂಗಳಲ್ಲಿ ಸದರಿ ಕೆಲಸ ಮುಗಿಯಬೇಕಾಗಿತ್ತು. ಆದರೆ, 2017ರ ಡಿಸೆಂಬರ್ ತಿಂಗಳಲ್ಲಿ ಈ ಕೆಲಸ ಮುಕ್ತಾಯವಾಗುತ್ತದೆ ಎಂದು ಮಾಹಿತಿ ಇದೆ. ಸನ್ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಹೇಳಿರುವುದು ನಿಜ ಇದೆ. Multinational Company Consultant SNC Lavalin ರವರು ಮಾಡಿರುವ design ಸರಿಯಾಗಿರರಲಿಲ್ಲ. ಆದ್ದರಿಂದ, ಅವರನ್ನು terminate ಮಾಡಿ ಅವರ ಮೇಲೆ action ಕೂಡ ತೆಗೆದುಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುವುದೇನೆಂದರೆ, ಈಗ ಟಾರ್ಗೆಟ್ ಇರುವುದು 544 KM distribution network. ಅದರಲ್ಲಿ 320 ಕಿ.ಮೀ. complete ಆಗಿದೆ. ಇನ್ನೂ 224 ಕಿ.ಮೀ. complete ಆಗಬೇಕಾಗಿದೆ. ಇದರ ಬಗ್ಗೆ ನಾನು detail ಆಗಿ ವಿವಿರ ಕೊಟ್ಟಿದ್ದೇನೆ. ಆದಷ್ಟು ಬೇಗ ಮುಗಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಡಾ: ಎಸ್.ಶಿವರಾಜ್ ಪಾಟೀಲ್:- ಮಾನ್ಯ ಸಚಿವರೆ, ಅಲ್ಲಿ distribution line complete ಆಗಿದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಏನಾದರು hydro testing ಮತ್ತು gap filling ಮಾಡಿದ್ದಾರೆಯೇ? ಮಣ್ಣು ತೋಡಿಕೊಂಡು ಪೈಪ್ ಹಾಕಿದರೆ ಅದು complete ಮಾಡಿದಂತಾಗುವುದಿಲ್ಲ. Gap Filling & Hydro Testing ಮಾಡಿದರೆ ಮಾತ್ರ ಆ ಯೋಜನೆ ಉಪಯೋಗ ಆಗುತ್ತದೆ. ಸುಮ್ಮನೆ pipeline ಅನ್ನು lay ಮಾಡಿಕೊಂಡು ಹೋದರೆ ಯಾವುದೂ ಉಪಯೋಗವಾಗುವುದಿಲ್ಲ. ಇವತ್ತು 14 ಕಿ.ಮೀ.ರವರೆಗೆ raising main 14 km progress ತೋರಿಸಿದ್ದಾರೆಂದು ತಾವು ಹೇಳಿದ್ದೀರಿ. 14 ಕಿ.ಮೀ.ರವರೆಗೆ ಈಗಾಗಲೇ ಆಗಿರುವ pipe ಅನ್ನು lay ಮಾಡುವುದಕ್ಕೆ ಎಷ್ಟು ದಿವಸ ಬೇಕೆಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಯಾರಾದರೂ ಗುತ್ತಿಗೆದಾರರಿಗೆ ಕೇಳಿ? ಅಲ್ಲಿ ಪೈಪ್ ಅನ್ನು lay ಮಾಡುವುದಕ್ಕೆ ಎರಡು ವರ್ಷ ಬೇಕಾಯಿತಾ? ಇವತ್ತಿಗೂ ಕೂಡ Hydro Testing ಮತ್ತು road crossing ಆಗಿಲ್ಲ. ಯಾವ ಕೆಲಸ easy ಇದೆಯೋ ಅದನ್ನು ಮಾತ್ರ ಮಾಡಿದ್ದಾನೆ. ಯಾವ ಕೆಲಸ difficult ಇದೆಯೋ ಆ ಕೆಲಸವನ್ನು ಮಾಡಿಲ್ಲ. ದಯಮಾಡಿ ಈ ಬಗ್ಗೆ ಗಮನಹರಿಸಬೇಕು. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ contractor ಏನು ಮಾಡುತ್ತಿದ್ದಾನೆಂದರೆ, ಅಮೃತ್ ಯೋಜನೆಯಲ್ಲಿ water supply work ಇವತ್ತು ನಮಗೆ ಮತ್ತೆ ಅಪ್ರೂವಲ್ ಆಗಿದೆ. ಕಳೆದ ಸಾರಿ ಟೆಂಡರ್ ಕರೆದಾಗ same contractor participate ಮಾಡಿ, ಅಮೃತ್ ಯೋಜನೆಗೆ consultants ಏನು plan ಅನ್ನು ಪ್ರಿಪೇರ್ ಮಾಡಲಾಗಿತ್ತೋ ಅದಕ್ಕೆ ಈತ apply ಮಾಡಿ 30% below ಹಾಕಿ ಆ ಟೆಂಡರ್ ಅನ್ನು cancel ಮಾಡಿಸಿದ್ದಾನೆ. ಆ contractor ಪ್ರತಿಯೊಂದು ಕೆಲಸಕ್ಕೆ ಈ ರೀತಿಯಾಗಿ ಅಡ್ಡ ಬಂದು 30% below ಹಾಕಿ consultant plan ಸರಿಯಾಗಿ ಮಾಡಿಲ್ಲವೆಂದರೆ, ನಾವು ಈಗ ಏನು ಮಾಡಬೇಕು? ನಮ್ಮ ಭಾಗದ ಅಮೃತ್ ಯೋಜನೆ ಒಂದು ವರ್ಷದಿಂದ ಕೇವಲ tender processನಲ್ಲಿದೆ. ಆದ್ದರಿಂದ, ಸಂಬಂಧಪಟ್ಟ contractor ಅನ್ನು black list ಗೆ ಸೇರಿಸುವುದಕ್ಕೆ immediate ಆಗಿ order ಮಾಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

(ಮುಂದು)

13-6-2017/11-20/6/YBG-PS

ಶ್ರೀ ಸಿ.ಟಿ.ರವಿ:ಮಾನ್ಯ ಅಧ್ಯಕ್ಷರೆ, ಯೋಜನಾ ವರದಿಯನ್ನು ತಯಾರಿಸಬೇಕಾದರೆ ಲೋಪದೋಷಗಳ ಬಗ್ಗೆ ಆಲೋಚನೆ ಮಾಡಿ ನಗರದ ಮುಂದಿನ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಯೋಜನಾ ವರದಿಯನ್ನು ತಯಾರಿಸಬೇಕು. ಟೆಂಡರ್ ಕರೆದ ಮೇಲೆ ಯೋಜನಾ ವರದಿ ಸರಿಯಿಲ್ಲವೆಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಸರಿ. DPR ಆಗುವ stage ನಲ್ಲಿಯೇ ಅದರಲ್ಲಿ lapses ಏನು ಎನ್ನುವುದನ್ನು find out ಮಾಡಿ ಅದನ್ನು ಸರಿಯಾದ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪ್ರಮಾಣದಲ್ಲಿ ಎಷ್ಟಿಮೇಟ್ ಮಾಡಿ ಯೋಜನಾ ವರದಿಯನ್ನು ತಯಾರಿಸಬೇಕು. ಟೆಂಡರ್ ಕರೆಯುತ್ತೀರಿ, ಈ ಹಿಂದೆ ಮಾಡಿರುವುದು ಸರಿಯಿಲ್ಲವೆಂದು ಹೇಳಿದರೆ, ಹಾಗಾದರೆ ನೀವು PMC ಗೆ ಕೊಟ್ಟಿರುತ್ತೀರಲ್ಲಾ ಅವರ ಕೆಲಸ ಏನು? ಅವರಿಗೆ ದಂಡ ಏನು ಹಾಕಿದ್ದೀರಿ?

ಶ್ರೀ ಕೆ.ಎಂ.ಶಿವಲಿಂಗೇಗೌಡ: Consultancy ಯವರಿಗೆ ನೀವು ಬರೆ ಹಾಕಬೇಕು. ಅವರಲ್ಲಿಯೇ ಭ್ರಷ್ಟಾಚಾರ, ಅವರು ಕಂಟ್ರಾಕ್ಟರ್ ವಿರುದ್ಧ ಇರುತ್ತಾರೆ, ಇಲ್ಲಾ ಕಂಟ್ರಾಕ್ಟರ್ ಪರವಾಗಿ ರುತ್ತಾರೆ.

ಶ್ರೀ ಸಿ.ಟಿ.ರವಿ: ಅವರದೇ sister ಕಂಪನಿಗಳು. ಯಾರು ಕಂಟ್ರಾಕ್ಟರ್‌ಗಳಿದ್ದಾರೆ, ಅವರದೇ sister companyಗಳು DPR ತಯಾರು ಮಾಡುವುದು. ಅವರೇ third party inspection ಮಾಡುವುದು. ಕಳ್ಳರಿಗೆ, ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ ಎನ್ನುವಂತೆ ಇದೇ ತರಹ ಕೆಲಸಗಳು ನಡೆಯುತ್ತಿರುವುದು. ಬೇಕಾದರೆ ನೀವು ಚೆಕ್ ಮಾಡಿ. Restoration work ಅವರು ಎಲ್ಲೂ ಚೆಕ್ ಮಾಡುವುದಿಲ್ಲ.

ಅಧ್ಯಕ್ಷರು: ನೀವು ಹೇಳಿದ್ದೀರಲ್ಲಾ ಅವರು ಏನು ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ: Consultancy ಯವರನ್ನು ತೆಗೆದುಬಿಡಿ. ನಮ್ಮ Government ನವರನ್ನು ನೇಮಿಸಿ ಪರವಾಗಿಲ್ಲ. ಚೆನ್ನಾಗಿರುವವರು ಇದ್ದಾರೆ, ಅವರಿಗೆ ಜವಾಬ್ದಾರಿ ವಹಿಸಿ. ಕೆಲವರು ನಿವೃತ್ತಿಯಾದವರು ಬರುತ್ತಾರೆ, ಅವರು ಹೇಗೆ ಎಸ್ಟಿಮೇಟ್ ಮಾಡುತ್ತಾರೆಂದರೆ, ಎಲ್ಲಾ change ಆಗಬೇಕು, ಒಂದು original ಇರುವಂತಿಲ್ಲ, ಆ ತರಹ ಅವರು consultancy ಮಾಡುತ್ತಾರೆ.

ಡಾ: ಶಿವರಾಜ್ ಪಾಟೀಲ್ ಎಸ್: ಮಾನ್ಯ ಅಧ್ಯಕ್ಷರೆ, 6 ಸಿಟಿಗಳಲ್ಲಿ ಈ ಕಂಪನಿಯವರು ಟೆಂಡರ್ ತೆಗೆದುಕೊಂಡಿದ್ದಾರೆ ಇದುವರೆಗೆ ಎಲ್ಲಿಯೂ ಕೆಲಸ ಪೂರೈಸಿಲ್ಲ. ಅಮೃತ್ ಯೋಜನೆಯಲ್ಲಿ ನನ್ನ ಡಿಸೈನ್ ಪ್ರಕಾರ ಟೆಂಡರ್ ಅಪ್ರೂವಲ್ ಮಾಡಿ ಕೊಡಿ ಎಂದು ಕೇಳಿದ. ಸರ್ಕಾರ ಅದಕ್ಕೆ ಒಪ್ಪಲಿಲ್ಲ. ಅದಕ್ಕಾಗಿ ನಾವು ಮತ್ತೆ ಈಗ ಅಮೃತ್ ಯೋಜನೆಯಲ್ಲಿ ಕರೆದಿದ್ದೇವೆ. ಸರ್ಕಾರದವರು consultant ದು wrong ಎಂದು prove ಮಾಡಿದ್ದ, same DPR ನೇ ಈಗ ಮತ್ತೆ ಟೆಂಡರ್‌ನಲ್ಲಿ ಬಂದಿದೆ. ಈ ತರಹ ಸರ್ಕಾರ ಕಂಪನಿಗಳ ಹಿಡಿತದಲ್ಲಿದ್ದರೆ ಯಾವ ಕೆಲಸಗಳು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗುವುದಿಲ್ಲ. ದಯಮಾಡಿ NKUSIP ಬಗ್ಗೆ half an hour discussion ಗೆ ಹಾಕಿ ಸರ್. ಇಲ್ಲಿಯವರೆಗೆ ಅವರು ಯಾವ ಯೋಜನೆಗಳನ್ನು ಕೈಗೊಂಡಿದ್ದಾರೆ? ಯಾವ ಯೋಜನೆಗಳನ್ನು ಪೂರ್ಣ ಮಾಡಿದ್ದಾರೆ? ಯಾವ ಕಾರಣಕ್ಕೆ ಪೂರ್ಣ ಮಾಡಿಲ್ಲ? ಪೂರ್ಣವಾಗದ ಯೋಜನೆಗಳ ಬಗ್ಗೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ?

ಅಧ್ಯಕ್ಷರು: ಈ NKUSIP ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ಹಾಕಿಕೊಳ್ಳೋಣವೇ? ಆಯಿತು ಬಿಡಿ. ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ಹಾಕಿಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಇದೊಂದೇ ಕಾಮಗಾರಿ ಅಲ್ಲ, KUWS ಯಿಂದ ಏನೇನು ಕೆಲಸಗಳು ಆಗಿವೆ ಎಲ್ಲವನ್ನು ಚರ್ಚೆಗೆ ಹಾಕಿಕೊಳ್ಳಿ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಅಧ್ಯಕ್ಷರು: ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ಹಾಕಿಕೊಳ್ಳುತ್ತೇವೆ ಬಿಡಿ.

: ಪ್ರಶ್ನೆ ಸಂಖ್ಯೆ: 86:

(ಉತ್ತರ ಲಗತ್ತಿಸಲಾಗಿದೆ)

ಶ್ರೀ ಸುರೇಶ್ ಕುಮಾರ್ ಎಸ್: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಹಾಕಿರುವ ದಿವಸದಿಂದ ತಾವು ಇವತ್ತು date announce ಮಾಡಿಬಿಟ್ಟಿದ್ದೀರಿ. ನಾನು ಅಭಿನಂದನೆಗಳನ್ನು ನಾಗರೀಕರ ಪರವಾಗಿ ನಿಮಗೆ ತಿಳಿಸುತ್ತೇನೆ. ನನ್ನ ಮೂರು ಉಪ ಪ್ರಶ್ನೆಗಳು ಇವೆ. ಮೆಟ್ರೋ ಹಂತ-1, ಇದು ದಿನಾಂಕ: 17-6-2017 ರಂದು complete ಆಗುತ್ತದೆ, 18-6-2017 ರಂದು ನಾಗರೀಕರಿಗೆ ಬಿಡುತ್ತೀರಿ. ಮೆಟ್ರೋ ಹಂತ-1 ರ ನಂತರ ಒಂದು ದಿನಕ್ಕೆ ಗರಿಷ್ಠ ಎಷ್ಟು ಪ್ರಯಾಣಿಕರು ಸಂಚಾರ ಮಾಡಬಹುದು. ದೆಹಲಿ ಮೆಟ್ರೋದಲ್ಲಿ ಎರಡು ನಿಮಿಷಕ್ಕೆ ಒಂದು ರೈಲು ಬರುತ್ತದೆ. ಅದು ನಮ್ಮಲ್ಲಿ ಏಕೆ ಸಾಧ್ಯವಿಲ್ಲ. 2 ಅಥವಾ 3 ನಿಮಿಷ frequency ಗೆ ಅದು ಬಂದರೆ, ಎಷ್ಟು ಜನ ಪ್ರಯಾಣಿಕರು ಹೋಗಬಹುದು. ದೆಹಲಿ ಮೆಟ್ರೋಗಿಂತ ನಮ್ಮ ಮೆಟ್ರೋನಲ್ಲಿ ರೇಟ್ ಏಕೆ ಜಾಸ್ತಿ ಇದೆ. One and half time ಜಾಸ್ತಿ ಇದೆ. ಮೊನ್ನೆ ನಾನು ಪತ್ರಿಕೆಯಲ್ಲಿ ಓದಿದೆ. ಒಂದನೇ ಹಂತದ ನಂತರ ಇನ್ನು ನಾವು tariff ಅನ್ನು revise ಮಾಡುತ್ತೇವೆನ್ನುವುದನ್ನು ಕೇಳಲ್ಪಟ್ಟಿರುತ್ತೇವೆ. ಈಗಾಗಲೇ ಪೇಪರ್‌ನಲ್ಲಿ ಚಿಕ್ಕಪೇಟೆಯ region ನಲ್ಲಿ ಆ ಮೆಟ್ರೋ ಸ್ಟೇಷನ್‌ದಲ್ಲಿ ನೀರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸೋರುವಿಕೆ, ಆ ಗೋಣಿಚೀಲ ಹಾಕಿರುವ ಫೋಟೋ ಇವತ್ತು ವಿಜಯವಾಣಿ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಇದು ಎಷ್ಟರಮಟ್ಟಿಗೆ ನಾಗರೀಕರಿಗೆ safe ಆಗಿದೆ, ನೀವು ಚೆನ್ನಾಗಿ ಹೋಗಬಹುದೆಂದು ಬೇಗ ತುಂಬಬಹುದು.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ಅವರು ಅಭಿನಂದನೆಗಳನ್ನು ಸಲ್ಲಿಸಿರುವುದರಿಂದ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಾನು ಒಂದು ಮಾತನ್ನು ಹೇಳಿದೆ. ಇವತ್ತು ಮೆಟ್ರೋ ಕೆಲಸಗಳು ಪೂರ್ಣಗೊಳ್ಳಬೇಕಾದರೆ ಅಲ್ಲಿ ಕೆಲಸ ಮಾಡುವವರು, ನಾನು ಸಾಕಷ್ಟು ಸಾರಿ ಅಲ್ಲಿಗೆ ಹೋಗಿದ್ದೇನೆ. ಅಲ್ಲಿಗೆ ಸ್ಥಳೀಯ ಶಾಸಕರು ಮತ್ತು ಮೀಡಿಯಾದವರು ಹೋಗಿದ್ದಾರೆ. ಅವರು ಹಗಲು-ರಾತ್ರಿ ಕಷ್ಟದಲ್ಲಿ ಕೆಲಸ ಮಾಡಿ ಮುಗಿಸಿರುತ್ತಾರೆ. ನಾವು ಮೆಟ್ರೋ ಬೋರ್ಡ್ ಮತ್ತು ಕೆಲಸಗಾರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದೆಹಲಿಯಲ್ಲಿ ಎರಡು ನಿಮಿಷಕ್ಕೆ ಒಂದು ಸಲ ರೈಲು ಬಿಡುತ್ತಾರೆಂದು ಹೇಳಿದಿರಿ. ನಮ್ಮಲ್ಲಿ ಸಹಿತ ಮೊದಲು 6 ನಿಮಿಷ ಇತ್ತು, ನಾವು ಕೂಡ ಹೆಚ್ಚು ಜನ passengers ಬಂದರೆ safety ನೋಡಿಕೊಂಡು ಆ duration ಅನ್ನು ಕಡಿಮೆ ಮಾಡುತ್ತೇವೆ. ಮೆಟ್ರೋದವರು ಅದನ್ನು review ಮಾಡಿ ಅದಕ್ಕೆ ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಇವತ್ತು ಮೆಟ್ರೋ ವಿಚಾರದಲ್ಲಿ ಅದು never ending process, ಅಂದರೆ ಅದು ವಿಸ್ತಾರವಾಗುತ್ತಾ ಹೋಗುತ್ತಿರುತ್ತದೆ. ಈಗಾಗಲೇ ನಾವು second phase ತೆಗೆದುಕೊಂಡಿದ್ದೇವೆ, second phase-A ತೆಗೆದುಕೊಂಡಿದ್ದೇವೆ. Second phase-B ತೆಗೆದುಕೊಂಡಿದ್ದೇವೆ. ನಾನು ಸಹಿತ ಟ್ರಾವೆಲ್ ಮಾಡಿದ್ದೇನೆ, ಮೊನ್ನೆ ನಾವು ಪ್ರಯಾಣಿಕರನ್ನು ಕೇಳಿದಾಗ ಎಲ್ಲರೂ ಸಹಿತ ಸಂತೋಷದಲ್ಲಿದ್ದಾರೆ. ರೇಟ್ ವಿಚಾರದಲ್ಲಿ, ದೆಹಲಿಯಲ್ಲಿರುವ ರೇಟ್ ಬಗ್ಗೆ ವಿಚಾರಿಸಿ ನಾನು ತಮಗೆ ಡಿಟೇಲ್ಸ್ ಕಳುಹಿಸಿ ಕೊಡುತ್ತೇನೆ. ನಾವು public sector ನಲ್ಲಿ ಕೆಲಸ ಮಾಡುತ್ತಿರುವಾಗ viable ಇಲ್ಲ, ನಾವು ಸಾಲ ತೆಗೆದುಕೊಳ್ಳುತ್ತೇವೆ, International Funding ದವರು ಬರುತ್ತಿರುತ್ತಾರೆ. ನಾವು ಏನಾದರೂ ಮಾಡಬೇಕಾದರೆ ಕೇಂದ್ರ ಸರ್ಕಾರದವರು 3000 ಕೋಟಿ ಕೊಟ್ಟರೆ ನಾವು 6000 ಕೋಟಿ ಕೊಡುತ್ತೇವೆ. ಏಕೆಂದರೆ, land acquisition cost ನಾವೇ ಕೊಡಬೇಕಾಗುತ್ತದೆ. ಬಾಕಿ ಇರುವ ದುಡ್ಡಿಗೆ ನಾವು ಇವತ್ತು financial institution ದಿಂದ ಸಾಲ ತೆಗೆದುಕೊಳ್ಳುತ್ತೇವೆ. ಅದನ್ನು ನಾವು ವಾಪಸ್ಸು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಡದಿದ್ದರೆ, ಇನ್ನು ಮುಂದೆ ಯಾರು ಮೆಟ್ರೋ ಕೆಲಸಕ್ಕೆ ಬರುವುದಿಲ್ಲ. ಇವತ್ತು ನಾವು viability ನೋಡಿಕೊಂಡು ಮಾಡಬೇಕಾಗಿದೆ. ಜನರಿಗೆ ಇವತ್ತು ಒಳ್ಳೆಯ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ಜನರಿಗೆ ಹೆಚ್ಚಿನ ಹೊರೆಯಾಗದಂತೆ, ನಾವು ದರ ಏರಿಕೆ ಮಾಡುವಾಗ ಚರ್ಚೆ ಮಾಡಿ ಹೆಚ್ಚು ಹೊರೆ ಆಗದಂತೆ ಆ ಕೆಲಸವನ್ನು ಮಾಡುತ್ತೇವೆ. ಈಗಾಗಲೇ ಮೆಟ್ರೋ ರೈಲ್ವೆ ಸುರಕ್ಷತೆ ಕಮೀಷನರ್‌ರವರು ನೋಡಿ, ಕೆಲವು ಕಡೆ ನೀರು ಸೋರಿಕೆ ಆಗಿರುವುದನ್ನು ದುರಸ್ತಿ ಮಾಡಿಸಿದ್ದೇವೆ. ಸೋರಿಕೆ ಎಂದರೆ ಯಾವುದು ಬರುವುದಿಲ್ಲ, ಅಲ್ಲಿ seepage ಬರುತ್ತದೆ, ಅದನ್ನು ನಾನು ಕೂಡ ಹೋಗಿ ನೋಡಿರುತ್ತೇನೆ. ನಾಳೆ ನಮ್ಮ ಮುಖ್ಯ ಮಂತ್ರಿಗಳು ಸಹಿತ ಹೋಗುತ್ತಿದ್ದಾರೆ. ಸೋರಿಕೆ ವಿಚಾರದಲ್ಲಿ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತಮಗೆ ಗೊತ್ತಿರುವಂತೆ, ಯಾವುದೇ ಒಂದು ಹೊಸ ಕಟ್ಟಡ ಬರುವಾಗ seepage ಬರುತ್ತದೆ, ಅದನ್ನು ನಿಲ್ಲಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದಾರೆ, ಅದನ್ನು ನಿಲ್ಲಿಸಿರುತ್ತಾರೆ.

ಶ್ರೀ ಸುರೇಶ್ ಕುಮಾರ್ ಎಸ್: ಮಾನ್ಯ ಅಧ್ಯಕ್ಷರೆ, ನೀವು ಹೇಳಿದಿರಿ, ಮೊದಲು 6 ನಿಮಿಷಕ್ಕೆ ಒಂದು ಸಲ ರೈಲು ಬಿಡುವಂಥ ಪ್ರಪೋಸಲ್ ಇತ್ತು, ನೀವು ಮೆಟ್ರೋ ಸ್ಟೇಷನ್‌ಗೆ ಹೋಗಿ ಪ್ರಯಾಣಿಕರ ಜೊತೆಯಲ್ಲಿ ಮಾತನಾಡಿದಾಗಲೂ ಕೂಡ ಪ್ರಯಾಣಿಕರು ಮೆಟ್ರೋ ಸಿಸ್ಟಂ ಅನ್ನು ಹೊಗಳಿದರು. ಆದರೆ ಇನ್ನಷ್ಟು ಬೋಗಿಗಳು ಬೇಕು, ಮೂರು ಬೋಗಿಗಳು ಸಾಲುತ್ತಿಲ್ಲ ಹೇಳಿದರು. ನೀವು ಡಿಸೆಂಬರ್‌ಗೆ ಇನ್ನು ಮೂರು ಬೋಗಿಗಳನ್ನು ಹಾಕುತ್ತೇವೆ. ಇದನ್ನು ನಾವು expedite ಮಾಡಬೇಕು. ಮೆಟ್ರೋ ಇವತ್ತು East-West ನಲ್ಲಿ ಯಾವ ಟ್ರಾಫಿಕ್ ಇದೆ ನೋಡುತ್ತೇನೆ. ಈಗ North-South ಆದಾಗ ನಿಜವಾಗಲೂ ಕೂಡ ನಮ್ಮ ಮೆಟ್ರೋ viable ಆಗುತ್ತದೆ, ಹೆಚ್ಚು ಜನರು ಬರುತ್ತಾರೆ. ಅದಕ್ಕೋಸ್ಕರ ನೀವು ಈಗಾಗಲೇ ಪ್ಲಾನ್ ಮಾಡಿ ನೀವು ಮೂರು ಬೋಗಿಗಳಲ್ಲಿ ನೀವು 8-9 ನಿಮಿಷಕ್ಕೆ ಹೋಗುತ್ತೀರಾ ಇದು ಆಗದಿರುವ ಕೆಲಸ. Frequency ಜಾಸ್ತಿ ಮಾಡಬೇಕು, number of bogies ಹಾಕಬೇಕು, ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಹೇಳಿ.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ಈಗಾಗಲೇ frequency ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿರುತ್ತೇವೆ. ಮೊದಲು 6 ನಿಮಿಷ ಇತ್ತು, ಈಗ 4 ರಿಂದ 3 ನಿಮಿಷ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ passengers ಒತ್ತಡಕ್ಕೆ ಅನುಗುಣವಾಗಿ ಅದನ್ನು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುತ್ತೇವೆ. ಎಷ್ಟು ಒತ್ತಡ ಕಡಿಮೆ ಮಾಡುವುದಕ್ಕೆ ಆಗುತ್ತದೆ ಅಷ್ಟನ್ನು ಮಾಡುತ್ತೇವೆ. ಈಗ ನಮ್ಮಲ್ಲಿ 50 ರೈಲುಗಳು ಓಡುತ್ತಿವೆ. ಒಂದು ರೈಲಿಗೆ ಮೂರು ಬೋಗಿಗಳನ್ನು ಹಾಕಿರುತ್ತೇವೆ. ಈಗಾಗಲೇ ನಾವು 150 ಬೋಗಿಗಳಿಗೆ ಆರ್ಡರ್ ಕೊಟ್ಟು ಅದಕ್ಕೆ 1400 ಕೋಟಿ ರೂ.ಗಳನ್ನು ಕೊಟ್ಟಿರುತ್ತೇವೆ. ತಮಗೆ ಗೊತ್ತಿರುವಂತೆ BEML ನವರು ಅವರ ಟೆಂಡರ್ ಪ್ರಕಾರ ತೆಗೆದುಕೊಂಡಿರುತ್ತಾರೆ. ಅವರು ನವೆಂಬರ್-ಡಿಸೆಂಬರ್ ತಿಂಗಳಿಗೆ ಬೋಗಿಗಳನ್ನು ಕೊಡುವುದಕ್ಕೆ ಶುರು ಮಾಡುತ್ತಾರೆ. ಕೆಲವು ತಿಂಗಳುಗಳು ಆಗಬಹುದು. ಆದರೆ ಆ ಬೋಗಿಗಳು ಬಂದಾಗ ಹೆಚ್ಚು ಒತ್ತಡ ಅಲ್ಲಿ ಬೋಗಿಗಳನ್ನು ಅಳವಡಿಸುವುದಕ್ಕೆ ಈಗಾಗಲೇ ನಾವು ಕ್ರಮ ಕೈಗೊಂಡಿರುತ್ತೇವೆ.

ಅಧ್ಯಕ್ಷರು: ಇದು ಮೊನ್ನೆ ಒಂದು ಪ್ರಶ್ನೆ ಬಂದಿತ್ತು, ಅದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದರು. ಮುಂದಿನ ಪ್ರಶ್ನೆ ಶ್ರೀನಿವಾಸ್(ವಾಸು)ರವರು, ಬಂದಿಲ್ಲ. ಬಾಲಕೃಷ್ಣ ಹೆಚ್.ಸಿ. ನೀವು ಪ್ರಶ್ನೆ ಕೇಳಿ.

(ಮುಂದು)

13-06-2017-11-30-7-MS-VG.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:824**

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ )**

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನಾನು ಬಿಡದಿ ಹೋಬಳಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದರೂ ಸಹ ಕೆಂಗೇರಿ ಹೋಬಳಿಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಕಾರ್ಖಾನೆಗಳು ಜಾಸ್ತಿ ಇವೆ. Industrial area ದೊಡ್ಡದಾಗಿರುವುದರಿಂದ ಬಿಡದಿಯಲ್ಲಿ ಪ್ರಾರಂಭ ಮಾಡಿ ಎಂದು ಕೇಳಿದ್ದರೆ ಕೆಂಗೇರಿಗೆ ಸಂಬಂಧಪಟ್ಟಂತೆ ಉತ್ತರ ಒದಗಿಸಿದ್ದಾರೆ. ದಯಮಾಡಿ ಬಿಡದಿಯಲ್ಲಿ ತಾವು ಯಾವಾಗ ಪ್ರಾರಂಭ ಮಾಡುತ್ತೀರಾ, ನಿಮಗೆ ಎಷ್ಟು ಜಾಗ ಬೇಕೆಂದು ಹೇಳಿದರೆ ನಾವು ಜಾಗವನ್ನು ಕೊಡುವುದಕ್ಕೆ ತಯಾರಿದ್ದೇವೆ. ಬಿಡದಿ ಮತ್ತು ಹಾರೋಹಳ್ಳಿಯ ಮಧ್ಯೆ ಕಾರ್ಖಾನೆಗಳು ಜಾಸ್ತಿ ಇರುವುದರಿಂದ ಇದನ್ನು ಮಾಡಿದರೆ ಬಹುಶ: ಅನುಕೂಲವಾಗುತ್ತದೆ. ಆದಕಾರಣ ನಾನು ತಮ್ಮ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಡಾ:ಜಿ.ಪರಮೇಶ್ವರ: ಮಾನ್ಯ ಸಭಾಧ್ಯಕ್ಷರೆ, National Standard Fire Advisory Committee ಎಂದು ಇದೆ. ಒಂದು ಅಗ್ನಿಶಾಮಕ ಠಾಣೆಯನ್ನು ಕೊಡಬೇಕಾದರೆ 2 ಎಕರೆ ಜಮೀನು ಇರಬೇಕು, 50,000 population ಇರಬೇಕು, 25 Sq.km rural area ಇರಬೇಕೆಂದು ಅವರು ಕೆಲವು ನಿಯಮಗಳನ್ನು ಮಾಡಿದ್ದಾರೆ. ಅದಕ್ಕಾಗಿ ತಾವು ಎರಡು ಎಕರೆ ಜಮೀನನ್ನು ತಕ್ಷಣ ಕೊಟ್ಟುಬಿಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಆದರೆ ಒಂದೇ ಒಂದು ಎಕರೆಯನ್ನು ಕೊಟ್ಟಿದ್ದರೆ ಇನ್ನೊಂದು ಎಕರೆಯನ್ನು ಕೊಡಿಸಿ ನಾವು ಈ ಬಗ್ಗೆ ಪತ್ರ ಬರೆದಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ತಾವು ಕೆಂಗೇರಿಯ ಬಗ್ಗೆಯೆ ಉತ್ತರ ಕೊಡುತ್ತಿದ್ದೀರಿ.

ಡಾ:ಜಿ.ಪರಮೇಶ್ವರ: ದಿನಾಂಕ:3.5.2017ಕ್ಕೆ ತಾವು ಏನು ಕೇಳಿದ್ದೀರಿ ಅದಕ್ಕೆ ನಾವು ಅದನ್ನು ಮಾಡಿಕೊಡುವುದಕ್ಕೆ ಸಿದ್ಧರಿದ್ದೇವೆ. ಇನ್ನೊಂದು ಎಕರೆ ಜಾಗವನ್ನು ಕೊಡಿ ಎಂದು ದಿನಾಂಕ:3.5.2017ಕ್ಕೆ ನಾವು ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆದಿದ್ದೇವೆ. ತಪ್ಪಾಗಿ ಅದನ್ನು ನಮೂದಿಸಿದ್ದಾರೆ. ಬಿಡದಿಗೆ ಸಂಬಂಧಪಟ್ಟಂತೆ ನಾನು ಆ ಜಾಗವನ್ನು ಪರಿಶೀಲನೆ ಮಾಡಿ ತಕ್ಷಣ ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನೀವು ಮಾಡಿಕೊಡುತ್ತೇವೆಂದು ಹೇಳಿದರೆ ನಾವು ಎರಡು ಎಕರೆ ಜಾಗವನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು: ಆಯಿತು.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಗೃಹಸಚಿವರೆ, ಇದು ಹೇಗಾಗಿದೆ ಎಂದರೆ ನಮ್ಮ police station jurisdiction ಅಲ್ಲ, ಬೇರೆ police stationದ್ದು ಎಂದು ಹೇಳಿ ಕಳುಹಿಸುತ್ತಾರಲ್ಲ, ಬಿಡದಿಯಿಂದ ಕೆಂಗೇರಿಗೆ ಬಂದಿರುವುದು ಆ ರೀತಿಯಾಗಿದೆ.

ಡಾ:ಜಿ.ಪರಮೇಶ್ವರ: By mistake ಆಗಿದೆ.

ಅಧ್ಯಕ್ಷರು: ಮೋಹಿಯುದ್ದೀನ್ ಬಾವಾರವರೆ ಪ್ರಶ್ನೆಯನ್ನು ಕೇಳಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:102 (1605)**

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ.:ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾನು ಶಾಸಕನಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಆಭಾರಿಯಾಗಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ Skill Development ಯೋಜನೆಯ ಮೂಲಕ ಇವತ್ತು ಕೌಶಲ್ಯ ಕರ್ನಾಟಕ ಎನ್ನುವಂತಹ ವಿಶೇಷ ಯೋಜನೆಯನ್ನು ತಂದು ಅನೇಕ ಉದ್ಯೋಗ ದೊರಕುವಂತಹ ಪುಣ್ಯದ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಈ ಸಂದರ್ಭದಲ್ಲಿ ನಾನು ಎರಡು ಕಿರುಕೋರಿಕೆಯನ್ನು ಅವರ ಮುಂದೆ ಮಂಡನೆ ಮಾಡುತ್ತೇನೆ. ಒಂದನೆಯದು ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, ಅಲ್ಲಿ ಹಲವಾರು ಬೃಹತ್ ಕೈಗಾರಿಕೆಗಳ ಕಂಪನಿಗಳು ಇವೆ. ಅದು MRPL, ಕುದುರೆಮುಖ ಇರಬಹುದು, SEZ, MCF ಇರಬಹುದು, ಇಂತಹ ಬೃಹತ್ ಕೈಗಾರಿಕಾ ಕಂಪನಿಗಳು ರಾಜ್ಯಾದ್ಯಂತ ಅನೇಕ ಕಡೆಗಳಲ್ಲಿ ಇವೆ. ಇದರಲ್ಲಿ ಹೊರರಾಜ್ಯದ ಅನೇಕ ಮಂದಿಗೆ ಉದ್ಯೋಗ ಸಿಗುತ್ತಿದೆ. ಏಕೆಂದರೆ, ಅವರಿಗೆ ಅಂತಹ ಒಂದು skill development ಆಗಿ ಆ ಒಂದು ಕಂಪನಿಯ ತರಬೇತಿಗಳು ಸಿಗುತ್ತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿಶೇಷ ಕೋರಿಕೆಯನ್ನು ಮಾಡುತ್ತಿದ್ದೇನೆ. ಆ ಕಂಪನಿಯವರ ಹತ್ತಿರ ಇರುವಂತಹ CSR fund ಅನ್ನು ಬಳಸಿಕೊಂಡು ಅವರ ಜೊತೆಯಲ್ಲಿ ಈ ಬಗ್ಗೆ ಒಡಂಬಡಿಕೆಯನ್ನು ಮಾಡಿಕೊಂಡು ಆಯಾಯ ಭಾಗದಲ್ಲಿ ಒಂದು 5 ರಿಂದ 10 ಎಕರೆ ಸ್ಥಳ ಇರುವಂತಹ ಜಾಗದಲ್ಲಿ ಕೊಟ್ಟರೆ ಅದರ ಜೊತೆಯಲ್ಲಿ ಅವರಿಗೆ ಬೇಕಾದಂತಹ ಉದ್ಯೋಗಸ್ಥರಿಗೆ ಹೊರರಾಜ್ಯದಲ್ಲಿ ನಮ್ಮ ಯುವಕರಿಗೆ ಇಲ್ಲಿಯೇ ಸಿಗುವ ಹಾಗೆ ಮಾಡಬೇಕು. ITI complete ಮಾಡಿರುವವರು, ನಾನು ವರ್ಷಂಪ್ರತಿ ಉದ್ಯೋಗ ಮೇಳವನ್ನು ಮಾಡುತ್ತಿದ್ದೇನೆ. ಆ ಸಂದರ್ಭದಲ್ಲಿ ಅವರಿಗೆ ಬೇಕಾದಂತಹ technical hand ಸಿಗುತ್ತಿಲ್ಲ. ಆದ ಕಾರಣ ಇಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುತ್ತಿದ್ದೇನೆ. ಈಗಾಗಲೇ MRPL ಸಂಸ್ಥೆಯು ನನ್ನ ಕ್ಷೇತ್ರದಲ್ಲಿ ಸುಮಾರು 10 ಎಕರೆ ಸ್ಥಳದ ಕೋರಿಕೆಯನ್ನು ಮಾಡಿದೆ. ಅವರಿಗೆ ಕೊಡುವ ಸಂಬಂಧ ನಾನು D.C.ಯವರಿಗೆ ಪತ್ರ ಬರೆದಿದ್ದೇನೆ. ಏಕೆಂದರೆ ಅವರು ಇಂತಹ ಒಂದು ಮಾಹಿತಿ ತಂತ್ರಜ್ಞಾನವನ್ನು ಅವರ ವ್ಯವಸ್ಥೆಯಲ್ಲಿ ಮಾಡುತ್ತಾರೆಂದು ಮಾತನ್ನು ಹೇಳುತ್ತಿದ್ದೇನೆ. CSR fundನಲ್ಲಿ ಇದನ್ನು ಮಾಡಬೇಕೆಂಬ ಆದೇಶವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೋರುತ್ತೇನೆ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ಒಂದು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ರವಿಯವರೆ, ನಾನು main ಪ್ರಶ್ನೆಗೆ ಉತ್ತರವನ್ನು ಹೇಳಿಲ್ಲ. ಉಪ ಪ್ರಶ್ನೆಯನ್ನು ಕೇಳುತ್ತಿದ್ದಿರಿ. ರವಿ ಯಾವಾಗಲೂ supplementary questions ಕೇಳುವುದು. ಮಾನ್ಯ ಸದಸ್ಯರು ಏನು ಬೇಕೆಂದು ಹೇಳುತ್ತಿದ್ದಾರೆ ಅದಕ್ಕೋಸ್ಕರವೇ Skill Development and Livelihood ಎಂದು ಒಂದು ಇಲಾಖೆಯನ್ನು ಸೃಷ್ಟಿಮಾಡಿದ್ದೇವೆ. ಇದರ ಉದ್ದೇಶವೇನೆಂದರೆ, ಇವತ್ತು ಮಾರುಕಟ್ಟೆಯಲ್ಲಿ ಯಾವ ತರಹದ ಎಂತಹ ಉದ್ಯೋಗಿಗಳ ಬೇಡಿಕೆ ಇದೆ. ಅದಕ್ಕೆ ಬೇಕಾದಂತಹ ಕೌಶಲ್ಯತೆ ಇದೆ, ಆ ತರಹದ skilled manpower ಬೇಕಲ್ಲ ಅದನ್ನು ತಯಾರು ಮಾಡುವುದಕ್ಕೋಸ್ಕರವೇ ನಾವು ಈ ಇಲಾಖೆಯನ್ನು ಸೃಷ್ಟಿ ಮಾಡಿದ್ದೇವೆ. ಅನೇಕ ಇಲಾಖೆಗಳಲ್ಲಿ ಕೌಶಲ್ಯ ತರಬೇತಿ ನಡೆಯುತ್ತಿತ್ತು. ಅವರವರು ಬೇಕಾದ ರೀತಿಯಲ್ಲಿ ಮಾಡುತ್ತಿದ್ದರು. ಅದಕ್ಕಾಗಿ ಇದನ್ನು ಒಂದು ಸೂರಿನ ಕೆಳಗಡೆ ತರಬೇಕು. ಒಂದು umbrellaದ ಕೆಳಗಡೆ ತರಬೇಕೆಂದು ಈ ಇಲಾಖೆಯನ್ನು ಕಳೆದ ವರ್ಷ create ಮಾಡಿದ್ದೇವೆ. ಈಗ ಇದು ಎರಡನೇ ವರ್ಷವಾಗಿದೆ. ಕಳೆದ ವರ್ಷ ಸುಮಾರು 1,60,000 ಜನರಿಗೆ ಈ ತರಹದ ಒಂದು ತರಬೇತಿಯನ್ನು ಕೊಡುವಂತಹ ಕೆಲಸ ಮಾಡಿದ್ದೇವೆ. ಈ ವರ್ಷ 5 ಲಕ್ಷ ಯುವಕರಿಗೆ ತರಬೇತಿ ಕೊಡಬೇಕೆಂದು ಹೇಳಿ ನಾವು ಬಜೆಟ್‌ನಲ್ಲಿಯೂ ಘೋಷಣೆ ಮಾಡಿದ್ದೇವೆ. ಈಗಾಗಲೇ registration ಕೂಡ ಪ್ರಾರಂಭ ಮಾಡಿದ್ದೇವೆ. ಇವತ್ತಿನ ಲೆಕ್ಕಾಚಾರದ ಪ್ರಕಾರ registration ಸುಮಾರು 5.5 ಲಕ್ಷದಿಂದ ಜಾಸ್ತಿಯಾಗಿ 6 ಲಕ್ಷದವರೆಗೆ ಹೋಗಬಹುದು. ಅವರ ಹತ್ತಿರ ನಾವು mobile numberಗಳನ್ನು ಸಹ ತೆಗೆದುಕೊಂಡಿರುತ್ತೇವೆ. ಅವರು registration ಮಾಡಿಕೊಂಡಿದ್ದಾರಲ್ಲಾ, ಅವರ ಜೊತೆಯಲ್ಲಿ ಮಾತನಾಡಿ ಅವರಿಗೆ ಯಾವ ತರಹ ಬೇಕೆಂದು ಕೂಡ ಮಾಡಿದ್ದೇವೆ. ಇಲ್ಲಿ graduates ಬಿಟ್ಟು, ಇದಕ್ಕೆ ಕೊನೆಯ priority ಇದೆ. Diploma, ITI, SSLC, PUC ಅಥವಾ 5 ನೇ ತರಗತಿ, 6ನೇ ತರಗತಿ ಓದಿದವರು ಇದ್ದಾರಲ್ಲಾ ಇವರಿಗೆಲ್ಲಾ training ಕೊಡುವಂತಹದ್ದನ್ನು ಮಾಡುತ್ತಿದ್ದೇವೆ. ತರಬೇತಿಯ ಅವಧಿ 3 ತಿಂಗಳಿನಿಂದ 5 ತಿಂಗಳಿನವರೆಗೆ ಇರುತ್ತದೆ. 3 ತಿಂಗಳು training ಪಡೆಯುವವರಿಗೆ 35,000 ರೂಪಾಯಿಗಳನ್ನು 5 ತಿಂಗಳು ಆದವರಿಗೆ 55,000 ರೂಪಾಯಿಗಳು,

ಕೆಲವು ಅದಕ್ಕಿಂತಲೂ ಕಡಿಮೆ ಇರುತ್ತವೆ. Driving ಮಾಡಬೇಕು ಎಂದರೆ ಅದಕ್ಕೆ 5 ತಿಂಗಳು training ಬೇಕಿಲ್ಲ only 30 days ಸಾಕಾಗುತ್ತದೆ. ಅಷ್ಟಕ್ಕೆ ಮಾತ್ರ ಕೊಡುತ್ತೇವೆ. ಕೆಲವು tailoring ಮಾಡುತ್ತಾರೆ, ಅವರಿಗೆ 5 ತಿಂಗಳು ಟೈಲರಿಂಗ್ ಕಲಿಸುವಂತಹ ಅಗತ್ಯವಿಲ್ಲ. ಇವತ್ತು manufacturing industries ಇದೆಯಲ್ಲಾ, ಅವರಿಗೆ skilled labour ಬೇಕಾಗುತ್ತದೆ. ಅದಕ್ಕೋಸ್ಕರವಾಗಿಯೇ ಇದನ್ನು ಮಾಡಬೇಕಾಗಿದೆ. ಇಂತಹ ಒಂದು ಇಲಾಖೆಯನ್ನು ಮಾಡುವುದರ ಜೊತೆಗೆ ನಾವು ಮೊನ್ನೆ ತಾನೇ Siemens companyಯ ಜೊತೆಯಲ್ಲಿ ಒಂದು MOU ಕೂಡ ಮಾಡಿಕೊಂಡಿದ್ದೇವೆ. ನಮ್ಮ ಸರ್ಕಾರದ GTTC ಇದೆಯಲ್ಲಾ ಅವರ ಜೊತೆಯಲ್ಲಿಯೂ ಸಹ ಒಡಂಬಡಿಕೆಯನ್ನು ಮಾಡಿಕೊಂಡು ಅವರು ಕೂಡ ಎರಡು ವರ್ಷ training ಕೊಡುವಂತಹದ್ದು ಮಾಡುತ್ತಿದ್ದಾರೆ. ಸುಮಾರು 2032 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಿಮ್ಮಲ್ಲಿ ಕಂಪನಿಗಳು, SEZ ಕಂಪನಿ ಇದೆ ಎಂದು ಹೇಳಿದ್ದೀರಲ್ಲಾ, ಅಲ್ಲಿ ಕೆಲಸ ಸಿಗುವುದಕ್ಕೆ ಅನುಕೂಲವಾಗಲಿ ಎಂದೇ ಇದನ್ನು ಮಾಡಿರುವುದಾಗಿದೆ. ಈ ಇಲಾಖೆಯಿಂದ ಸುಮಾರು 5 ಲಕ್ಷ ಜನರಿಗೆ training ಕೊಡುತ್ತಿದ್ದೇವೆ. ಕನಿಷ್ಠ ನನ್ನ ಪ್ರಕಾರ ಒಂದು ವರ್ಷಕ್ಕೆ 13 ಲಕ್ಷ ಕೊಡಬೇಕಾಗುತ್ತದೆ ಅಷ್ಟನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. 11 ಲಕ್ಷ ಜನರು ಕೆಲಸ ಬೇಕೆಂದು ಕೇಳುತ್ತಾರೆ. ನಾವು 13 ಲಕ್ಷ ಕೊಡಬೇಕಾಗಿದೆ. 2030ರವರೆಗೆ 2 ಕೋಟಿ 8 ಲಕ್ಷ ಜನರಿಗೆ ಉದ್ಯೋಗ ಬೇಕಾಗಿರುವುದರಿಂದ training ಕೊಡಬೇಕಾಗಿದೆ. ಅದಕ್ಕಾಗಿ ನಾವು ಹೊಸದಾಗಿ ಇಲಾಖೆಯನ್ನು ಮಾಡಿದ್ದು, ಇದಕ್ಕೆ ವಿಶೇಷ ಗಮನ ಕೊಡಬೇಕೆಂದು ಹೇಳಿ ಈ ಇಲಾಖೆಯನ್ನು ನನ್ನ ಅಧೀನದಲ್ಲಿಯೇ ಇಟ್ಟುಕೊಳ್ಳಲಾಗಿದೆ. ಅವರಲ್ಲಿ ಯಾರದೂ factory, companyಗಳು ಇದೆ. ಅಲ್ಲಿ ಯಾವ ತರಹದ ಉದ್ಯೋಗಗಳು ಬೇಕು. ಅವಕ್ಕೆಲ್ಲಾ ಸಿಕ್ಕೇ ಸಿಗುತ್ತದೆ.

ಅಧ್ಯಕ್ಷರು: O.K.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಕೌಶಲ್ಯ ತರಬೇತಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಇಲಾಖೆಯನ್ನು ಮಾಡಿರುವುದರಿಂದ ಒಳ್ಳೆಯ ಕೆಲಸ ಆಗಿದೆ. ಆದರೆ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಗ್ರಾಮೀಣ ಪ್ರದೇಶದಲ್ಲಿ ಕುಲದ ಕಸುಬನ್ನೆ ನಂಬಿಕೊಂಡು ಬದುಕುತ್ತಿರುವಂತಹ ಅನೇಕ ಸಣ್ಣ ಪುಟ್ಟ ಜಾತಿಗಳು ಇದ್ದವು. ಉದಾಹರಣೆಗೆ ಕುಂಬಾರರು, ಕಮ್ಮಾರರು, ಬಡಗಿತನ ಮಾಡುವವರು,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಚಪ್ಪಲಿ ಹೊಲೆಯುವವರು ಇವರುಗಳಿಗೆ ಇವತ್ತು ಉದ್ಯೋಗವಿಲ್ಲದಾಗಿದೆ. ಏತಕ್ಕಾಗಿ ಉದ್ಯೋಗವಿಲ್ಲವೆಂದರೆ, ಯಾಂತ್ರಿಕ ಯುಗದಲ್ಲಿ ಇವರು ಕೈಯಿಂದ ಮಾಡಿದಂತಹ ವಸ್ತುಗಳನ್ನು ಖರೀದಿ ಮಾಡುವವರು ಯಾರು ಇಲ್ಲ. ಹೀಗಾಗಿ ಅವರ ಮಕ್ಕಳಿಗಿ ಇವತ್ತು ಉದ್ಯೋಗ ಸಿಗುತ್ತಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆ ಏನು ಮಾಡುತ್ತೇನೆಂದರೆ, ಇದರಲ್ಲಿ ಹೆಚ್ಚಿಗೆ ಕುಲದ ಕಸುಬನ್ನೆ ನಂಬಿಕೊಂಡು ಬದುಕತಕ್ಕಂತಹ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಸ್ಥರು ಇದ್ದರು. ಅವರ ಮಕ್ಕಳಿಗೆ ಆದ್ಯತೆ ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಶಿವಮೂರ್ತಿ:ಮಾನ್ಯ ಸಭಾಧ್ಯಕ್ಷರೆ, ಇದು ಒಂದು ಪ್ರತ್ಯೇಕವಾಗಿ ತಂದಿರುವಂತಹ ಇಲಾಖೆಯಾಗಿರುವುದರಿಂದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಇದಕ್ಕಾಗಿ ಸಾಕಷ್ಟು ಹಣವನ್ನಿಟ್ಟಿದ್ದಾರೆ. ಇನ್ನು ಹಣವನ್ನು ಕೊಡುವುದಕ್ಕೆ ತಯಾರಿದ್ದೇನೆಂದು ಸಹ ಹೇಳಿದ್ದಾರೆ. ನನ್ನದು ಅವರಲ್ಲಿ ಒಂದು ಮನವರಿಕೆ ಏನೆಂದರೆ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪನವರು ಇದ್ದಾಗ ಈ ಹಿಂದೆ ವಿಶ್ವ ಎನ್ನುವ ಕಾರ್ಯಕ್ರಮವನ್ನು ಮಾಡಿದ್ದರು. ಅವರು ಇದರಲ್ಲಿ ಸಾಕಷ್ಟು ಕೋಟಿಗಟ್ಟಲೆ ಹಣವನ್ನು ತೊಡಗಿಸಿ machineryಗಳನ್ನು ಕೊಂಡುಕೊಂಡಿದ್ದರು. ಈಗ ಅವೆಲ್ಲವೂ ಸಹ ತುಕ್ಕುಹಿಡಿಯುತ್ತಿವೆ. ಇದರ ಜೊತೆಗೆ ಸಮುದಾಯ ಭವನಗಳನ್ನು ಸಹ ಕಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಹರಿಜನ ಕಾಲೋನಿಯಲ್ಲಿ ಅಂಬೇಡ್ಕರ್ ಭವನ, ಜಗಜೀವನರಾಮ್ ಭವನ, ವಾಲ್ಮೀಕಿ ಭವನ, ಸೇವಾಲಾಲ್ ಭವನ ಕಟ್ಟಿದ್ದಾರೆ ಇವುಗಳು ಹಾಗೆಯೇ ಇದೆ. ಅವುಗಳನ್ನು ಇದರಲ್ಲಿ ತೊಡಗಿಸಿಕೊಂಡು ಬಳಸಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಅದು ಕಟ್ಟಕಡೆಯ ಕಾಲೋನಿಗಳಲ್ಲಿ ಕಟ್ಟಿರತಕ್ಕಂತಹ buildingಗಳು ಹಾಗೆಯೇ ಇದೆ ಅವುಗಳನ್ನು ಬಹಳ ಚೆನ್ನಾಗಿ ಕಟ್ಟಿದ್ದಾರೆ. ಅದನ್ನು ಜಾಸ್ತಿ ಮಾಡಿದ್ದಾರೆ.

(ಮುಂದು)

ವಿಸ.13.06.2017/11.40/8/ಎನ್.ಸಿ.ಕೆ/ವಿ.ಜಿ

ಶ್ರೀ ಕೆ.ಶಿವಮೂರ್ತಿ: ಆಮೇಲೆ training ಕೊಡುವವರ ಕೊರತೆ ಇದೆ. ಅದಕ್ಕೋಸ್ಕರ SCP/TSP ಹಣ ಮತ್ತೆ ಗ್ರಾಮೀಣ ಪ್ರದೇಶದಲ್ಲಿ ಕೊಡತಕ್ಕಂಥ ಹಣ ಎಲ್ಲವನ್ನು ಸಮಗ್ರವಾಗಿ ಸೇರಿಸಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಒಂದು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು Infrastructure Training Centre ಅನ್ನು ಮಾಡಿ ತಾಲ್ಲೂಕು ಮಟ್ಟದಲ್ಲಿ ವಿಶೇಷವಾಗಿ ಗ್ರಾಮೀಣ ಹೆಣ್ಣುಮಕ್ಕಳಿಗೆ ಆ ಕಾರ್ಯಕ್ರಮ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಓಕೆ, ನಿಮ್ಮ ಸಲಹೆ ಏನಪ್ಪಾ?

ಶ್ರೀ ಸಿ.ಟಿ.ರವಿ: ಸಭಾಧ್ಯಕ್ಷರೆ, ಒಳ್ಳೆಯ skill development ಮಾಡುವುದು ಒಳ್ಳೆಯ ಕಾರ್ಯ. ಇದಕ್ಕಾಗಿ ರಾಜ್ಯ ತನ್ನ ಬಜೆಟ್‌ನಲ್ಲಿ ಒದಗಿಸಿರುವ ಅನುದಾನವೆಷ್ಟು? ಕೇಂದ್ರದಿಂದ ಎಷ್ಟು ಪ್ರಮಾಣದಲ್ಲಿ ವಾರ್ಷಿಕ ಅನುದಾನ ಈ ಎಲ್ಲ ಯೋಜನೆಗಳಿಗೆ ಬರುತ್ತದೆ ಎನ್ನುವುದು ಮೊದಲನೆ ಉಪ ಪ್ರಶ್ನೆ. ಎರಡನೆಯದು ಇದನ್ನು ಮಾನಿಟರ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಲಾಗಿದೆ? ನಾವು High School ಗೆ ಹೋಗುತ್ತಿದ್ದಾಗ ಜೇನು ಸಾಕಾಣಿಕೆ ತರಬೇತಿ ಕೊಡುವವರು. ಆ ತರಬೇತಿ ಏನೆಂದರೆ sign ಹಾಕಿಸಿಕೊಳ್ಳುತ್ತಿದ್ದರು. ಆಮೇಲೆ ನಮಗೆ ಒಂದು ತಿಂಗಳಾದ ಮೇಲೆ 200-00 ರೂಪಾಯಿ ಹಣ ಕೊಡುತ್ತಿದ್ದರು. ಆ 200-00 ರೂಪಾಯಿಗಳಲ್ಲಿ ಯಾರು training ಗೆ ಹೋಗುತ್ತಾರೆ ಅವರಿಗೆ 100-00 ರೂಪಾಯಿಗಳು. ತರಬೇತಿ ಏನೆಂದರೆ ತರಬೇತಿಯ signature ಮಾತ್ರ ಆಗುತ್ತಿತ್ತು. ಹಾಗೆ ಆಗಬಾರದೆನ್ನುವ ಕಾರಣಕ್ಕೋಸ್ಕರ ಮಾನಿಟರ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದೆ?

ಅಧ್ಯಕ್ಷರು: ಅದಕ್ಕೆ ನಿಮ್ಮ ಸಲಹೆಗೆ ಉತ್ತರ ಕೊಡುತ್ತಾರೆ.

ಶ್ರೀ ಸಿ.ಟಿ.ರವಿ: ಬಜೆಟ್‌ನಲ್ಲಿ ಒದಗಿಸಿರುವಂಥ ಅನುದಾನದಲ್ಲಿ ಕೇಂದ್ರದಿಂದ ಎಷ್ಟು ಬರುತ್ತದೆ? ರಾಜ್ಯದಿಂದ ಎಷ್ಟು ಬರುತ್ತದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಕಾರಜೋಳರವರೆ ಹೇಳಿದ್ದಾರಲ್ಲಾ, ಕುಲಕಸುಬುಗಳು ಅವೆಲ್ಲ ಇತ್ತೀಚೆಗೆ ನಶಿಸಿ ಹೋಗಿಬಿಟ್ಟಿವೆ. ಯಾರು ಬಹುತೇಕ ಜನ ಕುಂಬಾರಿಕೆ ಮಾಡುತ್ತಿಲ್ಲ. Except carpenters ಮಾಡುವುದನ್ನು ಬಿಟ್ಟರೆ ಏಕೆಂದರೆ ಮನೆ construction ಗೆ ಅವರು ಬೇಕಾಗುತ್ತಾರೆ. ಅವರು ಮಾಡುತ್ತಿದ್ದಾರೆ. ಕಲ್ಲು ಹೊಡೆಯುವಂಥವರು ಮಾಡುತ್ತಾರೆ. ಬೇರೆ ಬೇರೆ ಕುಲಕಸುಬು ಮಾಡುತ್ತಿದ್ದಾರಲ್ಲಾ. ಅವರೆಲ್ಲ ಮಾರುಕಟ್ಟೆ ಇಲ್ಲದೇನೆ ಯಾಂತ್ರೀಕರಣ ಆದಮೇಲೆ ಅವುಗಳಿಗೆ ಹೊಸ technology ಸಿಗದೆ

ಮಾರುಕಟ್ಟೆ ಇಲ್ಲದೇನೆ ಯಾರು ಬದುಕುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಆಗಿ ಇವೆಲ್ಲ ಆಗಿವೆ. ಅದಕ್ಕೆ ಈಗ ನಾನು ಹೇಳುವುದೇನೆಂದರೆ, ಕುಲಕಸುಬನ್ನು ನಂಬಿಕೊಂಡು ಬದುಕಬೇಕಾದಂಥ ಅಗತ್ಯವಿಲ್ಲ. ಚಪ್ಪಲಿ ಹೊಲಿಯುವವನು ಚಪ್ಪಲಿಯನ್ನೆ ಹೊಲಿಯಬೇಕಾಗಿಲ್ಲ. ಮಡಿಕೆ ಮಾಡುವವನು ಮಡಿಕೆಯನ್ನೆ ಮಾಡಬೇಕಾಗಿಲ್ಲ. ಹೆಂಚು ಮಾಡಬೇಕಾಗಿರುವವರು ಹೆಂಚು ಮಾಡಬೇಕಾಗಿಲ್ಲ. ಅವರೆಲ್ಲ ಬೇರೆ ಬೇರೆ ಕುಲಕಸುಬುಗಳಿಗೆ ಹೋಗಬೇಕು. ಈ ಕಸುಬುಗಳಿಂದಲೇ ಜಾತಿ ಆಗಿರುವುದು ಅದು ನಿಮಗೆ ಗೊತ್ತಲ್ಲ. ಚಪ್ಪಲಿ ಹೊಲಿಯುತ್ತಾರೆಂದು ಅವರನ್ನು ಮೋಚಿಗಳು ಎಂದು ಮಾಡಿದ್ದಾರೆ. ಅವರು ಆ ಮೋಚಿ ಜಾತಿಯಲ್ಲಿಯೇ ಇರಬೇಕೇ? ಅವರಿಗೆ ಆದ್ಯತೆ ಕೊಡೋಣ ಅದು ಬೇರೆ ವಿಷಯ. ಅವರು ಮೋಚಿಯಾಗೆ ಇರಬೇಕೋ ಬದಲಾವಣೆ ಆಗಬೇಕೋ?

ಶ್ರೀ ಗೋವಿಂದ ಎಂ.ಕಾರಜೋಳ: ಅದಕ್ಕಲ್ಲ. ಅವರಿಗೆ ಆದ್ಯತೆ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಅದು ಆಯಿತು ಕಾರಜೋಳರೆ, ಅವರು ಮೋಚಿಯಾಗಿಯೇ ಇರಬೇಕೆ? ಬದಲಾವಣೆ ಆಗಬೇಕೋ? ಅದನ್ನು ಹೇಳಿ ಮತ್ತೆ. ಇವರು ಮೋಚಿಯಾಗಿಯೇ ಬಹಳ ವರ್ಷ ಇರುವುದು ಬೇಡ. ನೀವು ರಾಜಕಾರಣಿಯಾಗಿದ್ದೀರಿ, ನೀವು ಹಿಂದಿನ ಕಸುಬಿಗೆ ಹೋಗಬೇಕಾ?

ಶ್ರೀ ಗೋವಿಂದ.ಎಂ.ಕಾರಜೋಳ: ಸರ್ಕಾರಕ್ಕೆ ನನ್ನ request ಏನೆಂದರೆ.. ಅವರಿಗೆ ಅವಕಾಶ ಕೊಡಿ ಎಂದು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ನಿಮ್ಮ request ಏನೆಂದು ನನಗೆ ಅರ್ಥವಾಗಿದೆ. ನಿಮ್ಮ ಸಲಹೆ ಕೂಡ ಗಮನದಲ್ಲಿಟ್ಟುಕೊಳ್ಳೋಣ. ಆಯಿತು ಅವರಿಗೆ ಅವಕಾಶ ಕೊಡೋಣ. ನಿಮ್ಮ ಸಲಹೆ ಇದೆಯೆಲ್ಲ, ಅದನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳುತ್ತಿದ್ದೇನೆ. ಅದನ್ನು ಇಟ್ಟುಕೊಳ್ಳೋಣ. ಅವೆಲ್ಲಾ ಒಂದೇ ಸಾರಿಗೆ ಹೋಗಿಬಿಡುತ್ತವೆಯೇ? ಜಾತಿ ವ್ಯವಸ್ಥೆ ಅಷ್ಟು ಸುಲಭವಾಗಿ ಹೋಗಿಬಿಡುತ್ತದೆಯೆ? ಬಸವಣ್ಣನವರು ಎಷ್ಟು ವರ್ಷದಿಂದ ಹೇಳಿದರು. ``ಇವನಾರವ, ಇವನಾರವ, ಇವನಾರವ, ಎಂದೆಣಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ`` ಎನ್ನುವುದು ಆಗಿದೆಯೋ? ಅದನ್ನು ಹೇಳುವುದು ಪುನ: ನೀನು ಯಾವ ಜಾತಿ ಎಂದು ಕೇಳುವುದು. ಇವೆಲ್ಲ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ನಡೆಯುತ್ತಲೇ ಇವೆ. 900 ವರ್ಷಗಳಾಗುತ್ತಾ ಬಂದಿತು. ಇನ್ನೂ ಆಗಿಲ್ಲ. ನೀವು ವಚನ ಹೇಳುತ್ತಿದ್ದೀರಿ, ನಾನು ವಚನ ಹೇಳುತ್ತಿದ್ದೇನೆ. ಬೇರೆಯವರು ಹೇಳುತ್ತಲೇ ಇದ್ದಾರೆ. ನೀವೆಲ್ಲ ಆ ಕಡೆ ವಚನಗಳನ್ನು ಹೇಳಲೇಬೇಕು. ಈ ರೀತಿ ಕಸುಬು ಆಧಾರಿತ ಜಾತಿಗಳಾಗಿವೆಯೆಲ್ಲಾ ಅದು ಕ್ರಮೇಣ ಅವೆಲ್ಲಾ ಹೋಗಬೇಕು. ಶಿಕ್ಷಣ, ಉದ್ಯೋಗ ಈ ರೀತಿ skill development ಮಾಡಿ ಬೇರೆ ಬೇರೆ ಕಸುಬುಗಳಿಗೆ ಹೋಗಬೇಕು. ಎಲ್ಲರಿಗೂ ಶಿಕ್ಷಣ ಸಿಗದಿದ್ದರೆ ಎಲ್ಲರು ಜಾತಿ ಕಸುಬುಗಳಿಗೆ ಯಾರು ಜೋತು ಬೀಳುವುದಿಲ್ಲ. ಈಗ ಕಂಬಳಿ ನೇಯುತ್ತಾರೆ, ಅವರು ಕಂಬಳಿಯನ್ನೆ ನೇಯ್ದುಕೊಂಡೇ ಇರಬೇಕೇ? ಈಗ ಕಂಬಳಿಯನ್ನು ಯಾರು ತೆಗೆದುಕೊಳ್ಳುವುದಿಲ್ಲ ಗೊತ್ತೆ ನಿಮಗೆ? ಮೊದಲೆಲ್ಲ ತಯಾರಿಸಿದ ಕಂಬಳಿಗಳನ್ನು ಆ ಮಿಲಿಟರಿಗೆ ಹೋಗಿ ಕೊಡುತ್ತಿದ್ದರು. ಈಗ ಕಂಬಳಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈಗ ಅವರು ಕಂಬಳಿಗಳನ್ನು ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಮಾರುಕಟ್ಟೆಯೇ ಇಲ್ಲ. ಕಂಬಳಿ ನೇಯುವವರು ಏನು ಮಾಡಬೇಕು? ಈಗ ಚಪ್ಪಲಿ ಹೊಲಿಯುವವರು ಇದ್ದಾರೆ. ಅವರು ತಯಾರಿಸುವ ಚಪ್ಪಲಿಗಳನ್ನು ಯಾರಾದರೂ ತೆಗೆದುಕೊಳ್ಳುತ್ತಾರೆಯೇ? ಬಹಳ ಕಡಿಮೆ rate ಗೂ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ. ಮುಟ್ಟದೇ ಇಲ್ಲ. ಈಗ ಲಿಡ್ಕರ್ ಇದೆಯೆಲ್ಲಾ. ಆ ಲಿಡ್ಕರ್‌ನಲ್ಲಿ ಎಷ್ಟು ವ್ಯಾಪಾರ ಆಗುತ್ತದೆ ನೋಡಿ, ಬೇರೆ ಬಾಟಾ ಕಂಪೆನಿಯಲ್ಲಿ ಎಷ್ಟು ವ್ಯಾಪಾರ ಆಗುತ್ತದೆ ನೋಡಿ. ಜನಗಳ ಮನಸ್ಸು ಕೂಡ ಬದಲಾವಣೆ ಆಗುತ್ತಿದೆ. ನಿನ್ನೆ ಒಂದು ಚರ್ಚೆ ಆಗಿದೆ. ಎಲ್ಲರಿಗೂ ಈಗ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಬೇಕು, ಇಂಗ್ಲಿಷ್ ಕಲಿಸಬೇಕೆಂದು ವ್ಯಾಮೋಹ ಬೆಳೆದು ಬಿಟ್ಟಿದೆ. ಅವರ ಅಪ್ಪ ಅಮ್ಮಂದಿರಿಗೆ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಬಹಳ ಖುಷಿ, ಕನ್ನಡದಲ್ಲಿ ಮಾತನಾಡಿದರೆ ಖುಷಿಯಾಗುವುದಿಲ್ಲ. ನಿಮಗೆ ಇಂಗ್ಲಿಷ್ ಬರದೇ ಹೋದರೂ ಪರವಾಗಿಲ್ಲ, ನಿಮ್ಮ ಮಕ್ಕಳು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ನಿಮಗೆ ಖುಷಿ. ನಿಮಗೆ ಇಂಗ್ಲಿಷ್ ಬರುತ್ತದೆ. ಈ ರೀತಿಯಾಗಿ ಮನೋಭಾವ ಬದಲಾವಣೆ ಆಗುತ್ತಿದೆ. ಆದ್ದರಿಂದ ಇದೇ ಬದಲಾವಣೆ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಇದೇ ಅಭಿವೃದ್ಧಿಗೆ ದಾರಿ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಅದಲ್ಲ, ಆದರೂ ಕೂಡ ಬದಲಾವಣೆ ಆಗಬೇಕಾಗುತ್ತದೆ. ಶಿಕ್ಷಣದ ಮೂಲಕ ಈ ಬದಲಾವಣೆಗಳನ್ನೆಲ್ಲ ನಾವು ನೋಡುತ್ತಾ ಹೋಗಬೇಕಾಗುತ್ತದೆ. ಅಲ್ಲಿಯವರೆಗೆ ಇವರೇನು ಸಲಹೆ ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಆಗಬಹುದಲ್ಲವೆ? ಆಗಬಹುದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಗೋವಿಂದ ಎಂ.ಕಾರಜೋಳ: ಚಪ್ಪಲಿ ಹೊಲಿಯುವವನಿಗೆ ಅದೆ training ಕೊಡಬೇಕಾಗಿಲ್ಲ. ಬೇರೆ ಬೇರೆ ಕೆಲಸಗಳಿಗೆ ಏನೇನು ಅವಕಾಶಗಳಿವೆ ಅದಕ್ಕೆ ಇವರಿಗೂ ಹೆಚ್ಚಿನ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): Hair cutting ಮಾಡುವವರು star hotel ಗೆ ಹೋದರೆ ಅವರೆಲ್ಲಾ ಆ ಜಾತಿಯಲ್ಲಿ Hair cutting ಕಲಿತಿರುವವರಲ್ಲ. ಹೌದಾ. ಆದರೆ ದುಡ್ಡು ಮಾತ್ರ ಅಲ್ಲಿ ಜಾಸ್ತಿ ಕೊಡುತ್ತೇವೆ. ದತ್ತಾರವರೆ, Star Hotelಗಳಲ್ಲಿ hair cuttingಗೆ ಎಷ್ಟು ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು: ದತ್ತಾರವರು Star Hotel ಗೆ ಹೋದಂತೆ ಕಾಣುವುದಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ: ಅವರಿಗೆ ಕೇಳಿದರೆ ಗೊತ್ತಾಗುವುದಿಲ್ಲ, ಎಂ.ಬಿ.ಪಾಟೀಲರಿಗೆ ಕೇಳಿದರೆ ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಹಾಗಾದರೆ ನೀವು ಯಾರ ಕೈಯಲ್ಲಿ hair cutting ಮಾಡಿಸಿಕೊಳ್ಳುತ್ತೀರಿ?

ಶ್ರೀ ಸಿ.ಟಿ.ರವಿ: ನೀವು ಜಾರ್ಜ್‌ರವರನ್ನು, ಎಂ.ಬಿ.ಪಾಟೀಲರಿಗೆ ಈ ಪ್ರಶ್ನೆಯನ್ನು ಕೇಳಬೇಕು. ನಾನು Star Hotel ಗೆ ಹೋಗುವುದಿಲ್ಲ. ನಮ್ಮ ಊರಿನಲ್ಲಿ 25 ವರ್ಷಗಳಿಂದ ಯಾವ shop ಗೆ ಹೋಗುತ್ತಿದ್ದೆನೊ ಅದೇ shop ಗೆ ಹೋಗುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ನಾವು Question hour ನಲ್ಲಿ ಚರ್ಚೆ ಮಾಡುತ್ತಿದ್ದೇವೆ. ಎಲ್ಲರಿಗೂ ಇದೇರೀತಿ ಅವಕಾಶ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಬೇಕಾದರೆ ಅದರ ಬಗ್ಗೆ ಒಂದು ಚರ್ಚೆಯನ್ನೆ ಇಟ್ಟುಕೊಳ್ಳೋಣ. ಜಾತಿ, ಕಸುಬು, hair cutting, ಉದ್ಯೋಗ, ಮಾರುಕಟ್ಟೆ ಇದರ ಬಗ್ಗೆ ಬೇಕಾದರೆ ಒಂದು ಬಾರಿ ಚರ್ಚೆ ಇಡೋಣ. ನಾನು ಒಂದು ಸಾರಿ ದೆಹಲಿಯಲ್ಲಿದ್ದೆ. Hair cutting ಮಾಡಿಸಿಕೊಳ್ಳಬೇಕೆನ್ನಿಸಿತು. ಒಂದು ಹೋಟೆಲ್‌ಗೆ ಹೋದೆ. ಆಗ ಅವರನ್ನು ನೀವೇನು ಮೂಲ ಕಸುಬಿನಿಂದ ಈ ಕೆಲಸ ಮಾಡುತ್ತಿರುವಿರಾ, hereditaryನಾ ಅಥವಾ ಹೇಗೆ ಎಂದು ಕೇಳಿದೆ. ಇಲ್ಲ ಸರ್, ನಾವು ಈ ಕಸುಬು ಕಲಿತುಕೊಂಡಿದ್ದೇವೆ. ಇವರು ಸಲೂನ್ ಇಟ್ಟುಕೊಂಡು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.
ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬೋರ್ಡ್ ಇಟ್ಟುಕೊಂಡಿದ್ದಾರೆ. ನಾವು ಒಂದು ಕೆಲಸ ಮಾಡುತ್ತಿದ್ದೇವೆ. ನಾನು ಹೋಗಿ ಸುಮಾರು 10-15 ವರ್ಷಗಳಾಗಿರಬಹುದು. ಆ ಕಾಲದಲ್ಲಿ 200-00 ರೂಪಾಯಿಗಳನ್ನು ತೆಗೆದುಕೊಂಡರು.

ಶ್ರೀ ಕೆ.ಎನ್.ರಾಜಣ್ಣ: ಈಗ ಎರಡೂ ರೀತಿ hair cutting ಇದೆ. ಹೆಣ್ಣುಮಕ್ಕಳು hair cutting ಮಾಡುತ್ತಾರೆ. ಗಂಡಸರು hair cutting ಮಾಡುತ್ತಾರೆ. ಗಂಡಸರು hair cutting ಮಾಡುವುದು ಕಡಿಮೆ. ಹೆಣ್ಣುಮಕ್ಕಳು hair cutting ಮಾಡುವುದು ಸ್ವಲ್ಪ ಜಾಸ್ತಿ. ಹೆಣ್ಣುಮಕ್ಕಳು hair cutting ಮಾಡುತ್ತಾರೆ. ನೀವು ಇತ್ತೀಚೆಗೆ ಹೋಗಿಲ್ಲ. ಹಾಗಾಗಿ ನಿಮಗೆ ಗೊತ್ತಿಲ್ಲ. ನಾವು ಹೋಗಿದ್ದೇವೆ ನಮ್ಮನ್ನು ಕೇಳಿ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಆಗ 10-12 ವರ್ಷಗಳ ಹಿಂದ ಅಶೋಕ ಹೋಟೆಲ್‌ನಲ್ಲೋ ಯಾವುದೋ ಹೋಟೆಲ್‌ನಲ್ಲಿ 200-00 ರೂಪಾಯಿಗಳನ್ನು ತೆಗೆದುಕೊಂಡರು. ಈಗ ಹೋಗಿಲ್ಲ. ಈಗ ನಮ್ಮ ಊರಿನಲ್ಲಿ ನಾವು ಎಷ್ಟು ಕೊಡುತ್ತಿದ್ದೆವು. ಒಂದು ವರ್ಷಕ್ಕೆ ಒಂದು ಪಲ್ಲ ಭತ್ತ ಕೊಟ್ಟು ಮನೆಯವರೆಲ್ಲ ಒಂದು ವರ್ಷ ಪೂರ್ತಿ hair cutting ಮಾಡಿಸಿಕೊಳ್ಳುತ್ತಿದ್ದೆವು. ಅದನ್ನು ಆಯಾ ಕೊಡುವುದು ಎಂದು ಹೇಳುತ್ತೇವೆ. ಆ ಭತ್ತ, ರಾಗಿ, ಜೋಳ ಬೆಳೆದಾಗ ಅವರಿಗೆ ಒಂದಷ್ಟು ಆಯಾ ಎಂದು ಕೊಟ್ಟು ಮನೆಯವರೆಲ್ಲ ಮನೆಯವರೆಲ್ಲ ಇಡೀ ವರ್ಷವೆಲ್ಲಾ ಅವರಿಂದ hair cutting ಮಾಡಿಸಿಕೊಳ್ಳುತ್ತಿದ್ದರು.

ಅಧ್ಯಕ್ಷರು: Question Hour ಬೇಗ ಆಗಬೇಕು ಎಂದು ಹೇಳುತ್ತಿದ್ದಾರೆ. ಹೇಳಿ.

ಶ್ರೀ ಜಗದೀಶ್ ಶೆಟ್ಟರ್: Question Hour limitation ಇರಬೇಕು. ಉತ್ತರ ಕೂಡ limitation ಇರಬೇಕು. Demands ಮೇಲೆ ನಾವು ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಎಲ್ಲರೂ ಕೇಳಿದ್ದಾರೆ. ಇದು Skill development ಜಗದೀಶ್ ಶೆಟ್ಟರೇ.

ಅಧ್ಯಕ್ಷರು: ಎಲ್ಲರೂ ಪ್ರಶ್ನೆ ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಸ್ಪೀಕರ್‌ರವರು ಎಲ್ಲರಿಗೂ ಇದೇರೀತಿ ಅವಕಾಶ ಕೊಡಬೇಕೆಂದು ನಾನು ಹೇಳಿದ್ದು ಅಷ್ಟೇ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಶೆಟ್ಟರೇ, ಕಾರಜೋಳ ಪ್ರಶ್ನೆ ಕೇಳಿದ್ದಾರೆ, ರವಿ ಕೇಳಿದ್ದಾರೆ, ಶಿವಮೂರ್ತಿ ಕೇಳಿದ್ದಾರೆ. ಈ ಕಡೆಯೂ ಕೇಳಿದ್ದಾರೆ, ಆ ಕಡೆಯೂ ಕೇಳಿದ್ದಾರೆ ಅವರಿಗೆ ಉತ್ತರ ಕೊಡಬೇಕೋ ಬೇಡವೋ ಹೇಳಿ. ನೋಡಿ, ಇವರಿಗೆ ಜಾಸ್ತಿ ಉತ್ತರ ಕೊಟ್ಟರೂ ಕಷ್ಟ, ಕಡಿಮೆ ಉತ್ತರ ಕೊಟ್ಟರೂ ಕಷ್ಟ. ಯಾವರೀತಿ ಹೇಳಬೇಕೆನ್ನುವುದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಶಿವಮೂರ್ತಿ: ಇದು ಬಹಳ important ಇದೆ. ತಾವು ದಯವಿಟ್ಟು ಹೇಳಬೇಕು ಸರ್.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಪಾಪ, ಅವರಿಗೆ ಬೇಸರವಾಗುತ್ತಿದೆ. ರವಿಯವರೇ ಈ skill development ಗೆ ಒಟ್ಟು 1330 ಕೋಟಿ ರೂಪಾಯಿಗಳ ಅನುದಾನ ಇದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾಲು 160 ಕೋಟಿ ರೂಪಾಯಿಗಳು. ರಾಜ್ಯ ಸರ್ಕಾರದ ಪಾಲು 1,170 ಕೋಟಿ ರೂಪಾಯಿಗಳು.

(ಮುಂದು)

13.06.2017/ 11.50 (9)/ JB-CP

ಶ್ರೀ ಸಿದ್ದರಾಮಯ್ಯ (ಮುಂದು . . .): 1,330 ಕೋಟಿ ಇಟ್ಟಿದ್ದೇವೆ. ಅದರಲ್ಲಿ ಕೇಂದ್ರ ಸರ್ಕಾರದ್ದು ರೂ.160 ಕೋಟಿಗಳು. ಕೇಂದ್ರ ಸರ್ಕಾರದ್ದು ರೂ.160 ಕೋಟಿಗಳು. ರಾಜ್ಯ ಸರ್ಕಾರದ್ದು ರೂ.1,170 ಕೋಟಿಗಳು. ಬರೆದುಕೊಳ್ಳಿ.

ಶ್ರೀ ಕೆ.ಶಿವಮೂರ್ತಿ: Compressive.

ಶ್ರೀ ಸಿದ್ದರಾಮಯ್ಯ: ಆಮೇಲೆ ಶಿವಮೂರ್ತಿಯವರು ಕೇಳಿದ್ದಾರಲ್ಲಾ, ಹಳ್ಳಿಗಳಲ್ಲಿ ಇವೆ, ತಾಲ್ಲೂಕುಗಳಲ್ಲಿ ಭವನಗಳನ್ನು ಕಟ್ಟಿದ್ದೇವೆ. ಈಗ ನಾವು skill development ಮಾಡುವುದು ಎಂದರೆ ಏನು ಹೇಳಿ. ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಮಾಡಬೇಕು. ಅದಕ್ಕೆ ನಿಮ್ಮ ಸಲಹೆ ಇದೆಯೆಲ್ಲಾ ಅದನ್ನೂ ಈ ಸಲಕ್ಕೆ ಗಮನದಲ್ಲಿಟ್ಟುಕೊಳ್ಳೋಣ.

ಅಧ್ಯಕ್ಷರು: ಅಪ್ಪಚ್ಚು ರಂಜನ್‌ರವರು ಮಾತನಾಡಿ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, . . .



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಅಧ್ಯಕ್ಷರು: ಯಾವಗಲ್‌ರವರು ಏನೋ ಮಾತನಾಡುತ್ತಾರೆ. ಬೇಗ ಕೇಳಿ.

ಶ್ರೀ ಬಿ.ಆರ್.ಯಾವಗಲ್: ಇದಕ್ಕೆ ಪೂರಕವಾಗಿ ಒಂದೇ ಒಂದು ಪ್ರಶ್ನೆ. Supplementary ಯಾಗಿ ಕೇಳುತ್ತೇನೆ. ಸರ್ ಈಗ ಏನು skill development ಬಗ್ಗೆ ತರಬೇತಿ ಕೊಡುತ್ತಿದ್ದೇವೆಂದು ಹೇಳಿದ್ದೀರಿ, ಅದರ ಜೊತೆಗೆ ಇತ್ತೀಚಿನ ವರದಿ ಪ್ರಕಾರ ಈ GDP growth ಏನಿದೆಯೆಲ್ಲಾ ಆ ಪ್ರಮಾಣದಲ್ಲಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲವೆಂದು ವರದಿಯಾಗಿದೆ. ಇದಕ್ಕೂ ಅಂದರೆ ಈ skill development ಮಾಡುವುದಕ್ಕೂ ಹಾಗೂ ಉದ್ಯೋಗ ಸೃಷ್ಟಿ ಅಥವಾ GDP ಆಗುವುದಕ್ಕೂ, investment ಮಾಡುವುದಕ್ಕೂ ಏನಾದರೂ ಸಂಬಂಧವಿದೆಯೇ?

ಅಧ್ಯಕ್ಷರು: Skill development ಆದರೆ ಉದ್ಯೋಗ ಜಾಸ್ತಿಯಾಗಿಯೇ ಆಗುತ್ತದೆ.

ಶ್ರೀ ಬಿ.ಆರ್.ಯಾವಗಲ್: ಆಗಿದೆ. ಆದರೆ, disproportionate ಇದೆ. ಬಹಳಷ್ಟು automation ಇದೆ. Automatic machine ಹಾಕುತ್ತಾರೆ. Skill development ಮಾಡಿದರೂ ಉದ್ಯೋಗ ಸಿಗುವುದಿಲ್ಲ. ಸಾಕಷ್ಟು ITI ಗಳು, ಡಿಪ್ಲೊಮಾಗಳು, ಇಂಜಿನಿಯರ್‌ಗಳು ಈ ರೀತಿ ಲಕ್ಷಗಟ್ಟಲೆ ಓದಿದವರು ಖಾಲಿ ಕುಳಿತಿದ್ದಾರೆ. ಅವರ ಬಗ್ಗೆ ಏನಾದರೂ ಸರ್ಕಾರ ಕ್ರಮ ಕೈಗೊಂಡಿದೆಯೇ?

ಅಧ್ಯಕ್ಷರು: ಅದು ಉದ್ಯೋಗ ಕೊಡುವುದು ಆಯಿತು. ಇದು skill development ಆಯಿತು. ಅದು ಬೇರೆ ಬಿಡಿ. ಅಪ್ಪಚ್ಚು ರಂಜನ್‌ರವರು ಮಾತನಾಡಿ.

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 821</u>**

**(ಉತ್ತರದ ಪ್ರತಿ ಲಗತ್ತಿಸಿದೆ)**

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.: ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, ರಾಜ್ಯದಲ್ಲಿ ಮಾದಕ ದ್ರವ್ಯ ನಿಯಂತ್ರಣ ಘಟಕ ಬಲಪಡಿಸುವ ದೃಷ್ಟಿಯಿಂದ ಸಿ.ಐ.ಡಿ. ಘಟಕದಲ್ಲಿ ಕೂಡ ಎಸ್.ಪಿ. ಮತ್ತು ಪೊಲೀಸ್ ಇನ್ಸ್‌ಪೆಕ್ಟರ್‌ಅನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಈ ಸಿ.ಐ.ಡಿ. ಘಟಕದಿಂದ ಎಷ್ಟು ಕೇಸ್‌ಗಳು refer ಆಗಿವೆ? ಮತ್ತೆ ಈ ಮಾದಕ ದ್ರವ್ಯ ಉಪಯೋಗಿಸುವುದರಿಂದ awareness create ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ?

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಾಲೇಜುಗಳಲ್ಲಿ ಮತ್ತು ಸ್ಕೂಲ್‌ಗಳಲ್ಲಿ ಏನೇನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ? ಇಲ್ಲಿ ಎಷ್ಟು ಕೇಸ್‌ಗಳ ಮೇಲೆ conviction rate ಇದೆ? ಎಷ್ಟು ಅಪರಾಧಿಗಳಿಗೆ ಕೋರ್ಟ್‌ನಲ್ಲಿ ಶಿಕ್ಷೆ ಆಗಿದೆ, conviction rate ಎಷ್ಟು ಆಗಿದೆ? ಅದರ ಮಾಹಿತಿಯನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಡಾ: ಜಿ.ಪರಮೇಶ್ವರ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮಾದಕ ದ್ರವ್ಯಗಳ ಸಮಸ್ಯೆ ರಾಜ್ಯದಲ್ಲಿ ಬಹಳ ಗಂಭೀರವಾಗಿರತಕ್ಕಂತಹದ್ದು. ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ, ಮಂಗಳೂರಿನಲ್ಲಿ ಹಾಗೂ ಬೆಳಗಾಂನಲ್ಲಿ ಹೀಗೆ ಕೆಲವು ಜಿಲ್ಲೆಗಳಲ್ಲಿ ಬಹಳ ಗಂಭೀರವಾಗಿರುವಂತಹದ್ದು. ಇತ್ತೀಚೆಗೆ ಮಡಿಕೇರಿಯಲ್ಲಿ ಕೂಡ ಇದು ಪ್ರಾರಂಭವಾಗಿದೆ ಹಾಗೂ ಹೆಚ್ಚು ಬೆಳೆಯುತ್ತಿದೆ ಎನ್ನುವಂತಹದ್ದು ಸಹ ಇದೆ. ಹಾಗಾಗಿ 2014ನೇ ಸಾಲಿನಲ್ಲಿ ಈ ಗಾಂಜಾ ಮಾರಾಟ ಮಾಡುವಂತಹ 7 ಜನರನ್ನು ಪತ್ತೆ ಮಾಡಿ ಅವರ ಮೇಲೆ ಕೇಸ್‌ಗಳನ್ನು ದಾಖಲೆ ಮಾಡಿದ್ದಾರೆ. 2015ನೇ ಸಾಲಿನಲ್ಲಿ ಆ ವರ್ಷ ಕೂಡ 7 ಜನರ ಮೇಲೆ ಕೇಸ್ ದಾಖಲೆ ಮಾಡಿದ್ದಾರೆ. 2016ನೇ ಸಾಲಿನಲ್ಲಿ 12 ಜನರನ್ನು ಪತ್ತೆ ಮಾಡಿ ಅವರ ಮೇಲೆ ಕೇಸ್‌ಗಳನ್ನು ಹಾಕಿದ್ದಾರೆ, ಇದರಲ್ಲಿ 11 ಕೇಸ್‌ಗಳು ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿವೆ. ಒಂದು ಪ್ರಕರಣದಲ್ಲಿ ಒಬ್ಬರಿಗೆ ಶಿಕ್ಷೆಯಾಗಿದೆ. ಇದನ್ನು ನಿಲ್ಲಿಸುವುದಕ್ಕೆ ಹಾಗೂ ನಿಯಂತ್ರಣ ಮಾಡುವುದಕ್ಕೆ ಏನೆಲ್ಲಾ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೀರಿ ಎಂದು ತಾವು ಕೇಳುತ್ತಿದ್ದೀರಿ. ನಾವು ಸಿ.ಐ.ಡಿ.ಯಲ್ಲಿ ಒಂದು ನಾರ್ಕೋಟಿಕ್ ಸೆಲ್ ಎಂದೇ ಪ್ರಾರಂಭ ಮಾಡಿದ್ದೇವೆ. ಅದರ ಜೊತೆಗೆ ಈಗಾಗಲೇ 8 ಜಿಲ್ಲೆಗಳಲ್ಲಿ ಅಂದರೆ ಬೆಳಗಾಂನಲ್ಲಿ, ಮಂಗಳೂರಿನಲ್ಲಿ ಮತ್ತು ಬೇರೆ ಬೇರೆ ಇನ್ನಿತರೆ ಜಿಲ್ಲೆಗಳಲ್ಲಿ ನಾವು ಒಬ್ಬರು ಇನ್ಸ್‌ಪೆಕ್ಟರ್ ಲೆವೆಲ್‌ನಲ್ಲಿರತಕ್ಕಂತಹ ಅಧಿಕಾರಿಯನ್ನು ಮತ್ತು ಜೊತೆಗೆ ಅವರಿಗೆ ಸಿಬ್ಬಂದಿಯನ್ನು ನೇಮಕ ಮಾಡಿ ಅದನ್ನು ನಿಯಂತ್ರಣ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಜೊತೆಗೆ ಈಗಾಗಲೇ ತಾವು ಹೇಳಿದ ಹಾಗೆ ಒಂದು awareness create ಮಾಡಬೇಕು, ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅಲ್ಲಿ ಏನು ಡ್ರಗ್ಸ್ ಮಾರಾಟ ಮಾಡುವ peddlers ಇರುತ್ತಾರೆ, ಅವರು ತೆಗೆದುಕೊಂಡು ಬಂದು ಅಲ್ಲಿ ಮಾರಾಟ ಮಾಡುತ್ತಿರುತ್ತಾರೆ, ಅದನ್ನು ನಿಯಂತ್ರಣ ಮಾಡುವುದಕ್ಕೆ, ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ awareness create ಮಾಡುವಂತಹದ್ದು. ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕೂಡ ಇದನ್ನು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಖಾಸಗಿ ಪಾರ್ಟಿಗಳು ಇಂತಹ ಕಡೆಗಳಲ್ಲಿ supply ಮಾಡುತ್ತಿರುತ್ತಾರೆ. ಅಲ್ಲಿ awareness create ಮಾಡುವಂತಹದ್ದು ಮಾಡಬೇಕು. ಅದರ ಜೊತೆಗೆ ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವಂತಹದ್ದು. ಇದಕ್ಕಾಗಿ ಈ ಅಧಿಕಾರಿಗಳಿಗೆ ನಾವು Drug Detection Kit ಇದೆಲ್ಲವನ್ನೂ ಕೂಡ ಈಗಾಗಲೇ supply ಮಾಡಿದ್ದೇವೆ. ಅವರು ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದರ ಜೊತೆಗೆ ಈಗಾಗಲೇ ಜೂನ್-26ರಿಂದ ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಎಂದು ಆಚರಣೆ ಮಾಡಿ, ಅದಕ್ಕೆ ಹೊಸದಾಗಿ ಒಂದು ಟೆಲಿಫೋನ್ ನಂಬರ್ ಕೊಟ್ಟಿದ್ದೇವೆ. ಇಂತಹ ಕಡೆಗಳಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದಾರೆ ಎಂದು ಯಾರಿಗಾದರೂ ಮಾಹಿತಿ ಸಿಕ್ಕಿದರೆ ಅಥವಾ ಯಾರೋ peddlers ಬಂದು ಡ್ರಗ್ಸ್‌ಅನ್ನು ಶಾಲಾ-ಕಾಲೇಜುಗಳಲ್ಲಿ distribute ಮಾಡುತ್ತಿದ್ದಾರೆ ಎಂದು ಯಾರಿಗಾದರೂ ಮಾಹಿತಿ ಸಿಕ್ಕಿದರೆ 155260 ಈ ನಂಬರ್‌ಗೆ ನೇರವಾಗಿ ಮಾಹಿತಿ ಕೊಟ್ಟರೆ ತಕ್ಷಣವೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಪೊಲೀಸ್ ಇಲಾಖೆಯವರು ಮಾಡುತ್ತಾರೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ರಾಜ್ಯದ ಜನತೆಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈಗ 11 ಕೇಸ್‌ಗಳಲ್ಲಿ ಒಂದು ಕೇಸ್‌ನಲ್ಲಿ ಮಾತ್ರ conviction ಆಗಿದೆ ಎಂದು ಹೇಳುತ್ತಿದ್ದೀರಿ. Conviction rate ಅಷ್ಟೊಂದು ಕಡಿಮೆಯಾಗುವುದಕ್ಕೆ ಕಾರಣವೇನು? ನಿಮ್ಮ investigation ನಲ್ಲಿ ಏನಾದರೂ ಅಪರಾಧವಾಗಿದೆಯೇ? ಆ investigation ಮಾಡಿದರೂ ಕೂಡ, ಕೇಸ್ ಹಾಕಿದರೂ ಕೂಡ ಅಲ್ಲಿ ಲಾಯರ್‌ಗಳು ಸರಿಯಾಗಿ appear ಆಗಲಿಲ್ಲವೇ? ಅಲ್ಲಿ ಕಕ್ಷಿದಾರರ ಪರವಾಗಿ ವಾದವನ್ನು ಮಾಡುವಂತಹ ಕೆಲಸ ಮಾಡಿದ್ದಾರಾ? ಅದನ್ನು ತಾವು ಹೇಳಬೇಕು. ಅದರ ಜೊತೆಗೆ ಕರ್ನಾಟಕದಲ್ಲಿ ಎಷ್ಟು ಕೇಸ್‌ಗಳಾಗಿವೆ? ಮತ್ತೆ ಕಾಲೇಜುಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲದ ಸಮಯದಲ್ಲಿ ನಿಮ್ಮ Police Department ನಿಂದ ಸಿಬ್ಬಂದಿ ಹೋಗಿ ಅಲ್ಲಿ video camera ಮೂಲಕ ಹಲವಾರು ಪ್ರಕರಣಗಳನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ. ಯಾವ ರೀತಿಯ ಕ್ರಮ ಕೈಗೊಳ್ಳುತ್ತೀರಾ ಎಂದು ಹೇಳಬೇಕೆಂದು ವಿನಂತಿ ಮಾಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಡಾ: ಜಿ.ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ನಾವು ರಾಜ್ಯದಲ್ಲಿ ಈಗಾಗಲೇ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತು ಏನಾಗಿದೆ ಎಂದರೆ, ಈ ಗಾಂಜಾ ಮಾರಾಟ ನಿರಂತರವಾಗಿದೆ. ಆದರೆ, ಪೊಲೀಸ್‌ನವರು ಏನು ಕೇಸ್‌ಗಳನ್ನು ರಿಜಿಸ್ಟರ್ ಮಾಡುತ್ತಾರೆ, ಎಷ್ಟೇ ಮೊತ್ತದ ಗಾಂಜಾ ಸಿಕ್ಕಿದರೂ ಕೂಡ seizure ಮಾಡುವಾಗ 50 grams ಎಂದು ಹಾಕಿ FIR ಮಾಡಿ ಕಳುಹಿಸುತ್ತಾರೆ. ಅದು bailable offence ಆಗುತ್ತಿದೆ. ಇದು ಪೊಲೀಸರ ಸಹಕಾರ ಇಲ್ಲದೇ ಆಗುವುದಿಲ್ಲ. ನಾನು ಎಲ್ಲರಿಗೂ ಹೇಳುತ್ತಿಲ್ಲ. ಪೊಲೀಸರ ಸಹಕಾರದಿಂದ ನಿರಂತರವಾಗಿ specially ಎಲ್ಲಿ Education Institutions ನಡೆಸುತ್ತಿದ್ದಾರೆ ಅಲ್ಲಿ ಈ ರೀತಿಯಾಗುತ್ತಿದೆ. ಅದನ್ನು ಸ್ವಲ್ಪ ಬಿಗಿ ಮಾಡಿ 50 ಗ್ರಾಂ ಹಾಕಿ ಒಂದು strategic purposeಗೆ ಮಾಡಿದರೆ ಇದನ್ನು ತಡೆಯುವುದಕ್ಕೆ ಆಗುವುದಿಲ್ಲ. ಪೊಲೀಸ್‌ನವರಿಗೆ ಸೂಕ್ತ instruction ಕೊಡಬೇಕು.

ಅಧ್ಯಕ್ಷರು: ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈ ಡ್ರಗ್ಸ್ ಇದೆಯೆಲ್ಲಾ, ಗೃಹ ಸಚಿವರೆ, ಇದು ordinary crime ಅಲ್ಲ. ವಿಶೇಷವಾಗಿ, ಆ ಶಾಲಾ-ಕಾಲೇಜುಗಳಲ್ಲಿ entire ಮಕ್ಕಳು ಏನಿದ್ದಾರೆ, ಅವರನ್ನು ಈ ಜಾಲದಲ್ಲಿ ಬೀಳಿಸಿ ಒಂದು ರೀತಿಯಾದ ದೇಶ ದ್ರೋಹಿ ಚಟುವಟಿಕೆ ನಡೆಯುತ್ತಿದೆ. ಅದಕ್ಕೋಸ್ಕರ ಇವತ್ತು ಪೊಲೀಸ್ ಇಲಾಖೆಯಿಂದ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ, ತಾವು ಡ್ರಗ್ಸ್ ಬಗ್ಗೆ ಒಂದು ನಂಬರ್ ಸಹ ಕೊಟ್ಟಿದ್ದೀರಿ. ಪ್ರಾಯಶ: ನನಗನಿಸುವುದು ಏನೆಂದರೆ, ಇದು ಸಾಲದು. ಇದನ್ನು ಇನ್ನೂ ಕೂಡ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಮೂಲೆ ಮೂಲೆಯಲ್ಲಿ ಎಲ್ಲೆಲ್ಲಿ ಆಗುತ್ತಿದೆ ಎಂಬುದು ಪೊಲೀಸ್ ಇಲಾಖೆಗೆ ಗೊತ್ತಿದೆ. ಆ youngsters ಹಾಳಾಗಿ ಹೋಗುತ್ತಿರುವುದನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಅದಕ್ಕೋಸ್ಕರ we should give more thrust to nab in this rocket. ಈ ರಾಕೆಟ್‌ಅನ್ನು ಒಡೆಯುವುದಕ್ಕೆ ದಯವಿಟ್ಟು ಹೆಚ್ಚು ಒತ್ತು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಡಾ: ಜಿ.ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಸಂದರ್ಭಗಳಲ್ಲಿ ಇಲ್ಲಿ ಸದನದಲ್ಲಿ ಕೂಡ ಇದು ಚರ್ಚೆಯಾಗಿದೆ. ತಾವು ಹೇಳಿದ ಹಾಗೆ ಪೋಲೀಸ್‌ನವರು ಕೂಡ ಇದರ ಜೊತೆಯಲ್ಲಿ ಸೇರಿಕೊಂಡಿದ್ದಾರೆ, ಸಹಕಾರ ಮಾಡುತ್ತಿದ್ದಾರೆ, ಅವರಿಗೆ ಕೇಸ್‌ಗಳನ್ನು ಸರಿಯಾಗಿ ಹಾಕುವುದಿಲ್ಲ, 50 grams limit ಇದೆ, ಜಾಸ್ತಿಯಿದ್ದರೂ ಸಹ ಅಷ್ಟಕ್ಕೇ ಅವರು ತೆಗೆದುಕೊಳ್ಳುತ್ತಾರೆ ಎಂದು ತಾವು ಏನು ಹೇಳಿದ್ದೀರಿ ಇದೆಲ್ಲಾ ಅನೇಕ ಬಾರಿ ಇಲ್ಲಿಯೂ ಚರ್ಚೆಯಾಗಿದೆ ಹಾಗೂ ಮೇಲ್ಮನೆಯಲ್ಲಿಯೂ ಸಹ ಚರ್ಚೆಯಾಗಿದೆ. ಪೋಲೀಸ್‌ನವರಿಗೆ ನಮ್ಮ ಇಲಾಖೆಯಿಂದ ಬಹಳ ಕಠಿಣವಾದ ಸೂಚನೆಯನ್ನು ಕೂಡ ಸಹ ನಾನು ಕೊಟ್ಟಿದ್ದೇನೆ. ಇದನ್ನು ಯಾವುದೇ ರೀತಿಯಲ್ಲಿ ವಿಶೇಷವಾಗಿ ಶಾಲಾ-ಕಾಲೇಜುಗಳಲ್ಲಿ ಆ ಮಕ್ಕಳು ಯಾವ ರೀತಿಯಲ್ಲಿ ಅವರಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ ಎಂದರೆ ಅದನ್ನು ಹೇಳುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಆ peddlers ಅನ್ನು ನಾವು ಹಿಡಿಯಬೇಕಾಗುತ್ತದೆ. ಮೂಲ ಎಲ್ಲಿಂದ ಬರುತ್ತದೆ ಎಂದು ಅವರನ್ನು ಹಿಡಿಯಬೇಕಾಗುತ್ತದೆ. ಆ suppliers ಅನ್ನು ಹಿಡಿಯಬೇಕು. ಆ ಕೆಲಸವನ್ನೂ ಕೂಡ ಇಲಾಖೆಯವರು ಮಾಡಬೇಕೆಂದು ಕಠಿಣವಾದ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: Next ಸಂಜಯ್ ಪಾಟೀಲ್ ಮಾತನಾಡಿ.

(ಮುಂದು . . . )

ದಿ:13-06-2017-12.00(10)-ಜೆ.ಎಲ್-ಸಿ.ಪಿ

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 104(1046)**

**ಉತ್ತರವನ್ನು ಲಗತ್ತಿಸಿದೆ**

ಶ್ರೀ ಸಂಜಯ್ ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. Police recruitment single window system adopt ಮಾಡಬೇಕೆಂದು ನಾವು ಕೇಳಿಕೊಂಡಿದ್ದು, ಇದರ ಬಗ್ಗೆ ಸಮಿತಿ ಮಾಡಿದ್ದೇವೆಂದು ಸಚಿವರು ಉತ್ತರದಲ್ಲಿ ಹೇಳಿದ್ದಾರೆ ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹಾಗೂ ಇನ್ನಿತರ ರಾಜ್ಯಗಳಲ್ಲಿ police recruitment ಬಗ್ಗೆ single window system ಇದೆ. ಆದರೆ, ನಮ್ಮ ಕರ್ನಾಟಕದಲ್ಲಿ ಮೂರು ಸಿಸ್ಟಂ ಇದೆ ಅವುಗಳೆಂದರೆ, KSRP, Civil, and

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

CRD. ನಾವೇ ಅದರೊಳಗೆ ಭೇದಭಾವ ಮಾಡುವಂತಹ ವಾತಾವರಣ ನಿರ್ಮಾಣವಾಗುತ್ತಿದೆ ಮತ್ತು ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಜಾಸ್ತಿಯಾಗುತ್ತಿದೆಯೆಂದು ನಾನು ಭಾವಿಸುತ್ತಿದ್ದೇನೆ. ಆದಷ್ಟು ಬೇಗ ಇದರ ವರದಿಯನ್ನು ತೆಗೆದುಕೊಂಡು ಇಲಾಖೆಗೆ ಒಳ್ಳೆಯ ವಾತಾವರಣ ನಿರ್ಮಾಣ ಮಾಡುವುದಕ್ಕೆ ಇದು ಒಳ್ಳೆಯ ಅವಕಾಶವೆಂದು ನಾನು ತಿಳಿಯುತ್ತಿದ್ದೇನೆ. ಆದಷ್ಟು ಬೇಗ ಸಮಿತಿ ವರದಿ ತೆಗೆದುಕೊಂಡು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಮೊದಲಿನಿಂದಲೂ KSRP, Civil, DAR and CAR ಗೆ ಬೇರೆ ಬೇರೆ ರೀತಿಯಲ್ಲಿ categorize ಮಾಡಿ recruitment ಮಾಡಿಕೊಂಡು ಬಂದಿದ್ದಾರೆ. ಸದಸ್ಯರು ಹೇಳಿದ ಹಾಗೆ ಇತ್ತೀಚೆಗೆ ಇದನ್ನೆಲ್ಲಾ ಒಟ್ಟಿಗೆ ಸೇರಿಸಿ ಒಂದು ಕೇಡರ್ ಮಾಡಿ ಎಲ್ಲವನ್ನೂ ಕೂಡ ಏಕ ಗವಾಕ್ಷಿಯಲ್ಲಿ ನೇಮಕಾತಿ ಮಾಡುವ ಪದ್ಧತಿ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿದೆ. ಇತ್ತೀಚೆಗೆ ನಮ್ಮಲ್ಲಿರುವಂತಹ ಸಮಸ್ಯೆಗಳೂ ಕೂಡ ಹೆಚ್ಚಾಗುತ್ತಿವೆ. ಇದು ಆಗಬಾರದು, ಈಗ KSRP ಯಲ್ಲಿರುವವರು ಕೇವಲ KSRP ಯಲ್ಲಿಯೇ ಇರುತ್ತಾರೆ ಅವರಿಗೆ ಸಿವಿಲ್‌ಗೆ ಬರುವುದಕ್ಕೆ ಬಹಳ ಕಷ್ಟವಾಗುತ್ತದೆ ಮತ್ತು ಅವರಿಗೆ ಅವಕಾಶ ಕಲ್ಪಿಸುವುದಕ್ಕೂ ಕೂಡ ಆಗುವುದಿಲ್ಲ. ಹಾಗಾಗಿ ನಾವೂ ಕೂಡ ಇತರ ರಾಜ್ಯಗಳ ಪದ್ಧತಿಯನ್ನು ಅನುಸರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದ್ದು, ಆ ಸಮಿತಿ ಈಗಾಗಲೇ ನಾಲ್ಕೈದು ರಾಜ್ಯದಿಂದ ಮಾಹಿತಿ ತರಿಸಿಕೊಂಡಿದೆ. ಈ ಮಾಹಿತಿಯನ್ನು ಸಂಗ್ರಹ ಮಾಡಿ ವರದಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ತಕ್ಷಣ ವರದಿಯನ್ನು ತರಿಸಿಕೊಂಡು ಸೂಕ್ತವಾದ ಕ್ರಮ ಕೈಗೊಳ್ಳುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 716**
**ಉತ್ತರವನ್ನು ಲಗತ್ತಿಸಿದೆ**

ಶ್ರೀ ಯು.ಬಿ.ಬಣಕಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಿರೇಕೆರೂರು ತಾಲ್ಲೂಕಿನ ಜನಸಂಖ್ಯೆ 2,30,000 ಇದೆ. ಈಗ ನಾವು ಮೂರು ಪೊಲೀಸ್ ಸ್ಟೇಷನ್‌ಗಳನ್ನು ಹೊಂದಿದ್ದೇವೆ. ಹಿರೇಕೆರೂರು ಪೊಲೀಸ್ ಸ್ಟೇಷನ್ 1917 ರಲ್ಲಿ ಪ್ರಾರಂಭವಾಗಿದ್ದು, ಒಂದು ಶತಮಾನ ಗತಿಸಿದೆ. ಆದರೆ ಅವತ್ತಿನ ಸಿಬ್ಬಂದಿ ಇವತ್ತಿನವರೆಗೆ ಅದೇ ಸಂಖ್ಯೆಯಲ್ಲಿ



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಾರ್ಯನಿರ್ವಹಿಸುತ್ತಿದ್ದಾರೆ. ಬಹುಶಃ crime register ಆಗಿರುವುದನ್ನು ಮತ್ತು LPD ಯಲ್ಲಿ ಸ್ವೀಕಾರವಾಗುತ್ತಿರುವ ಅರ್ಜಿಗಳನ್ನು ಮತ್ತು NDR, UDR ಎಲ್ಲವನ್ನು ನೋಡಿದರೆ ಇವತ್ತಿನವರೆಗೆ ಅಲ್ಲಿ 365 ಪ್ರಕರಣಗಳಿವೆ. ಕಾರ್ಯ ಒತ್ತಡ ಜಾಸ್ತಿಯಾಗಿರುವುದರಿಂದ ಮತ್ತೊಂದು ಪೊಲೀಸ್ ಠಾಣೆಯ ಅವಶ್ಯಕತೆಯಿರುವುದರಿಂದ ಮಾಸೂರಿನಲ್ಲಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ಅಥವಾ ಹೊರ ಪೊಲೀಸ್ ಠಾಣೆಯನ್ನು ಪ್ರಾರಂಭಿಸಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುತ್ತೇನೆ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಎರಡು ಪ್ರಶ್ನೆಗಳಿಗೆ ಇದೇ ಉತ್ತರವನ್ನು ಕೊಟ್ಟಿದ್ದೇನೆ. ಈ ಪ್ರಶ್ನೆಗೂ ಕೂಡ ಅದೇ ಉತ್ತರವನ್ನು ಕೊಡಬೇಕಾಗುತ್ತದೆ. ಸದಸ್ಯರು ಅಪರಾಧಗಳ ಸಂಖ್ಯೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಅದನ್ನು ಪುನರ್ ಪರಿಶೀಲನೆ ಮಾಡಿ ಪ್ರಸ್ತಾವನೆಯನ್ನು ಕಳುಹಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇನೆ. ಇದು ನಿಯಮದ ಚೌಕಟ್ಟಿನಲ್ಲಿ ಬರುವುದಾದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಯು.ಬಿ.ಬಣಕಾರ್: ಧನ್ಯವಾದಗಳು, ಆದರೆ ಆ ಮಾನದಂಡವನ್ನು ಬಹಳಷ್ಟು ವರ್ಷಗಳ ಹಿಂದೆ ಮಾಡಿರುವುದು ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾನದಂಡಗಳನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿ.

ಡಾ: ಜಿ.ಪರಮೇಶ್ವರ್: ಈ ಮಾನದಂಡವನ್ನು ನಾವು ಮಾಡಿಲ್ಲ. ಅದು ನ್ಯಾಷನಲ್ ಪಾಲಿಸಿ.

ಶ್ರೀ ಯು.ಬಿ.ಬಣಕಾರ್: ನ್ಯಾಷನಲ್ ಪಾಲಿಸಿ ರವರು ಮಾಡಿದರೂ ಕೂಡ ಇವತ್ತಿನ ಮಟ್ಟಿಗೆ ರಾಜ್ಯದಲ್ಲಿರುವ ಪೊಲೀಸ್ ಠಾಣೆಗಳ ಪರಿಸ್ಥಿತಿಯ ಬಗ್ಗೆ ದಯವಿಟ್ಟು ವರದಿ ಸಲ್ಲಿಸಿ.

ಅಧ್ಯಕ್ಷರು: ಆಯಿತು, ಸಚಿವರು ಗಮನದಲ್ಲಿಟ್ಟುಕೊಳ್ಳುತ್ತಾರೆ ಬಿಡಿ. ಡಾ:ಕೆ.ಸುಧಾಕರ್ ರವರು ಸದನದಲ್ಲಿ ಇಲ್ಲ, ವೈ.ಎ.ನಾರಾಯಣಸ್ವಾಮಿ ರವರು ಸದನದಲ್ಲಿ ಇಲ್ಲ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 100 (1316)**
**ಉತ್ತರವನ್ನು ಲಗತ್ತಿಸಿದೆ**

ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ ಅವರಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ತಾವು ಈ ಬಾರಿ ಬಜೆಟ್‌ನಲ್ಲಿ ಘೋಷಣೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿರುವ ರೀತಿ ತಾತ್ಕಾಲಿಕವಾಗಿ ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಐ.ಟಿ.ಐ ಕಾಲೇಜುಗಳನ್ನು ಈ ವರ್ಷವೇ ಪ್ರಾರಂಭ ಮಾಡಿಕೊಡಬೇಕು ಮತ್ತು ಐ.ಟಿ.ಐ ಕಾಲೇಜುಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಬೇಗ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಯಾವ ತಾಲ್ಲೂಕುಗಳಲ್ಲಿ ಸರ್ಕಾರಿ ಐ.ಟಿ.ಐ ಅಥವಾ ಖಾಸಗಿ ಐ.ಟಿ.ಐ ಕಾಲೇಜು ಇಲ್ಲ ಅಂತಹ ತಾಲ್ಲೂಕುಗಳಲ್ಲಿ ಹೊಸ ಐ.ಟಿ.ಐ ಕಾಲೇಜುಗಳನ್ನು ತೆರೆಯುತ್ತೇವೆಂದು ಈ ವರ್ಷದ ಆಯವ್ಯಯದಲ್ಲಿ ನಾನು ಘೋಷಣೆ ಮಾಡಿದ್ದೇನೆ. ಸದಸ್ಯರ ಕ್ಷೇತ್ರವಾದ ಗುಬ್ಬಿಯಲ್ಲಿ ಐ.ಟಿ.ಐ ಕಾಲೇಜು ಇಲ್ಲ, ಈ ವರ್ಷ ಅವರ ಕ್ಷೇತ್ರದಲ್ಲಿ ಐ.ಟಿ.ಐ.ಕಾಲೇಜನ್ನು ತೆರೆಯುತ್ತೇವೆ. ಈ ವಿಷಯ ಮುಂದಿನ ಕ್ಯಾಬಿನೆಟ್‌ನಲ್ಲಿ ಬರುತ್ತಿದ್ದು, ಕ್ಯಾಬಿನೆಟ್‌ನಲ್ಲಿ approval ಆದ ತಕ್ಷಣವೇ ಕ್ರಮ ಕೈಗೊಳ್ಳುತ್ತೇವೆ. ಆದರೆ ಅಲ್ಲಿ ಜಾಗ ಸಿಗಬೇಕು.

ಅಧ್ಯಕ್ಷರು: ಜಾಗ ಕೊಡಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್: ವಿಶೇಷವಾಗಿ ನಮ್ಮಲ್ಲಿ ಶೆಡ್‌ಗಳಿವೆ, ಹೇಮಾವತಿ ಜಾಗವಿದೆ.

ಶ್ರೀ ಸಿದ್ದರಾಮಯ್ಯ: ಜಾಗ ಇದೆಯೇ?

ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್: ಜಾಗ ಇದೆ, ಈ ವರ್ಷವೇ ಐ.ಟಿ.ಐ ಕಾಲೇಜು ಪ್ರಾರಂಭ ಮಾಡಿಸಿಕೊಡಿ.

ಶ್ರೀ ಸಿದ್ದರಾಮಯ್ಯ: ಈ ವರ್ಷವೇ ಮಾಡಿಸುವುದು, ಆದರೆ ನೀವು ಜಾಗ ಕೊಡಿಸಬೇಕು.

ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್: ಜಾಗ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಸ್ಥಳೀಯ ಡಿ.ಸಿ ರವರಿಗೆ ನಾನು ಹೇಳಿದ್ದೇನೆ. ನಮ್ಮ ಇಲಾಖೆಯವರು ಡಿ.ಸಿ ಜೊತೆ ಕೂಡ ಮಾತನಾಡಿದ್ದಾರೆ, ನೀವು ಕೂಡ ಡಿ.ಸಿ ಜೊತೆ ಮಾತನಾಡಿ ಜಾಗ ಕೊಡಿಸಿಕೊಡಿ. ಈ ವರ್ಷವೇ ಐ.ಟಿ.ಐ ಕಾಲೇಜು ಪ್ರಾರಂಭ ಮಾಡೋಣ.

ಶ್ರೀ ಶ್ರೀನಿವಾಸ್(ವಾಸು) ಎಸ್.ಆರ್: ಆಯಿತು ಸಾರ್.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಬಿ.ಸುರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರೆ, ಹೆಬ್ಬೂರಿನಲ್ಲಿ ಒಂದು ಐ.ಟಿ.ಐ ಕಾಲೇಜು ಪ್ರಾರಂಭ ಮಾಡಬೇಕೆಂದು ನಾನು ಧರಣಿ ಕೂಡ ಮಾಡಿದ್ದೆ. ಆದರೆ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಇಡೀ ತಾಲ್ಲೂಕಿನಲ್ಲಿ ಐ.ಟಿ.ಐ ಕಾಲೇಜು ಇಲ್ಲವೇ? ನಿಮ್ಮದು ತಾಲ್ಲೂಕಿಗೆ ಎಲ್ಲಿ ಸೇರುತ್ತದೆ.

ಶ್ರೀ ಬಿ.ಸುರೇಶ್‌ಗೌಡ: ಇಡೀ ತಾಲ್ಲೂಕಿನಲ್ಲಿ ಇಲ್ಲ. ನಗರದಲ್ಲಿದೆ ಆದರೆ ಗ್ರಾಮೀಣ ವಿಧಾನ ಸಭೆ ಕ್ಷೇತ್ರದಲ್ಲಿ ಇಲ್ಲ.

ಶ್ರೀ ಸಿದ್ದರಾಮಯ್ಯ: ಇವರಿಗೆ ತಾಲ್ಲೂಕು ಕೇಂದ್ರ ಇಲ್ಲ.

ಶ್ರೀ ಬಿ.ಸುರೇಶ್‌ಗೌಡ: ಖಂಡಿತಾ ಇಲ್ಲ, ಹೋದ ವರ್ಷ ತಾವು ಕೊಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ: ಇವರದು rural area ಇವರಿಗೆ ತಾಲ್ಲೂಕು ಕೇಂದ್ರ ಎಲ್ಲಿದೆ? ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಸುರೇಶ್‌ಗೌಡ: ತಾವೇ ಹೇಳಿದ್ದೀರಿ, ನಾಲ್ಕು ವರ್ಷಗಳ ಹಿಂದೆ ನೀವೇ ಆದೇಶ ಮಾಡಿದ್ದೀರಿ.

ಅಧ್ಯಕ್ಷರು: ಪರಿಶೀಲನೆ ಮಾಡುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ: I will examine, ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಸುರೇಶ್‌ಗೌಡ: ಪರಿಶೀಲನೆ ಎಂದರೆ ಆಗುವುದಿಲ್ಲ. ಕೊಡಿಯೆಂದು ತಾವೇ ಆದೇಶ ಮಾಡಿದ್ದೀರಿ. ಆದರೆ ಆ ಆದೇಶಕ್ಕೆ ಬೆಲೆ ಇಲ್ಲದ ಹಾಗೆ ಆಗಿದೆ.

ಅಧ್ಯಕ್ಷರು: ಪರಿಶೀಲನೆ ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಸದಸ್ಯರು ಈ ರೀತಿ ಹೇಳಿದರೆ ನಾವೇನು ಹೇಳುವುದು?

ಅಧ್ಯಕ್ಷರು: ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಿದ್ದಾರೆ ಕೊಡುವುದಿಲ್ಲವೆಂದು ಹೇಗೆ ಆಗುತ್ತದೆ?

ಶ್ರೀ ಬಿ.ಸುರೇಶ್‌ಗೌಡ: ಇಲ್ಲಾ ಅವರೇ ಆದೇಶ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಕೊಡುವುದಿಲ್ಲವೆಂದು ಅಲ್ಲ, ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಬಿ.ಸುರೇಶ್‌ಗೌಡ: ಐ.ಟಿ.ಐ ಕಾಲೇಜು ಕೊಡುತ್ತೇನೆಂದು ನಾಲ್ಕು ವರ್ಷಗಳ ಹಿಂದೆ ಆದೇಶ ಮಾಡಿದ್ದೀರಿ, ಪ್ರಾರಂಭ ಮಾಡಿ ಎಂದು ನೀವೇ ಬರೆದಿದ್ದೀರಿ ಆದರೆ ಮಂತ್ರಿಗಳು ಕೊಡಲಿಲ್ಲ. ಅದಕ್ಕೆ ಧರಣಿ ಕುಳಿತಿದ್ದೇವೆ. ನೀವು ಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ದಯವಿಟ್ಟು ಪರಿಶೀಲನೆ ಅಲ್ಲ ಕೊಡುತ್ತೇವೆಂದು ಹೇಳಿ.

ಅಧ್ಯಕ್ಷರು: Positive answer ಇದೆ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: I am positive.

ಶ್ರೀ ಬಿ.ಸುರೇಶ್‌ಗೌಡ: ಆಯಿತು.

ಅಧ್ಯಕ್ಷರು: ಈಗ ತಡೆಹಿಡಿಯಲಾದ ಪ್ರಶ್ನೆಗಳು.

ದಿನಾಂಕ 06-06-2017 ರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ.

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 29(537)**

**ಉತ್ತರವನ್ನು ಲಗತ್ತಿಸಿದೆ**

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ ಆದರೆ ಅರ್ಥವಾಗುತ್ತಿಲ್ಲ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಹೌದು ಬಂದಿದೆಯೆಂದು ಉತ್ತರ ಇದೆ. ಇವರನ್ನು ಖಾಯಂಗೊಳಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರೆಂದು ಕೇಳಿದರೆ ಈ ಸಮಸ್ಯೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಸುಮಾರು 938 ಜನರು ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 7, 8, 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಅವರನ್ನು ಖಾಯಂಗೊಳಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ 938 ಜನರು ಕಾರ್ಯನಿರ್ವಹಿಸುತ್ತಿದ್ದು, ಅವರನ್ನು ಖಾಯಂಗೊಳಿಸುವುದಕ್ಕೆ ಬರುವುದಿಲ್ಲ. ಇದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಖಾಯಂ ಮಾಡಬಾರದೆನ್ನುವ ಉದ್ದೇಶದಿಂದ out source ಹುದ್ದೆಗಳನ್ನು ತೆಗೆದುಕೊಳ್ಳುತ್ತಿರುವುದು.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:13-06-2017ರ ಏಳನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 162 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

(ಅನುಬಂಧ-1)

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, 192(ಎ) ಮತ್ತು (ಬಿ) ಅನ್ನು ನಾವು Rule 69ಗೆ ಕೊಟ್ಟಿದ್ದೇವೆ.

ಅಧ್ಯಕ್ಷರು: ಅದನ್ನು ನಂತರ ನೋಡೋಣ. ಈಗ ಶೂನ್ಯವೇಳೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ವಿಷಯ: ರಾಜ್ಯದ ವಿವಿಧ ನಗರ ಪಾಲಿಕೆ, ಪುರಸಭೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ

* * * * *

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ಮಹತ್ವವಾದಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲೇ ಇದ್ದಾರೆ. ರಾಜ್ಯದಲ್ಲಿನ ಬಿ.ಬಿ.ಎಂ.ಪಿ, ನಗರಸಭೆ, ಪುರಸಭೆ, ಕಾರ್ಪೊರೇಷನ್‌ನಲ್ಲಿರುವ ಹತ್ತಾರು ಸಾವಿರ ಪೌರ ಕಾರ್ಮಿಕರು ಬೆಂಗಳೂರು ನಗರದಲ್ಲಿ ಧರಣಿ ಸತ್ಯಾಗ್ರಹ ಹೋರಾಟ ಮಾಡುತ್ತಿದ್ದಾರೆ. ಪೌರ ಕಾರ್ಮಿಕರ ಹುದ್ದೆ ಖಾಯಂ ಆಗಬೇಕು, service

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

security ಆಗಬೇಕು, ಕೆಲವು ಸಿಬ್ಬಂದಿಗಳು ಬೇರೆ ಏಜೆನ್ಸಿ ಮೂಲಕ ಬಂದು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಈ ಬಗ್ಗೆ ಒಂದು ಪ್ರೋಸೆಸ್ ಮಾಡಿದ್ದೆವು. ಈಗ ನಿಮ್ಮ ಸರ್ಕಾರ ಬಂದ ನಂತರ ಕ್ಯಾಬಿನೆಟ್‌ನಲ್ಲಿ specific ಆಗಿ ಒಂದು decision ಆಗಿದೆ. ಎಲ್ಲಾ ಪೌರ ಕಾರ್ಮಿಕರನ್ನು ಖಾಯಂ ಮಾಡಬೇಕು ಮತ್ತು ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನುವ ರೀತಿಯಲ್ಲಿ ಅವರಿಗೆ ವೇತನ ಸಿಗಬೇಕು. ಅವರ ಖಾತೆಗೆ ನೇರವಾಗಿ ವೇತನ ಜಮಾ ಆಗಬೇಕು. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವವರ ಖಾತೆಗೆ ನೇರವಾಗಿ ವೇತನ ಜಮಾ ಆಗಬೇಕು ಹಾಗೂ ಇನ್ನಿತರ ಸೌಲಭ್ಯಗಳು ಅಂದರೆ PF ಹಾಗೂ ಮತ್ತೊಂದು ಸಿಗಬೇಕು ಎಂಬ ಬಗ್ಗೆ ಈಗಾಗಲೇ ಸರ್ಕಾರದಿಂದ ಸಾಕಷ್ಟು ನಿರ್ಧಾರಗಳಾಗಿವೆ. ಅದಕ್ಕೊಂದು ಸಮಿತಿಯನ್ನು ಕೂಡ ಮಾಡಿದ್ದೀರಿ. ಹರಿಯಾಣ ಮತ್ತು ಪಂಜಾಬ್‌ನ ಮಹಾನಗರ ಸಭೆ ಹಾಗೂ ನಗರಸಭೆಯಲ್ಲಿರುವ ಸಫಾಯಿ ಕರ್ಮಚಾರಿ ಸಂಘಗಳ ಅಧ್ಯಕ್ಷರು ಹಾಗೂ ಎಲ್ಲರನ್ನೂ ಕರೆಸಿ ಅಲ್ಲಿ ಯಾವ ಮಾದರಿಯಲ್ಲಿ ಖಾಯಂ ಆಗಿದೆ, ಅವರಿಗೆ ಯಾವ ರೀತಿ ವೇತನ ಸೌಲಭ್ಯ ಕೊಟ್ಟಿದ್ದಾರೆ ಎಂಬ ಬಗ್ಗೆ ಆಲೋಚನೆ ಮಾಡಿಕೊಂಡು ಅವರು ವರದಿಯನ್ನು ಕೂಡ ಕೊಟ್ಟಿದ್ದಾರೆ.

(ಮುಂದುವರೆದಿದೆ)

ದಿನಾಂಕ: 13-06-2017-12.10 (I1) AJ/HS

ಶ್ರೀ ಜಗದೀಶ್ ಶೆಟ್ಟರ್ (ಮುಂದು . . .)

ಹಾಗಾಗಿ ತಮ್ಮ Cabinet decision ಪ್ರಕಾರ 2017ನೇ ಮಾರ್ಚ್ ತಿಂಗಳೊಳಗಾಗಿ ಈ process ಮುಗಿಯಬೇಕೆನ್ನುವುದನ್ನು ತಾವು ನಿರ್ಧಾರ ಮಾಡಿದ್ದಿರಿ. ಆದರೆ ಆ ನಿರ್ಧಾರ ಇಂದು ಅನುಷ್ಠಾನವಾಗಿರುವುದಿಲ್ಲ. ಹೀಗಾಗಿ ಆ ಪೌರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ತಾವು ಪದೇ ಪದೇ 'ನುಡಿದಂತೆ ನಡೆದಂತಹ ಸರ್ಕಾರ' ಎಂದು ಹೇಳುತ್ತೀರಿ. ಆದರೆ ಈ ವಿಷಯದಲ್ಲಿ ಅದು ಆಗಿರುವುದಿಲ್ಲ. ಅದಕ್ಕಾಗಿ ನಾನು ಹೇಳುವ ಒಂದು ವಿಷಯವೇನೆಂದರೆ, ಇದರ impact ಏನಾಗಿದೆ ಎಂದರೆ ಬಹಳ problem ಆಗಿದೆ. ಬಿ.ಬಿ.ಎಂ.ಪಿ.ಯಲ್ಲಿ ಕಸ ವಿಂಗಡಣೆ ಮತ್ತು ತೆಗೆದುಕೊಳ್ಳುವುದೆಲ್ಲಾ ನಿಂತು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೋಗಿದ್ದು, ಬಹಳಷ್ಟು ಬಡಾವಣೆಗಳಲ್ಲಿ ಕಸ ಅಲ್ಲಿಯೇ ಬಿದ್ದಿದೆ. ಬೇರೆ ಬೇರೆ ನಗರ ಪ್ರದೇಶ, ಮಹಾನಗರ ಪಾಲಿಕೆಗಳಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಇದೆ. ಇದೇ ರೀತಿಯಾದಂತಹ ಸತ್ಯಾಗ್ರಹ ಮುಂದುವರೆದರೆ ಬಹಳ ದೊಡ್ಡ ಅನಾಹುತವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೆ, ರೋಷನ್ ಬೇಗ್‌ರವರೆ ಈ ಹಿಂದೆ ಅಂಗನವಾಡಿ ಕಾರ್ಯಕರ್ತರು ಬಂದು ಮೂರ್‍ನಾಲ್ಕು ದಿವಸ ಸತ್ಯಾಗ್ರಹ ಮಾಡಿದ್ದರಿಂದ ಯಾವ ರೀತಿ ತೊಂದರೆಯಾಯಿತು ಎನ್ನುವ ಬಗ್ಗೆ ನಿಮಗೆಲ್ಲಾ ಗೊತ್ತಿದೆ. ಹಾಗಾಗಿ ನೀವು ಇವತ್ತೇ, immediately ಕರೆದು ಮಾತನಾಡಿ ಸ್ಪಷ್ಟವಾದ assurance ಕೊಟ್ಟು, ಆದಷ್ಟು ಬೇಗನೆ ಖಾಯಂ ಮಾಡುವಂತಹದ್ದು, ವೇತನ ಕೊಡುವಂತಹದ್ದು, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡುವುದು. ಅವರ ಬೇಡಿಕೆಗಳನ್ನು ಈಡೇರಿಸುವಂತಹ ಕೆಲಸವಾಗಬೇಕು. ಇಲ್ಲದಿದ್ದರೆ ಈ ಸಮಸ್ಯೆ ಉಲ್ಬಣವಾಗುತ್ತದೆ. ಇದರ ಜೊತೆಗೆ ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಹಾಗಾಗಿ ತಕ್ಷಣವೇ ಸರ್ಕಾರ ಇದರ ಬಗ್ಗೆ ನಿರ್ಧಾರ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಸಚಿವರಾದ ರೋಷನ್ ಬೇಗ್ ರವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ,

ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು) : ಮೊದಲು ಅವರ ಪ್ರಶ್ನೆಗೆ ಉತ್ತರ ಕೊಡುತ್ತೇವೆ. ನಂತರ ಬೇಕಾದರೆ ಕೇಳಿ. ಅವರು Zero Hour ನಲ್ಲಿ ಮಾತನಾಡಿದ್ದು, ಅದಕ್ಕೆ ಉತ್ತರ ಕೊಡುತ್ತೇವೆ. ನಂತರ ಮಾತನಾಡಿ.

ಅಧ್ಯಕ್ಷರು : ಕಾರ್‌ಜೋಳ್ ಅವರೆ, ನೀವು ಏನು ಪ್ರಶ್ನೆ ಕೇಳಬೇಕೆಂದಿದ್ದರೋ, ಅದು ಅವರ ಉತ್ತರದಲ್ಲಿ ಬಂದು ಬಿಡಬಹುದು.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪೌರ ಕಾರ್ಮಿಕರ ವಿಚಾರದಲ್ಲಿ ಮಾತನಾಡಿದ್ದು, ನೇರವಾಗಿ ಆ ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕು ಎಂದು ಹೇಳಿದ್ದಾರೆ. ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಅವರಿಗೆ ಬಿ.ಬಿ.ಎಂ.ಪಿ. ವತಿಯಿಂದ ಅಥವಾ ಬೇರೆ ಬೇರೆ ಸಂಸ್ಥೆಗಳಿಂದ ಸಂಬಳವನ್ನು ಕೊಡಬೇಕೆಂದು ಬೇಡಿಕೆಯನ್ನಿಟ್ಟಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು, ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರಾದ ರೋಷನ್‌ಬೇಗ್ ಮತ್ತು ಪೌರಾಡಳಿತ ಸಚಿವರಾದ ಈಶ್ವರ್‌ಖಂಡ್ರೆ ಮೂರೂ ಜನ ಮಂತ್ರಿಗ

ಳು involve ಆಗುತ್ತೇವೆ. ಮೂರು ಮಂತ್ರಿಗಳು ಅವರ ನಾಯಕರುಗಳನ್ನು ಕರೆಸಿ ಮಾತನಾಡಿದ್ದೇವೆ. ನಮ್ಮ ಕ್ಯಾಬಿನೆಟ್‌ನಲ್ಲಿಯೂ ಸಹ ಇದರ ಬಗ್ಗೆ decision ಆಗಿದೆ. ಹೊಸದಾಗಿ ನೇಮಕ ಮಾಡುವಂತಹ ಸಮಯದಲ್ಲಿ ಅವರಿಗೆ ಮೊದಲು ಆದ್ಯತೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದೇ ರೀತಿ contractors ಬಗ್ಗೆ ಹೇಳುವುದಾದರೆ, ಈಗ ಬಿ.ಬಿ.ಎಂ.ಪಿ.ಯಲ್ಲಿ contractors ಗೆ ಟೆಂಡರ್ ಕೊಡುತ್ತಿಲ್ಲ. ಟೆಂಡರ್ ಕರೆದಂತಹ ಸಮಯದಲ್ಲಿ ಆ contractors ಮಾಫಿಯಾ ರೀತಿಯಲ್ಲಿ ವರ್ತಿಸುತ್ತಾರೆ. ಅವರ್‍ಯಾರು ಟೆಂಡರ್‌ನಲ್ಲಿ ಭಾಗವಹಿಸುವುದಕ್ಕೆ ಸಿದ್ಧರಿರುವುದಿಲ್ಲ. ಆ ಗುತ್ತಿಗೆದಾರರು ನಾವು ಹೇಳುವ ಷರತ್ತುಗಳಿಗೆ ಒಪ್ಪಿದರೆ ಮಾತ್ರ ಬರುತ್ತೇವೆಂದು ಹೇಳುತ್ತಾರೆ. ಆ ಕಾರಣದಿಂದಲೇ ನಾವು ಯಾರಿಗೂ ಟೆಂಡರ್ ಕೊಡಲಿಲ್ಲ. ಇದರ ಬದಲಾಗಿ sub-contract ಕೊಡುತ್ತಿದ್ದೇವೆ. ಅದನ್ನು ತಪ್ಪಿಸುವ ಸಲುವಾಗಿ ಈ ರೀತಿ ಮಾಡುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಸಹ ಅವರ ಜೊತೆ ಮಾತನಾಡಿ, ಆಶ್ವಾಸನೆ ಕೊಟ್ಟಿರುತ್ತಾರೆ. ನಿನ್ನೆಯೂ ಸಹ ರಾತ್ರಿ ನಾನು, ರೋಷನ್‌ಬೇಗ್, ಆಂಜನೇಯ ಮತ್ತು ಈಶ್ವರ್ ಖಂಡ್ರೆ ನಾವುಗಳು, ಅವರನ್ನು ಕರೆಸಿ ಮಾತನಾಡಿದ್ದೇವೆ. ಇಲ್ಲಿ ಒಂದು ತೊಂದರೆಯಾಗುವುದೇನೆಂದರೆ, Contract Labour Abolition Act ಇದ್ದು, ಅದರಲ್ಲಿ exception ತೆಗೆದುಕೊಳ್ಳಬೇಕಾಗುತ್ತದೆ. ಆಗ ನೇರವಾಗಿ ಇವರನ್ನು contract workers ಆಗಿ ನೇಮಕ ಮಾಡಿಕೊಳ್ಳಬಹುದು. ಬಿ.ಬಿ.ಎಂ.ಪಿ. ಮತ್ತು ಇತರ ಸಂಸ್ಥೆಗಳಿಂದ ಅವರಿಗೆ ನೇರವಾಗಿ ಸಂಬಳ ಕೊಡಬೇಕೆಂಬುದು ಅವರ ಬೇಡಿಕೆಯಿದ್ದು, ಇದನ್ನು ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ 19.6.2017 ರಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : OK. Next ಶ್ರೀ ಕೆ.ಬಿ. ಪ್ರಸನ್ನ ಕುಮಾರ್ ಅವರು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ಸರ್ಕಾರಕ್ಕೆ ನನ್ನದೊಂದು ಸಣ್ಣ ಸಲಹೆ ಇದೆ. ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆಗಳಲ್ಲಿ ಕೆಲಸ ಮಾಡುವಂತಹ ಪೌರ ಕಾರ್ಮಿಕರೇನಿದ್ದಾರೆ, ಹಿಂದೆ ಇದ್ದಂತಹವರು ಖಾಯಂ ಆಗಿ ನೇಮಕಗೊಂಡಿದ್ದು, ಅವರು ಈಗ ನಿವೃತ್ತಿಯನ್ನು ಹೊಂದಿದ್ದು, ಆ postಗಳು ಈಗ ಖಾಲಿಯಿವೆ. Sanctioned postಗಳು ಇರುವಂತಹ ನಗರಸಭೆ, ಪುರಸಭೆ ಮತ್ತು ಮಹಾನಗರ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪಾಲಿಕೆಗಳಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವವರಿಗೆ ಕೂಡಲೇ ನೇಮಕಾತಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಆದಷ್ಟು ಬೇಗನೆ ಎಲ್ಲಿ ಖಾಲಿ postಗಳಿವೆಯೋ ಅಂತಹ ಕಡೆ ನೇಮಕಾತಿ ಮಾಡುವುದಕ್ಕೆ ಕಮ ತೆಗೆದುಕೊಳ್ಳುತ್ತೇವೆ. ಯಾರು ಕೆಲಸ ಮಾಡುತ್ತಿದ್ದಾರೋ ಅವರಿಗೆ ಆದ್ಯತೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು : OK. ಶ್ರೀ ಕೆ.ಬಿ. ಪ್ರಸನ್ನ ಕುಮಾರ್

**ವಿಷಯ : ಶಿವಮೊಗ್ಗ ನಗರದಲ್ಲಿ ದಿನಾಂಕ 12.6.2017ರ ರಾತ್ರಿ ಪಲ್ಸರ್ ಬೈಕ್‌ನ್ನು ಸುಟ್ಟು ಹಾಕಿದ್ದು, ರಂಜಾನ್ ಮತ್ತು ಗಣಪತಿ ಹಬ್ಬಗಳ ಸಂದರ್ಭದಲ್ಲಿ ಈ ರೀತಿಯ ಕೋಮುಗಲಭೆ ಆಗದಂತೆ ಮುನ್ನೆಚ್ಚರಿಕೆ ವಹಿಸಲು ಕ್ರಮಕೈಗೊಳ್ಳುವ ಬಗ್ಗೆ.**

*****

ಶ್ರೀ ಕೆ.ಬಿ. ಪ್ರಸನ್ನ ಕುಮಾರ್(ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ಶಿವಮೊಗ್ಗ ನಗರದಲ್ಲಿ ದುಷ್ಕರ್ಮಿ ಗಳು ಪಲ್ಸರ್ ಬೈಕ್ ಒಂದನ್ನು ಸುಟ್ಟಿರುತ್ತಾರೆ. ಇದರಲ್ಲಿ ಏನು ವಿಶೇಷ ಎಂದು ಯೋಚನೆ ಮಾಡಬಹುದು. ಪ್ರತಿ ವರ್ಷ ರಂಜಾನ್ ಮತ್ತು ಗಣಪತಿ ಹಬ್ಬದ ಸಮಯದಲ್ಲಿ ಶಿವಮೊಗ್ಗ ನಗರದಲ್ಲಿ ಈ ರೀತಿಯ ಘಟನೆಗಳು ಖಾಯಂ ಕೃತ್ಯಗಳಾಗುತ್ತಿವೆ. ಇದರ ಮುಂದಿನ ಹೆಜ್ಜೆ ಎಂದರೆ ಇದು ಕೋಮು ಗಲಭೆಗಳಿಗೆ ಪರಿವರ್ತನೆಯಾಗುತ್ತಿದೆ. ಆ ನಂತರ ಗಲಭೆಗಳಾದ ಕೂಡಲೇ ಸಾಕಷ್ಟು ಸಾವು-ನೋವು, ಸಾರ್ವಜನಿಕರ ಆಸ್ತಿ-ಪಾಸ್ತಿಗೆ ನಷ್ಟವಾಗುತ್ತದೆ. ಶಿವಮೊಗ್ಗದಲ್ಲಿ ನಿಜವಾಗಿಯೂ ಹೇಳುವುದಾದರೆ ಒಳ್ಳೆಯ ಪೊಲೀಸ್ ವ್ಯವಸ್ಥೆ ಇದೆ. ಆದರೂ ಸಹ ಗಲಭೆಗಳನ್ನು ತಹಬಂದಿಗೆ ತರುವುದಕ್ಕೆ RAF ಅಥವಾ ಹಿರಿಯ ಅಧಿಕಾರಿಗಳನ್ನು ಕರೆಸುವಂತಹದ್ದು ನಡೆಯುತ್ತದೆ. ಗಲಭೆಗಳಾದ ನಂತರ ಈ ಎಲ್ಲಾ activities ನಡೆಯುತ್ತದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಗೃಹ ಮಂತ್ರಿ ಗಳಲ್ಲಿ ಮನವಿ ಮಾಡುವುದೇನೆಂದರೆ, ಖಾಯಂ ಆಗಿ RAF (Rapid Action Force) ಅನ್ನು ಶಿವಮೊಗ್ಗ ಜಿಲ್ಲೆಯಲ್ಲಿ ವಾಸ್ತವ್ಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಇಡೀ ರಾಜ್ಯದಲ್ಲಿ, ಈ ವಿಚಾರದಲ್ಲಿ ಶಿವಮೊಗ್ಗ ನಗರ ಮತ್ತು ಸುತ್ತಮುತ್ತಲಿನ ಪ್ರದೇಶ ಅತಿ ಸೂಕ್ಷ್ಮವಾದ

ಪ್ರದೇಶವಾಗಿರುತ್ತದೆ. ಆದ್ದರಿಂದ ಖಾಯಂ ಆಗಿ RAF ಅನ್ನು ಅಲ್ಲಿ ವಾಸ್ತವ್ಯ ಮಾಡಲು ಅವಕಾಶ ಮಾಡಿದರೆ, ಘಟನೆಗಳು ಮತ್ತು ಗಲಭೆಗಳ ನಂತರ ಆಗುವಂತಹ ಪರಿಣಾಮವನ್ನು ತಪ್ಪಿಸಬಹುದು. ಮಾನ್ಯ ಗೃಹ ಮಂತ್ರಿಗಳು ದಿಟ್ಟ ನಿರ್ಧಾರವನ್ನು ತೆಗೆದುಕೊಂಡು RAF ಬೆಟಾಲಿಯನ್ ಅನ್ನು ಶಿವಮೊಗ್ಗ ಜಿಲ್ಲೆಗೆ ಕೊಟ್ಟರೆ, ಅವರಿಗೆ ಬೇಕಾದಂತಹ ಸ್ಥಳವಕಾಶ ಶಿವಮೊಗ್ಗ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿಯೇ ಇದೆ. ಆದ್ದರಿಂದ ದಯಮಾಡಿ ಈ ವ್ಯವಸ್ಥೆಯನ್ನು ಮಾಡಿಕೊಟ್ಟರೆ, ಮುಂದಿನ ದಿನಗಳಲ್ಲಿ ಆಗುವಂತಹ ಗಲಭೆಗಳನ್ನು ತಪ್ಪಿಸಬಹುದು. ನಿನ್ನೆ ರಾತ್ರಿ ಪ್ರಾರಂಭವಾಗಿದ್ದು, ಇದನ್ನು ತಪ್ಪಿಸುವುದಕ್ಕೆ ಇದೊಂದು ಒಳ್ಳೆಯ ಅವಕಾಶ ಎಂದು ಹೇಳುತ್ತಾ, ಮಾನ್ಯ ಗೃಹ ಸಚಿವರಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತೇನೆ.

ಡಾ: ಜಿ. ಪರಮೇಶ್ವರ್ (ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ರಾಜ್ಯದಲ್ಲಿ ಕೋಮು ಗಲಭೆಗಳಾಗಬಾರದು, ಶಾಂತಿಯಿಂದ ರಾಜ್ಯ ಇರಬೇಕೆಂದು ಬಯಸುತ್ತೇವೆ. ಇದಕ್ಕೆ ವಿರುದ್ಧವಾಗಿ ಇಂತಹ ಘಟನೆಗಳು ನಡೆಯುತ್ತಿದ್ದು, ಅದರಲ್ಲೂ ವಿಶೇಷವಾಗಿ ರಂಜಾನ್ ಮತ್ತು ಗಣಪತಿ ಹಬ್ಬದ ಸಂದರ್ಭದಲ್ಲಿ ಅನೇಕ ಘಟನೆಗಳು ನಡೆದಿರುವುದನ್ನು ನಾವು ನೋಡಿದ್ದೇವೆ. ಶಿವಮೊಗ್ಗ ನಗರದಲ್ಲಿಯೂ ಇಂತಹ ಘಟನೆ ಆಗಬಾರದೆಂದು ಮಾನ್ಯ ಶಾಸಕರು ಬಯಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಎರಡು ವಿಚಾರಗಳಿವೆ. ಮೊದಲನೆಯದಾಗಿ ಕೋಮು ಗಲಭೆಯನ್ನು ಯಾವ ರೀತಿ ನಿಯಂತ್ರಣ ಮಾಡಬೇಕೆನ್ನುವುದು ಮತ್ತು ಇದರ ಜೊತೆಗೆ ಶಿವಮೊಗ್ಗ ಜಿಲ್ಲೆಗೆ Rapid Action Force (RAF) ಅನ್ನು locate ಮಾಡಿಯೆಂದು ಕೇಳುತ್ತಿದ್ದಾರೆ. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇನೆ. ಈಗಾಗಲೇ ಅಲ್ಲಿ KSRP ಬೆಟಾಲಿಯನ್‌ವೊಂದನ್ನು ಸ್ಥಾಪನೆ ಮಾಡಿದ್ದೇವೆ. ಇದರ ಜೊತೆಗೆ ಅಗತ್ಯತೆಯನ್ನು ನೋಡಿಕೊಂಡು RAF ಕೊಡುವುದಕ್ಕೆ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎ. ಮೊಹಿದ್ದೀನ್ ಬಾವಾ : ಮಾನ್ಯ ಅಧ್ಯಕ್ಷರೆ, RAF ವ್ಯವಸ್ಥೆಯನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೂ ನಿಯೋಜನೆ ಮಾಡಬೇಕೆಂದು ಮಾನ್ಯ ಗೃಹ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ. ಏಕೆಂದರೆ ಚುನಾವಣೆ ಹತ್ತಿರ ಬರುವುದರಿಂದ ಅಲ್ಲಿ ಕೋಮು ಭಾವನೆಯನ್ನು ಕೆರಳಿಸುವಂತಹ ಕೆಲಸವನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುತ್ತಾರೆ. ಇದನ್ನು RAF ಮೂಲಕ ತಡೆಯುವುದಕ್ಕೆ ಬಹಳ ಒಳ್ಳೆಯ ವ್ಯವಸ್ಥೆ ಎಂದು ಮಾನ್ಯ ಗೃಹ ಮಂತ್ರಿಗಳಿಗೆ ತಿಳಿಸ ಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ತಿಪಟೂರಿನ ಗೋಶಾಲೆ ಮುಂದುವರೆಸುವುದಕ್ಕೆ ಈಗಾಗಲೇ ಅಯ್ಯನಬಾವಿಯಲ್ಲಿ ಪ್ರತಿಭಟನೆ ನಡೆದಿದ್ದು, ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇವೆ. ತಾವು ಅಧಿಕಾರಿಗಳ ಹತ್ತಿರ ವರದಿ ತರಿಸಿ. ಅಗತ್ಯ ಇದೆಯೆಂದರೆ ಮುಂದುವರೆಸಿ. ದಯವಿಟ್ಟು ಇದರಲ್ಲಿ ರಾಜಕಾರಣ ಬೆರೆಸುವುದು ಬೇಡ. ಅಲ್ಲಿ ಅಗತ್ಯವಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಮೇವುಗಳ ಕೊರತೆಯಿದ್ದು ಗೋಶಾಲೆಯನ್ನು ಮುಂದುವರೆಸಬೇಕು. ಪ್ರತಿಭಟನೆಗಳು ನಡೆಯುತ್ತಿವೆ. ದಯವಿಟ್ಟು ಮುಂದುವರೆಸುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದು ಅವರು ನೋಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನನಗೆ ಈ ವಿಚಾರ ಗೊತ್ತಿದೆ. ನನಗೆ ವಿಚಾರ ಗೊತ್ತಿಲ್ಲವೆಂದೇನಿಲ್ಲ. ತಾವು ವರದಿ ತರಿಸಬೇಕೆಂದು ಹೇಳುತ್ತಿದ್ದೀರಿ. ವರದಿ ತರಿಸುತ್ತೇವೆ. ಮುಚ್ಚಬೇಕೆನ್ನುವ ಉದ್ದೇಶ ನಮಗಿಲ್ಲ. ಸ್ವೇಚ್ಛೆಯಾಗಿ ರೈತರು ಎಲ್ಲಿ ಗೋಶಾಲೆಗಳಿಗೆ ಬರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಮಾತ್ರ ಮುಚ್ಚುವಂತಹ ಪ್ರಯತ್ನ ಮಾಡುತ್ತೇವೆ. ಆದರೆ ಇಲ್ಲಿ ಮೇವಿಗೂ ಕೊರತೆಯಿಲ್ಲ, ದನಗಳು ಬಂದರೆ ಕೊಡುವುದಕ್ಕೆ ತಯಾರಿದ್ದೇವೆ. ಜಿಲ್ಲಾಡಳಿತ ಯಾವುದೇ ಭಾಗದಲ್ಲಾದರೂ ಕೊಡುವುದಕ್ಕೆ ತಯಾರಿದೆ. ಬಹುಶ: ಗೋಶಾಲೆ ಬೇಕೆನ್ನುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ವರದಿಗಳನ್ನೊಪ್ಪಿಸುವುದು.

**ವರದಿಗಳನ್ನೊಪ್ಪಿಸುವುದು**

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, 2016-17ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಅಧ್ಯಕ್ಷನಾದ ನಾನು ಮಾರ್ಚ್ 2014 ಕ್ಕೆ ಅಂತ್ಯಗೊಂಡ ಸಿ.ಎ.ಜಿ. ವರದಿಯಲ್ಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ವರದಿಯ ಮೇಲೆ ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ 20, 21 ಹಾಗೂ 22ನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

**ವಿತ್ತೀಯ ಕಾರ್ಯಕಲಾಪಗಳು**

**ವಿಷಯ: 2017-18ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.**

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳು. ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ. ಜಗದೀಶ್ ಶೆಟ್ಟರ್ ಅವರು ಪ್ರಾರಂಭ ಮಾಡುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಜಿ. ಬೋಪಯ್ಯನವರು ಬೇಡಿಕೆಗಳ ಮೇಲೆ ಮಾತನಾಡುವುದು incomplete ಆಗಿರುವುದರಿಂದ ಮೊದಲು ಅವರು ಮುಗಿಸಲಿ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, incomplete ಆಗಿದೆ.

ಅಧ್ಯಕ್ಷರು : ಇನ್ನೂ complete ಆಗಿಲ್ಲವೇ? ಬೇಗ ಮುಗಿಸಿ.

(ಮುಂದು . . .)

ವಿ.ಸ.: 13.06.2017.12.20.(12).ಜಿಎಂ.ಹೆಚ್ಎಸ್.

ಶ್ರೀ ಕೆ.ಜಿ.ಬೋಪಯ್ಯ: ನಾನು ಮೊನ್ನೆ ದಿವಸ ಅರ್ಧಕ್ಕೆ ನನ್ನ ಮಾತನ್ನು ನಿಲ್ಲಿಸಿದ್ದೇನೆ. ಈಗ ನನ್ನ ಮಾತನ್ನು ಪೂರ್ಣಗೊಳಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಕೆ.ಜಿ.ಬೋಪಯ್ಯನವರ demands ಮೇಲಿನ ಚರ್ಚೆ incomplete ಆಗಿದೆಯಂತೆ, ಅವರ ಮಾತನ್ನು ಪೂರ್ಣಗೊಳಿಸಲಿ. ನಂತರ ನಾನು demands ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು. ಬೇಗ ಮುಕ್ತಾಯಗೊಳಿಸಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, Zero Hourನಲ್ಲಿ ಮಾತನಾಡಲು ನನ್ನದೊಂದು ವಿಷಯವಿದೆ.

ಅಧ್ಯಕ್ಷರು: Zero Hour ಆಗಲೇ ಮುಗಿದು ಹೋಯಿತು.

ಶ್ರೀ ಹೆಚ್.ಡಿ.ರೇವಣ್ಣ: ನಾನು ಅರ್ಜಿ ಕೊಟ್ಟಿದ್ದೇನೆ, ನೀವು ನನ್ನ ಹೆಸರನ್ನು ಕರೆಯಲಿಲ್ಲ.

ಅಧ್ಯಕ್ಷರು: Listನಲ್ಲಿ ನಿಮ್ಮ ಹೆಸರು ಬಂದಿಲ್ಲ, ನಾನೇನು ಮಾಡಲಿ, ನಾಳೆಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ(ವಿರಾಜಪೇಟೆ): ಸನ್ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಮೊನ್ನೆ ಸಾಕಷ್ಟು ವಿಚಾರಗಳನ್ನು ಹೇಳಿದ್ದೇನೆ. ಆದರೆ, ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಇವುಗಳ ನಡುವೆ ಯಾವ ಹೊಂದಾಣಿಕೆಯೂ ಇಲ್ಲ. ನಮಗೆ ಕಂದಾಯ ಇಲಾಖೆ ಮಾತೃ ಇಲಾಖೆ, ಅದರ ಅಧೀನದಲ್ಲಿ ಎಲ್ಲರೂ ಕೆಲಸ ಮಾಡಬೇಕು ಎನ್ನುವಂತೆ ನಡೆದುಕೊಳ್ಳುತ್ತಿದ್ದೇವೆ. ಎಂದರೆ, ಕಂದಾಯ ಇಲಾಖೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು, ಮತ್ತೊಂದು ಆಗಬೇಕೆಂದರೆ ಎಲ್ಲವೂ ಅರಣ್ಯ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಂಡು ಕೆಲಸ ಮಾಡುವಂಥದ್ದು ಆಗುತ್ತಿದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಹಾಗಾಗಿ, ಅರಣ್ಯ ಇಲಾಖೆಯವರು ಹೇಗೆ ಸುತ್ತೋಲೆಗಳನ್ನು ಹೊರಡಿಸುತ್ತಿದ್ದಾರೆ, ಅವರಿಗೆ ಯಾವ provisionನಲ್ಲಿ ಅಧಿಕಾರ ಕೊಟ್ಟಿದ್ದಾರೆ? ಎಲ್ಲವೂ ಕಂದಾಯ ಇಲಾಖೆಗೆ restriction ಮಾಡುವ ಅಧಿಕಾರ ಇವರಿಗೆ ಎಲ್ಲಿಂದ ಬಂದಿದೆ? ಎನ್ನುವುದನ್ನು ತಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾನು ಮೊನ್ನೆ ಮಾತನಾಡುವಾಗ, ಮುಜರಾಯಿ ಇಲಾಖೆಯಿಂದ ಏನು ಅನುದಾನಗಳನ್ನು ಇವತ್ತು ಕೊಡುತ್ತಿದೆಯೋ, ಆ ಅನುದಾನಗಳನ್ನು ಅಲ್ಲಿ ಉಪಯೋಗಿಸಬೇಕಾದರೆ, ಅಲ್ಲಿ ಕೆಲಸ ಮಾಡಬೇಕಾದರೆ ಅರಣ್ಯ ಇಲಾಖೆಯವರಿಗೆ ಕಂದಾಯ ಇಲಾಖೆಯವರು NOC ಕೇಳುತ್ತಿದ್ದಾರೆ. ಯಾವ ಕಾನೂನಿನಡಿ NOC ಕೇಳುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಈ ಹಿಂದೆ ಈ ಪದ್ಧತಿ ಇರಲಿಲ್ಲ. ಮುಜರಾಯಿ ಇಲಾಖೆಯಿಂದ ದೇವಸ್ಥಾನದ ಪಕ್ಕದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು grant ಕೊಡುತ್ತೇವೆ. ಅದು ಅಲ್ಲಿ ಕೆಲಸ ಮಾಡಬೇಕಾದರೆ ನೇರವಾಗಿ, ನಾನು ನಮ್ಮ ಜಿಲ್ಲೆಯ ಕುರಿತು ಹೇಳುತ್ತಿದ್ದೇನೆ. ಕಂದಾಯ ಇಲಾಖೆಯ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಜಿಲ್ಲಾಧಿಕಾರಿಗಳ ಕಛೇರಿಯಿಂದ ಅನುಮತಿ ಕೇಳಿ, NOC ಕೇಳಿ ಅರಣ್ಯ ಇಲಾಖೆಯವರಿಗೆ ಕಳುಹಿಸುತ್ತಿದ್ದಾರೆ. ನಾನು ಹಿಂದೆ ಇದನ್ನು ತಮ್ಮ ಗಮನಕ್ಕೆ ತಂದಿದ್ದೆನು. ಇವರು ಯಾವ ರೀತಿಯ ಸುತ್ತೋಲೆಯನ್ನು ಕಳುಹಿಸುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯನ್ನು ಕೊಡುತ್ತಿದ್ದೇನೆ.

"ವಿರಾಜಪೇಟೆ ತಾಲ್ಲೂಕು, ಹಾತೂರು ಗ್ರಾಮ ಪಂಚಾಯತಿ, ಈಚೂರು ಗ್ರಾಮದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಯ ಬಗ್ಗೆ."

ಈ ಪತ್ರದಲ್ಲಿ ನಿಮ್ಮ ಕಚೇರಿಯ ಪತ್ರದ ದಿನಾಂಕ ಎಲ್ಲವನ್ನೂ ಹಾಕಿದ್ದಾರೆ. ಇದಕ್ಕೆ ಏನು ಹೇಳುತ್ತಿದ್ದಾರೆಂದರೆ, ವಿಷಯಕ್ಕೆ ಸಂಬಂಧಿಸಿದಂತೆ ವಿರಾಜಪೇಟೆ ತಾಲ್ಲೂಕು, ಪೊನ್ನಂಪೇಟೆ ಹೋಬಳಿ, ಈಚೂರು ಗ್ರಾಮದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಜಾಗ ಸರ್ವೆ ನಂಬರ್ 87/1ರಲ್ಲಿ 1.24 ಎಕರೆ ಜಾಗವಿದ್ದು, ಸದರಿ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಮಾಡುವ ಬಗ್ಗೆ ಅಧಿಸೂಚನೆ ಹಾಗೂ ಪ್ರಸ್ತಾಪಿತ ಸ್ಥಳದಲ್ಲಿ ಹಾಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಮಾಡುವ ಬಗ್ಗೆ ಅಭಿಪ್ರಾಯ ನೀಡಲು ಕೋರಿರುತ್ತೀರಿ." ಅದಕ್ಕೆ, ಇವರು ಯಾವುದನ್ನು quote ಮಾಡುತ್ತಾರೆಂದರೆ, "ಈ ಬಗ್ಗೆ Indian Forest Act, 1878ರ ಅಧ್ಯಾಯ-4ರಂತೆ ಕೂರ್ಗ್ ಗೆಜೆಟ್ ನೋಟಿಫಿಕೇಷನ್ ದಿನಾಂಕ:24.10.1905ರಲ್ಲಿ," ಈ Karnataka Forest Act, 1963 ಎಲ್ಲಿ ಹೋಯಿತೆನ್ನುವುದು ಆ ಅರಣ್ಯ ಇಲಾಖೆಯವರಿಗೆ ಗೊತ್ತಿಲ್ಲ. ಅದನ್ನು ಇಲ್ಲಿ quote ಮಾಡುತ್ತಾರೆ.

"In super session of Notification, No.13 dated 15 March 1887, and No.41, dated 20th September 1888, which are hereby cancelled. The Chief Commissioner is pleased under Section 28 of the Indian Forest Act, 1878 (VII of 1878) to declare that the provisions of Chapter-IV of the said Act shall be applicable to all areas, not being included within the limits of reserved forests, ಯಾವುದು reserved

forest ಇಲ್ಲವೋ ಅದೆಲ್ಲವೂ reserved forest ಎಂದು ಇಲ್ಲಿ ಹೇಳುತ್ತಾರೆ. Reserved forests, which are locally known as Devarakadus, Urudves, Ambalas or Mandus, and in respect of which the record of rights contemplated by the said Section has been drawn up and received his approval" ಎಂದು ದಿನಾಂಕ:01.11.1905ರ ಕೊಡಗು ಜಿಲ್ಲಾ ನೋಟಿಫಿಕೇಷನ್‌ನಲ್ಲಿ ಪ್ರಕಟಗೊಂಡಿರುತ್ತದೆ." ಅದರ ಮೇಲೆ ಇವರು ಹೇಳುವುದೇನೆಂದರೆ, ಅದರಂತೆ ಸದರಿ ಪ್ರದೇಶವು ಸಂರಕ್ಷಿತ ಅರಣ್ಯ ಪ್ರದೇಶವಾಗಿದ್ದು, ಅರಣ್ಯ ಪ್ರದೇಶದಲ್ಲಿ ಅರಣ್ಯೇತರ ಚಟುವಟಿಕೆ ಕೈಗೊಳ್ಳುವ ಮೊದಲು ಅರಣ್ಯ ಸಂರಕ್ಷಣಾ ಕಾಯಿದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುವುದರಿಂದ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲು ಉಪಯೋಗಿ ಸಂಸ್ಥೆಯಿಂದ ಅಂತರಜಾಲದ ಮೂಲಕ ಅರ್ಜಿಯನ್ನು ಸಲ್ಲಿಸಬೇಕಾಗಿದೆ ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ."

ಆದರೆ, ಕೊಡಗಿನಲ್ಲಿರುವಂಥ ಎಲ್ಲಾ ದೇವರ ಕಾಡುಗಳನ್ನು 1985ನೇ ಇಸವಿಯಲ್ಲಿ ಅರಣ್ಯ ಇಲಾಖೆಗೆ ನೀವು ಅಲ್ಲಿ ಮರ ಕದಿಯದ್ದ ಹಾಗೆ encroach ಮಾಡದ ಹಾಗೆ ನೋಡಿಕೊಳ್ಳಿ ಎಂದು ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಆ ಸುತ್ತೋಲೆ ಏನು ಹೇಳುತ್ತದೆಯೆಂದರೆ, 'ಇದು 26$^{th}$ October, 1985ರ ಸುತ್ತೋಲೆ'. ನಾನು operative portionನ್ನು ಮಾತ್ರ ಓದುತ್ತಿದ್ದೇನೆ. "After careful consideration of all the aspects of the matter, Government in exercise of the powers conferred under Section 71 of the Karnataka Land Revenue Act, 1964 and all other enabling powers in this behalf are pleased to order to transfer all the Devarakadu lands in Kodagu District from Revenue Department to the Forest Department to maintain them as reserve forests under

Sections- 4, 17 & 26 of The Karnataka Forest Act, 1963. This will be without prejudice to the traditional privileges and the rights of the temples and the villagers referred to in the preamble".

Preambleನಲ್ಲಿ ದೇವರ ಕಾಡಿಗೆ ಏನೇನು ಹಕ್ಕಿದೆ ಎಂದು ಏನು ಹೇಳುತ್ತಾರೆಂದರೆ, "Devarakadu lands in Kodagu District are sacred forest usually assigned to some particular deity or temple. The privileges and rights, such as (extraction of firewood for temple worship, materials for the construction of pendals and with special permission, timber for repairing the temple are allowed to the temple authorities while the villagers are generally have the rights of way and water and also the facilities of grazing and of hunting." ಬೇಟೆ ಮಾಡುವುದಕ್ಕೂ ಅಧಿಕಾರ ಕೊಟ್ಟುಬಿಟ್ಟಿದ್ದಾರೆ. "Hunting especially during the Kail Muhurt and Hutri festival. No grants of Devarakadu lands are being made to the persons as is being done in the case of common Paisary lands." ಎಂದು ಹೇಳಿದ್ದಾರೆ. ದೇವರಕಾಡನ್ನು ಇವರಿಗೆ ಏತಕ್ಕಾಗಿ ಕೊಟ್ಟಿದ್ದು? ಅಲ್ಲಿ ಮರ ಹೋಗದ ಹಾಗೆ ನೋಡಿಕೊಳ್ಳಿ. ಅದನ್ನು encroach ಮಾಡದ ಹಾಗೆ ನೋಡಿಕೊಳ್ಳಿ, ಉಳಿದ ಎಲ್ಲಾ rights ಬೇಟೆ ಆಡುವುದನ್ನೂ ಕೊಟ್ಟುಬಿಟ್ಟಿದ್ದಾರೆ. ನಾನು ಬೇಟೆ ಕೊಡಿ ಎಂದು ಕೇಳುವುದಿಲ್ಲ. ಅಲ್ಲಿ ಪ್ರಾಣಿಗಳು ಇದ್ದರೆ ತಾನೆ ಬೇಟೆಯಾಡುವುದು. ಅದು ಬೇರೆ ವಿಚಾರ. ಆದರೆ, ಇಷ್ಟು ಸ್ಪಷ್ಟ ಆದೇಶವಿದ್ದರೂ ಸಹ Forest ಇಲಾಖೆಗೆ ಏತಕ್ಕಾಗಿ ಕಳುಹಿಸುತ್ತಿದ್ದೀರಿ? ಕಳುಹಿಸುವ ಉದ್ದೇಶವೇನು? ಇವತ್ತು ದೇವರ ಕಾಡು ಏನಾಗಿದೆಯೆಂದರೆ ಊರಿನವರ ಸ್ವಾಧೀನ ಅವರ ಹತ್ತಿರ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇದ್ದಾಗ ಅಲ್ಲಿ ಒಂದು ಮರ ಹೋಗುತ್ತಿರಲಿಲ್ಲ. ಆ ದೇವರಕಾಡಿನೊಳಗೆ ಯಾರೂ entry ಆಗುತ್ತಿರಲಿಲ್ಲ. ಅಲ್ಲಿರುವ ಎಲ್ಲಾ ಮರಗಳು ಇತ್ತು. ಇವತ್ತು ಏನಾಗಿದೆಯೆಂದರೆ, ದೇವರ ಕಾಡಿನಲ್ಲಿ ಮರಗಳೇ ಇಲ್ಲ. ಇವರದ್ದೇ ಸಹಕಾರದಿಂದ ಎಲ್ಲವನ್ನೂ ಸಾಗಿಸಿದ್ದಾರೆ. ಅದರ ಜೊತೆಗೆ ಎಷ್ಟು ದೇವರ ಕಾಡು encroach ಆಗಿದೆ ಎನ್ನುವುದರ statistics ತೆಗೆದರೆ 60-70% encroach ಆಗಿ ಹೋಗಿದೆ.

(ಮುಂದುವರೆದಿದೆ)

13.06.2017 / 12.30 (13) MPL-SP

**ಶ್ರೀ ಕೆ.ಜಿ.ಬೋಪಯ್ಯ (ಮುಂದು. . .)**

ಹಾಗಾದರೆ 1985 ರಲ್ಲಿ ಕೊಟ್ಟ ಉದ್ದೇಶವೇನು? ಇವರು ಕಿರುಕುಳ ಕೊಡುವುದು ಏನು? ಇದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಹೋದರೆ ಆಗುವುದಿಲ್ಲ. ಕಳೆದ 3-4 ವರ್ಷಗಳಿಂದ ಅರಣ್ಯ ಇಲಾಖೆಗೆ ಕಳುಹಿಸುವುದು. ಈ ರೀತಿಯಾದರೆ ಹೇಗೆ? ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ನೇರವಾಗಿ ಸೂಚನೆಗಳನ್ನು ಕೊಡಿ. ಈ ರೀತಿ ಅರಣ್ಯ ಇಲಾಖೆಯಿಂದ ಎಲ್ಲಾ ತೆಗೆದುಕೊಂಡು permission ಮಾಡಿಕೊಂಡು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೆ? ಇದನ್ನು ಸ್ವಲ್ಪ ಗಂಭೀರವಾಗಿ ಪರಿಗಣಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇಷ್ಟೇ ಅಲ್ಲ. ಎಲ್ಲದಕ್ಕೂ ಗಂಗಾ ಕಲ್ಯಾಣ ಯೋಜನೆಯಲ್ಲಿ specially SC/ST ದಕ್ಕೆ electric line ಹಾಕುವುದಕ್ಕೆ ಅಧಿಕಾರಿಗಳು ಒಬ್ಬ ಡಿ.ಎಫ್.ಓ ಅವರೇ ಮಾಡುವಂತಹದು. ಏನು ಸುತ್ತೋಲೆ ಕೊಡುತ್ತಾರೆಂದರೆ ಗಂಗಾ ಕಲ್ಯಾಣ ಯೋಜನೆಯಡಿ ಕೃಷಿ ಪಂಪ್‌ಗಳನ್ನು ವಿದ್ಯುದೀಕರಣಗೊಳಿಸಲು ಅರಣ್ಯದ ಮುಖಾಂತರ ವಿದ್ಯುತ್ ಮಾರ್ಗದ ವಿಸ್ತರಣೆ ಮಾಡಲು ಅನುಮತಿ ಕೋರಿ. . . ಇದರಲ್ಲಿ ಒಂದಿಷ್ಟು ಅವರು ಕೊಟ್ಟಿದ್ದಾರೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೃಷಿ ಪಂಪ್‌ಗಳನ್ನು ವಿದ್ಯುದೀಕರಣಗೊಳಿಸಲು ಅರಣ್ಯದ ಮುಖಾಂತರ ವಿದ್ಯುತ್ ಮಾರ್ಗದ ವಿಸ್ತರಣೆ ಮಾಡಲು ನೀವು ಉಲ್ಲೇಖ(1) ರಲ್ಲಿ ಅನುಮತಿ ಕೋರಿ ನಮೂನೆ (ಎ) ದೊಂದಿಗೆ ವಲಯ ಅರಣ್ಯಾಧಿಕಾರಿ ತಿಥಿಮತಿಯವರಿಗೆ ಮನವಿಯನ್ನು ಸಲ್ಲಿಸುವುದು. That is the

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

procedure. ಅವರಿಂದ ತೆಗೆದುಕೊಳ್ಳಬೇಕೆಂದು. Forest Dwellers Act ನಲ್ಲಿದೆ. ಅವರಿಗೆ information ಕೊಡಬೇಕೆಂದು ಅಷ್ಟೇ ಇರುವುದು. ಲಗತ್ತಿಸಿ ಉಲ್ಲೇಖ(2)ರಲ್ಲಿ ಸಹಾಯಕ ಅರಣ್ಯ ಅಧಿಕಾರಿ ತಿಥಿಮತಿಯವರು ಉಲ್ಲೇಖಿತ ಪತ್ರದಲ್ಲಿ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅವರು ಮುಂದುವರೆದು ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ. ನೋಡಿ ಅವರು ಹೇಗೆ ಬರೆಯುತ್ತಾರೆಂದರೆ, 'This area being an active Elephant Corridor.' Declare ಆಗಿಯೇ ಇಲ್ಲ ಕೊಡಗು ಜಿಲ್ಲೆಯಲ್ಲಿ. Elephant corridor ಎಂದು ಎಲ್ಲಿ ಆಗಿದೆ? 'Elephant Corridor only inserted A.B. Cable under ground cable is allowed, under the guidelines of the Standing Committee of the National Board for Wildlife'. National Board, ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು Wildlife Board ಇದೆ. ಅದ್ಯಾವುದೂ ಇವರಿಗೆ ಲೆಕ್ಕಕ್ಕೆ ಇಲ್ಲ. ಏನಿದ್ದರೂ ಅಲ್ಲಿಯೇ ಅರಣ್ಯ ಇಲಾಖೆಗೆ. Permission ಇನ್ನೊಂದು 2.5 ಹೆಕ್ಟೇರ್‌ಗಳೊಳಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಥವಾ ಅರಣ್ಯ ಮಂತ್ರಿಗಳು ಉಪಾಧ್ಯಕ್ಷರಿದ್ದೀರಿ ತಾವು. ನಿಮ್ಮ ಅಧ್ಯಕ್ಷತೆಯಲ್ಲಿಯೇ ಇದೆಲ್ಲವನ್ನೂ ಮಾಡಬಹುದು. ಕೇಬಲ್ ಹಾಕಿ underground ಹಾಕುವಂತಹ ಒಂದು ವ್ಯವಸ್ಥೆ ನಮ್ಮ ವಿದ್ಯುತ್ ಇಲಾಖೆಯಲ್ಲಿ ಇದೆಯೆ? ಬೆಂಗಳೂರು ಸಿಟಿಯಲ್ಲಿರಬಹುದು. ಹಳ್ಳಿಗಳಲ್ಲಿ ಇದೆಯೆ? ಹೀಗಾದರೆ ಇವತ್ತು ಅರಣ್ಯ ಹಕ್ಕು ಕಾಯಿದೆಯಲ್ಲಿ ಒಂದಿಷ್ಟು ನಾವು ಹಕ್ಕುಪತ್ರ ಕೊಟ್ಟಿದ್ದೇವೆ. ಅವರಿಗೆ electricity ಕೊಡುವಂತಿಲ್ಲ. ಕೃಷಿ ಮಾಡುವುದಕ್ಕೆ ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ತೆಗೆದರೆ ಪಂಪ್‌ಸೆಟ್ ಹಾಕುವುದಕ್ಕೆ ಈ ರೀತಿ .....

ಶ್ರೀ ಸಿದ್ದರಾಮಯ್ಯ : ನಿಮ್ಮ ಕಡೆ ಮಳೆ ಬೀಳುತ್ತಿದೆಯೆ?

ಶ್ರೀ ಕೆ.ಜಿ.ಬೋಪಯ್ಯ : ಮಳೆ ಬೀಳುತ್ತಿದೆ. ಖಂಡಿತ ಬರುತ್ತದೆ ಇನ್ನೊಂದು ವಾರ. ನಾವು ಅದೇ ಆಸೆ ಪಡುತ್ತೇವೆ. ಆ ತಮಿಳುನಾಡಿನವರು ಕಾಟ ಕೊಡುವುದು ತಪ್ಪಲಿ ಎಂದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಇಲ್ಲ ಬಹಳ ಒಳ್ಳೆಯ ಪೂಜೆ ಮಾಡಿದ್ದೀರಿ. ಮಳೆ ಬರುತ್ತಿದೆ. ಪೂಜೆಯಾದ ಮೇಲೆ ಸಿಕ್ಕಾಪಟ್ಟೆ ಮಳೆ ಬರುತ್ತಿದೆ.

ಶ್ರೀ ಕೆ.ಜಿ.ಬೋಪಯ್ಯ : ಅದರ ಬಗ್ಗೆ ಚರ್ಚೆ ಬೇಡ. ಅವರು ಪೂಜೇನೂ ಮಾಡಿಲ್ಲ. ಅವರು ಪೂಜೆ ಮಾಡೋದು ಇಲ್ಲ.

ಶ್ರೀ ಜಗದೀಶ ಶೆಟ್ಟರ್ : ಎ.ಬಿ.ಪಾಟೀಲ್ ರವರು ಎರಡು ವರ್ಷದ ಹಿಂದೆ ಪೂಜೆ ಮಾಡಬೇಕಿತ್ತು.

ಶ್ರೀ ಸಿದ್ದರಾಮಯ್ಯ : ಹಿಂದೆ ನೀವೂ ಪೂಜೆಗೆ ಆದೇಶ ಮಾಡಿದ್ದಿರಲ್ಲ?

ಶ್ರೀ ಕೆ.ಜಿ.ಬೋಪಯ್ಯ : ಈ ರೀತಿ underground ನಲ್ಲಿ ತೆಗೆದುಕೊಂಡು ಹೋಗಿ ಕೊಡುವಂತಹದು ಏನು ಎಂದರೆ, 'a separate application, total forest land required for' . . ಇರಲಿ ಅದೆಲ್ಲವನ್ನೂ ಈಗ ಅರಣ್ಯ ಹಕ್ಕು ಕಾಯಿದೆಯಲ್ಲಿ ನಾವು land ಕೊಡುವಾಗ ಆ forest ನವರೂ ಇರುತ್ತಾರೆ. ಅವರು ಇರುತ್ತಾರೆ ಆ ಕಮಿಟಿಯಲ್ಲಿ. ಏನು ಮಾಡುತ್ತಿದ್ದರು? ಎಲ್ಲಾ ಕೊಟ್ಟಾದ ಮೇಲೆ ಅವರಿಗೆ ಮೂಲಭೂತ ಸೌಕರ್ಯ ಕೊಡಿ. ನಾವು ಆ ಜನಾಂಗದ ಬಗ್ಗೆ ಬಹಳ ಮಾತನಾಡುತ್ತೇವೆ. ಈ ರೀತಿ ಸುತ್ತೋಲೆಯನ್ನು ಕೊಟ್ಟು ಕಿರುಕುಳ ಕೊಡುತ್ತಿದ್ದಾರಲ್ಲ ಅವರಿಗೆ ಒಂದು ಸಲ ಈ ರೀತಿ ಹಕ್ಕುಪತ್ರ ಕೊಟ್ಟ ಮೇಲೆ ಇವರು ಎಲ್ಲವೂ ನಮ್ಮದೇ ಎಂದು ತಿಳಿದುಕೊಂಡಿದ್ದಾರೆ. ಹಾಗಾದರೆ ಈ ಕಂದಾಯ ಇಲಾಖೆ ಏಕೆ ಇರುವುದು? ಅವರ under ನಲ್ಲಿ ಕೆಲಸ ಮಾಡುವ ಪರಿಸ್ಥಿತಿ ಈ ಕಂದಾಯ ಇಲಾಖೆಗೆ ಯಾವಾಗ ಬಂತು? ನನಗೆ ಬಹಳ ಆಶ್ಚರ್ಯ ಆಗುವುದು ಈ ರೀತಿ ಸುತ್ತೋಲೆಗಳನ್ನು Forest ನವರು ಕೊಟ್ಟು ಬಿಟ್ಟರೆ ಆಗಿ ಹೋಯಿತು. ಮತ್ತೆ ಜಿಲ್ಲಾಧಿಕಾರಿಗಳಿರಲಿ, ಏನೂ ಮಾತೇ ಆಡುವುದಿಲ್ಲ. ಒಬ್ಬ ಡಿ.ಎಫ್.ಓ ಈ ರೀತಿ ಸುತ್ತೋಲೆ ಕೊಟ್ಟರೆ ಅಲ್ಲಿ ಅನುಷ್ಠಾನವನ್ನೇ ಮಾಡಲಾಗದೆ ಎಲ್ಲವೂ ವಾಪಸ್ಸು ಹೋಗಿದೆ. ಇವರದೇ ಕಿರುಕುಳ. ಒಂದೇ ಒಂದು ಗಂಗಾಕಲ್ಯಾಣ ಯೋಜನೆಯಲ್ಲಿ ಯಾರೂ ಎಸ್.ಟಿ. ಜನಾಂಗಕ್ಕೆ Forest Dwellers Act ನಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ 2 ಎಕರೆ, 3 ಎಕರೆ, 4 ಎಕರೆ ಎಂದು ಅಲ್ಲಿ ನಾವು ಬೋರ್‌ವೆಲ್ ತೆಗೆಯುವುದಕ್ಕೆ ಆಗುತ್ತಿಲ್ಲ, ಕರೆಂಟ್ ಕೊಡುವುದಕ್ಕೆ ಆಗುತ್ತಿಲ್ಲ. ರಸ್ತೆ ಅಂತೂ ಮಾಡುವುದಕ್ಕೆ ಬಿಡುತ್ತಿಲ್ಲ. ಹಾಗಾದರೆ ಅವರು ಹಾಗೆಯೇ ಇರಬೇಕಾ? ಇದರ ಬಗ್ಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗಂಭೀರವಾಗಿ ತೆಗೆದುಕೊಳ್ಳಬೇಕು. ನಾನು ಅರಣ್ಯ ಮಂತ್ರಿಗಳಲ್ಲಿಯೂ ವಿನಂತಿ ಮಾಡುತ್ತೇನೆ. ಇಂತಹ ಅಧಿಕಾರಿಗಳನ್ನು ದಯವಿಟ್ಟು ಇಟ್ಟುಕೊಳ್ಳಬೇಡಿ.

ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಜಮೀನನ್ನು ಕೊಡುವುದಕ್ಕೆ ಅರಣ್ಯ ಸಂರಕ್ಷಣಾ ಕಾಯಿದೆ ಅಡ್ಡ ಬರುತ್ತದೆ ಒಂದು. ಎರಡನೆಯದು ಅದನ್ನು ಪಡೆಯಬೇಕಾದರೆ ಅದಕ್ಕೊಂದು ನೀವು diversion ಗೆ ಅರ್ಜಿ ಹಾಕುವ ಅವಕಾಶವಿದೆ. ಸಣ್ಣ-ಪುಟ್ಟವರಿಗೆ ಕಷ್ಟವಾಗಬಹುದು. ಅಂದರೆ online ನಲ್ಲಿ ಹಾಕಿದರೆ ಅದು ಸರ್ಕಾರದ ಕಡೆಗೆ ಬಂದು ಮಂಜೂರಾತಿಯಾಗುತ್ತದೆ. ಇನ್ನೊಂದು ತಾವು ಕಾರಿಡಾರ್ ಬಗ್ಗೆ ಹೇಳಿದಿರಿ. ಕಾರಿಡಾರ್ ಎಂದರೆ ತಾವು ಅರ್ಥ ಮಾಡಿಕೊಳ್ಳುವುದಿಲ್ಲ. ಆನೆಗಳು ಹೋಗುವ ದಾರಿಯನ್ನು "ಕಾರಿಡಾರ್" ಎಂದು ಕರೆಯುತ್ತಾರೆ. ಆನೆಗಳ ಮೊಗಸಾಲೆ ಎಂದರೆ ಅದು ಆನೆಗಳು ಒಂದೇ ದಾರಿಯಲ್ಲಿ ಹೋಗುತ್ತವೆ, ಒಂದೇ ದಾರಿಯಲ್ಲಿ ಬರುತ್ತವೆ. ಆನೆ ಕಾರಿಡಾರ್ ಆಗಲಿಲ್ಲ ಇಲ್ಲಿಯವರೆಗೆ ಎಂಬ ಮಾತನ್ನು ಹೇಳಿದಿರಿ. ಆನೆ ಕಾರಿಡಾರ್ ಮಾಡುವುದಲ್ಲ. ರಸ್ತೆಗಳು ಇಲ್ಲದ ಪ್ರದೇಶದಲ್ಲಿ ಆನೆಗಳು ಹೋಗುವಂತಹ ದಾರಿ ಇದೆ. ಆ ದಾರಿಯನ್ನು ಆನೆ ಕಾರಿಡಾರ್ ಎಂದು ಕರೆಯುತ್ತೇವೆ. ಆ ದಾರಿ ಛಿದ್ರವಾಗಬಾರದು. ಒಂದು ವೇಳೆ ಆ ದಾರಿ ಛಿದ್ರವಾದರೆ ಆನೆಗಳು ಕಾಡಿಗೆ ಬರುತ್ತವೆ. ನಿಮ್ಮಲ್ಲಿ Home Stay ಗಳು ಸಾಕಷ್ಟು ಇವೆ. ಇನ್ನೆಷ್ಟು ಬರುತ್ತವೆಯೋ ನನಗೆ ಗೊತ್ತಿಲ್ಲ. ಲೆಕ್ಕಕ್ಕೆ ಇರುವಂತಹದು ಕೆಲವು ಇರಬಹುದು. ಆದರೆ ಸಾವಿರಾರು 2000, 3000 ಕ್ಕಿಂತಲೂ ಜಾಸ್ತಿ Home Stay ಗಳಿವೆ. ಇದರಿಂದಾಗಿ ಅಲ್ಲಿಯ ಸಾಮಾಜಿಕ ವ್ಯವಸ್ಥೆಯೇ ಬದಲಾವಣೆಯಾಗಿದೆ. ಇವತ್ತು ಪ್ರಾಣಿಗಳಿಗೂ ಕೂಡಾ ಬದುಕುವುದು ಕಷ್ಟವಾದಂತಹ ಸ್ಥಿತಿ ಇದೆ. ಈಗ ಕಂದಾಯ ಇಲಾಖೆ. ಅವರೇ ಕೇಳಿಕೊಂಡು ಕೆಲವು ಬಾರಿ ಜಮೀನನ್ನು ಕೊಟ್ಟದ್ದು ಇದೆ. ಈ ರೀತಿ ಇರುವಾಗ ನಾವು ಕಾನೂನು ವ್ಯಾಪ್ತಿ ಅಡಿಯಲ್ಲಿ ಏನು ಅವಕಾಶ ಇದೆ ಅದನ್ನು ಮಾಡಲು ಮಾತ್ರ ನಮಗೆ ಸಾಧ್ಯತೆ ಇದೆಯೆ ಹೊರತು ನೇರವಾಗಿ . . . ತಮ್ಮ ಸರ್ಕಾರವಿದ್ದಾಗಲೂ ಕೂಡಾ ತಾವೇ ರಸ್ತೆ ಮಾಡಿದಾಗ ತಮ್ಮ ಮೇಲೆ ಕೇಸ್ ಆಗಿದೆ. ನಿಮ್ಮ ಸರ್ಕಾರ ಇದ್ದಾಗಲೇ ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ : ನಮ್ಮ ಮೇಲೆ ಕೇಸ್ ಏನೂ ಆಗಿಲ್ಲ. Violation Supreme Court ಗೆ ಹಾಕಿಕೊಂಡಿದ್ದರೆ ಹಾಕಿಕೊಳ್ಳಲಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ರಮಾನಾಥ ರೈ : ಏಕೆಂದರೆ ನಿಮ್ಮ ಸರ್ಕಾರ ಇದ್ದಾಗಲೇ ಅಪ್ಪಚ್ಚು ರಂಜನ್ ಮತ್ತು ನೀವು ಒಂದು ರಸ್ತೆ ಮಾಡಲು ಹೋಗಿ ಅದು ಕೇಸ್ ಆಗಿದೆ. ಆಗ ನಿಮ್ಮದೇ ಸರ್ಕಾರ ಇತ್ತು.

ಶ್ರೀ ಕೆ.ಜಿ.ಬೋಪಯ್ಯ : ಇರಲಿ. ನಾವು ಅದನ್ನು face ಮಾಡುತ್ತೇವೆ.

ಶ್ರೀ ಬಿ.ರಮಾನಾಥ ರೈ : ಅದು ಏಕೆ ಆಗಿದೆ ಎಂದರೆ ನಾವು vengeance ಇಟ್ಟುಕೊಂಡು ಮಾಡಿರುತ್ತೇವೆ ಎಂದು ಹೇಳುವ ಮಾತಿನ ಅರ್ಥದಲ್ಲಿ ತಾವು ಹೇಳುತ್ತಿದ್ದೀರಿ. ಅದು ಖಂಡಿತಾ ಅಲ್ಲ. ನೀವು ಇದ್ದಾಗಲೂ ಇಂತಹ ವ್ಯವಸ್ಥೆಗಳು ಅರಣ್ಯ ಸಂರಕ್ಷಣಾ ಕಾಯಿದೆ. . .ಬೇರೆ ಏನೋ ಹೇಳುತ್ತಿದ್ದಿರಿ. ಅದನ್ನು ಪರಿಶೀಲನೆ ಮಾಡುತ್ತೇವೆ. ಈಗ ಅರಣ್ಯ ಹಕ್ಕು ಕಾಯಿದೆಯಲ್ಲಿ ಹಕ್ಕುಪತ್ರ ಕೊಡುತ್ತಿದ್ದಾರೆ. ಅವರಿಗೆ ಅನುಭೋಗದ ಹಕ್ಕನ್ನು ಕೊಡುವುದು. ಸಮುದಾಯದ ಹಕ್ಕನ್ನು ಕೇಳುವ ಅವಕಾಶವೂ ಕೂಡಾ ಇದೆ. ಸಮುದಾಯದ ಹಕ್ಕನ್ನು ಕೇಳಿದಾಗ ಇಂತಹ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರು ಕೊಡಲು ಅವಕಾಶ ಇದೆ. ಇನ್ನೊಂದು ಹೇಳುತ್ತೇನೆ. National Park ನಲ್ಲಿ ವಿದ್ಯುತ್ ತೆಗೆದುಕೊಂಡು ಹೋಗುವುದಕ್ಕೆ ಸಮಸ್ಯೆಗಳು ಇರುವುದು ತಮಗೆ ಗೊತ್ತಿದೆ. ಇದು ಇವತ್ತು ನಿನ್ನೆಯ ವಿಚಾರವಲ್ಲ, ಬಹಳ ವರ್ಷಗಳಿಂದ ಇದೆ.

ಶ್ರೀ ಕೆ.ಜಿ.ಬೋಪಯ್ಯ : ನಾನು National Park ಬಗ್ಗೆ ಮಾತನಾಡಿಲ್ಲ. National Park ಇರುವುದು ನಾಗರಹೊಳೆ ಅಭಯಾರಣ್ಯದಲ್ಲಿ. ಅದು tiger reserve ಇದೆ.

ಶ್ರೀ ಬಿ.ರಮಾನಾಥ ರೈ : ನೋಡೋಣ. ಅದರ ಬಗ್ಗೆ ಗಮನಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : ನಾನು ಮಾತನಾಡುತ್ತಿರುವುದು ಬೇರೆ ಕಡೆಯದು. National Park ಇದರಲ್ಲಿ guidelines ನಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ. ನೀವು Forest Dwellers Act Section 3 and 4 ನಲ್ಲಿ clear ಆಗಿ ಹೇಳಿದೆ. Parliament ನಲ್ಲಿ ಪಾಸ್ ಆದಂತಹ ಬಿಲ್‌ನಲ್ಲಿ ಏನು ಹೇಳಿದೆ? 'Anything contained in any other Act all the provisions including all Forest Acts will supersede under the Forest Dwellers Act' ಎಂದು ಇದೆ. Forest Dwellers Act ನಲ್ಲಿ ಏನು ಹೇಳಿದೆ ಅದನ್ನೇ ನಾನು ಕೇಳುತ್ತಿದ್ದೇನೆ ಹೊರತು ಬೇರೆ ಏನನ್ನೂ ಕೇಳಲಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಮುಂದು. . . .)

13.06.2017/12.40/14/BR/SP

ಶ್ರೀ ಕೆ.ಜಿ.ಬೋಪಯ್ಯ: (ಮುಂದು)

ಆದರೆ ಇವರಿಗೆ ನೇರವಾಗಿ ಯಾರು ಹೇಳಬೇಕಿತ್ತು? Wildlife Board guidelines ಇವರಿಗೆ ಹೆಚ್ಚಾಯಿತೇ? National Wildlife Board ನವರು guidelines ಪ್ರಕಾರ ಅವರ ಇಷ್ಟಕ್ಕೆ ನಾಲ್ಕು ಜನ ಕುಳಿತುಕೊಂಡು ಏನು ಬೇಕಾದರೂ ಮಾಡುತ್ತಾರೆ. Can it overwrite the provisions of the Forest Dwellers Act? ಆಗುತ್ತದೆಯೇ? ಹಾಗಾದರೆ, ಪಾರ್ಲಿಮೆಂಟಿನಲ್ಲಿ pass ಮಾಡಿದ Billಗೆ ಎಲ್ಲರು ಸರ್ವಾನುಮತದಿಂದ pass ಮಾಡಿದರಲ್ಲಾ, ಅವರಿಗೇನು ಬುದ್ಧಿ ಇಲ್ಲವೇ? ಇವರೇ ನಾಲ್ಕು ಜನ Wildlife Board ನಲ್ಲಿ ಕುಳಿತುಕೊಂಡು ಪರಿಸರವಾದಿಗಳು, ವಿದೇಶಿ ಹಣದಿಂದ ಕೊಳ್ಳೆ ಹೊಡೆಯುವವರಿಗೆ ಬುದ್ಧಿ ಇದೆಯೆಂದು ಹೇಳುತ್ತೀರಾ? ಇದು ಸರಿಯಲ್ಲ. ನಾನು ಅರಣ್ಯ ಇಲಾಖೆಯದ್ದು ಮತ್ತೆ ಹೇಳುತ್ತೇನೆ. ಅದರ ಜೊತೆಗೆ. . .

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಕಡಮಕಲ್ಲು ಮತ್ತು ಕುಟಿಯಾಲಕ್ಕೆ ಸಂಬಂಧಿಸಿದಂತೆ ರಸ್ತೆ ಆಗಿ complete ಆಗುವ ಪರಿಸ್ಥಿತಿಯಲ್ಲಿದೆ. ನಿಮ್ಮ ದಕ್ಷಿಣ ಕನ್ನಡಕ್ಕೂ ಸೇರುತ್ತದೆ. Forest Act ಪ್ರಕಾರವೇ forest ಜಾಗವನ್ನು ಕೊಟ್ಟರೆ one to double revenue land ಕೊಡಬೇಕೆಂದು ಇದೆ. ಹಾಗಾಗಿ, ನಮಗೆ ಬೇಕಾಗಿರುವುದು ಕೇವಲ 6 ಎಕರೆ ಚಿಲ್ಲರೆ. ಆದರೆ, 48 ಎಕರೆ revenue land ಅನ್ನು ಕೊಟ್ಟು 4 ವರ್ಷ ಆಯಿತು. ಅದು ತಮ್ಮ officeನಲ್ಲೇ ಕೊಳೆಯುತ್ತಾ ಬಿದ್ದಿದೆ. ಅದಕ್ಕಾದರೂ permission ಕೊಡುವಂತಹ ವ್ಯವಸ್ಥೆಯನ್ನು ಮಾಡಿ. Revenue ಇಲಾಖೆಯಿಂದ 48 ಎಕರೆ ಜಮೀನನ್ನು ಕೊಟ್ಟಿದ್ದೇವೆ. ನಮಗೆ ಬೇಕಾಗಿರುವುದು ಕೇವಲ 6 ಎಕರೆ. ಆದರೂ ಸಹ, ಅದರ file clear ಆಗದೇ ನಾಲ್ಕೈದು ವರ್ಷದಿಂದ pending ಇದೆ. ದಯವಿಟ್ಟು, ತಾವು ಬೇಗ clear

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸುಮಾರು ನಾಲ್ಕು ವರ್ಷದ ಮೇಲೆ file pending ಇದೆ. ನಮಗೆ ಬೇಕಾಗಿರುವುದು ಕೇವಲ 6 ಎಕರೆ ಮಾತ್ರ.

ಶ್ರೀ ಬಿ.ರಮಾನಾಥ ರೈ: ಈಗ ನನ್ನ ಕ್ಷೇತ್ರದಲ್ಲಿ ರಸ್ತೆ ಆಗಬೇಕಾದರೆ forest diversion ಬೇಕು. ನನ್ನ ಕ್ಷೇತ್ರದ ರಸ್ತೆಗೆ ದುಡ್ಡು pass ಆಗಿದೆ. ಆ ರಸ್ತೆಯನ್ನು ಮಾಡಬೇಕಾದರೂ ಸಹ ಅರಣ್ಯ ಹಕ್ಕು ಸಂರಕ್ಷಣಾ ಕಾಯ್ದೆ ಅಡ್ಡ ಬರುತ್ತದೆ. ಅದಕ್ಕೆ ನಾವು ಕಾನೂನು ಪ್ರಕಾರ ಪಡೆಯುವುದಕ್ಕೆ ಪ್ರಯತ್ನ ಮಾಡಿ, file ನಮ್ಮ ಹತ್ತಿರ ಬರಬೇಕಾಗಿದೆ. ಬೇರೆ ಬೇರೆ ಹಂತದಲ್ಲಿ ಮಾಡಬೇಕಾಗಿದೆ. ನಮ್ಮಿಂದ ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗಿದೆ. ಕೇಂದ್ರ ಸರ್ಕಾರದ Office ಬೆಂಗಳೂರಿನಲ್ಲೇ ಇದೆ. ಬಹುಶ: ತಾವು ಅದಕ್ಕೆ ಮಾಹಿತಿ ಕೊಟ್ಟರೆ ನಮ್ಮಲ್ಲಿ ಎಲ್ಲಿ ಇದೆಯೆಂದು ತಿಳಿದುಕೊಂಡು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ: ಈಗ ಅದರ ಬಗ್ಗೆ ಸುಳ್ಯದಿಂದ ನಿಮ್ಮ ಪಕ್ಷದ್ದೇ ಒಂದು ದೊಡ್ಡ delegation . . . . Section-3(2) of Forest Conservation Act, 1980 ಪ್ರಕಾರ ಏನು format ನಲ್ಲಿ ಕೊಡಬೇಕು, ಇಪ್ಪರದು estimation, sketch ಹಾಗೂ forest ನವರ ಅಭಿಪ್ರಾಯ. ಅಲ್ಲಿಂದ ಶಿಫಾರಸ್ಸು ಮಾಡಿ ಕಳುಹಿಸಿದ್ದಾರೆ, ಅಷ್ಟನ್ನು ಕೊಡಬಹುದು. Existing road, PWD road ಎಂದು MDR ಎಂದು declare ಆಗಿದ್ದು, ಎಲ್ಲವನ್ನೂ ನಿಮಗೇ ಕೊಟ್ಟಿದೆ.

ಶ್ರೀ ಬಿ.ರಮಾನಾಥ ರೈ: ಅಪ್ಪಚ್ಚು ರಂಜನ್‌ರವರು ಹೇಳಿದ ಪ್ರಕಾರ 48 ಎಕರೆ ಎಂದರೆ, ಅದು ಕೇಂದ್ರ ಸರ್ಕಾರದ ಕಚೇರಿಗೆ ಹೋಗಬೇಕಾಗಿದೆ. ಅದು ಎಲ್ಲಿ ಇದೆಯೆಂದು ತಿಳಿದುಕೊಂಡು ನಾವು ಅದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ: ನಿಮಗೆ ಅದರ powers ಇದೆ. ಒಟ್ಟು 2.5 hectares, 6 ಎಕರೆ ಜಾಗ, 12 ಎಕರೆಯನ್ನು ನಾವು ಕೊಡಬೇಕಾಗಿತ್ತು. ಈಗಾಗಲೇ 48 ಎಕರೆಯನ್ನು ಕೊಟ್ಟಿದ್ದೇವೆ. ಸ್ವಲ್ಪ ನೋಡಿ. ಅದರ ಜೊತೆಗೆ, ಇವತ್ತು ಈ ದೇವಸ್ಥಾನಗಳದ್ದು ಇತ್ತೀಚೆಗೆ ಇನ್ನೂ ಒಂದು circular ಹೊರಡಿಸಿದ್ದಾರೆ. ರಾಜ್ಯದಲ್ಲಿರುವ ಅಧಿಸೂಚಿತ ದೇವಸ್ಥಾನಗಳನ್ನು ಹೊರತುಪಡಿಸಿ, ಉಳಿದ ಹಿಂದೂ ದೇವಾಲಯಗಳನ್ನು 53 ರಂತೆ ನೋಂದಣಿ ಮಾಡುವಂತೆ 03.08.2015ರಂದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಒಂದು circular ಅನ್ನು ಹೊರಡಿಸಿದ್ದಾರೆ. ಮುಜರಾಯಿ under ನಲ್ಲಿರುವುದು ಅದು ಬೇರೆ. ಬೇರೆ ಎಲ್ಲಾ ದೇವಸ್ಥಾನಗಳನ್ನು register ಮಾಡಬೇಕೆಂದು ಸುತ್ತೋಲೆಗಳ ಮೇಲೆ ಸುತ್ತೋಲೆಗಳನ್ನು ಇವತ್ತು ಕಳುಹಿಸುತ್ತಿದ್ದೀರಿ. ದೇವಸ್ಥಾನಗಳು ಅಂದರೆ, ಕೆಲವು particular community ದೇವಸ್ಥಾನಗಳಿವೆ, ಇಡೀ ಊರಿಗೆ ಒಂದು ದೇವಸ್ಥಾನ ಇದೆ, ಗ್ರಾಮ ದೇವತೆಗಳು ಎಂದು ಇವೆ, ಬೇರೆ, ಬೇರೆ, ಬೇರೆ, ಬೇರೆ. . . . ಹಿಂದೂ ಧರ್ಮ ಎಂದರೆ ಅನೇಕತೆಯಲ್ಲಿ ಏಕತೆ ಎಂದು. ಎಷ್ಟು ದೇವರುಗಳಿವೆ, ನಮಗೇ ಗೊತ್ತಿಲ್ಲ, ಅವೆಲ್ಲವನ್ನೂ register ಮಾಡಬೇಕೆಂದು ಹೇಳಿರುವ ಉದ್ದೇಶ ಏನು? ಏತಕ್ಕೋಸ್ಕರ ಹೇಳಿದ್ದೀರಿ? ನೋಂದಣಿ ಮಾಡುವುದಷ್ಟೇ ಅಲ್ಲ, ಅಲ್ಲಿ ಏನೇನಿದೆ, ಅದು ಹೇಗೆ ನಡೆಸುತ್ತೀರಿ, ಅದಕ್ಕೆ ಯಾರು ಮುಖ್ಯಸ್ಥರು? ಇಲ್ಲಿ pro-forma ಎಲ್ಲವನ್ನೂ ಕೊಟ್ಟಿದ್ದಾರೆ. ಅದನ್ನು ನೋಡಿದರೆ, ಯಾರಿಗೂ ಇನ್ನುಮುಂದೆ ದೇವಸ್ಥಾನಗಳು ಬೇಡವೆಂದು ಅನಿಸುತ್ತದೆ. ಮೂರು ಜನ ಸಚಿವರು ಇದ್ದಾರೆ. ಈ ಸುತ್ತೋಲೆಯ ಉದ್ದೇಶ ಏನು? ಇದರ ಹಿನ್ನೆಲೆ ಏನು? ಅದನ್ನಾದರೂ ಜಿಲ್ಲಾಧಿಕಾರಿಗಳ ಹತ್ತಿರ ಕೇಳಿದೆ, ಏಕೆ ಇದು? ಮಾಡುವ ಹಿನ್ನೆಲೆ, ಉದ್ದೇಶ ಏನೂ preamble ನಲ್ಲಿ ಇಲ್ಲ. ಈ ರೀತಿ ಒಂದು ತರಹದ ಜನ ವಿರೋಧಿ ಅಭಿಪ್ರಾಯ ಈ ಆಡಳಿತದಲ್ಲಿ ಬರುತ್ತಿದೆ ಎಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ದೇವರೆಂದರೆ, **ಒಂದು ಕಡೆ *(xxxxxxxx) ಎಂದು ಹೇಳಿದ್ದನ್ನು TVಯಲ್ಲಿ ಕೇಳಿದೆ.** ಹಿಂದೂ ಎಂದು ಹೇಳುವಷ್ಟಾದರೂ ಬಂದಿದೆಯಲ್ಲಾ ಅದಕ್ಕೆ ಸಂತೋಷ ಪಡಬೇಕು. ಆದರೆ, ಇಲ್ಲಿ ಕೃತಿಯಲ್ಲಿ ಮಾಡುವಂಥದ್ದು ಏನು? ಒಂದೊಂದು ಕುಟುಂಬಕ್ಕೂ ದೇವಸ್ಥಾನ ಇದೆ. ಇಡೀ ಊರಿನವರು ಸೇರಿಕೊಂಡು ಜಾತ್ರೆ ಮಾಡುತ್ತಾರೆ. ಪ್ರತಿ ಕುಟುಂಬಗಳಲ್ಲೂ ದೇವಸ್ಥಾನಗಳಿವೆ.

ಶ್ರೀ ಬಿ.ರಮಾನಾಥ ರೈ: ನಾವೇನು ಹಿಂದೂ ಅಲ್ಲವೆಂದು ಹೇಳಿದರಾ. ತಾವು ಏನು ಹೇಳುತ್ತಿದ್ದೀರಿ? ಮುಖ್ಯ ಮಂತ್ರಿಗಳು ನಾವು ಹಿಂದು ಎಂದು ಹೇಳಿದರೆ ಏನು ಅರ್ಥ? ಹಿಂದುಗಳು ನೀವೇ ಎಂದು ಹೇಳುವುದಕ್ಕೆ ನಾವು ಗುತ್ತಿಗೆಗೆ ಕೊಟ್ಟಿಲ್ಲ. ನಾವು ಸಹಾ ಹಿಂದೂಗಳೆ.

ಶ್ರೀ ಕೆ.ಜಿ.ಬೋಪಯ್ಯ: ಹೇಳಲಿಲ್ಲ, ನಾನು ಸಂತೋಷಪಡುತ್ತಿದ್ದೇನೆ.

ಶ್ರೀ ಬಿ.ರಮಾನಾಥ ರೈ: ನಾವು ಎಲ್ಲ rituals ಅನ್ನು ಮಾಡುತ್ತೇವೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ.ಬೋಪಯ್ಯ: ನೀವು ಯಾವತ್ತೂ ಹೇಳಿರಲಿಲ್ಲ, ಈಗ ಹೇಳುತ್ತಿದ್ದೀರಿ, ಇನ್ನೂ ನಾಲ್ಕು ಸಲ ಹೇಳಿ, ನಿಮಗೆ ಅಭಿನಂದನೆ. (ಗೊಂದಲ)

ಶ್ರೀ ಬಿ.ರಮಾನಾಥ ರೈ: ನೀವು ಏನು ಮಾಡುತ್ತೀರಿ ಎಂದರೆ, ಇನ್ನೊಂದು ಧರ್ಮವನ್ನು ದ್ವೇಷ ಮಾಡುತ್ತೀರಿ. ನಾವು ಅದನ್ನು ಒಪ್ಪುವುದಿಲ್ಲ. ನಮ್ಮ ಧರ್ಮವನ್ನು ನಾವು ಸಾಕಷ್ಟು ಪ್ರೀತಿ ಮಾಡುತ್ತೇವೆ. ನಾವು ಇನ್ನೊಂದು ಧರ್ಮವನ್ನು ದ್ವೇಷ ಮಾಡುವುದಿಲ್ಲ. ಇನ್ನೊಂದು ಧರ್ಮವನ್ನು ದ್ವೇಷ ಮಾಡಿದಾಗ ಅದು ಕೋಮುವಾದ ಆಗುತ್ತದೆ.

(ಗೊಂದಲ)

***(xxxxxxxx) ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಸದರಿ ಪದಗಳನ್ನು ಕಡತದಿಂದ ತೆಗೆಯಲಾಗಿದೆ.**

ಶ್ರೀ ಕೆ.ಜಿ.ಬೋಪಯ್ಯ: ಈಗ ಆ ವಿಚಾರ ಬೇಡ.

(ಗೊಂದಲ)

ಉಪಾಧ್ಯಕ್ಷರು: ಈಗ ಆ ವಿಚಾರ ಬೇಡ, ಬೇರೆ ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಾವು ಇನ್ನೊಂದು ಧರ್ಮವನ್ನು ದ್ವೇಷ ಮಾಡುವುದಿಲ್ಲ. ಇನ್ನೊಂದು ಧರ್ಮವನ್ನು ದ್ವೇಷ ಮಾಡಿದಾಗ ಅದು ಕೋಮುವಾದ ಆಗುತ್ತದೆ. ನಮ್ಮ ಧರ್ಮವನ್ನು ನಾವು ಪ್ರೀತಿ ಮಾಡುತ್ತೇವೆ. ಇನ್ನೊಂದು ಧರ್ಮವನ್ನು ದ್ವೇಷ ಮಾಡಬೇಕೆಂದು ಎಲ್ಲಿ ಹೇಳುತ್ತಿಲ್ಲವಲ್ಲಾ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಉಪಾಧ್ಯಕ್ಷರೆ, ಸಚಿವರು ಮಾತನಾಡುವುದು ಮಾತನಾಡಲಿ.

(ಗೊಂದಲ)

ಉಪಾಧ್ಯಕ್ಷರು: ಬೇಡ, ಬೇಡ ಈಗ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಉಪಾಧ್ಯಕ್ಷರೆ, ಇವೆಲ್ಲ ಅಪಾಯಕಾರಿ ಮಾತುಗಳು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಗೊಂದಲ)

ಉಪಾಧ್ಯಕ್ಷರು: ವಿಷಯಾಂತರ ಆಗುತ್ತದೆ. ಬೇಡಿಕೆಗಳ ಮೇಲೆ ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಸನಾತನ ಹಿಂದೂ ಧರ್ಮ, ಸರ್ವೇ ಜನ ಸುಖಿನೋ ಭವಂತು ಎಂದು ಹೇಳುತ್ತೀರಿ, ಆದರೆ, ನೀವು ಆಚರಣೆಯಲ್ಲಿ ಮಾಡುತ್ತೀರ? ವಸುದೈವ ಕುಟುಂಬ ಎಂದು ಹೇಳುತ್ತೀರಿ, ನೀವು ಅದನ್ನು ಆಚರಣೆಯಲ್ಲಿ ಮಾಡುತ್ತೀರ? ಇದು ಭಾಷಣಕ್ಕೆ ಸೀಮಿತವಾಗಿದೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಈಗ ಅದರ ಬಗ್ಗೆ separate ಚರ್ಚೆ ಮಾಡೋಣ. ನೀವು ಏಕೆ ಆ ಕುಟುಂಬಕ್ಕೆ ಹೋಗುತ್ತೀರಿ. ಮೊದಲು ನಿಮ್ಮ ಕುಟುಂಬಗಳನ್ನು ನೋಡಿ.

(ಗೊಂದಲ)

ಉಪಾಧ್ಯಕ್ಷರು: ಬೋಪಯ್ಯನವರೆ, ಅದರ ಬಗ್ಗೆ ಈಗ ಬೇಡ, diversion ಆಗುತ್ತದೆ, ಮಾತನಾಡಿ.

ಶ್ರೀ ಜಿ.ಎಸ್.ಪಾಟೀಲ್: ಉಪಾಧ್ಯಕ್ಷರೆ, ಬೋಪಯ್ಯನವರು ಮುಖ್ಯಮಂತ್ರಿಗಳ ಸಲುವಾಗಿ, ಹಿಂದೂಗಳ ಬಗ್ಗೆ ಮಾತನಾಡಿದ್ದನ್ನು ಕಡತದಿಂದ ತೆಗೆದು ಹಾಕಿಸಿ.

(ಗೊಂದಲ)

**ಶ್ರೀ ಎಸ್.ಎನ್.ನಾರಾಯಣಸ್ವಾಮಿ: ಉಪಾಧ್ಯಕ್ಷರೆ, ಬೋಪಯ್ಯನವರು *(xxxxxxxx) ಎಂದು ಹೇಳಿರುವುದನ್ನು ದಯಮಾಡಿ ಕಡತದಿಂದ ತೆಗೆಯಬೇಕು.**

(ಗೊಂದಲ)

**ಉಪಾಧ್ಯಕ್ಷರು: ಆಯಿತು, ತೆಗೆಸುತ್ತೇನೆ. ಅದನ್ನು ಕಡತದಿಂದ ತೆಗೆಯಿರಿ.**

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಾವು ಇನ್ನೊಂದು ಧರ್ಮವನ್ನು ದ್ವೇಷ ಮಾಡುವವರಲ್ಲ, ಯಾರು ಮನುಷ್ಯರನ್ನು ದ್ವೇಷ ಮಾಡುತ್ತಾರೆ ಅವರು ದೇವರನ್ನು ಪ್ರೀತಿ ಮಾಡುವುದಿಲ್ಲ. ಯಾವುದೇ ಒಬ್ಬ ಮನುಷ್ಯನನ್ನು ಯಾರು ದ್ವೇಷ ಮಾಡುತ್ತಾನೆ, ಅವರು ದೇವರನ್ನು ಪ್ರೀತಿ ಮಾಡುವುದಿಲ್ಲ. ಮನುಷ್ಯ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಯಾವ ಜಾತಿ, ಧರ್ಮ, ಭಾಷೆ ಹೆಸರಿನಲ್ಲಿ ಮನುಷ್ಯನನ್ನು ಯಾರು ದ್ವೇಷ ಮಾಡುತ್ತಾರೆ, ಅವರು ದೇವರನ್ನು ಸಹ ಪ್ರೀತಿ ಮಾಡುವುದಿಲ್ಲ. ಅದನ್ನು ನಾನು ಖಂಡಿತವಾಗಿ ಹೇಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ನಿಮ್ಮ ಪ್ರಕಾರ ಹಾಗೆಯೇ. ನಮ್ಮ ಪ್ರಕಾರ ಹೀಗೆಯೇ, ಚರ್ಚೆ ಮಾಡೋಣ. ಹಾಗಾಗಿ, ದೇವಸ್ಥಾನದ existing, ಅಲ್ಲಿ ಅವರ ಹತ್ತಿರ ಎಷ್ಟು ದುಡ್ಡಿದೆ? ಬ್ಯಾಂಕ್ ಖಾತೆ, ಚಿನ್ನಾಭರಣ, ಎಲ್ಲದರ ಮಾಹಿತಿಯೂ ಇವರಿಗೆ ಕೊಡಬೇಕೆಂದು ಕೇಳಿದ್ದಾರೆ. ಆದರೆ, ಇದೇನೆಂದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿಯ ಸುತ್ತೋಲೆಗಳನ್ನು ಹೊರಡಿಸಿರುವುದು ನಾನು ಹೇಳುವ ಪ್ರಕಾರ ನಮಗೆ ಸಂವಿಧಾನಬದ್ಧವಾಗಿ ಈ ಸುತ್ತೋಲೆ Right to Worshipಗೆ ವಿರೋಧವಾಗಿದೆಯೆಂದು ಹೇಳುತ್ತೇನೆ. ಈ ಸುತ್ತೋಲೆಯನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ, ಇವತ್ತು ಬಹಳ ಮುಖ್ಯವಾಗಿ ಕಂದಾಯ

***(xxxxxxxx) ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಸದರಿ ಪದಗಳನ್ನು ಕಡತದಿಂದ ತೆಗೆಯಲಾಗಿದೆ.**

ಇಲಾಖೆಯಲ್ಲಿ ಇರುವಂಥ C & E land ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ, ನಮ್ಮ ಬೇಡಿಕೆ ಇದೆ. ನೀವು ಇತ್ತೀಚೆಗೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದೀರಿ. 'ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ 1990ರಲ್ಲಿ ವಾಪಸ್ಸು ಪಡೆಯಲಾದ 'ಸಿ ಮತ್ತು ಡಿ' ವರ್ಗದ ವರ್ಗೀಕೃತ ಜಮೀನುಗಳ ವಿವರಗಳನ್ನು ಕಂದಾಯ ದಾಖಲೆಗಳಲ್ಲಿ ನಮೂದು ಮಾಡಿರುವುದನ್ನು ಖಾತರಿ ಪಡಿಸಿಕೊಂಡು, ಅಂಥ ಜಮೀನುಗಳ ಪೈಕಿ ದಿನಾಂಕ 14.04.1990 ಕ್ಕೂ ಪೂರ್ವದಲ್ಲಿ ಅನಧಿಕೃತವಾಗಿ ಒತ್ತು ಮಾಡಿಕೊಂಡಿರುವ ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಅದರಡಿ ರಚಿಸಲಾದ ನಿಯಮದಡಿ ಸಕ್ರಮಗೊಳಿಸುವ ಬಗ್ಗೆ' 50-53 ಬಗ್ಗೆ ಹೇಳಿದೆ.

(ಮು.ವ)

13-06-2017/12-50/15/HRV/SSD

ಶ್ರೀ ಕೆ.ಜಿ. ಬೋಪಯ್ಯ ( ಮುಂ.ವ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರ್ಕಾರದ ಸುತ್ತೋಲೆ 106 ಎಲ್‌ಪಿಜಿ/1988, ಎಂದು ಎರಡು ಸುತ್ತೋಲೆಗಳನ್ನು ತಾವು ಹೇಳಿದ್ದೀರಿ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆ ಎಂದು ಇದನ್ನು ಹೇಳಿ C & D class lands that were transferred to Forest Department over number of years have now been ordered to be re-transferred to Revenue Department vide GO cited above. The Government has taken decision after holding a series of discussion and it is the conscious decision of the Cabinet that C & D class lands that have not been notified as Reserve Forest should be re-transferred to Revenue Department with effect from 03.01.1991. From the date of issue of the Government Order cited above all such C & D class land stand resumed to the Revenue Department. The relevant village revenue records obviously take some time to correct accordingly. ಮೇಲಿನಂತೆ ಕಂದಾಯ ಇಲಾಖೆಯಲ್ಲಿ ಸುತ್ತೋಲೆಯ ಪ್ರಕಾರ ಇಂಡೀಕರಣ ಮಾಡಬೇಕಾಗಿತ್ತು. ಅದರ ಉದ್ದೇಶ 106/88, 3-01-1991 ಆಗಿತ್ತಿಸಿದೆ, ಇನ್ನು ಇಂಡೀಕರಣ ಆಗದೇ ಇರುವುದರಿಂದ ಸರ್ಕಾರಿ ಆದೇಶ ಸಂಖ್ಯೆ 03-01-1991 ಕ್ಕೆ ಹಿಂದಕ್ಕೆ ಪಡೆಯಲಾದ ಜಮೀನುಗಳನ್ನು, ಇಂಡೀಕರಣಕ್ಕೆ ಬಾಕಿಯಿರುವ ಪ್ರಕರಣಗಳನ್ನು ಕೂಡಲೇ ದಾಖಲೆಗಳಲ್ಲಿ ನಿಯಮಾನುಸಾರ ತಿದ್ದುಪಡಿ ಮಾಡಿ ಇಂಡೀಕರಣ ಮಾಡಲು ಸೂಚಿಸಿದೆ. ಕಂಡಿಕೆ 4 ರಲ್ಲಿ ಹೇಳಿರುವಂತೆ ದಿನಾಂಕ 14-04-1990 ಕ್ಕಿಂತ ಮುಂಚೆ ಒತ್ತುವರಿಯಾಗಿ ರುವ ಜಮೀನುಗಳ ವಿಸ್ತೀರ್ಣವನ್ನು ಕರ್ನಾಟಕ ಭೂ ಕಂದಾಯ ಕಾಯಿದೆ 1964 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳನ್ವಯ ಸಕ್ರಮಗೊಳಿಸಲು ಅಂದರೆ ಬಾಕಿ ಇರುವ 50 ರ ಅರ್ಜಿಗಳನ್ನು ವಿಲೇ ಮಾಡಲು ಹಾಗೂ ಅರಣ್ಯ ಇಲಾಖೆಯಿಂದ ವಾಪಸ್ ಪಡೆದ C & D ವರ್ಗೀಕೃತ ಜಮೀನುಗಳಲ್ಲಿ ಒತ್ತುವರಿಯಿಂದ ಮುಕ್ತವಾಗಿರುವ ಜಮೀನಿನ ವಿಸ್ತೀರ್ಣವನ್ನು ಕಂದಾಯ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಲಾಖೆಯಲ್ಲಿಟ್ಟುಕೊಂಡು ಭೂ ಲಭ್ಯತೆ ಕುರಿತು ಕರ್ನಾಟಕ ಮಂಜೂರಾತಿ ನಿಯಮ 69 ರಡಿಯಲ್ಲಿ ಸರ್ಕಾರದ ಸಾರ್ವಜನಿಕ ಉದ್ದೇಶಗಳಿಗೆ ಎಂದು ತಾವು ಹೇಳಿದ್ದೀರಿ. ಆದರೆ ತಾವೇನು 1991ರ ಸುತ್ತೋಲೆಯನ್ನು ಇಲ್ಲಿ quote ಮಾಡಿದ್ದೀರೋ ಅಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿತ್ತು, ಇದನ್ನು ಯಾವುದೇ ಕಾರಣಕ್ಕೆ ಅರಣ್ಯ ಇಲಾಖೆಯದ್ದು ಎಂದು notify ಮಾಡಬಾರದು ಮತ್ತು ಅರಣ್ಯ ಇಲಾಖೆಗೆ ಅದನ್ನು transfer ಮಾಡಬಾರದು ಎಂದು ಹೇಳಿದ್ದಿರಿ. ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. ಇವರು ಹೇಗೆ ಇನ್ನೂ ಮಾಡುತ್ತಲೇ ಇದ್ದಾರೆ ಎಂದು ಹೇಳುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಭಾಗಮಂಡಲ ಹೋಬಳಿಯಲ್ಲಿ ಕಣ್ಣಿಮಾಣಿ ಎನ್ನುವ ಒಂದು ಗ್ರಾಮವಿದೆ, ಆ ಗ್ರಾಮದಲ್ಲಿ ಸರ್ವೆ ನಂಬರ್ 10/1, ಈ ಸರ್ವೆ ನಂಬರ್ ಮೂಲತ: ಪೈಸಾರಿ, ಅದನ್ನು C & D ಎಂದು classify ಮಾಡಿಟ್ಟಿದ್ದರು. ಆದರೆ ಈ ಒಂದು ಜಮೀನನ್ನು, ಆಗ transfer ಮಾಡಬಾರದು ಎಂದು ಆದೇಶವಿದ್ದರೂ ಕೂಡ ಈ ಕೊಡಗು ಜಿಲ್ಲಾಧಿಕಾರಿಗಳು ಏನು ಮಾಡುತ್ತಾರೆಂದರೆ, ಹಕ್ಕುಗಳು ಎಂದು ಹೇಳಿ ಇಲ್ಲೊಂದು ಷರಾ ಬರೆಯುತ್ತಾರೆ. ಷರಾ ಹೇಗೆ ಬರೆಯುತ್ತಾರೆಂದರೆ, ಕೊಡಗು ಜಿಲ್ಲಾಧಿಕಾರಿಯವರ ಆದೇಶ, ಸಂಖ್ಯೆ ಜಾಗ 1, 150/2006, ದಿನಾಂಕ 05-04-2007 ರ ಮೇರೆಗೆ ಜಮೀನನ್ನು land bank ಗೆ ಹಸ್ತಾಂತರಿಸಲಾಗಿದೆ ಎಂದು ಹೇಳಿದ್ದಾರೆ. 1991 ರಲ್ಲಿ ಆದೇಶ, ಇವರು 2007 ರಲ್ಲಿ land bank ಗೆ ಹಸ್ತಾಂತರಿಸಲಾಗಿದೆಯೆಂದು R.T.C. ಯಲ್ಲಿ ಆದೇಶವನ್ನು ಜಿಲ್ಲಾಧಿಕಾರಿಯವರು ಮಾಡುತ್ತಾರೆ. ಈ ಜಿಲ್ಲಾಧಿಕಾರಿಗೆ ಯಾರು ಈ ರೀತಿಯ ಅಧಿಕಾರವನ್ನು ಕೊಟ್ಟದ್ದು, ಹೀಗೆ 106 ರ ಸಂಖ್ಯೆಯಲ್ಲಿ ಮಾಡಿರುವ ಆದೇಶವೇನಿದೆ ಅದರ ಸ್ಪಷ್ಟ ಉಲ್ಲಂಘನೆ ದಿನನಿತ್ಯ ಆಗುತ್ತಿದೆ. ಹೀಗಾದರೆ ಈ C & D land ಅನ್ನು ಹೇಗೆ ಕೊಡುವುದು, 50, 53 ರಲ್ಲಿ ತಾವು ಇದರ ಬಗ್ಗೆ ಮೀಟಿಂಗ್ ಮೇಲೆ ಮೀಟಿಂಗ್ ಮಾಡಿ ತಾವು ತಮ್ಮ ಕಳಕಳಿಯನ್ನು ತೋರಿಸಿರುವುದು ನಿಜವಾಗಿಯೂ ನನಗೆ ಅರ್ಥ ವಾಗುತ್ತದೆ. ಅದಕ್ಕೆ ಒಂದಿಷ್ಟು ಚಾಲನೆಯನ್ನು ಕೊಡುವಂಥ ಕೆಲಸವನ್ನು ತಾವು ಕಳಕಳಿಯಿಂದ ಮಾಡಿದಿರಿ. ಎಲ್ಲಾ ಜಿಲ್ಲೆಗಳಲ್ಲಿಯೂ ಇದರ ಬಗ್ಗೆ ತಾಕೀತು ಮಾಡಿದಿರಿ. ಈ ರೀತಿ ರೆಕಾರ್ಡ್‌ಗಳಿದ್ದರೆ ಹೇಗೆ ಮಾಡುವಂಥದ್ದು ಹೇಳಿ. ಇದರ ಜೊತೆಗೆ 50 ಮತ್ತು 53 ರ ಬಗ್ಗೆ ಕೂಡ ಹೇಳಿದ್ದೀರಿ. ಆದರೆ ಈ 94 ಸಿ ಯದ್ದನ್ನು ಏನು ಮಾಡೋಣ? 94 ಸಿ ಯೂ ಕೂಡ C & D land ನಲ್ಲಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಹಳಷ್ಟು ಜನರು ಕುಳಿತಿದ್ದಾರೆ, ಸರ್ಕಾರಿ ಆದೇಶದ ಪ್ರಕಾರ 12-12-2012 ಕ್ಕಿಂತ ಮೊದಲು ಯಾರು ಸರ್ಕಾರಿ ಜಮೀನಿನಲ್ಲಿ ಕುಳಿತಿದ್ದಾರೋ ಅವರಿಗೆಲ್ಲರಿಗೂ 94 C ಪ್ರಕಾರ ಹಕ್ಕುಪತ್ರವನ್ನು ಕೊಡಬೇಕೆಂದು ಆಗಿದೆ. ಈ ರೀತಿ ಸುತ್ತೋಲೆಗಳಿದ್ದರೆ ನಾವು ಹೇಗೆ ಕೊಡುವುದಕ್ಕೆ ಆಗುತ್ತದೆ ಅಥವಾ dispose ಹೇಗೆ ಮಾಡುವುದಕ್ಕೆ ಆಗುತ್ತದೆ? ಅಲ್ಲಿ ಈ 94 c ಮಂಜೂರಾತಿ ಮಾಡುವುದರಲ್ಲಿ ಯಾವುದೇ ಜನ ಪ್ರತಿನಿಧಿಗಳು ಇರುವುದಿಲ್ಲ, ಅಧಿಕಾರಿಗಳೇ ಇರುತ್ತಾರೆ. Already ಇವರು reject ಮಾಡುವುದಕ್ಕೆ ಹೊರಟಿದ್ದಾರೆ. C & D land, ನಿನ್ನನ್ನು ಖಾಲಿ ಮಾಡಿಸುತ್ತೇವೆ ಎನ್ನುವಂಥ ಮಾತನ್ನು ಆ ಜನರಿಗೆ orally ಹೇಳಿದ್ದಾರೆ, ಇನ್ನು written ಆದೇಶವಾಗಬೇಕು. ಇದಕ್ಕೆ ನೀವು ಏನನ್ನಾದರೂ ಮಾಡದೇ ಹೋದರೆ, ಇದರ ಬಗ್ಗೆ ನನ್ನ ಸ್ಪಷ್ಟವಾದಂಥ ವಿನಂತಿಯೇನೆಂದರೆ, ಇವತ್ತು ಒಂದಿಷ್ಟು ಜಮೀನನ್ನು ಅರಣ್ಯ ಇಲಾಖೆಗೆ land bank ಮಾಡಿ ಎಂದು ಹೇಳಿ ದಿನಾಂಕ 07-06-1993 ರಲ್ಲಿ ಒಂದು ಲಕ್ಷದಷ್ಟು ಹೆಕ್ಟೇರ್ ಜಮೀನನ್ನು ಇಡೀ ರಾಜ್ಯದಲ್ಲಿ ಕೊಟ್ಟಿದೆ, ಅದರಲ್ಲಿ ಆ ಕಂಡೀಷನ್‌ಗಳೇನಿದೆ ಆ ಕಂಡೀಷನ್ ಪ್ರಕಾರವೇ retain ಆಗಬೇಕು ಮತ್ತು ಅದನ್ನು ಉಲ್ಲಂಘನೆ ಮಾಡಿ ಬೇರೆ ಬೇರೆ ವರ್ಷಗಳಲ್ಲಿ, ಈಗ ನಾನು 2007 ರದ್ದನ್ನು ಒಂದು ಉದಾಹರಣೆಯಾಗಿ ಹೇಳಿದೆ, ಅಲ್ಲಿ land bank ಗೆ ವರ್ಗಾಯಿಸಲಾಗಿದೆ ಎಂದು ಡಿ.ಸಿ.ಯವರು ಬರೆದುಬಿಟ್ಟರು. ಅಲ್ಲಿ ಈ ಹಿಂದೆ ಮಂಜೂರಾತಿಯಾಗಿದ್ದು ಇದೆ, 744 ಎಕರೆಯಲ್ಲಿ, ಈಗಲ್ಲ 2004 ಕ್ಕೆ ಮೊದಲೇ ಒಂದು ಹತ್ತರಿಂದ ಇಪ್ಪತ್ತು ಜನರಿಗೆ, ಎಸ್.ಟಿ. ಜನಾಂಗದವರಿಗೂ ಮಂಜೂರಾತಿಯಾಗಿದೆ, ಹೀಗಿರುವಾಗ ಇವರು ಪೂರ್ತಿ ಇದನ್ನು ವರ್ಗಾಯಿಸಲಾಗಿದೆ ಎಂದು ಕೊಟ್ಟುಬಿಟ್ಟರೆ ಅವರ ಗತಿಯೇನು? ಅವರಿಗೆ ಮೊದಲೇ National Bank ನವರು ಸಾಲವನ್ನು ಕೊಡುವುದಿಲ್ಲ, conversion ಮಾಡುವುದಿಲ್ಲ. ಇನ್ನು ಈ ರೀತಿಯಿದ್ದರೆ ಹೇಗೆ ಹೇಳಿ. ಅದಕ್ಕಾಗಿಯೇ ನಾನು ಸ್ಪಷ್ಟವಾಗಿ ಹೇಳುತ್ತೇನೆ, C & D land ಏನಿದೆ ಇದಕ್ಕೆ ತಾವು ತಮ್ಮ ಆದೇಶದಲ್ಲಿ ಏನು ಹೇಳಿದ್ದೀರೋ ಅದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಕಾನೂನು ಬಾಹಿರವಾಗಿ ಏನು ವರ್ಗಾವಣೆಯನ್ನು ಮಾಡಿದೆ, ಆದೇಶದಲ್ಲಿ ಸ್ಪಷ್ಟವಾಗಿದೆ ಅದು C & D land ಜಮೀನಾಗಿಯೇ ಉಳಿಸಿಕೊಳ್ಳಬೇಕು, ಯಾವುದೇ ಕಾರಣಕ್ಕೆ ಅದನ್ನು ಅರಣ್ಯ ಎಂದು ಘೋಷಣೆ ಮಾಡಬಾರದು,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

consider ಮಾಡಬಾರದು ಎಂದು ಆದೇಶದಲ್ಲಿ ಸ್ಪಷ್ಟವಾಗಿದೆ. ಅದನ್ನು ಉಲ್ಲಂಘನೆ ಮಾಡಿಕೊಂಡು 2007 ರಲ್ಲಿ. . .

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-ಬೋಪಯ್ಯನವರೆ, ಈಗೇನು ಆದೇಶವನ್ನು ಹೊರಡಿಸಿದ್ದೇವಲ್ಲ, 1991 ರಲ್ಲಿ ಹೊರಡಿಸಿರತಕ್ಕಂಥ ಆದೇಶದ ಪ್ರಕಾರ ಅವನ್ನೆಲ್ಲವನ್ನು ವಾಪಸ್ ಪಡೆಯಬೇಕು ಮತ್ತು ಅವನ್ನು ಕಂದಾಯ ಜಮೀನು ಎಂದು ದಾಖಲೆಯಲ್ಲಿ ನಮೂದಿಸಬೇಕೆಂದು ಹೇಳಿದ್ದೇವೆ. ಅದರ ಪ್ರತಿಯನ್ನು ಕೂಡ ನಿಮಗೆ ಕೊಟ್ಟಿದ್ದೇವೆ. 1991 ಕ್ಕಿಂತ ಮುಂಚಿತವಾಗಿ ಏನಾದರೂ forest ನವರು notification ಮಾಡಿದ್ದರೆ ಅವನ್ನು ಕೈಬಿಟ್ಟು ಉಳಿದವುಗಳನ್ನು ಮಾಡಿ ಎಂದು ಹೇಳಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:-ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಕೇಳುವಂಥದ್ದೇನೆಂದರೆ, ಏನು ನಾವು ಈಗ ವರ್ಗಾವಣೆಯನ್ನು ಮಾಡಿದ್ದೇವೋ, ಈಗ ತಾವು ಸರ್ಕಾರಿ ಆದೇಶ ಸಂಖ್ಯೆಯಲ್ಲಿರುವುದನ್ನು ಹೇಳಿರುವುದು ಸರಿಯಿದೆ, ಮೇಲೆ ಓದಲಾದ ಆದೇಶದಲ್ಲಿ 2.58 ಲಕ್ಷ ಹೆಕ್ಟೇರ್ C & D ವರ್ಗದ ಜಮೀನುಗಳನ್ನು ಈ ಕೆಳಕಂಡ ಷರತ್ತುಗಳ ಮೇರೆಗೆ ಅರಣ್ಯ ಇಲಾಖೆಗೆ land bank ನಿರ್ಮಿಸುವ ಸಲುವಾಗಿ ಆದೇಶ ನೀಡಲು ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರಕ್ಕೆ ಜಮೀನು ಅವಶ್ಯವಿದ್ದಲ್ಲಿ ಕಂದಾಯ ಇಲಾಖೆಗೆ ಈಗ land bank ನಿಂದ ಜಮೀನನ್ನು ವಾಪಸ್ ತೆಗೆದುಕೊಳ್ಳಬಹುದಾಗಿದೆ. ವರ್ಗಾವಣೆಯಾದ ಜಮೀನುಗಳನ್ನು C & D ವರ್ಗದ ಜಮೀನುಗಳಾಗಿ ಮುಂದುವರಿಸಬೇಕಾಗಿದ್ದು, ಇದನ್ನು ಅರಣ್ಯ ಕಾಯಿದೆಯಡಿ ಕಾಯ್ದಿರಿಸಿದ ಅರಣ್ಯ ಎಂಬುದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು ಎಂದು ಇದೆ. ಅವರಿಗೆ land bank ಮಾಡುವುದಕ್ಕೆ ಕೊಡುವಾಗ ಈ ರೀತಿಯಿದೆ. ಈ ಜಮೀನುಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ನಿರ್ದಿಷ್ಟವಾಗಿ ಹೊರಡಿಸುವ ಬಗ್ಗೆ ತಾಲ್ಲೂಕು, ಗ್ರಾಮ, ಸರ್ವೆ ಮತ್ತು ವಿಸ್ತೀರ್ಣದ ವಿವರಣೆಯನ್ನು ನೀಡಬೇಕಾಗುತ್ತದೆ. ಯಾವತ್ತೂ opinion ಕೇಳುವುದಿಲ್ಲ, ಇಷ್ಟು clear ಆಗಿದ್ದ ಮೇಲೆ ಅವರು ಹೇಗೆ notification ಮಾಡಿಕೊಳ್ಳುವುದು, C & D land ಬಗ್ಗೆ notification ಮಾಡುವುದಕ್ಕೆ ಬರುವುದಿಲ್ಲ. ನೀವು land bank ಮಾಡಿ ಅಲ್ಲಿ ಮರ ನೆಡಿ ಎಂದು ಮಾತ್ರ ಕೊಟ್ಟಿದ್ದು. ಮೀಸಲು ಅರಣ್ಯವೆಂದು ಮಾಡಬಾರದು ಎಂದು ಇದ್ದ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮೇಲೂ ಕೂಡ once land is transferred to or handed over to Forest Department, it is deemed as forest ಎಂದು ಯಾವುದೋ supreme court judgment ಇದೆ ಎಂದರೆ, ಇದು ಯಾವ ಕಾನೂನು? ಆ judgment copy ಕೊಡಿ ಎಂದರೆ ಕೊಡುವುದಿಲ್ಲ. ಅದನ್ನು ಅವರು ಕೊಡುವುದಿಲ್ಲ. ಒಟ್ಟಾರೆ ಮಾತೆತ್ತಿದರೆ Wildlife Act ಎಂದು ಹೇಳುವುದು.

(ಮುಂದು)

D 13.06.2017/1.00/16/HBU-SSD

ಶ್ರೀ ಕೆ.ಜಿ. ಬೋಪಯ್ಯ(ಮುಂದು) : ಮಾನ್ಯ ಉಪಾಧ್ಯಕ್ಷರೆ, ಒಟ್ಟಾರೆ ಮಾತೆತ್ತಿದರೆ Wild Life Act, Forest Conservation Act 1980, Central Wild Life Board ಎಂದು ಹೇಳುವುದು. ಇವರಿಗೆ State Wild Life Board ಲೆಕ್ಕಕ್ಕೇ ಇಲ್ಲ. They are governed by the Central Government. ಈ ರೀತಿ ಆದೇಶಗಳನ್ನು ಮಾಡುತ್ತಾ, ಒಂದು ರೀತಿಯಲ್ಲಿ ಮಲೆನಾಡಿನ ಭಾಗದ ಜನ ಯಾರಿದ್ದೇವೆ, ನಮಗೆ ಪ್ರತಿಯೊಂದಕ್ಕೂ ಕಿರುಕುಳ ಕೊಡುವಂಥ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ನಾನು ಅರಣ್ಯದ ಬಗ್ಗೆ ಮಾತನಾಡಿ ಮುಗಿಸುತ್ತೇನೆ. ಇದನ್ನು ತಪ್ಪಿಸುವುದಕ್ಕೆ ತಾವು ಸಮರ್ಥರಿದ್ದೀರಿ, ಇದನ್ನು ತಾವು ಎಲ್ಲಾ ಕಡೆ ಹೇಳುವುದನ್ನು ನಾನು ಕೇಳಿದ್ದೇನೆ. ಆದರೆ ನಿಮ್ಮ ಮಾತಿಗೂ ಅವರು ಕಿಮ್ಮತ್ತು ಕೊಡುತ್ತಿಲ್ಲ. ಇದಕ್ಕೆ ಏನು ಮಾಡಬೇಕು? ಅಲ್ಲಿ ಏನೂ ಮಾಡಬೇಕಾಗಿಲ್ಲ, ಎಲ್ಲಾ ಟ್ರಾನ್ಸ್‌ಫರ್ ಮಾಡಿದ್ದಾರೆ, clear cut ಆಗಿ ವಾಪಸ್ಸು ತೆಗೆದುಕೊಳ್ಳಿ. 2.58 ಲಕ್ಷ ಹೆಕ್ಟೇರ್‌ಗಳನ್ನು ಟ್ರಾನ್ಸ್‌ಫರ್ ಮಾಡಿದ್ದೆ, ಅದಕ್ಕೆ ಸಂಬಂಧಪಟ್ಟಂತೆ ದಿನಾಂಕ 07.09.1993 ರ ಸುತ್ತೋಲೆ ಇದೆ, ಅದನ್ನು ತಮಗೆ ಹಿಂದೆಯೂ ಕೊಟ್ಟಿದ್ದೇನೆ. ಇದರ ಪ್ರಕಾರ ವಾಪಸ್ಸು ಮಾಡಿ, let it be C & D class revenue land. ಇವತ್ತು ಕಾಡು ಉಳಿಸುವ ದೃಷ್ಟಿಯಿಂದ, ಅವರು ಎಲ್ಲೆಲ್ಲಿ ಮರ ನೆಟ್ಟಿದ್ದಾರೆ, ಅದನ್ನು ಸೆಪರೇಟ್ ಸರ್ವೆ ಮಾಡಿ ತೆಗೆದುಕೊಳ್ಳಲಿ, ನಾವೇನು ಬೇಡವೆಂದು ಹೇಳುವುದಿಲ್ಲ. ಒಂದಿಷ್ಟು ಮರಗಳು ಬೇಕು. ಅವರು ನೆಟ್ಟ ಮರಗಳು ಏನೆಂದು ನಮಗೆಲ್ಲ ಗೊತ್ತಿದೆ. ಅವರು ಅಕೇಷಿಯಾ ಮತ್ತು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀಲಗಿರಿ ಮರಗಳನ್ನು ನೆಟ್ಟು ಇಡೀ ಊರನ್ನೆ ಹಾಳು ಮಾಡಿದ್ದಾರೆ. ಅದು ಬೇರೆ. ಹಾಗಾಗಿ ತಾವು ಮೊನ್ನೆ ಏನೊಂದು ಸುತ್ತೋಲೆ ಹೊರಡಿಸಿದ್ದೀರಿ, ಅದಕ್ಕೆ ಸ್ಪಷ್ಟೀಕರಣ ಬೇಕು. ಇಲ್ಲದಿದ್ದರೆ ನಾವು 94(ಸಿ) ಕೊಡುವುದಕ್ಕೆ ಆಗುವುದಿಲ್ಲ. ಇವರು ಕೊಡುವುದಕ್ಕೆ ಬಿಡುವುದಿಲ್ಲ. ಯಾರಾದರೂ ಜನ ಪ್ರತಿನಿಧಿಗಳು ಮಂಜೂರಾತಿ ಸಮಿತಿಯಲ್ಲಿದ್ದರೆ ಏನಾದರೂ ಮಾಡಬಹುದು. ಆದರೆ ಇದನ್ನು ಅಧಿಕಾರಿಗಳು ಮಾಡುವುದು. ನಮ್ಮ ಜಿಲ್ಲೆಯಲ್ಲಂತೂ ಎಲ್ಲಾ ರಿಜೆಕ್ಟ್ ಮಾಡುವುದಕ್ಕೆ ರೆಡಿ ಮಾಡಿಕೊಂಡು ಕುಳಿತಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸುಮಾರು 50 ವರ್ಷಗಳಿಂದ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮನೆ ಕಟ್ಟಿಕೊಂಡಿರುವವರು ಸೋಮವಾರಪೇಟೆ ಪಟ್ಟಣದಿಂದ ಕೇವಲ ಎರಡು ಕಿಲೋಮೀಟರ್ ಜಾಗದಲ್ಲಿ ಇರುವುದನ್ನು ಈಗಾಗಲೇ ನಮಗೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿ ರಿಜೆಕ್ಟ್ ಮಾಡುವಂಥ ಕೆಲಸ ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ನಾವು ಗಲಾಟೆ ಮಾಡುತ್ತೇವೆಂದು ಇದೆ. ಹಾಗಾಗಿ ಇವತ್ತು ನಾನು ಬಹಳ ಗಂಭೀರವಾದ ವಿಚಾರವನ್ನು ಹೇಳಿದ್ದೇನೆ. ಹಾಗಾಗಿ ನನ್ನ ಕೊನೆ ವಿನಂತಿ ಏನೆಂದರೆ ಮಾತೃ ಇಲಾಖೆ ಎಂದು ಏನಿದೆ, ಆ ಮಾತೃತ್ವವನ್ನು ಉಳಿಸಿಕೊಳ್ಳಬೇಕಾಗಿದೆ. ಅರಣ್ಯ ಇಲಾಖೆ ಅಲ್ಲ, ಕಂದಾಯ ಇಲಾಖೆ ಹೇಳಿದ ಹಾಗೆ ಅರಣ್ಯ ಇಲಾಖೆ ಪಾಲನೆ ಮಾಡಬೇಕು. ಒಬ್ಬರು DFO ಜಿಲಾಧಿಕಾರಿಗಳಿಗೆ ಸುತ್ತೋಲೆ ಕಳುಹಿಸುತ್ತಾರೆಂದರೆ ಅದನ್ನು ಕೇಳಿಕೊಂಡು ಸುಮ್ಮನೆ ಇರಬೇಕಾ? District administration, district headಗೆ DFO ಸುತ್ತೋಲೆ ಕಳುಹಿಸುವುದು. ಎಲ್ಲಾ direction ಅವರದೇ, ಆಮೇಲೆ ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೆದರಿಸುವುದು ಬೇರೆ. ಕೇಸ್ ಹಾಕುವುದು ಹೇಗೆ? ಯಾವ ಪ್ರಾವಿಜನ್ ಪ್ರಕಾರ ಕೇಸ್ ಹಾಕುವುದು? Forest Conservation Act 1980 ಎಂದು ಹೇಳುವುದು, ಅದರಲ್ಲಿ 4-5 ಸೆಕ್ಷನ್ ಇರುವುದು. ಇವರಿಗೆ ಎಲ್ಲಾ ಅಧಿಕಾರ ಬಂದುಬಿಡುತ್ತದೆಯೇ? ಹಾಗಾಗಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ತಾವು ಇವತ್ತು ಜನಪರವಾದ ಕಾರ್ಯಕ್ರಮಗಳನ್ನು ಏನು ಕೊಟ್ಟಿದ್ದೀರಿ, ಅದು ನಿಜವಾಗಿ ಜನರಿಗೆ ಸಿಗಬೇಕಾದರೆ ಆ ಅರಣ್ಯ ಇಲಾಖೆಯನ್ನು ಹದ್ದುಬಸ್ತಿನಲ್ಲಿಡುವ ಕೆಲಸ ತಮ್ಮ ಅವಧಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೊಟ್ಟಿರುವ ಮೊದಲನೇ ವಾಕ್ಯ ನೋಡಿದರೆ ಬಹಳ ಆಶ್ಚರ್ಯ ಆಗುವುದೇನೆಂದರೆ ಕಳೆದ ನಾಲ್ಕು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವರ್ಷಗಳ ತಮ್ಮ ಸಾಧನೆ ಏನೆಂದರೆ ರಾಜ್ಯವು 407 ಹುಲಿಗಳು ಮತ್ತು 6,072 ಆನೆಗಳ ಸಂಖ್ಯೆಯೊಂದಿಗೆ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಇದೆ ಎಂದು ಕೊಟ್ಟಿದ್ದೀರಿ, ಬಹಳ ಸಂತೋಷ. ಅದರ ಜೊತೆಗೆ ಆನೆ ಮತ್ತು ಇತರ ಪ್ರಾಣಿಗಳ ದಾಳಿಯಿಂದ ಎಷ್ಟು ಜನ ಸತ್ತಿದ್ದಾರೆ ಎನ್ನುವ ಅಂಕಿಅಂಶವನ್ನು ಕೊಡಬೇಕಾಗಿತ್ತು. ಸತ್ತವರ ಸಂಖ್ಯೆಯಲ್ಲಿ ಕೂಡ ಇಡೀ ರಾಷ್ಟ್ರದಲ್ಲಿ ನಮ್ಮ ಕರ್ನಾಟಕ ರಾಜ್ಯ ಪ್ರಥಮ, ಇಷ್ಟು ಜನರನ್ನು ಕೊಂದಿದ್ದೇವೆ ಎಂದು ಅದನ್ನೂ ಸಹ ಎಂದು ಹೇಳಬೇಕಾಗಿತ್ತು. ಆ ರೀತಿ ಹೇಳಿದಾಗ ನಾವು ಖಂಡಿತ ಮೆಚ್ಚಬೇಕಾಗುತ್ತದೆ. ನಾನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ 2014-15ರಲ್ಲಿ ಗಾಯಗೊಂಡವರು 8 ಜನ, 2015-16ರಲ್ಲಿ 13 ಜನ, 2016-17ರಲ್ಲಿ 9 ಜನ 2017-18 ರಲ್ಲಿ ಮೊನ್ನೆವರೆಗೆ 8 ಜನ ಸತ್ತಿದ್ದಾರೆ, ಇನ್ನು ಎಷ್ಟು ಜನ ಸಾಯುತ್ತಾರೆ ಗೊತ್ತಿಲ್ಲ. ಇನ್ನು ಅಲ್ಲಿ ಸಾಯುವವರು ಯಾರು? ನೀವು ಅಲ್ಲಿ home stay ಬಗ್ಗೆ ಹೇಳಿದಿರಿ. ಶನಿವಾರ, ಭಾನುವಾರ ಬಂತೆಂದರೆ ಕೊಡಗಿಗೆ ನ್ಯಾಯಾಧೀಶರಿಂದ ಹಿಡಿದು ಎಲ್ಲರೂ ಬರುತ್ತಾರೆ. ಅವರು ಯಾರಾದರೂ ಸತ್ತಿದ್ದಾರಾ? ನಿಮ್ಮ ಆದೇಶಗಳನ್ನು ಮಾಡುವವರು ಕೊಡಗಿನಲ್ಲಿ ಬಂದು home stay ಮಾಡಿ camp ಮಾಡುವವರು ಹಾಗೂ resort ಗೆ ಬರುವವರು ಯಾರಾದರೂ ಒಬ್ಬರಾದರೂ ಸತ್ತಿದ್ದಾರಾ? ಅವರಿಗೆ ಎಲ್ಲಾ ರಕ್ಷಣೆಗಳು ಇವೆ. ಆದರೆ ಪಾಪ, ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುವವರೇ ಸಾಯುತ್ತಿರುವುದು. ಇತ್ತೀಚೆಗೆ ಕೂಲಿ ಕೆಲಸ ಮಾಡುವ ಒಬ್ಬ ಅಲ್ಪಸಂಖ್ಯಾತರ ಹೆಣ್ಣುಮಗಳನ್ನು ಅವಳ ಅಣ್ಣ ಸ್ಕೂಟರ್‌ನಲ್ಲಿ ರಸ್ತೆ ಮೇಲೆ ಕರೆದುಕೊಂಡು ಹೋಗುವಾಗ ಆನೆ ಬಂದು attack ಮಾಡಿ ಸಾಯಿಸಿದೆ. ಈ ಬಗ್ಗೆ ಒಂದು ವಾಕ್ಯ ನಿಮ್ಮ ಬಜೆಟ್‌ನಲ್ಲಿ ಇಲ್ಲ. ನಿಮ್ಮ ಬಜೆಟ್‌ನಲ್ಲಿ ಸಾಧನೆ ಎಂದು ಇನ್ನೊಂದು ಏನಿದೆ? ನೀವು ಯೋಜನೆ ಗಳನ್ನೆಲ್ಲ ಹಾಕಿಕೊಂಡಿದ್ದೀರಿ. ಆದರೆ ಇವತ್ತು ಆನೆಗಳ ನಿಯಂತ್ರಣ ಮಾಡುವುದು ಖಂಡಿತ ಸಾಧ್ಯವಿಲ್ಲ. Elephant Corridor, ಇನ್ನು ಸ್ವಲ್ಪ ಸೇರಿಸುವುದು, ಮಾಡುವುದು ಇದೇನು ನಡೆಯುವುದಿಲ್ಲ. ಆನೆಗಳನ್ನು ಕೊಲ್ಲುವಂಥ ಕೆಲಸ ಮಾಡಲೇಬೇಕಾಗುತ್ತದೆ, ಅದರ ಬಗ್ಗೆ ಕೇಂದ್ರ ಸರ್ಕಾರದ ಮುಂದೆ ಪ್ರಪೋಸಲ್ ಇದೆ ಹಾಗೂ ಅದು ಗಂಭೀರ ಪರಿಶೀಲನೆಯಲ್ಲಿದೆ ಎನ್ನುವುದನ್ನು ನಾನು ಪತ್ರಿಕೆಯಲ್ಲಿ ನೋಡಿದೆ. ನೀವು ಹಂದಿಗಳನ್ನು ಕೊಲ್ಲುವುದಕ್ಕೆ ಕೊಟ್ಟಿದ್ದೀರಿ. ಆ ಹಂದಿಗಳನ್ನು ಯಾರೋ ಸಾಯಿಸಿಬಿಟ್ಟರು ಎಂದರೆ ಅದನ್ನು ತಿನ್ನುವ ಹಾಗಿಲ್ಲ. ಅರಣ್ಯ ಇಲಾಖೆಯವನು ಬರುವವರೆಗೂ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದನ್ನು ಗುಂಡಿಯಲ್ಲಿ ಹಾಕಬೇಕು. ಇದೇನು ಕಾನೂನುಗಳು? ಒಂದು ಕಡೆಯಿಂದ ಎಲ್ಲಾ ಮಾಂಸವನ್ನು ಭಕ್ಷಣೆ ಮಾಡಬೇಕೆಂದು ಹೇಳುತ್ತೀರಿ. ಗೋಮಾಂಸ ತಿನ್ನಬೇಕೆಂದು ಹೇಳುತ್ತೀರಿ, ಹಾಗಾದರೆ ಹಂದಿ ಮಾಂಸ ತಿನ್ನಬಾರದೇ? ತಿನ್ನಬಾರದೇ ಎಂದು ನೀವೇ ಹೇಳಬೇಕು.

ಶ್ರೀ ಬಿ ರಮಾನಾಥ ರೈ : ಬಹಳ ಹಿಂದೆ ಒಂದು ಕಾಯಿದೆ ಬಂತು. ಈಗ ಪ್ರಾಣಿಗಳನ್ನು ಸಾಯಿಸಬಾರದು ಎಂದು ಹೇಳುವಂಥ ಜನ ಕೂಡ ಇದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ದಯಾಮರಣ ಎನ್ನುವುದನ್ನು applicable ಮಾಡಬೇಕೆಂದು ಕೇಂದ್ರ ಸರ್ಕಾರ. . .

ಶ್ರೀ ಬಿ. ರಮಾನಾಥ ರೈ : ಆದರೆ ನೀವು ಪ್ರಾಣಿಗಳನ್ನು ಸಾಯಿಸಬೇಕೆನ್ನುವ ವರ್ಗಕ್ಕೆ ಸೇರಿದವರು. ವನ್ಯಜೀವಿ ಸಂರಕ್ಷಣೆ ಮಾಡಬೇಕೆನ್ನುವ ಜನ ದೊಡ್ಡ ಸಂಖ್ಯೆಯಲ್ಲಿದ್ದಾರೆ. ನೀವು ಹೇಳಿದ ಮಾತ್ರಕ್ಕೆ ನಾವು ಸಾಯಿಸುವುದಕ್ಕೆ ಅಗುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಅದಕ್ಕೆ ನೀವು ಏನು ಹೇಳುತ್ತೀರಿ?

ಶ್ರೀ ಬಿ. ರಮಾನಾಥ ರೈ : ನಾವು ಕಾನೂನನ್ನು ಪಾಲನೆ ಮಾಡುವವರು. ನಾನು ಮಂತ್ರಿಯಾಗಿರುವುದು ವನ್ಯ ಜೀವಿ ಸಂರಕ್ಷಣೆ ಮಾಡುವುದಕ್ಕೆ.

ಶ್ರೀ ಕೆ.ಜಿ. ಬೋಪಯ್ಯ : ನೀವು ಮಾಂಸ ತಿನ್ನುವುದಿಲ್ಲವೇ? ನೀವು ಮಾಂಸ ತಿನ್ನುತ್ತೀರ, ತಿನ್ನುವುದಿಲ್ಲವೇ?

ಶ್ರೀ ಬಿ. ರಮಾನಾಥ ರೈ : ನಾನು ಮಂತ್ರಿಯಾಗಿರುವುದು ಅರಣ್ಯ ಮತ್ತು ಪರಿಸರ ಸಂರಕ್ಷಣೆ ಮಾಡುವುದಕ್ಕೆ. ಅದನ್ನು ನಾಶ ಮಾಡಬೇಕೆಂದು ಹೇಳುವುದು ಸರಿಯಲ್ಲ. ನನಗೆ ಒಂದು ಸ್ವಲ್ಪ ಜಾಗ ಕೊಡಬೇಕೆಂದು ಮನಸ್ಸಿದ್ದರೂ ಕೂಡ ಅರಣ್ಯ ಸಂರಕ್ಷಣೆ ಕಾಯಿದೆಯಡಿಯಲ್ಲಿ ನಮಗೆ ಅವಕಾಶವಿಲ್ಲ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಉಪಾಧ್ಯಕ್ಷರೆ, ಅವರು ಅರಣ್ಯ ಮಂತ್ರಿಗಳಾಗಿದ್ದಾರೆ, ಹಾಗಾಗಿ ಅವರು ವನ್ಯಜೀವಿಗಳನ್ನು ರಕ್ಷಣೆ ಮಾಡಬೇಕಾಗುತ್ತದೆ. ಆದರೆ ಜನರನ್ನು ರಕ್ಷಣೆ ಮಾಡುವವರು ಯಾರು? ಜನರು ಬದುಕಬೇಕಲ್ಲ. ಇವತ್ತು ಕೊಡಗಿನಲ್ಲಿ ನೂರಕ್ಕೂ ಹೆಚ್ಚು ಆನೆಗಳು ಕಾಫಿ ತೋಟದಲ್ಲಿವೆ. ಅದನ್ನು ತಡೆಗಟ್ಟುವಂಥ ಕೆಲಸವನ್ನಾದರೂ ಮಾಡಬೇಕಲ್ಲ. ನಾನು ಹಲವಾರು ಬಾರಿ ಹೇಳಿದ್ದೇನೆ. ನಿಮ್ಮ ಅರಣ್ಯದಲ್ಲಿ ಟೀಕ್ ಮತ್ತು ಮ್ಯಾಂಜಿಯಂ ಮರ ನೆಟ್ಟು, ಅದರ ಕೆಳಗಡೆ ಯಾವುದೇ ಹುಲ್ಲುಕಡ್ಡಿಗಳು ಬರುವುದಿಲ್ಲ. ಅದನ್ನು ಮೊದಲು ತೆಗೆದು ನಮ್ಮ natural forestನಲ್ಲಿ ಏನು ಬರುತ್ತದೆ, ಅತ್ತಿ, ಮಾವು, ಬಿದಿರು, ಹಲಸು ಇಂತಹ ಮರಗಳನ್ನು ನೆಡುವ ಕೆಲಸ ಹಾಗೂ ಕುಡಿಯವ ನೀರನ್ನು ಕೊಡುವ ಕೆಲಸ ಮಾಡಿ. ಆನೆಗಳನ್ನು ರಕ್ಷಣೆ ಮಾಡುವಂಥ ಕೆಲಸ ಮಾಡಿ, ಪ್ರಾಣಿಗಳನ್ನು ರಕ್ಷಣೆ ಮಾಡುವಂಥ ಕೆಲಸ ಮಾಡಿ. ಆದರೆ ಜನರನ್ನು ಕೊಲ್ಲುವ ಕೆಲಸ ಮಾಡುತ್ತಿರುವುದನ್ನು ತಡೆಗಟ್ಟುವ ಕೆಲಸ ಮಾಡಿ.

ಶ್ರೀ ಬಿ. ರಮಾನಾಥ ರೈ : ತಾವು ಹೇಳಿದ ಮರಗಳನ್ನು ಹಿಂದೆ ಅರಣ್ಯದಲ್ಲಿ ನೆಟ್ಟಿರತಕ್ಕಂಥದ್ದಿದೆ, ಅವುಗಳನ್ನು ತೆಗೆಯುವ ಕೆಲಸ ಮಾಡಬಹುದು. ಆ ಮರಗಳನ್ನು ನೆಟ್ಟಿರುವುದು ನಾವಲ್ಲ. ನಮಗಿಂತ ಹಿಂದಿನವರು ನೆಟ್ಟಿರುವುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅದನ್ನು ತಾವು ಪರಿವರ್ತನೆ ಮಾಡುವಂಥ ಕೆಲಸ ಮಾಡಬೇಕಲ್ಲ. ಪರಿಸರಕ್ಕೆ ಪೂರಕವಾದಂಥ ಗಿಡಗಳನ್ನು ನೆಡುವ ಕೆಲಸ ಮಾಡಿ.

ಶ್ರೀ ಬಿ. ರಮಾನಾಥ ರೈ : ಈಗ ನಾವು ಗಿಡಗಳನ್ನು ನೆಡುವ ಕೆಲಸ ಮಾಡುತ್ತಿಲ್ಲ, ಪರಿಸರ ಹಾನಿಯಾಗುವ ಗಿಡಗಳನ್ನು ನೆಡುತ್ತಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅದನ್ನು ತೆಗೆಯುವಂಥ ಕೆಲಸ ಮಾಡಿ. 10,000 ಎಕರೆ ಇದ್ದರೆ 1,000 ಎಕರೆಯಲ್ಲಿರುವ ಮರಗಳನ್ನು ಕಡಿದು ತೆಗೆಯುವ ಕೆಲಸ ಮಾಡಿ. ಕಾಡು ಪ್ರಾಣಿಗಳು ಊರಿಗೆ ಬರುವುದಿಲ್ಲ. ಕಾಡಿನಲ್ಲೆ ಇರುವಂಥ ವ್ಯವಸ್ಥೆಯಾಗುತ್ತದೆ. ನೀರು ಕುಡಿದುಕೊಂಡು ಅಲ್ಲಿಯೇ ಬದುಕಿಕೊಂಡು ಇರಲಿ. ಅದನ್ನಾದರೂ ತಾವು ಮಾಡಿ, ಅದಕ್ಕೆ ಪ್ರಥಮ ಹೆಜ್ಜೆ ಹಾಕಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

(ಮುಂದು)

13.06.17 - 1.10 - (17) - RD-VR

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಹಳ ಗಂಭೀರವಾಗಿರುವಂಥದ್ದರ ಬಗ್ಗೆ ಮೊನ್ನೆ ಕೂಡ, ಈ ವಿಷಯವಾಗಿ ಒಂದು question ಕೇಳಿದ್ದೆ. ತಾವು elephantಗೆ trench ತೆಗೆಯುತ್ತಿದ್ದೀರಿ. ಅದು ಸಾಕಷ್ಟು ಕಳಪೆಯದ್ದಾಗಿದ್ದು.

ಶ್ರೀ ಬಿ.ರಮಾನಾಥ ರೈ: ಅದು.. ..

ಶ್ರೀ ಕೆ.ಜಿ.ಬೋಪಯ್ಯ: ನಾನು ಹೇಳಿದ ಮೇಲೆ ತಾವು ಹೇಳಿ. ತಾವು ರೈಲ್ವೆ ಕಂಬಿ ಬಗ್ಗೆ ಹೇಳಿದ್ದೀರಿ. ನಾನು ಈಗಲೂ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ರೈಲ್ವೆ ಕಂಬಿಯನ್ನು ಏನು ಅಳವಡಿಸಿದ್ದೀರಿ. ಅದು ಕಳಪೆಯಾಗಿಲ್ಲ ಮತ್ತು ಅಲ್ಲಿ ಕಾರ್ಯಕ್ರಮ ಏನು ನಡೆಯಿತು. ಆ ರೈಲ್ವೆ ಕಂಬಿಯನ್ನು ಮಾಡಿದವರಿಗೆ ಸನ್ಮಾನ ಮಾಡಿದ್ದೇವೆ. ಆ ಕೆಲಸವನ್ನು ನೀಟಾಗಿ ಯಾರು ಮಾಡಿದ್ದಾರೆ, ಅಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಬಳಿ ಸನ್ಮಾನ ಮಾಡಿದ್ದು, ಅವರು ನಿಮ್ಮ ಪಕ್ಷದವರೇ ಆಗಿದ್ದಾರೆ. ಅಲ್ಲಿ ರಾಜಕೀಯ ಏನೂ ಮಾಡಲಿಲ್ಲ. ನಾನು ಈ ವಿಷಯವಾಗಿ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಅವರು ನಮ್ಮ ಜಿಲ್ಲೆಯಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಆ ರೀತಿ whatsAppನಲ್ಲಿ ಹೆಚ್.ಡಿ.ಕೋಟೆ ಭಾಗದಲ್ಲಿ ಆಗಿದೆಯೆಂದು ಬಂದಿದ್ದೆ. ಆದರೆ ನಮ್ಮ ಜಿಲ್ಲೆಯಲ್ಲಿ ರೈಲ್ವೆ ಕಂಬಿ ಅಳವಡಿಸಿದವರಿಗೆ ಊರಿನವರು ಊಟ, ತಿಂಡಿ ಕೊಟ್ಟಿದ್ದಾರೆ, ಅವರು ಆ ಕೆಲಸವನ್ನು ಮಾಡಿದ್ದಾರೆ, ಅದನ್ನು ಇನ್ನೂ ಸ್ವಲ್ಪ ಮಾಡಿ. ತಾವು ರೈಲ್ವೆ ಕಂಬಿಗೆ ಹೆಚ್ಚು ಆದ್ಯತೆಯನ್ನು ಕೊಡಿ. ಕೊಡಗು ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ವಿಶೇಷವಾಗಿ ನಾಗರಹೊಳೆ ಬಾರ್ಡರ್‌ನಲ್ಲಿ ಮಾಡಿದರೆ ಖಂಡಿತ ಆಗುತ್ತದೆ. ತಾವು ನಾಗರಹೊಳೆ ಭಾಗದಲ್ಲಿ ತೆಗೆದ trench ಗಳು ಏನಿದೆ, ಅದನ್ನು ತೆಗೆಯುವಾಗ ಬಹಳ ಚೆನ್ನಾಗಿ ತೆಗೆದಿದ್ದೀರಿ, ಆದರೆ ಮಧ್ಯೆ ಕಲ್ಲುಗಳು ಬರುತ್ತಿವೆ. ಅದನ್ನು blast ಮಾಡದೇ ಹೋದರೆ, ನಮಗೆ blasting ಮಾಡುವುದಕ್ಕೆ ಅಧಿಕಾರಿವಿಲ್ಲವೆಂದರೆ, ಅದು ಹೇಗೆ ಆಗುತ್ತದೆ? ಅದಕ್ಕೆ Mines and Geology Departmentನವರು ಏಕೆ ತೊಂದರೆ ಮಾಡುವುದು? ಹಾಗಾದರೆ ಇಲಾಖಾವಾರು ಹೊಂದಾಣಿಕೆ ಇಲ್ಲವೇ? ಈಗ ಬಹಳ ದೊಡ್ಡದಾಗಿ ಸಾಕಷ್ಟು trenchಗಳನ್ನು ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ತಾವು ತೆಗೆದಿರುವ trench ಗಳು ಚೆನ್ನಾಗಿವೆ. ಅಲ್ಲಿ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೆಲವು ಆನೆಗಳು ಬಿದ್ದು ಸತ್ತು ಹೋಗಿವೆ, ಅದು ಬೇರೆ. ಆದರೆ ಕಲ್ಲುಗಳು ಬರುತ್ತವೆ, ತೋಡುಗಳು ಬರುತ್ತಿವೆ. ಆ ತೋಡುಗಳನ್ನು ಏನಾದರೂ ಮಾಡಿ, ದೊಡ್ಡದಾಗಿ ಪೈಪ್ ಲೈನ್‌ಗಳನ್ನು ಹಾಕಿ, ಆನೆಗಳು ಬಾರದ ಹಾಗೆ ಮಾಡದೇ ಹೋದರೆ, ಆವತ್ತು ಅಲ್ಲಿ ಅಲ್ಪಸಂಖ್ಯಾತ ಹುಡುಗಿ ತೋಡಿನಿಂದ ಬಂದು ಸತ್ತಿದ್ದು. ಬೇರೆ ಎಲ್ಲಾ ಕಡೆಗಳಲ್ಲೂ ದೊಡ್ಡದಾಗಿ trenchಗಳಿವೆ. ಅದನ್ನು ಮಾಡುವುದಕ್ಕೆ ಸೂಚನೆ ಕೊಡಿ. ಅಲ್ಲಿ blast ಮಾಡಬಾರದೆಂದು ಹೇಳುವುದು, ನನಗೆ ಅರ್ಥವಾಗುತ್ತಿಲ್ಲ. ಹಾಗಾಗಿ ತಾವು ಆನೆಗಳನ್ನು ತಡೆಯುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ನಮ್ಮಲ್ಲಿ ನಾಲ್ಕು ವನ್ಯಧಾಮಗಳಿವೆ, ಅವುಗಳು ಯಾವುವೆಂದರೆ, 1. ಬ್ರಹ್ಮಗಿರಿ 2. ಪುಷ್ಪಗಿರಿ 3. ತಲಕಾವೇರಿ 4. ನಾಗರಹೊಳೆ ಇದರಿಂದ ಆನೆಗಳು ಹೊರಗಡೆ ಬರಬಾರದೆಂದು 284 ಕೋಟಿ ರೂ.ಗಳನ್ನು ಕೇಳಿದ್ದಾರೆ. ಕೇಂದ್ರಸರ್ಕಾರದಿಂದ ನಾಗರಹೊಳೆಗೆ ಹಣ ಬರುತ್ತದೆ, ಇದರಲ್ಲೂ ಹಣ ಬರುತ್ತದೆ. ಹಾಗಾಗಿ ತಾವು 6 ಕೋಟಿ ರೂ.ಗಳನ್ನು release ಮಾಡಿ, ಆನೆಗಳನ್ನು ತಡೆಯಿರಿ ಎಂದು ಹೇಳಿದರೆ, ತಡೆಯಲು ಹೇಗೆ ಸಾಧ್ಯ? ಅದರ ಜೊತೆಗೆ ಇವತ್ತು staffಗಳ ಬಗ್ಗೆ ಹೇಳುವುದಾದರೆ, ಸಿಬ್ಬಂದಿಗಳು ಇಲ್ಲವೇ ಇಲ್ಲ. ಆದರೆ IFS cadre ಇದೆಯಲ್ಲಾ, ಅದು ಒಂದು ಹುದ್ದೆಯೂ ಖಾಲಿಯಾಗುವುದಿಲ್ಲ, ಅದು first safe ಎಂದು ಎಲ್ಲರೂ ಮಾತನಾಡುತ್ತಾರೆ. ಅವರೆಲ್ಲರೂ ಇದ್ದಾರೆ. ಮತ್ತೆ ನೀವು ಅವರ cadre ಅನ್ನು ಹೆಚ್ಚು ಮಾಡುತ್ತಾ ಹೋಗುತ್ತೀರಿ, division ಮಾಡುತ್ತಾ ಹೋಗುತ್ತೀರಿ. ನಮ್ಮ ಜಿಲ್ಲೆಯಲ್ಲಿ guard post ಎಷ್ಟು ಖಾಲಿ ಇದೆ, ಇಡೀ ರಾಜ್ಯದಲ್ಲಿ ಎಷ್ಟು ಇದೆ? ನಿಜವಾಗಿ ಜನರೊಟ್ಟಿಗೆ ಅವರು ಕಷ್ಟ ಪಡುವವರು. ಅದು guardಗಳಿರಬಹುದು, watcherಗಳಿರಬಹುದು ಅಥವಾ forester, ಅವರೇ ಕಾಡಿನೊಳಗೆ ಇರುವುದು. ಅದನ್ನು ತಾವು ಸ್ವಲ್ಪ ಗಂಭೀರವಾಗಿ ತೆಗೆದುಕೊಂಡು ಮಾಡಬೇಕಾಗುತ್ತದೆ, ಇಲ್ಲದೇ ಹೋದರೆ ಖಂಡಿತ ಇಲ್ಲ. ಜನರು ಅವರೊಟ್ಟಿಗೆ ಸಹಕಾರ ಕೊಡುತ್ತಾರೆ, ಇವರೊಟ್ಟಿಗೆ ಮಾತನಾಡುವುದಕ್ಕೆ ಆಗುವುದಿಲ್ಲ. ನಿಮ್ಮ IFSಗಳು ಜೈಲಿಗೆ ಹಾಕಿ ಬಿಡುತ್ತೇವೆನ್ನುತ್ತಾರೆ. ಅದನ್ನು ಮಾಡಲೇ ಬೇಕಾಗುತ್ತದೆ, ಅದಕ್ಕೆ ಹೆಚ್ಚು ಒತ್ತಾಸೆಯನ್ನು ಕೊಡಿ.

ಉಪಾಧ್ಯಕ್ಷರು: ಮಾನ್ಯ ಬೋಪಯ್ಯನವರೆ, ಸಮಯ ಅಯಿತು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು. 

13-06-2017

ಶ್ರೀ ಬಿ.ರಮಾನಾಥ ರೈ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯವರೆಗೆ ಎಷ್ಟು ಆಗಿವೆ, ಅಷ್ಟು ವೃತ್ತಿಗೆ ಮೊನ್ನೆ ಈಚೆಗೆ ಬಂದ ನಂತರ, ನಾವು ತರಬೇತಿ ಕೇಂದ್ರವನ್ನು ಅಕಾಡಮಿ ಅನ್ನು ಕೂಡ ಮಾಡಿದ್ದೇವೆ. ಮೊದಲು ನಮ್ಮಲ್ಲಿ Range Forest Officerಗೆ ತರಬೇತಿ ಆಗುತ್ತಿರಲಿಲ್ಲ. ಈಗ ಅವರು ತರಬೇತಿ ಪಡೆಯುತ್ತಾರೆ. ಈ ಸಾರಿ ಹಂತ ಹಂತವಾಗಿ ನೇಮಕಾತಿ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಇವತ್ತು ಎಲ್ಲಾ ಕಡೆಗಳಲ್ಲೂ ನೇಮಕಾತಿಯಾಗಿ ಬರುತ್ತಿದ್ದಾರೆಂದು ತಮಗೆ ಹೇಳುತ್ತೇನೆ. ಮತ್ತೆ ಆನೆ ಕಂದಕಗಳನ್ನು ಮಾಡುವಂಥದ್ದು ಏನಿದೆ, ಅದು ಇವತ್ತು, ನಿನ್ನೆ ಶುರುವಾಗಿರುವಂಥದ್ದಲ್ಲ. ಇದರಲ್ಲಿ ಸಮಸ್ಯೆಗಳು ಇದೆ, ನಮಗೆ ಅದು ಅರ್ಥವಾಗಿದೆ. ಅದಕ್ಕಾಗಿ ನಾವು ರೈಲ್ವೆ ಹಳಿ ಪಟ್ಟಿಯನ್ನು ಮಾಡಿ, 2.50 ಕಿ.ಮೀ. ..

ಶ್ರೀ ಕೆ.ಜಿ.ಬೋಪಯ್ಯ: ಎರಡೂವರೆ ಕಿ.ಮೀ. ಮಾಡಿದ್ದೀರಿ.

ಶ್ರೀ ಬಿ.ರಮಾನಾಥ ರೈ: ನಿಮ್ಮಲ್ಲಿ ಒಟ್ಟು ಹತ್ತಿರ ಹತ್ತಿರ 3 ಕಿ.ಮೀ ಆಗಿದೆ. ಇನ್ನೂ ಅದನ್ನು ಮುಂದುವರೆಸುತ್ತೇವೆ. ಇದರ ಜೊತೆಗೆ ಈಗ ನಮಗೆ ಮಾಡಲು ಇರುವ ಅವಕಾಶವೆಂದರೆ, ಪರಿಹಾರ ಕೊಡುವಂಥದ್ದು. ಮೊದಲು ಶಾಶ್ವತ ಅಂಗ ಊನವಾದರೆ 50,000 ರೂ.ಗಳಿತ್ತು, ನಾವು ಈಗ ಅದನ್ನು 5 ಲಕ್ಷ ರೂ.ಗಳನ್ನು ಮಾಡಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ: ನಾನು ಪರಿಹಾರ ಕೊಡುವ ಬಗ್ಗೆ ಏನೂ ಮಾತನಾಡುವುದಿಲ್ಲ. ಮನುಷ್ಯನ ಜೀವದ ಬೆಲೆ 5 ಲಕ್ಷ ರೂ.ಗಳೇ?

ಶ್ರೀ ಬಿ.ರಮಾನಾಥ ರೈ: ಭಾಗಶ: ಅಂಗ ಊನವಾದವರಿಗೆ 25,000 ರೂ.ಗಳನ್ನು ಕೊಡುತ್ತಿದ್ದರು, ಅದನ್ನು ನಾವು ಎರಡೂವರೆ ಲಕ್ಷ ರೂ.ಗಳನ್ನು ಮಾಡಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ: ನಾನು ಅದರ ಬಗ್ಗೆ ಏನೂ ಮಾತನಾಡಿಲ್ಲ.

ಶ್ರೀ ಬಿ.ರಮಾನಾಥ ರೈ: ಮತ್ತೆ ನಾವು ಸಾಧ್ಯವಾದಷ್ಟು ಮಟ್ಟಿಗೆ ರೈಲ್ವೆ ಹಳಿ ಪಟ್ಟಿಯನ್ನು ಹಾಕಿ.

ಉಪಾಧ್ಯಕ್ಷರು: ಈಗ ಸಮಯ ಆಯಿತು.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ಇನ್ನು ಒಂದೇ ಪಾಯಿಂಟ್ ಇರುವುದು. ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಳೆದ ವರ್ಷ...

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕಾಗೋಡು ತಿಮ್ಮಪ್ಪ: ತಾವು ಹೊಡಿತಾ, ಹೊಡಿತಾ ಗಾಡಿಯನ್ನು ಹೊಡೆಯುತ್ತಲೇ ಹೋಗಬೇಡಿ. ಗಾಡಿಯನ್ನು ಎಲ್ಲಾದರೂ ಒಂದು ಕಡೆ ನಿಲ್ಲಿಸುವಂಥ ಕೆಲಸವೂ ಆಗಬೇಕು. ತಾವು ಜಮೀನಿಗೆ ಸಂಬಂಧಪಟ್ಟಂತೆ ಪ್ರಾರಂಭ ಮಾಡಿದ ಚರ್ಚೆ, ಈಗ ಅದು ಹೋಗಿ ಹೋಗಿ ಆನೆ, ಹುಲಿ ಎಂದು .. .

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಮಂತ್ರಿಯವರೆ, ನಿಮ್ಮ ಕಂದಾಯ ಇಲಾಖೆಯ ಮೇಲೆ ಚರ್ಚೆಯನ್ನು ಮುಗಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಎರಡು ಇಲಾಖೆಯನ್ನೂ ಸೇರಿಸಿ ಹೇಳಿದ್ದೀರಾ?

ಶ್ರೀ ಕೆ.ಜಿ.ಬೋಪಯ್ಯ: ಅದು ಎರಡೂ joint ಆಗಿಲ್ಲ. ಈಗ ಬರೀ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡುತ್ತಿದ್ದೇನೆ. ನಾನು ಕಂದಾಯ ಇಲಾಖೆಗೆ ಏನು ಸಲಹೆಗಳನ್ನು ಕೊಡಬೇಕೊ, ಅದನ್ನು ಕೊಟ್ಟಿದ್ದೇನೆ. ಹಾಗಾಗಿ ಪರಿಹಾರದ .. ..

ಶ್ರೀ ಕಾಗೋಡು ತಿಮ್ಮಪ್ಪ: ಏಕೋ, ಏನೋ, ಅರಣ್ಯದಲ್ಲೇ ಹುಟ್ಟಿ ಬೆಳೆದು ಬಿಟ್ಟಿದ್ದೀರಿ. ನಾನೇ ಹುಲಿ ಹೊಡೆಯುವುದಕ್ಕೆ ಹೋದವ, ಅಳಿಲು ಹೊಡೆಯುವುದಕ್ಕೂ ಹೋದವ.. .

ಶ್ರೀ ಕೆ.ಜಿ.ಬೋಪಯ್ಯ: ...ಈಗ ಹುಲಿ ಹೊಡೆಯುವುದಕ್ಕೆ ಹೋದರೆ ಜೈಲಿಗೆ ಹೋಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಆಗಿ ಬಿಟ್ಟಿದೆ, ಇಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಇದ್ದಾರೆ. ನಾವು ಹುಟ್ಟಿದ್ದೇವೆ, ನಾವು ಕಾಡಿನಲ್ಲಿ ಹುಟ್ಟಿದ ಮೇಲೆ ಒಂದು ಮರವನ್ನು ಕಡಿಯಲೇಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮನೆಯನ್ನು ಕಟ್ಟಿಕೊಳ್ಳಲೇಬೇಕು. ಆದರೆ ಒಂದು ವಿಷಯವನ್ನು ಮಾತ್ರ ತಿಳಿದುಕೊಳ್ಳಿ, ನಮ್ಮಲ್ಲಿ ಒಂದು ಸಂಸ್ಕೃತಿ ಇದೆ, ಅಗತ್ಯಕ್ಕಿಂತ ಒಂದು ಇಂಚು ಭೂಮಿ ಕೂಡ ಎಂದೂ ವ್ಯರ್ಥ ಮಾಡುವುದಿಲ್ಲ, ಅಗತ್ಯಕ್ಕಿಂತ ಜಾಸ್ತಿ ಒಂದು ಮರವನ್ನು ಮುಟ್ಟಿಲ್ಲ. ಇವತ್ತಿಗೂ ನಮ್ಮ ಊರಿನಲ್ಲಿ ನಮ್ಮ ಮನೆಯ ಹಿತ್ತಲಿನಲ್ಲಿ ಒಂದು ಹಲಸಿನ ಮರವಿದೆ, ಅದು ಹಾಗೆ ಇದೆ, ಅದಕ್ಕೆ 53 ವರ್ಷಗಳಾಗಿದೆ. ನಮ್ಮಲ್ಲಿ ಆ ಸಂಸ್ಕೃತಿ ಇದೆ, ನಾವು ಅನಾವಶ್ಯಕವಾಗಿ ಮರವನ್ನು ಕಡಿಯವುದು, ಬೆಂಕಿ ಹಚ್ಚುವುದು, ಇವೆಲ್ಲವನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಏನಾಗಿದೆಯೆಂದರೆ, ಮಾನ್ಯ ಬೋಪಯ್ಯನವರು ಹೇಳಿದ ರೀತಿಯಲ್ಲಿ ಆನೆಗಳ ಹಾವಳಿಗೆ ಕಾರಣವೇನೆಂದರೆ, ಒಂದು ಕಾಲದಲ್ಲಿ forest ಹೆಚ್ಚಿಗೆ ಇರುತ್ತಿತ್ತು, ಜನಸಂಖ್ಯೆ ಕಡಿಮೆ ಇರುತ್ತಿತ್ತು. ಅರಣ್ಯದಲ್ಲಿ ಬೇಕಾದಷ್ಟು ನೀರು, ಮೇವು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸಿಗುತ್ತಿತ್ತು. ಹಾಗಾಗಿ ಆನೆಗಳು ಅಲ್ಲಿ ಇರುತ್ತಿದ್ದವು. ಈಗ ಏನಾಗಿದೆಯೆಂದರೆ, ಅಲ್ಲಿ ಸಾಕಷ್ಟು ನೀರು ಸಿಗುವುದಿಲ್ಲ, ಮೇವು ಸಿಗುವುದಿಲ್ಲ. ಮತ್ತೆ ಆನೆಗಳು ಹಿಂಡು ಜಾಸ್ತಿಯಾಗಿ ಬಿಟ್ಟಿದೆ, ಅವು ಎಲ್ಲೆಲ್ಲಿ ದಾರಿ ಸಿಗುತ್ತದೋ, ಅಲ್ಲಿ ನುಗ್ಗಿ ಬಿಡುತ್ತವೆ. ಇಲ್ಲಿ ಯಾರೋ ಪ್ರತಿಷ್ಠೆ ಮಾಡಿಕೊಳ್ಳುವ ಪ್ರಶ್ನೆಯಲ್ಲ, ಇರುವ ವಸ್ತು ಸ್ಥಿತಿಯಲ್ಲಿ ಹೇಗೆ ಮನುಷ್ಯನನ್ನು ರಕ್ಷಿಸಬೇಕೆನ್ನುವಂಥದ್ದು ಮೂಲಭೂತವಾದಂಥ ಅಲೋಚನೆಯಾಗಿದೆ. ಈಗ ಆನೆಗಳು ಇರಬೇಕು, ಹಕ್ಕಿಗಳು ಇರಬೇಕು, ಕಾಗೆಗಳು ಇರಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮೊದಲು ನಮ್ಮಲ್ಲಿ ಗುಬ್ಬಿಗಳಿದ್ದವು. ಆಗ ನಮ್ಮ ಊರುಗಳಲ್ಲಿ ಹುಲ್ಲಿನ ಮನೆಗಳಿದ್ದವು, ಗುಬ್ಬಿ ಎಂದರೆ ಅವೆಲ್ಲಾ ಮನೆಯಲ್ಲೆ ಹಿಂಡುಗಳಿದ್ದವು. ಈಗ ಹುಲ್ಲಿನ ಮನೆಗಳೆಲ್ಲಾ ಹೋಗಿ, ಹಂಚಿನ ಮನೆಗಳಾಗಿವೆ. ಹಾಗಾಗಿ ಒಂದೇ ಒಂದು ಗುಬ್ಬಿಯೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈಗ ಅವು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ಈಗ ಗುಬ್ಬಿಗಳು ಕಾಣುವುದೇ ಇಲ್ಲ. ಈ ರೀತಿ ಏಕೆ ಆಗಿದೆಯೆಂದರೆ, ಇವತ್ತು ಬದಲಾವಣೆಯಾಗುತ್ತಿದೆ. ಅದಕ್ಕೋಸ್ಕರ ಇದಕ್ಕೆ ಒಂದು ಸಾಮೂಹಿಕವಾದಂಥ ಅಲೋಚನೆ, ಚರ್ಚೆ ಮಾಡಿ, ಪರಿಹಾರವನ್ನು ಕಂಡು ಹಿಡಿಯಬೇಕು. ಈಗ ಏನಾಗಿ ಬಿಟ್ಟಿದೆಯೆಂದರೆ, ಕೆಲವರು ಸ್ವರ್ಗದಲ್ಲಿ ಇದ್ದಾರೆ, ಅವರಿಗೆ ಮನುಷ್ಯರು ಕಾಣುವುದೇ ಇಲ್ಲ. ಅದರ ಬಗ್ಗೆಯೇ ಮಾತನಾಡುತ್ತಾರೆ. ಮನುಷ್ಯರ ರಕ್ಷಣೆ ಮಾಡುವಂಥದ್ದಕ್ಕೆ ಮೊದಲನೇ ಪ್ರಾಶಸ್ತ್ಯವಿರಬೇಕು. ಅವನ ರಕ್ಷಣೆಗೆ ಕಾನೂನು ನಾನು ಮಾಡಿದ್ದಾ? ಯಾರು ಮಾಡಿದ್ದು? ನಾವೇ ಮಾಡಿದ್ದು? ಮನುಷ್ಯನ ಒಳ್ಳೆಯದಕ್ಕೆ ಅದನ್ನು ಬದಲಾವಣೆ ಮಾಡುವುದಾದರೆ, ಅದನ್ನು ಬದಲಾವಣೆ ಮಾಡುವ ಅಧಿಕಾರ ನಮಗೆ ಇಲ್ಲವೇ? ಏನಿಲ್ಲವೆಂದು ಕೈ ಹಿಡಿದು ಕುಳಿತುಬಿಟ್ಟರೆ ಆಗಿಬಿಡುತ್ತದೆಯೇ?

ಮುಂದು.. ..

13-06-2017/1.20/18/GG/VR

ಶ್ರೀ ಕಾಗೋಡು ತಿಮ್ಮಪ್ಪ (ಮುಂದುವರೆದುದು): ಬದಲಾವಣೆ ಮಾಡಬೇಕಾಗುತ್ತದೆ, ಅದು ಅನಿವಾರ್ಯ. ಹಾಗಾಗಿ, ಈ ಪರಿಸ್ಥಿತಿಯಲ್ಲಿ ನಾವೆಲ್ಲರೂ ಸಮಗ್ರವಾಗಿ ಚರ್ಚೆ, ಚಿಂತನೆ ಮಾಡಿ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಅರಣ್ಯ ಭೂಮಿಗೆ ಹಕ್ಕುಪತ್ರ ಕೊಡುವ ಬಗ್ಗೆ ನೀವು

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೇಳಿದಿರಲ್ಲ, ಕೇಂದ್ರದವರು ಒಳ್ಳೆಯ ಕಾನೂನನ್ನು ಮಾಡಿದ್ದಾರೆ. ಒಂದು ರೀತಿಯ ಮನೋಭಾವದ ಅಧಿಕಾರಿಗಳು ಕೇಂದ್ರದಲ್ಲಿ ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಆದರೂ ಕೂಡ ಈಗಲೂ ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳ ತಲೆಗೆ ಹೋಗಿಲ್ಲ. ದುರ್ಬೀನು ಹಿಡಿದು ನೋಡುತ್ತಾರೆ. ಮೊನ್ನೆ ನಾವು ಸರ್ಕಾರದಿಂದ ತೀರ್ಮಾನ ಮಾಡಿ ಒಂದು G.O. ಹೊರಡಿಸಿದ್ದೇವೆ. ಅದರಲ್ಲಿ ಏನಿದೆ ಎಂದರೆ, ಹಿರಿಯರ ಹೇಳಿಕೆ ಮತ್ತು ಅದರ ಮೇಲೆ ಒಂದೆರಡು ಹೇಳಿಕೆ/ಸಾಕ್ಷಿ ಇದ್ದರೆ ಸಾಕು ಎಂದು ಮಾಡಿದ್ದೇವೆ, ಹೌದಲ್ಲವೇ? ಅದರಲ್ಲಿ ಬೇರೆ ಏನನ್ನೂ ಹೇಳಿಲ್ಲ. ನೀವು ಹೇಳಿದಂತೆ ನಮ್ಮ ಅಧಿಕಾರಿಗಳಲ್ಲಿ ಕೆಲವರು ಅಂಥವರೂ ಹುಚ್ಚರು ಇದ್ದಾರೆ. ಅದರ ಬಗ್ಗೆ ಅಭಿಪ್ರಾಯ ಕೇಳುವುದನ್ನು ಮಾಡುತ್ತಾರೆ. ಮೊನ್ನೆ ನಾನು ಶಿಕಾರಿಪುರಕ್ಕೆ ಹೋಗಿದ್ದೆ, ಅಲ್ಲಿ 9,000 ಅರ್ಜಿಗಳನ್ನು ಅರಣ್ಯ ಇಲಾಖೆಗೆ ಎರಡು ವರ್ಷಗಳಿಂದ ಕಳುಹಿಸಿದ್ದಾರೆ, ಅವು ಇನ್ನೂ ವಾಪಸ್ಸು ಬಂದಿಲ್ಲ. ಇದನ್ನು ಮೊದಲು ತೆಗೆದುಕೊಳ್ಳಿ, ನಿಮಗೆ ಕಳುಹಿಸಲು ಹೇಳಿದ್ದು ಯಾರು ಎಂದು ಬಯ್ದು ಬಂದಿದ್ದೇನೆ. ಕಮಿಟಿಯಲ್ಲಿ ಅವರು ಇರುತ್ತಾರೆ, ಅವರ ಅಭಿಪ್ರಾಯವನ್ನು ಅವರು ಹೇಳುತ್ತಾರೆ. ಆ ರೀತಿ ಮಾಡುವುದನ್ನು ಬಿಟ್ಟು, ಅವರಿಗೆ ಕಳುಹಿಸುವುದು, ಅವರೇ ದೊಡ್ಡ ಸಾಮ್ರಾಜ್ಯಶಾಹಿಗಳು ಎನ್ನುವ ರೀತಿಯಲ್ಲಿ ನಡೆದುಕೊಳ್ಳುವುದು ಇದೆ. ನೀವು ರಸ್ತೆಯ ವಿಚಾರವನ್ನು ಹೇಳಿದಿರಲ್ಲ, ಮೊನ್ನೆ ನಮ್ಮಲ್ಲಿಯೂ ಸಹ National Highway ಹೋಗುತ್ತದೆ, ಹಾಗಾಗಿ ರಸ್ತೆಯನ್ನು ಅಗಲ ಮಾಡೋಣ ಎಂದರೆ ಬಿಡಲಿಲ್ಲ, ಆಗ ಅವರಿಗೆ ಬಯ್ದು ಏನೋ ಒಂದು ಮಾಡಿದ್ದೇವೆ. ಇಂಥ ಸನ್ನಿವೇಶ ನಿರ್ಮಾಣವಾಗಿದೆ. ಇದಕ್ಕೆ ಕಾರಣವೆಂದರೆ ಅಧಿಕಾರಿಗಳು. ಇಂಥವರು ಲೋಕಸಭೆಯಲ್ಲೂ ಇದ್ದಾರೆ, ಅವರಿಗೆ ಭಾರಿ ಬುದ್ಧಿವಂತಿಕೆ ಇದೆ, ಹೇಗೆ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ ಎಂದರೆ ಇಡೀ ಜಗತ್ತನ್ನೇ ನಡುಗಿಸಿಬಿಡುತ್ತಾರೆ. ನಮಗೆ ಆ ಇಂಗ್ಲೀಷ್ ಭಾಷೆಯೂ ಚೆನ್ನಾಗಿ ಬರುವುದಿಲ್ಲ, ನಾವು ದಡ್ಡಮುಂಡೇಗಂಡರು. ಅಲ್ಲಿ ಇಂಥ ಸನ್ನಿವೇಶ ಬಂದಾಗ ಹೇಗೆ ಮಾಡಬೇಕು ಎನ್ನುವುದನ್ನು ಮಾಡುತ್ತಾರೆಯೇ? ಪರಿಸ್ಥಿತಿ ಹೀಗಿದೆ. ನೀವು ಭೂಮಿಯ ಬಗ್ಗೆ ಹೇಳಿದಿರಲ್ಲ, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಮ್ಮ ಅರಣ್ಯವಾಸಿಗಳ ರಕ್ಷಣೆಗೆ ನಾವೆಲ್ಲರೂ ಕುಳಿತು ಆಲೋಚನೆ ಮಾಡಿ ಒಂದು ಪರಿಹಾರ ಕಂಡುಹಿಡಿಯಬೇಕಾದಂಥ ಅಗತ್ಯವಿದೆ. Deemed forest ಅನ್ನು ಕಡಿಮೆ ಮಾಡಬೇಕು ಎಂದು ಈಗ ಬಂದಿದೆ. ಜಯಚಂದ್ರರವರು ಇಲ್ಲಿದ್ದಾರೆ, ಅವರಿಗೆ ನಮ್ಮ ಸೊಪ್ಪಿನಬೆಟ್ಟ, ಕಾನು ಹೇಗಿರುತ್ತವೆ ಎಂದು ಗೊತ್ತಿದೆಯೇನು ಕೇಳಿ. ನಿಮ್ಮ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಊರಿನಲ್ಲಿ ಜಮ್ಮಾ ಬಾಣೆ ಎಂದು ಇದೆ. ಅವುಗಳು ಏನೆಂದು ಅವರಿಗೆ ಗೊತ್ತಿಲ್ಲ. ನಾವು ಒಂದು ಸಾರಿ ಹೇಳಿದರೆ ಅವರಿಗೆ ಒಂದು ರೀತಿ ಗೊತ್ತಾಗುತ್ತದೆ. ಹಾಗಾಗಿ, ಈಗ ನಾವು ಸಿಕ್ಕಿಹಾಕಿಕೊಂಡು ಲಬೋಲಬೋ ಎಂದು ಬಾಯಿಬಡಿದುಕೊಳ್ಳುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ನಾವು ಕಾಡು ಬೆಳೆಸಿದರೆ ಅಲ್ಲಿ ಮಳೆ ಹೊಡೆಯುತ್ತದೆ, ಇವರು ಆರಾಮವಾಗಿ ಇದ್ದಾರೆ. ಅಲ್ಲೇ ತಪ್ಪಾಗಿದ್ದು.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಕಡೆಯಲ್ಲಿ ಕಾನು ಇಂದು ಇವೆ. ಅದರ ಪಕ್ಕದಲ್ಲೇ ನಾವು ಇದ್ದೇವೆ. ಅದನ್ನು ಏಕೆ ಇಟ್ಟುಕೊಂಡಿದ್ದೇವೆ ಎಂದರೆ ಸೌದೆಗೆ ಬೇಕು, ಹಸಿರು ದನಗಳಿಗೆ ಬೇಕು. ಕಾಗೇರಿಯವರೇ, ಕೇಳಿ. ಕಾಗೇರಿಯವರು ಎಷ್ಟು ಚೆನ್ನಾಗಿ ಸೊಪ್ಪಿನ ಬೆಟ್ಟ ಇಟ್ಟುಕೊಂಡಿದ್ದಾರೆಂದು ಗೊತ್ತೇ? ಒಂದು ಮರವನ್ನೂ ಕಡಿಯುವುದಿಲ್ಲ. ಅಷ್ಟು ಚೆನ್ನಾಗಿ, ಸೊಗಸಾಗಿ, ಬಾಗಾಯಿತಿ ಇದ್ದಹಾಗೆ ಇದೆ, ಅಷ್ಟು ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಆ ಬಾಗಾಯಿತಿಯ ಪಕ್ಕದಲ್ಲೇ ಇರುವಂಥವರು ನಾವು. ನೀವು ಯಾವತ್ತಾದರೂ ಶಿರಸಿಗೆ ಹೋಗಿ. ಒಳಗಡೆ ಅವರ ಊರಿನ ಕಡೆಗೆ ಹೋಗಬೇಕು. ಅಲ್ಲಿ ಇಟಗಿ ಎಂದು ಒಂದು ಊರಿದೆ. ಅಲ್ಲಿಗೆ ಹೋದರೆ ಎಲ್ಲವನ್ನೂ ನೋಡುತ್ತಾ ಹೋಗಬಹುದು. ನಮ್ಮಲ್ಲಿಗೇ ಬಂದರೂ ನಾನು ತೋರಿಸುತ್ತೇನೆ. ಎಲ್ಲ ಚೆನ್ನಾಗಿದೆ. ಅವುಗಳನ್ನು ಈಗ ನಾವು ಫಾರೆಸ್ಟ್ ಎಂದು ಮಾಡಿದರೆ ನಮ್ಮ ಕತೆ ಏನಾಗಬೇಕು? ಪರಿಸ್ಥಿತಿ ಹೀಗಿದೆ. ಅದಕ್ಕಾಗಿ ನಾವೆಲ್ಲರೂ ಕುಳಿತು ಆಲೋಚನೆ ಮಾಡಬೇಕು. ನಾವು ಮಲೆನಾಡಿನ ಜನರು, ನಮಗೆ ನಮ್ಮದೇ ಸಂಸ್ಕೃತಿ, ನಮ್ಮ ಬದುಕಿನ ಸ್ಥಿತಿಗತಿಗಳೇ ಬೇರೆ ಇದೆ. ನಾವು ಶಿರಸಿಕ್ಕೆ ಹೋದರೆ ಅಲ್ಲಿ ಸೊಪ್ಪಿನಬೆಟ್ಟ ಕಾಣುವುದಕ್ಕೆ ಆಗುತ್ತದೆಯೇ? ಕಾನು ಕಾಣುವುದಕ್ಕೆ ಆಗುತ್ತದೆಯೇ? ಕಾರಜೋಳರವರೇ, ನಿಮ್ಮ ಕಡೆ ನೀವು ಇವುಗಳನ್ನು ನೋಡುವಿರಾ? ನಮ್ಮ ಬದುಕೇ ಒಂದು ರೀತಿ ವಿಚಿತ್ರವಾಗಿದೆ. ಹಾಗಾಗಿ, ವಿಚಾರ ಮಾಡಿ ಆಲೋಚನೆ ಮಾಡಿ ಮಾಡೋಣ. ನೀವು ಹೇಳಿದ್ದನ್ನೆಲ್ಲ ಕೇಳಿದ್ದೇನೆ, ಏನಾದರೂ ಮಾಡಿ ಇದನ್ನು ಬಗೆಹರಿಸಬೇಕು ಎನ್ನುವ ಆಲೋಚನೆ ನನಗಿದೆ. ನಮ್ಮ ಮನುಷ್ಯನ ಹಿತದೃಷ್ಟಿಯಿಂದ, ನೈಸರ್ಗಿಕ ಸಂಪತ್ತೂ ಉಳಿಯಬೇಕು, ಮನುಷ್ಯನ ಬದುಕೂ ಒಳ್ಳೆಯದಾಗಬೇಕು. ಅದಕ್ಕಾಗಿ ನಾವೆಲ್ಲ ಕುಳಿತುಕೊಂಡು ಆಲೋಚನೆ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯೋಣ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ರಮಾನಾಥ ರೈ.ಬಿ : ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಸೊಪ್ಪಿನಬೆಟ್ಟಕ್ಕೆ ಸಂಬಂಧಿಸಿದಂತೆ ಹೀಗೀಗೇ ಮಾಡಬೇಕು, ಅದರ ಲಾಭಾಂಶವನ್ನು ನಮಗೇ ಜಾಸ್ತಿ ಕೊಡಬೇಕು ಎಂದು ಹೇಳಿ ಕಾಗೇರಿಯವರು ನಮಗೆ ಒಂದು ಮನವಿಯನ್ನು ಕೊಟ್ಟಿದ್ದರು. ಅವರನ್ನು ಮೀಟಿಂಗಿಗೆ ಕರೆಸಿ ಲಾಭಾಂಶವನ್ನು ಅವರಿಗೇ ಜಾಸ್ತಿ ಕೊಡತಕ್ಕಂಥಾದ್ದನ್ನು ಮಾಡಿದೆವು. ಸಾಧ್ಯವಾದಷ್ಟು, ಕಾನೂನಿನ ವ್ಯಾಪ್ತಿಯೊಳಗೆ ಏನೇನು ಸಹಾಯ ಮಾಡಬಹುದೋ ಅದನ್ನು ಮಾಡಬೇಕು ಎನ್ನುವುದು ನಮಗಿದೆ. ಕಾಗೋಡು ತಿಮ್ಮಪ್ಪ ಸಾಹೇಬರು ಈಗ ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ತಾವು ಗಮನಿಸಬೇಕು, 1962ನೇ ಇಸವಿಯಲ್ಲಿ ಶರಾವತಿ ಯೋಜನೆಯಾಯಿತು. ಆ ಯೋಜನೆಯಿಂದ ಮುಳುಗಡೆಯಾದ ಪ್ರದೇಶದ ಜನರನ್ನು ಮತ್ತೆ ಫಾರೆಸ್ಟ್‌ನಲ್ಲಿ ಕೂರಿಸಿದರು. ನಾವು ಈ ಸಲ, ನಮ್ಮ ಸರ್ಕಾರ ಅವರಿಗೆ ಪುನರ್ವಸತಿ ಮಾಡತಕ್ಕಂಥ ದೊಡ್ಡ ಕೆಲಸವನ್ನು ಮಾಡಿದ್ದೇವೆ. ಶರಾವತಿ, ಹೇಮಾವತಿ, ಹಾರಂಗಿ ಈ ಯೋಜನೆಗಳ ಪ್ರದೇಶಗಳಲ್ಲಿದ್ದವರಿಗೆ ಇದುವರೆಗೆ rehabilitation ಆಗಿರಲಿಲ್ಲ, ಅವರಿಗೆ ಭೂಮಿ ಕೊಟ್ಟಿರಲಿಲ್ಲ. ಅನೇಕ ಸರ್ಕಾರಗಳು ಬಂದವು. ಅನೇಕರು ಮುಖ್ಯಮಂತ್ರಿಗಳಾದರು. ಶಿವಮೊಗ್ಗ ಭಾಗದವರು ಕೂಡ ಮುಖ್ಯಮಂತ್ರಿಯಾದರು. ಆದರೆ ಶರಾವತಿ ಯೋಜನೆಯಿಂದ ನಿರ್ಗತಿಕರಾದವರ ಸಮಸ್ಯೆಯನ್ನು ಪರಿಹಾರ ಮಾಡಿದರು ಯಾರೂ ಇಲ್ಲ. ಕಾಗೋಡು ತಿಮ್ಮಪ್ಪನವರ ಗಮನಕ್ಕೆ ನಾನು ತರತಕ್ಕಂಥಾದ್ದು ಏನೆಂದರೆ, ಶರಾವತಿ ಯೋಜನೆಯಿಂದ ಮುಳುಗಡೆಯಾದ ಪ್ರದೇಶದವರೆಲ್ಲರಿಗೂ ಕೂಡ ಜಮೀನು ಕೊಟ್ಟಿದ್ದೇವೆ, ಹಾರಂಗಿ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದವರೆಲ್ಲರಿಗೂ ಜಮೀನು ಕೊಟ್ಟಿದ್ದೇವೆ, ಹೇಮಾವತಿ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದವರೆಲ್ಲರಿಗೂ ಜಮೀನು ಕೊಟ್ಟಿದ್ದೇವೆ. ಇದು ನಾನು ಪ್ರಚಾರಕ್ಕಾಗಿ ಹೇಳುತ್ತಿರುವಂಥಾದ್ದಲ್ಲ, ನಾನು ಪ್ರಚಾರಕ್ಕಾಗಿ ಮಾತನಾಡುವ ಮನುಷ್ಯನೇ ಅಲ್ಲ. ನಾನು low profile ಆಗಿ ಮಾತನಾಡುತ್ತೇನೆ. ನಾವು ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸಾಕಷ್ಟು ಕೆಲಸ ಮಾಡಿದ್ದೇವೆ. Deemed forest ವಿಚಾರಕ್ಕೆ ಬಂದರೆ, ಹಿಂದಿನ ಸರ್ಕಾರದವರು 17 ವರ್ಷಗಳ ಹಿಂದೆ ಸುಪ್ರೀಂ ಕೋರ್ಟಿಗೆ, ಅದು 10 ಲಕ್ಷ ಹೆಕ್ಟೇರ್ ಇದೆ ಎಂದು ಅಫಿಡವಿಟ್ ಕೊಟ್ಟಿದ್ದಾರೆ, ಒಂದು ವರ್ಷದಲ್ಲಿ ಇದನ್ನು ಸರಿಪಡಿಸಿ ಕೊಡಬೇಕು ಎಂದು ವಾಪಸ್ಸು ಕಳುಹಿಸಿದರು. ಈ 17 ವರ್ಷಗಳಲ್ಲಿ ಅನೇಕ ಸರ್ಕಾರಗಳು ಬಂದವು, ಅನೇಕರು ಮುಖ್ಯಮಂತ್ರಿಗಳಾದರು. ನಾನು ಯಾರ ಬಗ್ಗೆಯೂ

ಹೇಳುತ್ತಿಲ್ಲ. ಆದರೆ ಯಾರೂ ಅದನ್ನು ಸರಿಪಡಿಸಿ ಕಳುಹಿಸತಕ್ಕಂಥಾದ್ದನ್ನು ಮಾಡಿಲ್ಲ. ಈಗ ನಾವು joint survey ಮಾಡಿದ್ದೇವೆ. ಇದು 2-3 ಸಲ ಕ್ಯಾಬಿನೆಟ್‌ಗೆ ಬಂದಿದ್ದು, ಅಂತಿಮವಾಗಿ ಇತ್ತೀಚೆಗೆ ಕ್ಯಾಬಿನೆಟ್‌ಗೆ ಬಂದಾಗ, ಮುಂದೆ ಯಾರಿಗೂ ಅನ್ಯಾಯವಾಗಬಾರದೆನ್ನುವ ಕಾರಣಕ್ಕಾಗಿ ಮತ್ತೆ ಪರಿಶೀಲನೆ ಮಾಡಿದ್ದೇವೆ. ಈಗ 3 ಲಕ್ಷ ಹೆಕ್ಟೇರ್ ಜಮೀನು ಮಾತ್ರ deemed forest ಎಂದು ಆಗಿದೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅದನ್ನು ಸರಿಯಾಗಿ ನೋಡಿಕೊಂಡು ಸರಿಪಡಿಸಬೇಕು, ಮತ್ತೆ ನಾವು ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುವಾಗ ತಪ್ಪಾಗಬಾರದು ಎಂದು ಹೇಳಿ, ಜನಹಿತವನ್ನು ಸಾಕಷ್ಟು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಬೇಕು ಎಂದು ನಾವು ಮಾಡಿದ್ದೇವೆ. ಡಾ: ಕಸ್ತೂರಿ ರಂಗನ್ ವರದಿ ಬಂದ ಮೇಲೆ ನಮ್ಮನ್ನು ಅಪಾರ್ಥ ಮಾಡಿಕೊಂಡಂಥವರೂ ಇದ್ದಾರೆ. ರಾಷ್ಟ್ರೀಯ ಉದ್ಯಾನವನ, reserved forest, ವನ್ಯಜೀವಿ ಧಾಮವನ್ನು ಬಿಟ್ಟು ಬೇರೆ ಒಂದು ಇಂಚು ಜಾಗವನ್ನೂ ಕೂಡ ನಾವು ಶಿಫಾರಸ್ಸು ಮಾಡಿಲ್ಲ. ಆದರೆ draft notification ಆದಾಗ ಎರಡೆರಡು ಸಾರಿ ಹಳೆಯ notificationನ್ನೇ ಬಂತು. ಕಡೆಗೆ ನಾವು ಇತ್ತೀಚೆಗೆ ತೀರ್ಮಾನ ಮಾಡಿದೆವು, ಈ ರೀತಿ ಆಗುವುದಾದರೆ, ಈಗಾಗಲೇ ನಮಗೆ ಸಾಕಷ್ಟು ನಿಯಂತ್ರಣವಿದೆ, ನಮಗೆ ಕಸ್ತೂರಿ ರಂಗನ್ ವರದಿ ಬೇಡ ಎಂದು ಹೇಳಿ ನಾವು ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇಷ್ಟು ಮಾಡಿದ್ದೇವೆ. ನಾವು ಎಷ್ಟೇ ಮಾಡಿದರೂ ಕೂಡ public hearing ಮಾಡಿಲ್ಲ ಎಂದು ಹೇಳುತ್ತಾರೆ. ಜೀವರಾಜ್‌ರವರು public hearing ಮಾಡಿಲ್ಲ ಎಂದು ಹೇಳಿದರು. Public hearing ಯಾರಿಗೆ ಮಾಡಬೇಕಾಗುತ್ತದೆ, ಕಾಡುಪ್ರಾಣಿಗಳನ್ನು ಮಾಡಬೇಕಾಗುತ್ತದೆ. ಜನವಸತಿ ಪ್ರದೇಶಕ್ಕೆ ನಾವು ಹೋಗಿಲ್ಲ. ವನ್ಯಜೀವಿಧಾಮ, ರಾಷ್ಟ್ರೀಯ ಉದ್ಯಾನವನ್ನು ಮಾತ್ರ ನಾವು ಶಿಫಾರಸ್ಸು ಮಾಡಿದ್ದೇವೆ. ಇಲ್ಲಿ ನಾವು public hearing ಯಾರನ್ನು ಮಾಡಬೇಕು? ಪ್ರಾಣಿಗಳನ್ನು ಮಾಡಬೇಕು. ಏಕೆಂದರೆ, ಮನುಷ್ಯರೇ ಇಲ್ಲದ ಜಾಗವನ್ನು ಮಾತ್ರ ನಾವು ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಹಾಗಾಗಿ, ಇದು ಬೇಕೇ, ಬೇಡವೇ ಎಂದು ನಾವು ಪ್ರಾಣಿಗಳನ್ನು public hearing ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ಆಯಿತು, ಬೋಪಯ್ಯನವರೇ, ನೀವು ಮಾತನಾಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಡಿ.ಎನ್. ಜೀವರಾಜ್: ಒಂದು ನಿಮಿಷ. ಅವರು ನನ್ನ ಹೆಸರು ಹೇಳಿರುವುದರಿಂದ ನಾನು ಮಾತನಾಡುತ್ತೇನೆ. ನಾನೇನು ಅವರ ಹತ್ತಿರ ಜಗಳಕ್ಕೆ ನಿಂತಿಲ್ಲ. ತಾವು ಹೇಳುತ್ತಿರುವಂತೆ ತಮ್ಮ ಕಳಕಳಿಯನ್ನು ನಾವು ಮೆಚ್ಚುತ್ತೇವೆ. ನೀವು ವನ್ಯಜೀವಿಧಾಮಗಳನ್ನು ಶಿಫಾರಸ್ಸು ಮಾಡಿದಾಗ ಅಲ್ಲಿ ಹೋಗಿ public hearing ಮಾಡಿ ಎಂದು ನಾವು ಹೇಳಿದ್ದಲ್ಲ, ಮನುಷ್ಯರಿರುವ ಜಾಗದಲ್ಲಿ ಮಾಡಿದಿರಲ್ಲ, ಆಗ ನೀವು ಜನಸಂಪರ್ಕ ಸಭೆಗಳನ್ನು ಮಾಡಬೇಕಿತ್ತು, ಗ್ರಾಮಸಭೆಗಳನ್ನು ಮಾಡಬೇಕಿತ್ತು, ಗ್ರಾಮ ಪಂಚಾಯಿತಿ ಸಭೆಯನ್ನಲ್ಲ ಎಂದು ನಾನು ಹೇಳಿದ್ದೆ. ನಾವು ಹೇಳಿರುವ ಪದವನ್ನು ನೀವು ತಪ್ಪು ಅರ್ಥಮಾಡಿಕೊಂಡು ಹೇಳುತ್ತಿದ್ದೀರಿ. National parkಗಳು, ವನ್ಯಜೀವಿ ಧಾಮಗಳನ್ನು deemed forest ಎಂದು ಶಿಫಾರಸ್ಸು ಮಾಡಿ ಕಳುಹಿಸಿದ್ದೇವೆ ಎಂದು ನೀವು ಹೇಳಿದಿರಿ. ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆಂದರೆ, ನಾನು, ರಂಜನ್ ಮತ್ತು ವಿಶ್ವೇಶ್ವರ ಹೆಗಡೆಯವರು ಹೋದಾಗ ಪ್ರಕಾಶ್ ಜಾವಡೇಕರ್‌ರವರು ಏನು ಹೇಳಿದ್ದರೆಂದರೆ, ನೀವು ಗ್ರಾಮಸಭೆಗಳ ವರದಿಗಳನ್ನು ಕಳುಹಿಸಿ, ಗ್ರಾಮ ಪಂಚಾಯಿತಿಯ ವರದಿಯನ್ನಲ್ಲ, ಮತ್ತು ವಿಧಾನಸಭೆಯಿಂದ ಬರುವಂಥ ವರದಿಯನ್ನಲ್ಲ, ಗ್ರಾಮಸಭೆಯ ವರದಿಯನ್ನು ಕ್ರೋಢೀಕರಿಸಿ ಗ್ರಾಮಸಭೆಯಲ್ಲಿ physical survey ಮಾಡಿ ಅಲ್ಲಿ cultural landscaping, natural landscaping ಮಾಡಿ ಕಳುಹಿಸಿ ಎಂದು ಹೇಳಿದ್ದಾರೆ.

(ಮುಂದುವರೆದಿದೆ)

13-06-2017 : 1-30 [19] kkd:ps

ಗ್ರಾಮಸಭೆಯ ವರದಿಯನ್ನು ಕ್ರೋಢೀಕರಿಸಿ ಗ್ರಾಮಸಭೆಯಲ್ಲಿ physical survey ಮಾಡಿ ಅಲ್ಲಿ cultural landscaping natural landscaping ಮಾಡಿ ಕಳುಹಿಸಿ ಎಂದು ಹೇಳಿದ್ದಾರೆ. ಅದನ್ನು ಮಾಡಿ ಕಳುಹಿಸಿ ಎಂದು ನಿಮಗೆ ಸಲಹೆ ಕೊಡುವುದು ಬಿಟ್ಟರೆ ನಾವು ನಿಮಗೆ ಕಾಡಿಗೆ ಹೋಗಿ ಪ್ರಾಣಿಗಳ ಹತ್ತಿರ ಕೇಳಿ ಎಂದು ಹೇಳಿಲ್ಲ. ನೀವು ಏಕೋ ಅದನ್ನು wrong interpretation ಮಾಡಿದಿರಿ. ನೀವು ಆವತ್ತು ಒಂದು ದಿನ ಹೀಗೆಯೇ ಹೇಳಿದಿರಿ. ನಾನು ಆನೆ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪರ, ನಾನು ಕಾಡಿನ ಪರ, ನಾನು ಹುಲಿ ಪರ ಎಂದು ಎದೆತಟ್ಟಿ ಹೇಳಿದಿರಿ. ನೀವು ಮನುಷ್ಯರ ಪರವೂ ಒಂದು ಚೂರು ಇರಿ ಎಂದು ನಾನು ಆವತ್ತೂ ಸಹ ನಿಮಗೆ ಹೇಳಿದೆ. ನಾವು ಹೇಳಿದ್ದನ್ನು ನೀವು ತಪ್ಪು ಅರ್ಥೈಸಿಕೊಂಡು ಹೇಳುತ್ತಿರುವುದು ಬಿಟ್ಟರೆ, ನಿಮ್ಮ ಕಾಳಜಿ, ಕಳಕಳಿ ಬಗ್ಗೆ ನಮಗೆ ನಂಬಿಕೆ ಇದೆ. ನಿಮ್ಮ ವಿಚಾರ ಎಲ್ಲ ಒಳ್ಳೆಯದಿದೆ. ಆದರೆ, ಏಕೋ ಈ ವಿಷಯದಲ್ಲಿ ಹೇಳಬೇಕಾದರೆ ಸ್ವಲ್ಪ emotional ಆಗುತ್ತೀರಿ. ಅದು ಬೇಡ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು): Emotional ಏನಿಲ್ಲ. ನಾವು ಜನರ ಪರವೂ ಇದ್ದೇವೆ. ನೋಡಿ, ನಾವು cultural landscape ಗೆ ಹೋಗುವುದಿಲ್ಲ. ತಾವು ಅಪಾರ್ಥ ಮಾಡಿಕೊಂಡಿದ್ದೀರಿ.

ಶ್ರೀ ಡಿ.ಎನ್. ಜೀವರಾಜ್: ಒಂದು ನಿಮಿಷ ಹೇಳಿಬಿಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಮೊದಲು ಸದಸ್ಯರು ಹೇಳಿದ್ದೆಲ್ಲವನ್ನು ಸಚಿವರು ಕೇಳಿಕೊಳ್ಳಲಿ. ಆಮೇಲೆ ನೀವು ಉತ್ತರ ಕೊಡುವ ಸಮಯದಲ್ಲಿ ಉತ್ತರ ಕೊಡುವಿರಂತೆ. ಈಗಲೇ ಸಚಿವರಾದ ನೀವು ಮಧ್ಯೆ ಮಧ್ಯೆ ಎದ್ದು ನಿಂತು ಗಂಟೆಗಟ್ಟಲೆ ಸಮಯ ತೆಗೆದುಕೊಂಡರೆ ಸದಸ್ಯರಾದ ನಾವು ಹೇಗೆ ಪ್ರಶ್ನೆ ಮಾಡುವುದು?

ಶ್ರೀ ಡಿ.ಎನ್. ಜೀವರಾಜ್: ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶ ಏನೆಂದರೆ, 4(1) notification ಅನ್ನು 2007-08ರಲ್ಲಿ ಮಾಡಿದ್ದಾರೆ. ನಾನು ಮೊನ್ನೆ ಸದನದಲ್ಲಿ ಭಾಷಣ ಮಾಡಿದಾಗ ಅರಣ್ಯ ಸಚಿವರಾದ ತಾವು ಸದನದಲ್ಲಿರಲಿಲ್ಲ. ನಾವು 50, 53ಗೆ ಅರ್ಜಿ ಕೊಟ್ಟಿರುವುದು 1998-99ರಲ್ಲಿ. ಅಲ್ಲಿ ಮೀಟಿಂಗ್‌ಗೆ ಕುಳಿತುಕೊಂಡರೆ ಸರ್, ಇದು 4(1) ಎಂದು ಅವರು ಹೇಳುತ್ತಾರೆ. ನಾವು 53ಗೆ ಅರ್ಜಿ ಕೊಟ್ಟಿರುವುದು 1998-99ರಲ್ಲಿ ಆದರೆ, 1990-91ರಲ್ಲಿ 50ಗೆ ಅರ್ಜಿ ಕೊಟ್ಟಿದ್ದಾದರೆ, ನಿಮ್ಮದು 4(1) notification ಆಗಿರುವುದು 2006 to 2008ರಲ್ಲಿ survey ಆಗಿರುವುದಾದರೆ, ಇನ್ನೂ ಅದು just 4(1). ಅದು 6(1) ಆಗಿಲ್ಲ, 17 ಆಗಿಲ್ಲ, notification ಆಗಿಲ್ಲ. ಇದು ರೈತರು ಮಾಡಿರುವ ಜಾಗಗಳನ್ನು ಸೇರಿಸಿ ಮಾಡಿರುವುದು ತಪ್ಪು. ನಮ್ಮ ಮಾನ್ಯ ಕಂದಾಯ ಮಂತ್ರಿಯವರು Mother Department ನಮ್ಮದು, ನಾವು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

survey ಮಾಡಿಸಿ ಕಳುಹಿಸಿಬೇಕೆಂದು ಪದೇ ಪದೇ ಹೇಳುತ್ತಿದ್ದಾರೆ. ಆದರೆ, ನಿಮ್ಮ (ಅರಣ್ಯ) ಇಲಾಖೆಯ ಅಧಿಕಾರಿಗಳು cooperate ಮಾಡುತ್ತಿಲ್ಲ. ತಮ್ಮ ಕಳಕಳಿಯಲ್ಲಿ ಇದನ್ನೂ ಒಂದು ಸೇರಿಸಿಕೊಳ್ಳಿ. ಇದನ್ನೊಂದು ಸೇರಿಸಿಕೊಂಡು ಆ 4(1) notification ಅನ್ನು withdraw ಮಾಡಿ.

ಶ್ರೀ ಬಿ. ರಮಾನಾಥ ರೈ: ಒಂದೇ ಒಂದು ನಿಮಿಷ ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು: ಸಚಿವರೆ, ತಾವು ಆಮೇಲೆ ಮಾತನಾಡಿ. ಬೋಪಯ್ಯನವರು ಚರ್ಚೆ ಮುಂದುವರಿಸಲಿ.

ಶ್ರೀ ಬಿ. ರಮಾನಾಥ ರೈ: ಒಂದೇ ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವಂಥದ್ದು ಏನೆಂದರೆ, ನಾವು cultural landscape ಗೆ ಹೋಗುತ್ತಲೇ ಇಲ್ಲ. Cultural landscape ಗೆ ನಾವು ಹೋಗುತ್ತಲೇ ಇಲ್ಲ. Natural landscape ಅನ್ನು ಮಾತ್ರ ನಾವು ಕಳುಹಿಸತಕ್ಕಂಥದ್ದು. ತಾವೂ ಕೂಡ ಅರ್ಥ ಮಾಡಿಕೊಳ್ಳುವಾಗ ಸ್ವಲ್ಪ ಅಪಾರ್ಥ ಮಾಡಿಕೊಂಡಿದ್ದೀರಿ. ಜನ ವಸತಿ ಇರತಕ್ಕಂಥ ಜಾಗಕ್ಕೆ ನಾವು ಹೋಗುವುದೇ ಇಲ್ಲ. ಆಯಿತು, ನೀವು ಹೇಳಿದಿರಿ ಎಂದು ನಾನು 2-3 ಗುಂಪುಗಳನ್ನು ಮಾಡಿ, ನಾವು cabinet sub-committee ಯವರು ಎಲ್ಲಾ ಜಿಲ್ಲೆಗಳಿಗೆ ಹೋಗಿ ಬಂದಿದ್ದೇವೆ. ಅದೂ ಕೂಡ ಸರಿಯಿಲ್ಲವೆಂದು ಹೇಳಿದಿರಿ. ಆನಂತರ ನಾವು ಗ್ರಾಮಸಭೆಗಳನ್ನು ಕರೆಸಿ ಅಲ್ಲಿಂದ ಜನರ ಅಭಿಪ್ರಾಯಗಳನ್ನು ತೆಗೆದುಕೊಂಡು ಬರಬೇಕೆಂದು ಹೇಳಿದ ಮೇಲೆ, ನಮಗೆ ಅಂತಿಮವಾಗಿ ಒಂದು ಬಹಳ ಸುಲಭದ ಕೆಲಸವೇನೆಂದರೆ, ನಮಗೆ ಕಸ್ತೂರಿ ರಂಗನ್ ವರದಿ ಬೇಡ. ಇವತ್ತೂ ಕೂಡ ನಾನು ಹೇಳುತ್ತೇನೆ, ಕಸ್ತೂರಿ ರಂಗನ್ ವರದಿ ನಮಗೆ ಬೇಡ. ನಮಗೆ ಇಷ್ಟು restriction ಇದೆ. ಹಿಂದುಗಡೆ ಸುನಿಲ್ ಕುಮಾರ್‌ರವರು ಕುಳಿತಿದ್ದಾರೆ. ನಮಗೆ NDA ಸರ್ಕಾರ ಹುಲಿ ಯೋಜನೆಗೆ ಮಂಜೂರಾತಿ ಕೊಟ್ಟಿದೆ. ಮಂಜೂರಾತಿ ಕೊಟ್ಟಾದ ಮೇಲೆ ನಾವು ಅದನ್ನು ಒಪ್ಪಲಿಲ್ಲ. ಈಗ ಹುಲಿ ವಿಚಾರವಾಗಿ, ನೀವು ಹುಲಿ, ಆನೆ, ಕುದುರೆ ಅದರ ಬಗ್ಗೆ ಯೋಚನೆ ಮಾಡುತ್ತೀರಿ ಎಂದು ಹೇಳುತ್ತೀರಿ. ನಾವು ಮನುಷ್ಯನ ಬಗ್ಗೆ ಯೋಚನೆ ಮಾಡುತ್ತೇವೆ. ನಾವು ಮನುಷ್ಯನನ್ನು ಯೋಚನೆ ಮಾಡಿ, ಹುಲಿ ಯೋಜನೆಯನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದರೂ ಕೂಡ, ಅರಣ್ಯ ಮಂತ್ರಿಯಾಗಿ ನಾನು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದನ್ನು implementation ಮಾಡುವುದಿಲ್ಲವೆಂದು ಅದನ್ನು ನಿಲ್ಲಿಸಿದ್ದೇನೆ ಎನ್ನತಕ್ಕಂಥ ಮಾತನ್ನು, ಅದೂ ಕೂಡ ಜನರ ಪರವಾಗಿರತಕ್ಕಂಥ ವಿಚಾರ. ಜನವಸತಿಗೆ ತೊಂದರೆ ಆಗಬಾರದೆನ್ನತಕ್ಕಂಥ ವಿಚಾರ. ನಾವು ಪ್ರಾಣಿಗಳ ಸಂರಕ್ಷಣೆಯ ಬಗ್ಗೆಯೂ ಆಲೋಚನೆ ಮಾಡುತ್ತೇವೆ, ವನ್ಯ ಜೀವಿಗಳ ಸಂರಕ್ಷಣೆಯ ಬಗ್ಗೆಯೂ ಆಲೋಚನೆ ಮಾಡುತ್ತೇವೆ, ನಾವು ಪರಿಸರದ ಸಂರಕ್ಷಣೆ ಬಗ್ಗೆ ಆಲೋಚನೆ ಮಾಡುತ್ತೇವೆ, ಮನುಷ್ಯರ ಹಿತವನ್ನು ಕೂಡ ನಾವು ಗಮನಿಸುತ್ತೇವೆ.

ಉಪಾಧ್ಯಕ್ಷರು: ಬೋಪಯ್ಯನವರೆ, conclude ಮಾಡಿ.

ಶ್ರೀ ಕೆ.ಜಿ. ಬೋಪಯ್ಯ: ನಾನು ಎರಡೇ ಎರಡು ವಿಷಯ ಹೇಳಿ ಮುಕ್ತಾಯಗೊಳಿಸುತ್ತೇನೆ. ಎಲ್ಲರೂ ಮಧ್ಯದಲ್ಲಿ ಎದ್ದು ಮಾತನಾಡಿದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಉಪಾಧ್ಯಕ್ಷರು: ನೀವು yield ಆಗುತ್ತೀರಿ, ಅದಕ್ಕೆ ಅವರೆಲ್ಲ ಮಾತನಾಡುತ್ತಾರೆ. ನೀವು yield ಆಗಬೇಡಿ.

ಶ್ರೀ ಕೆ.ಜಿ. ಬೋಪಯ್ಯ: ಇನ್ನು yield ಆಗುವುದಿಲ್ಲ. ಇನ್ನು 5 ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಈಗ ಮಾನ್ಯ ಅರಣ್ಯ ಸಚಿವರು ಜನವಸತಿ ವಿಚಾರವಾಗಿ ಹೇಳಿದಿರಿ. ಎಲ್ಲ 1960, 1962, 1978 ರ ವರೆಗೆ ಹೇಳಿದಿರಿ. ಆದರೆ, ಆಗ forest, ಯಾವುದೋ land ಕೊಟ್ಟಿರುವ ಕಾರಣ ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಅದಕ್ಕೆ Forest Conservative Act ಪ್ರಕಾರ alternate land ಕೊಡಿ ಎಂದು ಕೇಳುವುದು ನಿಮ್ಮದು ಯಾವ ನ್ಯಾಯ? Forest Conservation Act ಬಂದಿರುವುದು 1980ರಲ್ಲಿ. ಆ 1980ಕ್ಕಿಂತ ಮೊದಲು ಇವರೆಲ್ಲ ಕುಳಿತು ಎಲ್ಲವೂ ಆಗಿದೆ. ಅವರಿಗೆ ಹಕ್ಕುಪತ್ರ ಕೊಡಬೇಕೇ ಹೊರತು ಅದಕ್ಕೆ double alternate land ಕೊಡಿ ಎಂದು ಕೇಳಿದರೆ ಎಲ್ಲಿಂದ ಕೊಡುವುದು? ಕಂದಾಯ ಜಮೀನು ಎಲ್ಲಿದೆ? ಇವತ್ತು ನಮ್ಮ ಜಿಲ್ಲೆಯಲ್ಲಿ ಅದೇ ದೊಡ್ಡ ಸಮಸ್ಯೆ. ಒಂದು ಸಾವಿರ ಎಕರೆ ಜಾಗವನ್ನು ಹಾರಂಗಿ ಜಲಾಶಯದಿಂದ ಮುಳುಗಡೆಯಾದವರಿಗೆ ಕೊಟ್ಟಿದ್ದಾರೆ. ಅದಕ್ಕೆ 2000 ಎಕರೆ alternate land ಕೊಡಬೇಕೆಂದು ಕೇಳಿದ್ದಾರೆ. It is all prior to 1972.

ಶ್ರೀ ಬಿ. ರಮಾನಾಥ ರೈ: ಗಿಡ ನೆಡಬೇಕೆಂದು ಆದೇಶ ಮಾಡಿದೆ.

ಶ್ರೀ ಕೆ.ಜಿ. ಬೋಪಯ್ಯ: ದಯಮಾಡಿ ನಾನು ಹೇಳುವುದನ್ನು ಸ್ವಲ್ಪ ಕೇಳಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ. ರಮಾನಾಥ ರೈ: ಗಿಡ ಎಲ್ಲಿ ನೆಡುತ್ತೇವೆ, ಹೇಗೆ ನೆಡುತ್ತೇವೆ ಎಂದು ನಮಗೆ ಗೊತ್ತಿದೆ. ನಾವು court ಗೆ ಹೋಗಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ನಾವು ಹೇಳುವುದನ್ನು ಕೇಳಿ. ನಾನು 1980 ರಿಂದ ಈ ಕಡೆಗೆ forest land ಅನ್ನು ತೆಗೆದುಕೊಂಡು ಅವರನ್ನು ಕೂರಿಸಿದ್ದರೆ, ಅರಣ್ಯ ಇಲಾಖೆಯವರಿಗೆ alternate land ಕೊಡಬೇಕು. ಆದರೆ, 1980ಕ್ಕಿಂತ ಹಿಂದೆ ನಡೆದಂಥ ಪ್ರಕ್ರಿಯೆಗಳಿಗೆ ಈಗ alternate land ಕೇಳುವುದು ಹೇಗೆ? ಅದು ಸರಿಯೇ? ಆ ತರಹ ಏನಾದರೂ retrospective effect ಎಂದು Forest Conservation Act ನಲ್ಲಿ ಇದೆಯೇ? ಈ ರೀತಿ ಅಧಿಕಾರಿಗಳು interpretation ಏಕೆ ಮಾಡುತ್ತಾರೆ? ಈ ರೀತಿ ಅಧಿಕಾರಿಗಳು interpretation ಮಾಡಿಬಿಟ್ಟರೆ ನೀವು ಅದನ್ನು ಕೇಳಬಾರದು ಎಂದು ನನ್ನ ವಿನಂತಿಯಾಗಿದೆ. ಆಗ ಆಗಿದ್ದು ಮುಗಿಯಿತು, ಅವರಿಗೆ ಕೊಟ್ಟಿದ್ದೇವೆ, ಅವರಿಗೆ ಹಕ್ಕುಪತ್ರ ಕೊಡುವುದು ಅಷ್ಟೆ. 1980 onwards ಏನಾದರೂ forest land any public purposeಗೆ ತೆಗೆದುಕೊಂಡರೆ ಅರಣ್ಯ ಇಲಾಖೆಗೆ alternate land ಕೊಡಬೇಕೆಂದು ಇರುವಂಥದ್ದು. ಆ Forest Conservation Act 1980 ಯಲ್ಲಿ Parliament ನಲ್ಲಿ pass ಆದರೂ Gazette Notification has come into effect only after 1984. ಹಿಂದಿನದನ್ನೆಲ್ಲ ತೆಗೆದುಕೊಂಡು ತಾವು ಮಾತನಾಡುತ್ತೀರಿ. ಈ ಅರಣ್ಯದ ವನ್ಯಧಾಮದೊಳಗೆ specially ನಾಗರಹೊಳೆ ಅರಣ್ಯದೊಳಗೆ ಸಾಕಷ್ಟು ಕೆರೆಗಳು ಇವೆ. ಅದನ್ನು ಸ್ವಲ್ಪ ತೆಗೆಯಿರಿ. Tiger reserve forest, ಅಲ್ಲಿ ಕೆರೆಗಳನ್ನೇ ತೆಗೆಯಬಾರದು, ಅದರೊಳಗೆ ಹೋಗಲೇಬಾರದು, ಒಂದು ಗಿಡವನ್ನೂ ಸಹ ಮುಟ್ಟಬಾರದು ಎನ್ನುವುದನ್ನೆಲ್ಲ ಸ್ವಲ್ಪ side ಗೆ ಇಟ್ಟು, ಸಾಕಷ್ಟು ಕೆರೆಗಳು ಅಲ್ಲಿ ಇವೆ. ಅದನ್ನು ತೆಗೆಯಬೇಕು. ಆ roadside ನಲ್ಲಿ ಯಾರಾದರೂ ಹೋದರೆ, ಹೀಗೆ ನೋಡಿದರೆ ಎರಡು ಕೆರೆಗಳನ್ನು ಮಾಡಿದ್ದೀರಿ. ಇದು ಸರಿಯಲ್ಲ. ಒಳಗಡೆ ಸಾಕಷ್ಟು ಕೆರೆಗಳಿವೆ. ಅಲ್ಲಿ ಪ್ರಾಣಿಗಳು ತಿನ್ನುವ ಬೆಳೆ ಬೆಳೆಯಿರಿ. ಮೊನ್ನೆ ಬೆಂಕಿ ಬಿದ್ದು ಕೊಡಗು ಜಿಲ್ಲೆಯಲ್ಲಿ ಸಾಕಷ್ಟು ಅರಣ್ಯ ನಾಶವಾಗಿದೆ. ಅದಕ್ಕೆ ಯಾರು ಕಾರಣಕರ್ತರು ಎಂದು ನೀವೇನಾದರೂ ತನಿಖೆ ಮಾಡಿದಿರಾ? ಮರ ನೆಡುವಾಗ ಆ ಪ್ರಾಣಿಗಳಿಗೆ ಉಪಯೋಗವಾಗುವಂಥದ್ದನ್ನಾದರೂ ನೆಡಿ. ಏಕೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಹೀಗೆ? ಹಿಂದೆ ಒಂದು ಸಲ ನಾಗರಹೊಳೆ ಪಕ್ಕದಲ್ಲಿ ಮರ ಬಿತ್ತು. ಇಲ್ಲಿ ಒತ್ತಾಯ ಮಾಡಿದ್ದಕ್ಕೆ ನೀವು COD ಗೆ ಕೊಟ್ಟಿರಿ. ಯಾರನ್ನು arrest ಮಾಡಿದ್ದೀರಿ? ಪಾಪ, ಅಲ್ಲಿನ ಗಿರಿಜನರು, ಆ ಮರಗಳ ಒಟ್ಟಿಗೆ ಬೆಳೆದ 4 ಜನರನ್ನು ರಾತ್ರೋರಾತ್ರಿ ಎತ್ತಿಕೊಂಡು ಹೋಗಿ ಅವರ ಮೇಲೆ ಕೇಸ್ ಹಾಕಿದ್ದಾರೆ. ಬೆಂಕಿ ಹಾಕಲು ಪ್ರಚೋದನೆ ಕೊಟ್ಟವರು ಯಾರು? ಇವತ್ತಿಗಾದರೂ ಈ ಉತ್ತರದಲ್ಲಿ ಹೇಳಬೇಕು. ಕೊಡಗು ಜಿಲ್ಲೆಯಲ್ಲಿ ಕಳೆದ ಬಾರಿ ಬೆಂಕಿ ಬಿದ್ದು ಸಾಕಷ್ಟು ಅರಣ್ಯ ನಾಶವಾಗಿದೆ. ಬಹುಶ: 2-3 ದಿವಸ ಹತ್ತಿ ಉರಿದಿದೆ. ಆದರೆ, ಬೆಂಕಿ ನಂದಿಸುವ ಕೆಲಸದಲ್ಲಿ ಅರಣ್ಯ ಅಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡಿದರು. ನಾವು ಇಲ್ಲವೆಂದು ಹೇಳುವುದೇ ಇಲ್ಲ. ಆ ಊರಿನವರೂ ಸಹಕಾರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ಕಂಡುಹಿಡಿಯಲೇಬೇಕು. ಅವರಿಗೆ ಶಿಕ್ಷೆ ಆಗಲೇಬೇಕು. ಏಕೆ ಈ ರೀತಿ ಬೇಸಿಗೆಯಲ್ಲಿ ಬೆಂಕಿ ಹಾಕುವಂಥ ಕೆಲಸ ಮಾಡುತ್ತಾರೆ? ಅದರ ಹಿಂದೆ ದೊಡ್ಡ ಶಕ್ತಿಗಳಿವೆ. ಇವರೆಲ್ಲ ಬೆಂಕಿ ಬಿದ್ದದ್ದು ಎಂದು ಹೇಳಿ ಅದನ್ನು video ಮಾಡುವುದು. ನಾವು ಹೋಗಿ ಇವರ so called NGOs ಗಳು ನಾವೇ ಅದನ್ನು ನಂದಿಸಿದ್ದು ಎಂದು ಹೇಳಿ video graph ಮಾಡಿಕೊಂಡು, ಅವರದ್ದೆಲ್ಲ ನಮ್ಮಲ್ಲಿ uniform ಇದೆ, ಅದನ್ನು ಹಾಕಿಕೊಂಡು ಕಾಡಿನೊಳಗಡೆ style ಮಾಡಿಕೊಂಡು ನಿಂತುಕೊಳ್ಳುವುದು. America ಗೆ ಕಳುಹಿಸುವುದು. ಅಲ್ಲಿಗೆ ಕಳುಹಿಸಿ, ಅಲ್ಲಿಂದ ಹಣ ಹೊಡೆಯುವುದು. Japan. . . America ದ್ದೇ, ಜಾಸ್ತಿ. ಅಂದರೆ, ಇವರೇ ಅರಣ್ಯ ರಕ್ಷಣೆ ಮಾಡಿಬಿಟ್ಟರು ಎಂದು ಹೇಳುವುದು. ಅಂಥವರಿಗೆಲ್ಲ ದಯವಿಟ್ಟು ಅವಕಾಶ ಕೊಡಬೇಡಿ. ಆ NGO ಗಳ ಬಗ್ಗೆ ನಿಮ್ಮದು extra. . . . ಇವರು, ಅವರು ಶಾಮೀಲಾಗಿದ್ದಾರೆ. ನಾನು ಎಲ್ಲ ಅಧಿಕಾರಿಗಳು ಎಂದು ಹೇಳುವುದಿಲ್ಲ. ಅವರಿಂದ, ಅವರ ಸಂಪರ್ಕ ತೆಗೆದುಹಾಕಬೇಕು. ನೀವು ನಿಷ್ಪಕ್ಷಪಾತ ತನಿಖೆ ಮಾಡಿದರೆ ಇವರೆಲ್ಲ ಸಿಕ್ಕಿಹಾಕಿಕೊಳ್ಳುತ್ತಾರೆ.

(ಮುಂದು)

. ವಿಸ:13-6-2017 1-40 (20) ಎಂಕೆಕೆ:ಪಿಎಸ್

ಶ್ರೀ ಕೆ.ಜಿ. ಬೋಪಯ್ಯ(ಮುಂ)

ವರ್ಷಂಪ್ರತಿ ಬೆಂಕಿ ಹಾಕುವುದು ಇವರೇ. ಆಮೇಲೆ, ಗಿಡ ನೆಡುತ್ತೇವೆಂದು ಹೇಳಿ ಈಗಲೇ ಕೊಡಗು ಜಿಲ್ಲೆಯಲ್ಲಿ application ಕೊಟ್ಟಿದ್ದಾರೆಂಬ ಮಾಹಿತಿ ಇದೆ. ಇವರೇ ಅರಣ್ಯ ನೆಡುವುದು. ಏಕೆ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉದ್ಯೋಗ ಖಾತ್ರಿ, ಇನ್ನೊಂದು ಇದೆಯಲ್ಲ, ಬಹಳ clean ಆಗಿ ನೆಟ್ಟುಕೊಡುತ್ತಾರೆ. ಇವರು AC room ನಲ್ಲಿ ಕುಳಿತುಕೊಂಡು ಮರ ನೆಡುತ್ತಾರೆಂದರೆ, ಯಾರಾದರೂ ಒಪ್ಪಲಿಕ್ಕಾಗುತ್ತದೆಯೇ? ದಯವಿಟ್ಟು, ಇದನ್ನು ಬಿಡಬೇಡಿ. ಅದರ ಜೊತೆಗೆ, ಕೊನೆಯದಾಗಿ ಹೇಳುತ್ತೇನೆ. ಇವತ್ತು notification ಆಗಿದೆ. ನಾನು ನಿನ್ನೆ zero hour ನಲ್ಲಿ ಹೇಳಿದೆ. May 2015ಕ್ಕೆ ಒಂದು ಮತ್ತು 25ಕ್ಕೆ ಇನ್ನೊಂದು ಆದೇಶ ಆಗಿದೆ. ನಮ್ಮ ಬ್ರಹ್ಮಗಿರಿ ಮತ್ತು ತಲಕಾವೇರಿ Eco Sensitive Zone ಎಂದು ಆಗಿದೆ. ಆದರೆ, ನಿಮಗೊಂದು ಅಧಿಕಾರವನ್ನು ಕೊಟ್ಟಿದ್ದಾರೆ. Final ಮಾಡುವಂಥ ಎಲ್ಲ ಅಧಿಕಾರ ಸರ್ಕಾರಕ್ಕಿದೆ. Zonal Master Plan for Eco Sensitive Zone May ಅಲ್ಲ, The State Government shall for the purpose of eco sensitive zone prepare a zonal master plan within the period of two years. 2 ವರ್ಷ time ಇದೆ. ಹಾಗಾಗಿ, notification ಆದರೂ ಕೂಡ ನಮ್ಮಿಂದ ಸ್ಪಷ್ಟೀಕರಣ ಹೋಗಬೇಕು. ಇದು final ಅಲ್ಲ. Within 2 years from the date of publication of this Notification in the Official Gazette in consultation with the local people and adhering to the stipulations given in the notification for the approval of the Competent Authority of the State Government. ನಾನು Regional Commissioner ನದ್ದು ಹೇಳಿದೆ. ಹಾಗಾಗಿ, ಈಗಲೇ ಶುರು ಮಾಡಿಬಿಟ್ಟಿದ್ದಾರೆ. ಜನರು ಧರಣಿ, ಗಲಾಟೆ ಮಾಡುತ್ತಿದ್ದಾರೆ. ಭಾಗಮಂಡಲದಲ್ಲಿ ಕಸ ವಿಲೇವಾರಿಗೆ ಪೈಸಾರಿ ಲ್ಯಾಂಡ್‌ನಲ್ಲಿ ಗುರುತು ಮಾಡಿದರೆ ಅದು within 1 k.m. ಬರುತ್ತದೆ, ನೀವು ಕಸ ವಿಲೇವಾರಿ ಮಾಡಬೇಡಿ ಎಂದು ಇನ್ನೂ ನೀವು final ಮಾಡಲೇ ಇಲ್ಲ, ಆಗಲೇ ಅಲ್ಲಿ ನೀವು ಕಸ ವಿಲೇವಾರಿ ಮಾಡಬೇಡಿ ಎನ್ನುತ್ತಾರೆ. ಹಾಗಾದರೆ, ಭಾಗಮಂಡಲವನ್ನು ಹೇಗೆ clean ಆಗಿ ಇಟ್ಟುಕೊಳ್ಳುವುದು? ಎಲ್ಲಿ ಹಾಕುವುದು? ಒಂದು ಕಡೆ Supreme Court judgment ಇದೆ. ಕಾವೇರಿ ಹೊಳೆ ಅಲ್ಲಿ ತಲಕಾವೇರಿಯಿಂದ ಹಿಡಿದು ತಮಿಳುನಾಡಿನವರೆಗೆ clean ಆಗಿ ಇಟ್ಟುಕೊಳ್ಳಬೇಕು. ಕಸ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿಲೇವಾರಿ ಬಗ್ಗೆ ಈಗಲೇ ಹೇಳುವುದು. ಈ notification ಜಾರಿಗೇ ಬಂದಿಲ್ಲ. ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಏಕೆ ಹೀಗೆ? ಅಧಿಕಾರಿಗಳನ್ನು ಕರೆದು ಕಿವಿ ಹಿಂಡುವ ಕೆಲಸವವನ್ನಾದರೂ ಮಾಡಿ. ತಾವು ಬಂದು ಅವರ ಕಿವಿ ಹಿಂಡದೇ ಹೋದರೆ ಆಗುವುದಿಲ್ಲ. ಎಲ್ಲ ಅವರು ಹೇಳಿದ್ದೇ ಕಾನೂನಾಗಿದೆ. ಅರಣ್ಯ ಹಕ್ಕು ಕಾಯಿದೆಯಲ್ಲಿ ಅರಣ್ಯ ಹಕ್ಕು ಸಮಿತಿ ಸಭೆಯಾದರೆ ಆ ಅರಣ್ಯ ಹಕ್ಕು ಸಮಿತಿಯಲ್ಲಿ Ranger ಸಭೆಯಲ್ಲಿ ಭಾಗವಹಿಸಬೇಕು. ಅವರು ಭಾಗವಹಿಸುವುದೇ ಇಲ್ಲ. ಯಾರೋ Forester, ಯಾರೂ ಇಲ್ಲದಿದ್ದರೆ ನೀವು ಅಲ್ಲಿ ಹೋಗಿ ಎಂದು ಹೇಳುವುದು. Clerk ಕಳುಹಿಸುವುದಿಲ್ಲ. Forester ಅನ್ನು ಕಳುಹಿಸುತ್ತಾರೆ. ಇಲ್ಲದಿದ್ದರೆ ಯಾರೋ Guard ಕಳುಹಿಸುವುದು. ಮತ್ತೆ ಅಲ್ಲಿಯ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಅವರು ಆದೇಶ ಮಾಡುವುದು. ನನ್ನ ಪಂಚಾಯಿತಿಯಲ್ಲಿ ಇದು ನಡೆದಂಥದ್ದು. ಆ entire file ಅನ್ನು ನನ್ನ ಕಛೇರಿಗೆ ಕಳುಹಿಸು ಎಂದು ಹೇಳುವುದು. ಅವರು ನೋಡಿ, scrutiny ಮಾಡಿ ಇದು reject ಎಂದು ಹೇಳುವುದು. ಒಬ್ಬರು Ranger, meeting ಗೂ ಹೋಗುವುದಿಲ್ಲ. ಅಲ್ಲಿ ಹೇಳಬೇಕಲ್ಲ? ಏನೂ ಹೇಳುವುದಿಲ್ಲ. ಇವು ವ್ಯವಸ್ಥೆಗಳು ಇರುವುದು. ಅವರನ್ನು ಕಳುಹಿಸಬೇಡಿ ಎಂದು ನಾನು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ(ಮಾನ್ಯ ಕಂದಾಯ ಸಚಿವರು): ಕಳುಹಿಸುವ ಅಗತ್ಯವಿಲ್ಲ. ಅದು ತಪ್ಪಿದೆ.

ಶ್ರೀ ಕೆ.ಜಿ. ಬೋಪಯ್ಯ: ಹೆದರಿಸುತ್ತಾರಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಗ್ರಾಮ ಅರಣ್ಯ ಹಕ್ಕು ಸಮಿತಿ ಇದೆಯಲ್ಲ, ಅವರು ತೀರ್ಮಾನ ಮಾಡಬೇಕಲ್ಲವೇ? ತೀರ್ಮಾನ ಮಾಡಿ, AC ಗೆ ಕಳುಹಿಸುವುದು ಬಿಟ್ಟು, ಅವರಿಗೇಕೆ ಕಳುಹಿಸುತ್ತಾರೆ?

ಶ್ರೀ ಕೆ.ಜಿ. ಬೋಪಯ್ಯ: ನಾನು ಅದನ್ನೇ ಹೇಳಿದ್ದು.

ಶ್ರೀ ಕಾಗೋಡು ತಿಮ್ಮಪ್ಪ: ಏಕೆಂದರೆ, ಹಿಂದೆ ಇವರೇ ಎಲ್ಲ ಇದ್ದರು. ಆ ಸಂದರ್ಭದಲ್ಲಿ ಅರಣ್ಯ ಹಕ್ಕು ಸಮಿತಿಯನ್ನು ರಚನೆ ಮಾಡಿಬಿಟ್ಟರು. ಕೆಲವರು ಕಣ್ಣೂ ಬಿಡುವುದಿಲ್ಲ, ಬಾಯಿಯನ್ನೂ ಬಿಡುವುದಿಲ್ಲ. ಅಂಥವರನ್ನು ಕೂರಿಸಿದ್ದಾರೆ. ಈಗ ನಮ್ಮ ಗ್ರಾಮ ಸಭೆಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬದಲಾವಣೆ ಮಾಡುವುದಕ್ಕೆ ಅಧಿಕಾರವಿದೆ. ಅದನ್ನೂ ಮಾಡುವುದಕ್ಕೆ ಯಾರೂ ತಯಾರಿಲ್ಲ. ಈ ಸ್ಥಿತಿಯಾಗಿದೆ.

ಶ್ರೀ ಕೆ.ಜಿ. ಬೋಪಯ್ಯ: ನನ್ನ ಗಮನಕ್ಕೆ ಬಂದಮೇಲೆ. . . .

ಶ್ರೀ ಬಿ. ರಮಾನಾಥ ರೈ.(ಮಾನ್ಯ ಅರಣ್ಯ ಸಚಿವರು): ಕಾಗೋಡು ತಿಮ್ಮಪ್ಪರವರು ಹೇಳಿದಹಾಗೆ, ಅಂತಿಮವಾಗಿ ತೀರ್ಮಾನ ಮಾಡುವುದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿ.

ಶ್ರೀ ಕೆ.ಜಿ. ಬೋಪಯ್ಯ: ಸರಿ, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಬಿ. ರಮಾನಾಥ ರೈ.: ಅವರು ತೀರ್ಮಾನ ಮಾಡಬೇಕೇ ಹೊರತು Forest Officer ತೀರ್ಮಾನ ಮಾಡುವುದಿಲ್ಲ. ಅವರು one of the members.

ಶ್ರೀ ಕೆ.ಜಿ. ಬೋಪಯ್ಯ: ಅವರು recommendation ಮಾಡುತ್ತಾರಲ್ಲ?

ಶ್ರೀ ಬಿ. ರಮಾನಾಥ ರೈ.: One of the members, decision ಯಾರದೆಂದರೆ, committee ಯದ್ದು. ಗ್ರಾಮ ಅರಣ್ಯ ಸಮಿತಿಯಲ್ಲಿ ಕೂಡ ಅವರು ತೀರ್ಮಾನ ಮಾಡುವುದು.

ಶ್ರೀ ಕಾಗೋಡು ತಿಮ್ಮಪ್ಪ: ಇದನ್ನೆಲ್ಲ ನಾವು ವಿಚಾರ ಮಾಡಿ, Cabinet Sub Committee ಮಾಡಿ ಅಲ್ಲಿ ಚರ್ಚೆ ಮಾಡಿ, cabinet ಮುಂದೆ ಬಂದು ತೀರ್ಮಾನ ಮಾಡಿ, ಹೊಸ ಆಜ್ಞೆ ಕಳುಹಿಸಿದ್ದೇವೆ. ಆ ಹೊಸ ಆಜ್ಞೆ ಪ್ರಕಾರ ಯಾರು ಕೆಲಸ ಮಾಡುವುದಿಲ್ಲ, ಅವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತದೆ ಎನ್ನುವ ಭರವಸೆಯನ್ನು ಹೇಳುತ್ತೇನೆ. ಶಾಸಕರಾದ ನಮ್ಮ ಕೆಲಸವೇನೆಂದರೆ, ಅರಣ್ಯ ಹಕ್ಕು ಸಮಿತಿಗಳೇನಿವೆ, ಆ ಸಮಿತಿಯವರು ತೀರ್ಮಾನ ಮಾಡಲಿ. ತೀರ್ಮಾನ ಮಾಡಿ ಸೀದಾ AC ಗೆ ಕಳುಹಿಸಬೇಕು. AC ಯವರು Committee ಏನಿದೆ ಅಲ್ಲಿ ಅವರು ತೀರ್ಮಾನ ಮಾಡುತ್ತಾರೆ. ತೀರ್ಮಾನ ಮಾಡಿ, DC committee ಗೆ ಕೊಡುತ್ತಾರೆ, ಅಲ್ಲಿ ಅವರು ತೀರ್ಮಾನ ಮಾಡುತ್ತಾರೆ.

ಶ್ರೀ ಬಿ. ರಮಾನಾಥ ರೈ.: Nodal Agency ಯಾಗಿ ತೀರ್ಮಾನ ಮಾಡಲಿಕ್ಕೆ ಸಮಾಜ ಕಲ್ಯಾಣ ಇಲಾಖೆ ಇದೆ, ಅವರಿಗೆ ಅಧಿಕಾರವಿದೆ.

ಶ್ರೀ ಕೆ.ಜಿ. ಬೋಪಯ್ಯ: ಅವರಿಗೆ ಪ್ರಾಮಾಣಿಕತೆ, ಬದ್ಧತೆ ಇದ್ದರೆ ಇದೆಲ್ಲ ಬರುವುದಿಲ್ಲ. ಅವರು ಅರಣ್ಯ ಹಕ್ಕು ಕಾಯಿದೆ ಸಮಿತಿ ಸಭೆಗೆ ಹೋಗುವುದೇ ಇಲ್ಲವೆಂದು ನಾನು ಹೇಳಿದ್ದು. ಮೊನ್ನೆ ನನ್ನ ಒಂದು ಗ್ರಾಮ ಪಂಚಾಯಿತಿಯಲ್ಲಿ ಒಬ್ಬ Guard ಕಳುಹಿಸಿ, ಅವರು ಕುಳಿತುಕೊಂಡು ಇದೆಲ್ಲ ಆಗುವುದಿಲ್ಲ ಎಂದು ಹೇಳಿ, ಪಾಪ, ಆ ಅಧ್ಯಕ್ಷರು ST ಇರಬೇಕು, ಅವರಿಗೆ ಎಷ್ಟು knowledge ಇರುತ್ತದೆ, ನಾನು ಅದರ ಬಗ್ಗೆ ಹೇಳುವುದಿಲ್ಲ, ನಮ್ಮದೇ ತಪ್ಪು, ಅವರಿಗೆ ವಿದ್ಯೆ ಕೊಡಲಿಲ್ಲ, ಹಾಗಾಗಿ, ಅವರು Ranger ಗೆ ಫೋನ್ ಮಾಡಿ opinion ಗೆ ನನಗೇ file ಬರಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ: Ranger ಈ ರೀತಿ ನಡೆದುಕೊಳ್ಳುತ್ತಿದ್ದಾರೆಂದು ಒಂದು ಪತ್ರ ಬರೆಯಿರಿ.

ಶ್ರೀ ಎಂ.ಪಿ. ಅಪ್ಪಚ್ಚು(ರಂಜನ್): ಒಂದು ಪತ್ರವನ್ನು ಬರೆದಿದ್ದೇವೆ. ಅದಕ್ಕೆ ಅರಣ್ಯ ಮಂತ್ರಿಯವರಿಂದ reply ಬರಲಿಲ್ಲ. ನಾನೇ ಪತ್ರ ಬರೆದಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ: ಆ proceedings ನಲ್ಲಿ notice ಕಳುಹಿಸಿದ್ದಾರೆ. ಆ Ranger ಉದ್ದೇಶಪೂರ್ವಕವಾಗಿ ಗೈರುಹಾಜರು ಮತ್ತು ಉದ್ದೇಶಪೂರ್ವಕವಾಗಿ ಕಡತವನ್ನು ನನಗೇ ಕಳುಹಿಸಿ ಎಂದು ಹೇಳಿದ್ದಾರೆಂದು ಹೇಳಿ proceedings ಮಾಡಿ, ಅದು ನಿಮಗೆ ತಲುಪಿದೆಯೋ, ಏನೋ, ಗೊತ್ತಿಲ್ಲ, ನಾಳೆ ಹೋದರೆ ವಿಚಾರಿಸುತ್ತೇನೆ, ನಾನೇ ಕಳುಹಿಸಿಕೊಡುತ್ತೇನೆ. ಕೊಡುತ್ತೇನೆ. ಒಬ್ಬ Ranger ಗಾದರೂ ಇದರಲ್ಲಿ punishment ಆದರೆ, ಉಳಿದವರು ಸರಿ ಮಾಡುತ್ತಾರೆ. ಇಲ್ಲದೇಹೋದರೆ ನೀವೇನು ಕಳಕಳಿ ತೋರಿಸುತ್ತಿದ್ದೀರಿ, ಅದು ಜಾರಿಯಾಗುವುದಿಲ್ಲ. ಖಂಡಿತವಾಗಿಯೂ, ಜಾರಿಯಾಗಲಿಕ್ಕೆ ಬಿಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಸರ್ಕಾರ ತೀರ್ಮಾನ ಮಾಡಿ, ಹೊಸ ಆಜ್ಞೆ ಕಳುಹಿಸಿದ್ದೇವೆ. ಅವನ್ನು ಕಾರ್ಯಗತ ಮಾಡತಕ್ಕಂಥ ಜವಾಬ್ದಾರಿ ಆ ಅರಣ್ಯ ಹಕ್ಕು ಸಮಿತಿಯವರದು, AC ಸಮಿತಿಯವರದು, DC ಸಮಿತಿಯವರದು. ಯಾರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಿಲ್ಲ, ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ. ಬೋಪಯ್ಯ: ನಾನು ಪತ್ರವನ್ನೇ ಕೊಡುತ್ತೇನೆ. ಹೇಗೆ ಅವರು ಸಭೆಗಳನ್ನು ಮಾಡುತ್ತಾರೆ, ಯಾರು ಗೈರು ಹಾಜರಾಗುತ್ತಾರೆಂದು ಕೊಡುತ್ತಾರೆ. Social Welfare ತಾಲ್ಲೂಕು ಅಧಿಕಾರಿ ಹೋಗುವುದೇ ಇಲ್ಲ. ಮತ್ತೆ ಬಂದು ಕಛೇರಿಯಲ್ಲಿ sign ಮಾಡುವುದು.

ಶ್ರೀ ಬಿ. ರಮಾನಾಥ ರೈ.: ಅವರೇ Nodal Officer.

ಶ್ರೀ ಕೆ.ಜಿ. ಬೋಪಯ್ಯ: ಅವರು ಮತ್ತು Ranger ಇವರೇ ಮಾಡುವಂಥ ಕೆಲಸ. ಹಾಗಾಗಿ, ಅದನ್ನು ಮಾಡಬೇಕು. ನೀವು Master Plan, Eco Sensitive Zone ಮಾಡಬೇಕಾದರೆ, ಈಗಲೇ ಹೇಳಿದ್ದೇನೆ, local ಜನರನ್ನೂ ತೆಗೆದುಕೊಳ್ಳಬೇಕು ಮತ್ತು 11 ಇಲಾಖೆಗಳ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು. Environment, Forest, Agriculture, Revenue, Urban Development, Tourism, Rural Development, Irrigation, Flood Control, Municipal ಇದ್ದರೆ, Panchayat Raj, Public Works ಇಷ್ಟೂ departments ಅಭಿಪ್ರಾಯ ತೆಗೆದುಕೊಳ್ಳಬೇಕು. Zonal Master Plan shall not impose any restriction on the approved existing land use. ಇದು ಬಹಳ important ಇದೆ. Infrastructure activities unless specified in the notification zonal. ಇದು ಎಂದು clear ಆಗಿ ಇದೆ. ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರ notification ಹೊರಡಿಸಿದೆ, ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಲ್ಲ, entire powers have been given to the State Government. ನೀವು ಸ್ವಲ್ಪ ಕಳಕಳಿಯಿಂದ ಯಾರು ಜನಪರ ಇರುವಂಥ ಅಧಿಕಾರಿಗಳಿದ್ದಾರೆ, ಅವರಿಗೇ ಜವಾಬ್ದಾರಿ ಕೊಡಿ. ಪರಿಸರವಾದಿಗಳ ಜೊತೆಗೆ ಸೇರಿಕೊಂಡು ಮಾಡುವ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ದಯವಿಟ್ಟು ಕೊಡಬೇಡಿ ಎಂದು ಹೇಳುತ್ತೇನೆ. ಕೊನೆಯದಾಗಿ, 1978ಕ್ಕೆ ಮೊದಲು ಅರಣ್ಯವನ್ನು occupy ಮಾಡಿ ಇದ್ದಾರೆ. ಅದಕ್ಕೆ ಒಂದು ಆದೇಶವೂ ಆಗಿದೆ. Survey ಎಲ್ಲವೂ ಆಗಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚುಕಡಿಮೆ 300 ಜನರನ್ನು identify ಮಾಡಿ, list ಆಗಿದೆ. Survey ಆಗಿದೆ. ಕೇಂದ್ರಸರ್ಕಾರದಿಂದ

ದಿ:5.5.1997ರಲ್ಲಿ ಒಂದು ಆದೇಶವಾಗಿದೆ. ಅವರಿಗೆಲ್ಲರಿಗೂ ಹಕ್ಕುಪತ್ರ ಕೊಡಬೇಕು. ಅದಕ್ಕೋಸ್ಕರ ಒಂದು ಕಮಿಟಿಯೂ ಇದೆ. Concerned DFO ಅಧ್ಯಕ್ಷರು, concerned MLA member ಇದ್ದಾರೆ. ಬೇರೆ 2-3 ಇಲಾಖೆಯವರೂ ಇದ್ದಾರೆ. ಇಲ್ಲೀವರೆಗೆ ಹಿಂದಿನ ಸರ್ಕಾರವಿದ್ದಾಗಲೂ ಮಾಡಿದರು. ಆ ಸಭೆ ಇವತ್ತಿನವರೆಗೆ ನಡೆದಿಲ್ಲ. ಆ ಸಭೆ ನಡೆದರೆ ಇದು ಕೇವಲ ಕೊಡಗು ಜಿಲ್ಲೆಯಲ್ಲಿ ಮಾತ್ರವಲ್ಲ, ಬೇರೆ ಬೇರೆ ಜಿಲ್ಲೆಗಳಲ್ಲಿ prior to 1978, ಯಾರ್ಯಾರು forest occupy ಮಾಡಿದ್ದಾರೆ, ಅದನ್ನು diversion ಮಾಡಿದ್ದಾರೆ, ಆಗ ಅದಕ್ಕೆ alternate land ಕೇಳಲೇ ಇಲ್ಲ. ಈಗ ಶುರು ಮಾಡಿದ್ದಷ್ಟೇ. ಹಾಗಾಗಿ, ಏನು identify ಮಾಡಿ, notification ಎಲ್ಲವೂ ಆಗಿದೆ. ಇಷ್ಟಿಷ್ಟು ಎಕರೆ ಎಂದು ಪ್ರತಿಯೊಬ್ಬರ area ವನ್ನೂ ಹಾಕಿದ್ದಾರೆ. ಮೀಟಿಂಗ್ ಕರೆಯುವುದು, notification ನಲ್ಲಿ ಯಾರ್ಯಾರು ಎಂದು ಇದೆ, ಅವರ area wise ಇದೆ, ಅದನ್ನು ಮಾಡುವಂಥದ್ದ ಮಾಡಬೇಕು. ತತ್‌ಕ್ಷಣ ಮಾಡಲೇಬೇಕು. ಇಲ್ಲದಿದ್ದರೆ, ಅವರಿಗೆ ಯಾವ ಸೌಲಭ್ಯವೂ ಸಿಗುವುದಿಲ್ಲ. ಅವರಿಗೆ ಹಕ್ಕುಪತ್ರವಿಲ್ಲ. ಅವರು ಹೋಗಲು ರೋಡ್ ಇಲ್ಲ. ಇದರಲ್ಲಿ ಆ ಜನಾಂಗ, ಈ ಜನಾಂಗ ಎಂದಲ್ಲ, ಎಲ್ಲ ಜನಾಂದವರೂ ಇದ್ದಾರೆ. ಹಾಗಾಗಿ, ಅವರಿಗೆ ಹಕ್ಕುಪತ್ರ ಕೊಡಲಿಕ್ಕೆ ಸಂಬಂಧಪಟ್ಟಂಥ ಎಲ್ಲ DCFಗಳಿಗೆ ತಾವು ಆದೇಶ ಮಾಡಬೇಕು. ತತ್‌ಕ್ಷಣ ಸಭೆಯನ್ನು ಕರೆಯಬೇಕೆಂದು ಆದೇಶವಾಗಬೇಕೆಂಬ ವಿನಂತಿ ಮಾಡುತ್ತೇನೆ.

(ಮುಂದು)

ವಿಸ:13-06-2017-(21)-1-50-ಎಸ್ಕೆ-ವಿಜಿ

ಶ್ರೀ ಕೆ.ಜಿ.ಬೋಪಯ್ಯ : ಮುಂದು.,

ಒಟ್ಟಿನಲ್ಲಿ ನಮ್ಮದು ಇಷ್ಟೆಲ್ಲಾ ಅರಣ್ಯರೋದನ ಆಗದ ಹಾಗೆ ತಾವು ಮಾಡಬೇಕು. ಕಾಡಾನೆಗಳ ಹಾವಳಿ ಇರಬಹುದು ಇನ್ನೊಂದು ಇರಬಹುದು, ಈ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದೇನೆ. ನಾನೇನು ಟೀಕೆಯೇ ಮಾಡಿಲ್ಲ. ನಾನು ಹೆಚ್ಚು ಸಲಹೆಗಳನ್ನು ಕೊಟ್ಟಿದ್ದಲ್ಲದೆ ಟೀಕೆಯಂತೂ ಬಹಳಷ್ಟು ಮಾಡುವುದಕ್ಕೆ ಹೋಗಿಲ್ಲ. Demand ನಲ್ಲಿ ನಿಮಗೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಅದರ ಸದುಪಯೋಗವಾಗಲಿ, ಅದಕ್ಕೆ ಪೂರಕವಾಗಿ ಕಾರ್ಯಕ್ರಮವಾಗಲಿ. ಕಂದಾಯ ಇಲಾಖೆ ಮತ್ತು ನೀವು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡದೇ ಹೋದರೆ ಕಷ್ಟ. ಕಂದಾಯ ಇಲಾಖೆಯವರು ಹೇಳಿದ ಹಾಗೆ ನೀವು ಕೇಳಬೇಕು, ನೀವು ಎಂದರೆ ತಾವು ಅಲ್ಲ. ಅಧಿಕಾರಿಗಳು ಕೇಳಬೇಕು, ಇದು ನನ್ನ ಬೇಡಿಕೆ. ಈ ಎಲ್ಲಾ ವಿಚಾರಗಳನ್ನು ಜನಪರ ಹಿತದೃಷ್ಟಿಯಿಂದ ಹೇಳಿದ್ದೇನೆ. ನಾವು ಮಲೆನಾಡಿನವರು ಬೇರೆ ಏನೂ ಬೇಡ, ನಮ್ಮನ್ನು ಮನುಷ್ಯರನ್ನಾಗಿ ಬದುಕಲಿಕ್ಕಾದರೂ ಬಿಡಿ, ಬೇರೆ ಏನೂ ಮಾಡಬೇಡಿ. ದಿನ ಮಳೆ ಬರಲಿ ಅಲ್ಲಿನ ಎಲ್ಲಾ ಹೊಳೆಗಳು ತುಂಬಲಿ, ಇಲ್ಲಿಯ KRS, ಹೇಮಾವತಿ, ಹಾರಂಗಿ, ಎಲ್ಲಾ ತುಂಬಲಿ, ಎಲ್ಲರೂ ನೆಮ್ಮದಿಯಿಂದ ಇರಬೇಕು ಎಂದು ನಾವು ದಿನ ಪ್ರಾರ್ಥನೆ ಮಾಡುತ್ತೇವೆ. At the same time ನಮ್ಮ ಕಣ್ಣೀರು ಒರೆಸುವ ಕೆಲಸವನ್ನು ಅತ್ಯಂತ ಪ್ರಾಮಾಣಿಕ ಬದ್ಧತೆಯಿಂದ ಮಾಡಿ ಎನ್ನುವಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ, ಅವಕಾಶ ಕೊಟ್ಟಿದ್ದಕ್ಕೆ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನ:3-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

ವಿಸ. 13.06.2017/3.30/25/ಎನ್.ಸಿ.ಕೆ/ಹೆಚ್.ಎಸ್.

**(ಸದನದ ಕಲಾಪವು ಪುನ: ಮಧ್ಯಾಹ್ನ 3.32 ಗಂಟೆಗೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಶಾಸನ ರಚನೆ

**<u>ವಿಧೇಯಕಗಳ ಮಂಡನೆ</u>**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2017.**

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಆರ್.ರಮೇಶ್ ಕುಮಾರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ,2017 ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

**ಪ್ರಸ್ತಾವನೆ ಹೀಗಿದೆ:**

2017 ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು `` ಹೌದು `` ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು `` ಇಲ್ಲ`` ಎಂದು ಸೂಚಿಸಬೇಕು
ಪ್ರಸ್ತಾವವು `` ಹೌದು `` ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು `` ಹೌದು`` ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.
ಈಗ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಕೆ.ಆರ್.ರಮೇಶ್ ಕುಮಾರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-2)

**ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2017.**

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

13-06-2017

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಆರ್.ರಮೇಶ್ ಕುಮಾರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

**ಪ್ರಸ್ತಾವನೆ ಹೀಗಿದೆ:**

2017 ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು `` ಹೌದು `` ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು ``ಇಲ್ಲ`` ಎಂದು ಸೂಚಿಸಬೇಕು
ಪ್ರಸ್ತಾವವು `` ಹೌದು `` ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು `` ಹೌದು ` ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಈಗ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಕೆ.ಆರ್.ರಮೇಶ್ ಕುಮಾರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2017 ನೇ ಸಾಲಿನ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-3)

**ವಿತ್ತೀಯ ಕಾರ್ಯಕಲಾಪಗಳು**

**ವಿಷಯ: 2017-18 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ:**

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಅಧ್ಯಕ್ಷರು: ಜೆಡಿಎಸ್ ಪಕ್ಷದವರು ಯಾರು ಮಾತನಾಡುವಿರಿ. ಶಿವಲಿಂಗೇಗೌಡರೇ ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ): ಸನ್ಮಾನ್ಯ ಅಧ್ಯಕ್ಷರೆ, ಇಲಾಖೆಯ ಬೇಡಿಕೆಗಳ ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕಲ್ಪಿಸಿದ್ದಕ್ಕೆ ತಮಗೆ ಅಭಿನಂದನೆಗಳು. ಪ್ರತಿಸಾರಿ 28 ಇಲಾಖೆಗಳನ್ನು ಪ್ರತ್ಯೇಕವಾಗಿ ಒಂದೊಂದು ದಿನ ಇಲ್ಲವೇ ಎರಡು ಇಲಾಖೆಗಳನ್ನು ಒಂದೊಂದು ದಿನ ಹಾಕಿ ತಾವು ಮಂಡನೆ ಮಾಡಿ, ಅದರ ಮೇಲೆ ಚರ್ಚೆ ಮಾಡಿ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಆ ದಿನ ಚರ್ಚೆ ಪೂರ್ಣಗೊಂಡ ಮೇಲೆ ನೀಡುತ್ತಿದ್ದರು. ಈ ಸಾರಿ ಏನೋ ಎಲ್ಲವನ್ನು 28 ಇಲಾಖೆಗಳ ಬೇಡಿಕೆಗಳನ್ನು ಒಂದೇಸಾರಿ ಚರ್ಚೆ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡು ಮಂಡನೆ ಮಾಡಿದ್ದೀರಿ. ಎಲ್ಲ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಬಹಳ ಸಮಯ ಬೇಕು. ಏಕೆಂದರೆ ಈ ಇಲಾಖೆಯ ಬೇಡಿಕೆಗಳ ಚರ್ಚೆ ಮಾಡುವುದು ಶಾಸಕನ ಕರ್ತವ್ಯ ಮತ್ತು ಹಕ್ಕು. ಯಾವರೀತಿ grass root level ನಲ್ಲಿ ನಮ್ಮ ಹಳ್ಳಿಗಾಡಿನ ಪ್ರದೇಶದಲ್ಲಿ ಸರ್ಕಾರ ಹಾಕಿರುವಂಥ ಯೋಜನೆಗಳಿಗೆ ಅಡಚಣೆಗಳೇನಿವೆ, ಸರ್ಕಾರ ಕೊಟ್ಟಿರುವಂಥ ಕಾರ್ಯಕ್ರಮಗಳ ಬಗ್ಗೆ ಅನುಷ್ಠಾನ ಮಾಡುವುದಕ್ಕೆ ಯಾವರೀತಿ ಅಡಚಣೆಗಳಿವೆ ಎನ್ನುವಂಥ ಎಲ್ಲ ವಿಚಾರಗಳನ್ನು ಚರ್ಚೆ ಮಾಡಿ ಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟು ಬರತಕ್ಕಂಥ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಸಲಹೆ ಸೂಚನೆಗಳನ್ನು ಕೊಡತಕ್ಕಂಥ ನಿಟ್ಟಿನಲ್ಲಿ ಮತ್ತೆ ಅವರೇನು ಆಯವ್ಯಯದಲ್ಲಿ ತಮಗೆ ಮಂಡನೆ ಮಾಡಿರತಕ್ಕಂಥ ಹಣವನ್ನು ಯಾವ್ಯಾವ ಯೋಜನೆಗೆ ಎಷ್ಟೆಷ್ಟು ಹಣವನ್ನು ತೊಡಗಿಸಿದ್ದೇವೆ, ಆ ರೀತಿ ತೊಡಗಿಸಿದ ಹಣದಿಂದ ಏನೇನು ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ, ಆ ಕಾರ್ಯಕ್ರಮಗಳಿಗೆ ಯಾವರೀತಿ ಮಾರ್ಗಸೂಚಿಗಳನ್ನು ತಯಾರು ಮಾಡಿ ಜನಗಳಿಗೆ ಮುಟ್ಟಿಸುವಂಥ ಮತ್ತು ಆ ಕಾರ್ಯಕ್ರಮಗಳು ಯಶಸ್ವಿಯಾಗತಕ್ಕಂಥ ದೃಷ್ಟಿಯಲ್ಲಿ ಪ್ರಾಮಾಣಿಕವಾದಂಥ ಪ್ರಯತ್ನ ನಡೆಯಬೇಕಾದಂಥ ದೃಷ್ಟಿಯಿಂದ ಈ ಒಂದು ಸದನ, ಈ ಒಂದು ಸಂದರ್ಭದಲ್ಲಿ ಕರೆದಿರುವಂಥ ವಿಧಾನಸಭೆ ಬಹಳ ಸರ್ವಶ್ರೇಷ್ಠವಾದುದು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಏಕೋ ಏನೋ ಈ ಸಾರಿ ಕರೆದಿರತಕ್ಕಂಥ ವಿತ್ತೀಯ ಕಾರ್ಯಕಲಾಪಗಳ ವಿಧಾನಸಭೆ ಅಷ್ಟೊಂದು ಸ್ವಾರಸ್ಯಕರವಾಗಿ ನಡೆಯುತ್ತಿಲ್ಲ. ಕಾರಣ ಆಡಳಿತ ಪಕ್ಷದ್ದೋ, ವಿರೋಧ ಪಕ್ಷದ್ದೋ. ವಿರೋಧಪಕ್ಷದ ಶಾಸಕರು ಸಹ ಹೆಚ್ಚಿಗೆ ಭಾಗವಹಿಸುತ್ತಿಲ್ಲ. ಆಡಳಿತ ಪಕ್ಷದವರು ಕಡಿಮೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಂದು ನಾವು ವಿರೋಧಪಕ್ಷದವರು ಬಂದಿದ್ದೇವೆ ಎನ್ನುವುದಕ್ಕೆ ನಾವು ಸಹ ಎಣಿಕೆ ಸಂಖ್ಯೆಯಲ್ಲಿಯೇ ಬರುತ್ತಿದ್ದೇವೆ. ಆಡಳಿತ ಪಕ್ಷದಲ್ಲಿಯೂ ಇಬ್ಬರು ಅಥವ ಮೂವರು ಮಂತ್ರಿಗಳು ಇರುತ್ತಾರೆ. ನಾವು ಈಗ ಎಲ್ಲ ಇಲಾಖೆಗಳ ಮೇಲೆಯೂ ನಮ್ಮ ಅನುಭವದ ಮಾತುಗಳನ್ನು, ಸಲಹೆ ಸೂಚನೆಗಳನ್ನು ಮಂತ್ರಿಗಳಿಗೆ ಕೊಡುವುದನ್ನು ಅಧಿಕಾರಿಗಳು ಕೇಳಿಕೊಳ್ಳಬೇಕು. ಮಂತ್ರಿಗಳು ಕೇಳಿಕೊಳ್ಳುವುದಕ್ಕಿಂತ ಅಧಿಕಾರಿಗಳು ಕೇಳಿಕೊಳ್ಳಬೇಕು. ಇಂತಿಂಥ ಯೋಜನೆಗಳನ್ನು ನಾವು ಕಾರ್ಯಗತ ಮಾಡುವುದಕ್ಕೆ ನಿಜವಾಗಲೂ ಎಲ್ಲೋ ಒಂದು ಕಡೆ ಇಂತಿಂಥ ಅಡಚಣೆಗಳಿವೆ. ಇದನ್ನು ನಾವು ನಿವಾರಣೆ ಮಾಡಿಕೊಳ್ಳಬೇಕು. ಈ ವಿಚಾರಗಳನ್ನು ನಿವಾರಣೆ ಮಾಡಿಕೊಳ್ಳದಿದ್ದರೆ, ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಸರ್ಕಾರ ಯಶಸ್ವಿಯಾದಂಥ ಹೆಸರು ಪಡೆಯಬೇಕಾದರೆ ಇವೆಲ್ಲ ಅಡಚಣೆಗಳಿವೆ ಎನ್ನುವಂಥ ಭಾವನೆ ಮಂತ್ರಿಗಳಿಗೂ ಮತ್ತು ಸರ್ಕಾರದ ಉನ್ನತ ಅಧಿಕಾರಿಗಳಿಗೂ ಆಗಬೇಕಾಗಿರತಕ್ಕಂಥ ವಿಚಾರವಾಗಿದೆ. ಆದರೆ ಇಲ್ಲಿ ಎರಡೂ ಕಡೆಗಳಿಂದಲೂ ಸ್ಪಂದನೆ ಇಲ್ಲ. ಆದರೂ ಚಿಂತೆ ಇಲ್ಲ. ನಾವು ಮಾಡಿದ ಭಾಷಣ ನಾವಾದರೂ ಓದಿಕೊಳ್ಳುವುದಕ್ಕೆ ನಾವಾದರೂ ತಿಳಿದುಕೊಳ್ಳುವುದಕ್ಕೆ, ನಾವು ಮಾಡಿದ ಭಾಷಣವನ್ನು ತಿಳಿದುಕೊಂಡು, ಓದಿಕೊಂಡು ಕಾರ್ಯರೂಪಕ್ಕೆ ತರುವಂಥ ಸಂಪ್ರದಾಯ, ಪದ್ದತಿ ಇಲ್ಲ. ಆದ್ದರಿಂದ ನಾನು ಇವತ್ತೇನು ನನ್ನ ಅನಿಸಿಕೆಗಳನ್ನು, ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ನಾವು ನೀರಾವರಿ ಪ್ರದೇಶದಿಂದ ಬಂದಿರತಕ್ಕಂಥವರಲ್ಲ. ಈಗ ಮೊದಲನೆಯದು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಇಟ್ಟಿದ್ದಾರೆ. ಈ ಕೃಷಿ ಮತ್ತು ತೋಟಗಾರಿಕೆ ವಿಷಯ ನಮಗೆ ಬಹಳ ಪ್ರಿಯಕರವಾದಂಥ ಒಂದು ಇಲಾಖೆ.

(ಮುಂದು)

13.06.2017 /3.40 (26)/ JB-SP

ಶ್ರೀ ಕೆ.ಎಂ.ಶಿವಲಿಂಗೇಗೌಡ (ಮುಂದು . . . ): ಈ ಕೃಷಿ ಮತ್ತು ತೋಟಗಾರಿಕೆಯ ವಿಷಯ ನಮಗೆ ಬಹಳ ಪ್ರಿಯಕರವಾದಂತಹ ಒಂದು ಇಲಾಖೆ. ನಮ್ಮ ಬದುಕು ನಮ್ಮ ಬಾಳು ಈ ಎರಡೂ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಲಾಖೆಗಳಿಗೆ ಸಂಬಂಧಿಸಿದಂತೆ ತೊಡಗಿದೆ. ನಮ್ಮ ಈ ಬಯಲುಸೀಮೆ ಏನಿದ್ದೇವೆ ಆ ಬಯಲುಸೀಮೆಯ ಜನ ನಮ್ಮ ರೈತಾಪಿ ವರ್ಗ ಈ ಎರಡೂ ಇಲಾಖೆಗಳಲ್ಲಿ ಬಹಳ ತಮ್ಮ ಜೀವನದ ಭವಿಷ್ಯ ಅಡಗಿರತಕ್ಕಂತಹ ಎರಡು ಇಲಾಖೆಗಳಿವು. ಈಗ ಕೃಷಿ ಸಚಿವರು ಇಲ್ಲ, ತೋಟಗಾರಿಕಾ ಸಚಿವರು ಯಾವತ್ತೂ ಬರುವುದೇ ಇಲ್ಲ, ಹೀಗೆ ಸನ್ನಿವೇಶವಿದೆ. ನಾವು ಏನಾದರೂ urgent ಕೆಲಸವಿದ್ದರೆ ಅವರನ್ನು ಹುಡುಕಿಕೊಂಡು ನಾವೇ ಹೋಗಬೇಕು. ಕೃಷಿ ಸಚಿವರು ಇರುತ್ತಿದ್ದರು, ಇವತ್ತು ಇಲ್ಲ. ಇವತ್ತು ನಮ್ಮನ್ನು ಕಾಡುತ್ತಿರುವಂತಹದ್ದು ಏನೆಂದರೆ, ನಾವು ಯಾವಾಗಲೂ ಬರದ ದವಡೆಯಲ್ಲಿಯೇ ಸಿಕ್ಕಿದ್ದೇವೆ, ನಮಗೆ ಬುದ್ಧಿ ಬಂದಾಗಿನಿಂದ ನಾವು ನೋಡುತ್ತಲೇ ಇದ್ದೇವೆ. ನಮ್ಮ ಅರಸೀಕೆರೆ ತಾಲ್ಲೂಕು ಮತ್ತು ಈ ಪ್ರದೇಶಗಳು ಒಂದಲ್ಲ ಒಂದು ರೀತಿಯ ಬರದ ವ್ಯವಸ್ಥೆಗೆ ನಾವು ಸಿಲುಕಿದ್ದೇವೆ. ಆ ಬರದ ವ್ಯವಸ್ಥೆಗೆ ನಾವು ಸಿಲುಕಿರತಕ್ಕಂತಹ ಸಂದರ್ಭದಲ್ಲಿ ಅದರಿಂದ . .. ನೋಡಿ ನಮ್ಮ ತೋಟಗಾರಿಕಾ ಸಚಿವರು ನಾನು ನೆನಪು ಮಾಡಿಕೊಳ್ಳುತ್ತಿದ್ದ ಹಾಗೆಯೇ ಬಂದರು, ಬಹಳ ಸಂತೋಷ, ಈಗ ತಾನೇ ನಾನು ನೆನಪಿಸಿಕೊಂಡೆ. ನಮ್ಮ ಸಚಿವರು ಬಂದರು. ಆದ್ದರಿಂದ, ಇವತ್ತು ಈ ಬರದ ವ್ಯವಸ್ಥೆಯೊಳಗೆ ಏನು ನಾವು ಯಾವ ರೀತಿ ನಮ್ಮ ರೈತ ಸಮುದಾಯವನ್ನು ನಾವು ಕಾಪಾಡಬೇಕು, ನಮ್ಮ ರೈತ ಸಮುದಾಯಕ್ಕೆ ಸರ್ಕಾರದಿಂದ ಮತ್ತು ಜನಪ್ರತಿನಿಧಿಗಳಿಂದ ನೈತಿಕವಾದಂತಹ ಬಲವನ್ನು ತುಂಬುವಂತಹ ಮತ್ತು ಆರ್ಥಿಕವಾದಂತಹ ಸಫಲತೆಯನ್ನು ಕೊಟ್ಟು ಅವರ ಬದುಕನ್ನು ಯಾವ ರೀತಿಯಾಗಿ ಒಂದು ಉತ್ತಮವಾದಂತಹ ಮಾರ್ಗದಲ್ಲಿ ಕೊಂಡೊಯ್ಯಬೇಕು ಎನ್ನುವ ನಿಟ್ಟಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡತಕ್ಕಂತಹದ್ದು ಸರ್ಕಾರದ ಮತ್ತು ಶಾಸಕರ ಆದ್ಯ ಕರ್ತವ್ಯವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆ ರೀತಿ ಇರತಕ್ಕಂತಹ ರೈತಾಪಿ ವರ್ಗಕ್ಕೆ ಬಂದಿರತಕ್ಕಂತಹ ಒಂದೊಂದು ಕಷ್ಟಕ್ಕೆ ಪರಿಹಾರಗಳನ್ನು ಕಂಡುಹಿಡಿದುಕೊಂಡು ಪರಿಹಾರದ ರೂಪದಲ್ಲಿ ಅವರನ್ನು ಯಾವುದೇ ರೀತಿಯಾಗಿರತಕ್ಕಂತಹ ಒಂದು ಉತ್ತಮ ರೀತಿಯಾದ ಬಾಳನ್ನು ಕೊಡಲಿಕ್ಕೆ, ಬಾಳಿಕೊಂಡು ಹೋಗುವುದಕ್ಕೆ ಸಹಕಾರ ಕೊಡತಕ್ಕಂತಹದ್ದು, ಆ ರೈತಾಪಿ ಜನರು ಸಂಕಷ್ಟಕ್ಕೆ ಸಿಲುಕಿದಾಗ, ರೈತರು ಯಾವತ್ತೂ ಸಹ ಅವರಾಗಿಯೇ ಅವರು ಸಂಕಷ್ಟಕ್ಕೆ ಸಿಲುಕುವುದಿಲ್ಲ. ಇವತ್ತು ಹವಾಮಾನ ವೈಪರೀತ್ಯದಿಂದ ಸತತವಾಗಿ ರೈತ ಸಂಕಷ್ಟಕ್ಕೆ ಸಿಲುಕುತ್ತಿದ್ದಾನೆ, ಸತತವಾಗಿ ಸಿಲುಕುತ್ತಿದ್ದಾನೆ. ಸತತವಾಗಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಆ ಸಿಗುತ್ತಿರುವಂತಹ ಆ ರೈತನ ಸಂಕಷ್ಟ ಆಡಳಿತ ಪಕ್ಷದವರು ತಂದಿರತಕ್ಕಂತಹದ್ದಲ್ಲ, ವಿರೋಧ ಪಕ್ಷದವರೂ ತಂದಿರತಕ್ಕಂತಹದ್ದಲ್ಲ. ಆದರೆ, ಅನಿವಾರ್ಯವಾಗಿ ನಮ್ಮ ಒಂದು ಹವಾಮಾನ ವೈಪರೀತ್ಯದಿಂದ ಬಂದಿರತಕ್ಕಂತಹ ಸಂಕಷ್ಟ ಇವತ್ತು ನಾವು ನಮ್ಮ ರೈತಾಪಿ ಜನರ ಬಾಳನ್ನು ಆ grass root level ನಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿಗಳಲ್ಲಿ ನಾವು ಏನು ಅವರ ಬಗ್ಗೆ, ಅವರ ದೃಷ್ಟಿಯಿಂದ ಕಂಡಿರತಕ್ಕಂತಹ ಕೆಲವು ಸನ್ನಿವೇಶಗಳನ್ನು ಅವರು ಏನು ವ್ಯಕ್ತ ಮಾಡುತ್ತಾರೆ ಎನ್ನುವಂತಹ ಗ್ರಾಮೀಣ ಬದುಕಿನ ಸೊಗಡಿನಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಈ ಹಿಂದೆ ರೈತಾಪಿ ಜನರಿಗೆ insurance ಇತ್ತು. ನಾನು ಅಲ್ಲಿಂದಲೇ ತೆಗೆದುಕೊಳ್ಳುತ್ತೇನೆ. ವಿಮೆ ಬಗ್ಗೆ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಮೊನ್ನೆ ಟಿ.ವಿ. ಮಾಧ್ಯಮದಲ್ಲಿ ಬರುತ್ತಿತ್ತು. ಅಲ್ಲಿಯೂ ಸಹಿತ ನಿಜಾಂಶ ಚರ್ಚೆಯಾಗಲಿಲ್ಲ. ಈ ರೀತಿ ಎಲ್ಲೋ ಒಂದು ಕಡೆ ನಾವು ಏನು ಶಾಸಕರಿದ್ದೇವೆ, ಶಾಸನ ಮಾಡತಕ್ಕಂತಹವರು ಏನಿದ್ದೇವೆ, ಇದನ್ನು ಜಾರಿಗೊಳಿಸುವಂತಹ ಸರ್ಕಾರ ಏನಿದೆ, ಈ ಎರಡರ ಮಧ್ಯದಲ್ಲಿ ಇವತ್ತು ಆಗುತ್ತಿರುವಂತಹ, ಯೋಜನೆಗಳನ್ನು ಕಾರ್ಯಗತ ಮಾಡತಕ್ಕಂತಹ ಕಾರ್ಯಾಂಗದ ಮುಖ್ಯಸ್ಥರೇನಿದ್ದಾರೆ, ನಾವೆಲ್ಲಾ ಸೇರಿ ಒಟ್ಟಿಗೆ ಮಾಡತಕ್ಕಂತಹ ಕೆಲವು ಯೋಜನೆಗಳನ್ನು ಎಲ್ಲೋ ಒಂದು ಕಡೆ ದಿಕ್ಕು ತಪ್ಪಿಸಿ ಆ ರೈತಾಪಿ ಜನರಿಗೆ, ಪಾಪ ಅವರು ಅಲ್ಲಿ ಫೋಟೊ ಹಿಡಿದುಕೊಂಡು ಒಂದು ರೂಪಾಯಿ ಪರಿಹಾರ ಹಾಕಿದ್ದಾರೆಂದು ಹೇಳುತ್ತಿದ್ದರು. ಆ ಪರಿಹಾರಕ್ಕೂ, ಆ insurance ಕಟ್ಟಿರುವ ಪರಿಹಾರಕ್ಕೂ ಅವನು ಹಾಕಿರುವ ಒಂದು ರೂಪಾಯಿಗೂ ಸಂಬಂಧವಿಲ್ಲ. ಆದರೆ, ಅಲ್ಲಿ ಚರ್ಚೆ insurance ಎಂದೇ ನಡೆಯುತ್ತಿತ್ತು. Insurance ಕಟ್ಟಿರುವವರಿಗೆ ಒಂದು ರೂಪಾಯಿ ಪರಿಹಾರ ಹಾಕಿದ್ದಾರೆ ಎಂದು ನಡೆಯುತ್ತಿತ್ತು, ಅದಲ್ಲ. Input subsidy ಯಲ್ಲಿ ಆಗಿರತಕ್ಕಂತಹ ಕೆಲವು ದೋಷಗಳಿಂದ ಕೆಲವು ಕಾರ್ಯಾನುಚರಣೆಗೆ ತರತಕ್ಕಂತಹ ಸಂದರ್ಭದಲ್ಲಿ ಆಗಿರತಕ್ಕಂತಹ, ದೋಷಗಳಿಂದ ಆಗಿರತಕ್ಕಂತಹ ಪ್ರತಿಫಲವದು. ಅದು ಆಗಿರುವಂತಹದ್ದು ಸತ್ಯ. ಅವರಿಗೆ ಒಂದು ರೂಪಾಯಿಯನ್ನು ಹಾಕಿರುವುದು ಸರಿಯಲ್ಲ. ಏಕೆಂದರೆ, ಏತಕ್ಕೋಸ್ಕರ ಆ ಪರಿಸ್ಥಿತಿ ಬಂತು ಎಂದು ನಾವು ಅಲ್ಲಿ ಚರ್ಚೆ ಮಾಡುವಂತಹದ್ದು ಬಹಳ ಒಳ್ಳೆಯದು ಇದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು 2014-15ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ "ಫಸಲ್ ಭೀಮಾ

ಯೋಜನೆ" ಮತ್ತು "ಹವಾಮಾನ ಆಧಾರಿತವಾದಂತಹ ಬಹು ವಾರ್ಷಿಕ ಬೆಳೆಗಳ ವಿಮೆ" ಇವುಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಒಕ್ಕೂಟದಿಂದ ಇವರಿಬ್ಬರ ಒಂದು ವ್ಯವಸ್ಥಿತವಾದಂತಹ ರೂಪದಲ್ಲಿ ರೂಪಿತವಾದಂತಹ ಯೋಜನೆಯಿದು. ಈ ಯೋಜನೆಯನ್ನು ಜಾರಿಗೆ ತಂದು ರೈತಾಪಿ ಜನಕ್ಕೆ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಮಾಡಿರುವಂತಹದ್ದು. ಅದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಲ್ಲಿ ಏನಾಗಿದೆ ಎಂದರೆ, ಮಳೆ ಆಶ್ರಿತವಾದಂತಹ ಖುಷ್ಕಿ ಭೂಮಿಯ ಒಂದು ಪ್ರಧಾನಮಂತ್ರಿಯ 'ಫಸಲ್ ಭೀಮಾ ಯೋಜನೆ' ಒಂದು ಕಡೆಗೆ ಇದ್ದರೆ ಇನ್ನೊಂದು ಬಹು ವಾರ್ಷಿಕವಾದಂತಹ ತೆಂಗು, ಅಡಿಕೆ, ಮಾವು ಇತರೆ ಎಲ್ಲಾ ಬೆಳೆಗಳೂ ಸೇರಿ ಒಂದು ಹವಾಮಾನ ಆಧಾರಿತವಾಗಿರತಕ್ಕಂತಹ ವಿಮೆಯನ್ನು ಮಾಡಿಸುವಂತಹದ್ದು ಒಂದು ಕಡೆ. ಈ ಎರಡೂ ಯೋಜನೆಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ರೈತರು ಕಟ್ಟುವಂತಹ ವಿಮೆ, ಈ ಮೂರರ ಆಶ್ರಯದಲ್ಲಿ ತರತಕ್ಕಂತಹ ಒಂದು ಯೋಜನೆಯನ್ನು ಜಾರಿ ಮಾಡಿತು. ಆದರೆ, ಮಳೆ ಆಶ್ರಿತವಾಗಿ ಮಾಡತಕ್ಕಂತಹ ಬೆಳೆಗಳಿಗೆ ಅತಿವೃಷ್ಟಿ, ಇಲ್ಲವೇ ಅನಾವೃಷ್ಟಿ ಇಲ್ಲವೇ ಪ್ರಕೃತಿಯ ವಿಕೋಪ ಇಂತಹ ಸಂದರ್ಭಗಳಲ್ಲಿ ಯಾವರೀತಿಯಾಗಿ ರೈತಾಪಿ ಜನರಿಂದ ವಿಮೆಯನ್ನು ಕಟ್ಟಿಸಿಕೊಳ್ಳಬೇಕು ಮತ್ತು ರೈತಾಪಿ ಜನರಿಗೆ ಯಾವ ರೀತಿ insurance ಅನ್ನು ವರ್ಗಾವಣೆ ಮಾಡಬೇಕು ಎನ್ನುವ ಕೆಲವೊಂದು ನಿಬಂಧನೆಗಳನ್ನು, ಕೆಲವೊಂದು ನಿಯಮಗಳನ್ನು, ಕೆಲವೊಂದು ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಎಂದು ರಾಜ್ಯ ಸರ್ಕಾರ ಹೇಳುವುದು ಬೇಡ. ಕೇಂದ್ರ ಹಾಗೂ ರಾಜ್ಯಗಳ ಒಕ್ಕೂಟದಿಂದಲೇ ಆಗಿರತಕ್ಕಂತಹ ವ್ಯವಸ್ಥೆಯಿದು. ಇಂತಹ ಸಂದರ್ಭದಲ್ಲಿ ಇವತ್ತು ಮೂರು ತರಹದ ಮಳೆ ಆಶ್ರಿತವಾದಂತಹ ಮೂರು ತರಹದ ವಿಮೆಯನ್ನು ಕಟ್ಟಿಸಿಕೊಳ್ಳುವಂತಹದ್ದು ಇದೆ. ಮೂರು ಕಾಲವನ್ನು ನಿಗದಿ ಮಾಡುವುದು, ಪೂರ್ವ ಮುಂಗಾರು, ಮುಂಗಾರು ಹಾಗು ಹಿಂಗಾರು ಈ ಮೂರು ವ್ಯವಸ್ಥೆಯನ್ನು ಮಾಡಿದ್ದಾರೆ. ಮಾಡಿ ಇವತ್ತು ಯಾವ ರೀತಿ insurance ಅನ್ನು ಕಟ್ಟಿಸಿಕೊಳ್ಳಬೇಕು, ವಿಮಾ ಮೊತ್ತವನ್ನು ಯಾವರೀತಿ ನಿಗದಿ ಮಾಡಬೇಕು ಎನ್ನುವಂತಹ ಮಾರ್ಗಸೂಚಿಗಳಲ್ಲಿ ಅವರು ನಿರ್ಧಾರ ಮಾಡಿರುವಂತಹದ್ದು, ಒಂದು ಈ sale of finance, ಏನು ರೈತ ಬೆಳೆದಂತಹ ಬೆಳೆಯನ್ನು ಯಾವರೀತಿ ಮಾರುಕಟ್ಟೆಯಲ್ಲಿ ಮಾರುತ್ತಾರೆ, ಆ ಎಲ್ಲಾ ಆಧಾರಗಳನ್ನು ಕ್ರೋಢೀಕರಿಸಿ ಸುಮಾರು ವರ್ಷಗಳ ಅಂದರೆ 10 ವರ್ಷಗಳ averageಅನ್ನು

ತೆಗೆದುಕೊಂಡು ಆ ವಿಮಾ ಮೊತ್ತವನ್ನು ನಿಗದಿ ಮಾಡುತ್ತಾರೆ. ಅದೇ ರೀತಿ ರೈತ ವಾರ್ಷಿಕ ಕಂತುಗಳಲ್ಲಿ ಎಷ್ಟು ಕಂತಿನ premium ಅನ್ನು ಕಟ್ಟಬೇಕೆಂದು ನಿರ್ಧಾರ ಮಾಡುವಂತಹ ಕಾಲದಲ್ಲಿ 10 ವರ್ಷಗಳ ಸರಾಸರಿ ಬೆಳೆಯ ಇಳುವರಿಯನ್ನು ತೆಗೆದುಕೊಂಡು ಆ ಇಳುವರಿಯ ಆಧಾರದ ಮೇಲೆ ಆ ರೈತ ಕಂತುಗಳನ್ನು premium ವಿಮೆಯನ್ನು, ವಿಮೆಗೆ premium ಅನ್ನು ಕಟ್ಟುವಂತಹ ಕೆಲಸವನ್ನು ನಿಗದಿ ಮಾಡುತ್ತಾರೆ.

(ಮುಂದು . . . )

13.09.2017/3.50/27/JL(BR)/SP

ಶ್ರೀ ಕೆ.ಎಂ.ಶಿವಲಿಂಗೇಗೌಡ: (ಮುಂದು). . .

ರೈತ ಎಷ್ಟು premium ಅನ್ನು ಕಟ್ಟಬೇಕೆಂದು ನಿರ್ಧಾರ ಮಾಡುವ ಕಾಲದಲ್ಲಿ ಹತ್ತು ವರ್ಷಗಳ ಸರಾಸರಿ ಬೆಳೆಯ ಇಳುವರಿಯನ್ನು ತೆಗೆದುಕೊಂಡು, ಆ ಇಳುವರಿ ಆಧಾರದ ಮೇಲೆ ಆ ರೈತ ಕಂತನ್ನು, ವಿಮೆಗೆ premium ಯನ್ನು ಕಟ್ಟುವ ಕೆಲಸವನ್ನು ನಿಗದಿ ಮಾಡುತ್ತಾರೆ. ಇದನ್ನು ಎಲ್ಲಾ ಅಧಿಕಾರಿಗಳು ಮಾಡುತ್ತಾರೆ. ಮಾಡಿದ ಮೇಲೆ ಕಟಾವು ಮಾಡುತ್ತಾರೆ. ಕಟಾವು ಮಾಡಿ, ಕಟಾವಿನ ಬೆಳೆಯನ್ನು ಬೆಳೆದಂಥ ಆಧಾರವನ್ನು ಅನುಸರಿಸಿ ಇದನ್ನು ನಿಗದಿ ಮಾಡುತ್ತಾರೆ. ನಿಗದಿ ಮಾಡಿ, ಒಂದೊಂದು ಬೆಳೆಗೆ premium ಮೊತ್ತ ಇಷ್ಟು, insurance ಮೊತ್ತ ಇಷ್ಟು, ಕೇಂದ್ರ ಸರ್ಕಾರ ಇಷ್ಟು, ರಾಜ್ಯ ಸರ್ಕಾರ ಇಷ್ಟು, ರೈತ ಇಷ್ಟು ಕಟ್ಟಬೇಕು ಎನ್ನುವುದನ್ನು ಹೇಳುತ್ತಾರೆ. ಇದರಲ್ಲಿ, ನನ್ನ ಭಾಗದಲ್ಲಿ ಬಹು ಮುಖ್ಯವಾಗಿ ನಾವು ಸಂಕಷ್ಟಕ್ಕೆ ಸಿಕ್ಕತಕ್ಕಂಥ ಬೆಳೆಗಳು ರಾಗಿ ಜೋಳ ಮತ್ತು ತೋಟಗಾರಿಕೆಯಲ್ಲಿ ಆಲೂಗಡ್ಡೆ, ಈ ರೀತಿ ಬೆಳೆಗಳು ನಮಗೆ ಬಹಳ ಪ್ರಮುಖವಾದಂಥವು. ಅದರಲ್ಲಿ ರಾಗಿ ಬೆಳೆಗೆ 720/- ರೂಪಾಯಿಯನ್ನು ರೈತ ಕಟ್ಟಬೇಕು. ಒಟ್ಟು 5,234/-ರೂಪಾಯಿಯನ್ನು ರೈತ ವಿಮೆ ಕಂತನ್ನು ಕಟ್ಟಬೇಕು. ಆ ಕಂತಿನಲ್ಲಿ 720/- ರೂ.ಗಳನ್ನು ರೈತ ಕಟ್ಟಿದರೆ, ಉಳಿದಿರುವ ಕಂತನ್ನು ಅರ್ಧ ಭಾಗ ಕೇಂದ್ರ ಸರ್ಕಾರ, ಅರ್ಧ ಭಾಗ ರಾಜ್ಯ ಸರ್ಕಾರ ಕಟ್ಟತಕ್ಕಂಥದ್ದು, ವಿಮೆಯ ಮೊತ್ತ ಹೆಕ್ಟೇರ್‌ಗೆ 36,000/-ರೂ. ಎಂದು ನಿರ್ಧಾರ ಮಾಡುತ್ತಾರೆ. ಇಲ್ಲೂ ಹೆಕ್ಟೇರ್‌ಗೆ 5,234/-ರೂ.ಗಳನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ರೈತ ಕಟ್ಟಬೇಕು. ಈ ರೀತಿ ಜೋಳಕ್ಕೆ, maize ಎಂದು ಏನು ಕರೆಯುತ್ತೇವೆ ಅದಕ್ಕೆ 50,000/- ರೂಪಾಯಿ, ಅದರಲ್ಲಿ 4,000/-ರೂ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಕಟ್ಟಬೇಕು, ಅದೇ ರೀತಿ ರೈತ 1,000/- ರೂ. ಕಟ್ಟಬೇಕು. ಈ ರೀತಿ ಎಲ್ಲವನ್ನೂ ಕಟ್ಟುತ್ತಾರೆ. ಆದರೆ ಇಲ್ಲಿ ಸಾಲವನ್ನು ಪಡೆದಿರುವಂಥ ರೈತರು ಕಡ್ಡಾಯವಾಗಿ ವಿಮೆಯನ್ನು ಮಾಡಿಸತಕ್ಕಂಥ ಕಾನೂನು ಜಾರಿಯಲ್ಲಿದೆ. ಆ ಬ್ಯಾಂಕಿನವರು ಬಿಡುವುದೇ ಇಲ್ಲ, ಅವರು ವಿಮೆಯನ್ನು ಮಾಡಿಸುತ್ತಾರೆ. ಆದರೆ, ಉಳಿದಿರತಕ್ಕಂಥ ರೈತರು, ಸಾಲವನ್ನು ತೆಗೆದುಕೊಳ್ಳದೇ ಇರುವ ರೈತರು ಏನಿರುತ್ತಾರೆ, ಸಾಲಗಾರರು 2 ರಿಂದ 5% ಒಳಗೇ ಇರುತ್ತಾರೆ. ಇನ್ನು ಉಳಿದಿರತಕ್ಕಂಥ 95% ರೈತರು ಅವರು ವಿಮೆಯ ಕಂತನ್ನು, premium ಅನ್ನು ಕಟ್ಟುವುದಕ್ಕೆ ಹೋದರೆ, ಬ್ಯಾಂಕ್‌ನವರು ಕಟ್ಟಿಸಿಕೊಳ್ಳುವುದಿಲ್ಲ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಅಲ್ಲೇ ಇರತಕ್ಕ point. ಅವರಿಗೆ misguide ಮಾಡುತ್ತಾರೆ. ನನಗೇ misguide ಮಾಡಿದ್ದರು. ಈ ಹವಾಮಾನ ಆಧಾರಿತವಾದ ತೋಟಗಾರಿಕಾ ಬೆಳೆಯ ಬಹು ಯೋಜನೆಗೆ ಹಣವನ್ನು ಕಟ್ಟಿಸುವುದಕ್ಕೆ ಹೋದಾಗ ನನಗೆ ಯಾವ ರೀತಿ ಕಂಪನಿಯವರು ಮಾಡಿದರು ಎನ್ನುವುದನ್ನು ನಾನು ಹೇಳುತ್ತೇನೆ. ಅದರಲ್ಲಿ awareness ಮೂಡುವ ಒಂದು ಕ್ರಾಂತಿಕಾರಿ scheme ಇದೆ. Scheme ಒಳ್ಳೆಯದು, ನಾನು ಇಲ್ಲವೆಂದು ಹೇಳುವುದಿಲ್ಲ. ರೈತ ತನ್ನ ಬಿತ್ತನೆ ಮಾಡಿದ ಸಂದರ್ಭದಲ್ಲಿ ಆ ಬೆಳೆ ನಾಶವಾದಾಗ, ಆ ಬೆಳೆಗೆ ಎಷ್ಟು ಬಂಡವಾಳವನ್ನು ಹೂಡುತ್ತಾನೆ ಆ ಬಂಡವಾಳವಾದರೂ ರೈತನ ಜೇಬಿಗೆ ಬಂದರೆ ನಿಜವಾಗಲೂ ಬಹಳ ಸಂತೋಷಪಡುತ್ತಾನೆ. ನಾನು ಎಲ್ಲೋ ಸಾಲ ಸೋಲ ತಂದು ಬಂಡವಾಳ ಹಾಕಿದ್ದೆ, ಗೊಬ್ಬರ ಹಾಕಿದ್ದೆ, ಟ್ರ್ಯಾಕ್ಟರ್‌ನಲ್ಲಿ ಹಿಕ್ಕೆ ಹೊಡೆಸಿದ್ದೆ, ಮಾಡಿದ ಶ್ರಮ ವ್ಯರ್ಥವಾಗಲಿಲ್ಲ, ಎಲ್ಲೋ ಒಂದು ಕಡೆ ಹಾಕಿದ ಬಂಡವಾಳ ವಾಪಸ್ಸು ಬಂದಿತೆಂದು ಸಂತೋಷಪಡುತ್ತಾನೆ. ಆದರೆ, ಇಲ್ಲಿ ಅವನು ಆ ವಿಮೆಯ ಕಂತನ್ನು ಕಟ್ಟುವುದಕ್ಕೆ ಬ್ಯಾಂಕಿನವರು 4% ಕಂಪನಿಗಳಿಂದ ಕಮೀಷನ್ ತೆಗೆದುಕೊಳ್ಳುತ್ತಾರೆ. ಆದರೆ, ಆ ಕಮೀಷನ್ ತೆಗೆದುಕೊಂಡರೂ, 'ಏಯ್ ಹೋಗಿರಿ, ನಮ್ಮ ವಹಿವಾಟು ನಡೆಸುವುದೇ ನಮಗೆ ಕಷ್ಟ, ನಮ್ಮ ಕೈಯಲ್ಲಿ ಆಗುವುದಿಲ್ಲ ಎನ್ನುತ್ತಾರೆ' ಏಕೆ ಎನ್ನುತ್ತಾರೆಂದು ಮುಂದೆ ಹೇಳುತ್ತೇನೆ. ಆ ಬ್ಯಾಂಕ್‌ನವರು ಏತಕ್ಕೋಸ್ಕರ ಹೇಳುತ್ತಾರೆ ಎಂದರೆ, ಇವತ್ತು insurance ಅನ್ನು ಖಾಸಗಿ ಸಂಸ್ಥೆಯವರಿಗೆ ವಹಿಸಿದ್ದಾರೆ. ಖಾಸಗಿ ಕಂಪನಿಗಳಿಗೆ ವಹಿಸಿದ್ದಾರೆ. ಆ ಖಾಸಗಿ ಕಂಪನಿಯವರು ಯಾರು profit ಇಲ್ಲದೇ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

insurance ಅನ್ನು ನಡೆಸಿ, ದುಡ್ಡು ಹಂಚುವ ಮಹಾನುದಾತರು, ದಾನಿಗಳು ಈ ದೇಶದಲ್ಲಿ ಇಲ್ಲ. ಆದಾಯ ಇದ್ದರೆ ಮಾತ್ರವೇ ಅವರು ಬಂದು ಆ ಕಂಪನಿ ನಡೆಸತಕ್ಕಂಥದ್ದು. ಅವರು ಏನು ಮಾಡುತ್ತಾರೆ ಎಂದರೆ, ಹೆಚ್ಚಿನ ರೈತರು ಬಂದು ವಿಮೆ ಕಂತನ್ನು ಕಟ್ಟಿಬಿಟ್ಟರೆ, ಅವರೇನು ಈಗ L-1 rate ಗೆ ತೆಗೆದುಕೊಂಡಿದ್ದಾರೆ, ಈಗ 5,234/-ರೂಪಾಯಿ ರಾಗಿ ಬೆಳೆಗೆ ವಿಮೆ ಕಂತನ್ನು ಕಟ್ಟಿಸಿಕೊಂಡರೆ ಒಂದು ಹೆಕ್ಟೇರ್‌ನಲ್ಲಿ ಬೆಳೆ ನಾಶವಾದರೆ, 36,000/- ರೂಪಾಯಿ ಕೊಡಲೇಬೇಕಾದ ಪ್ರಸಂಗ ಅನಿವಾರ್ಯ ಆಗಬಹುದು. ಇಲ್ಲ, ಇವರಿವರೇ ಮಾಡಿಕೊಂಡಿರುವ ಕಾನೂನಿನಲ್ಲಿ . . . . ಮುಂದೆ ಇವರ ಕಾನೂನು, ರೈತರಿಗೆ ಇವರು ಯಾವ ರೀತಿ insurance ಕೊಡುತ್ತಾರೆ, ರೈತ insurance ಅನ್ನು ಬಾಚಿಕೊಂಡು ಹೋಗಲು ಇವರು ಕಾನೂನು ಕಟ್ಟಲೆಗಳನ್ನು ಮಾಡಿಕೊಂಡಿದ್ದಾರಲ್ಲಾ, ಅದನ್ನು ಹೇಳುತ್ತೇನೆ. ಕಂಪನಿಯವರು ಹಾಗೂ ಬ್ಯಾಂಕಿನವರು adjustment ಆಗಿದ್ದಾರೆಂದು ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಇಲ್ಲ ಎಂದರೆ, ಈ ಬಗ್ಗೆ ಒಂದು ತನಿಖೆಯಾಗಲಿ. ಇವರು ಯಾವುದೇ ಕಾರಣದಿಂದ ರೈತರನ್ನು . . ಇನ್ನು ಎರಡೇ ದಿನ ಇರುವುದು ಟೈಮ್ ಮುಗಿದು ಹೋಯಿತು ಎಂದು ರೈತರಿಗೆ insurance ಕಟ್ಟಲು ಬಿಡುವುದಿಲ್ಲ. ಆಗ ರೈತರು ಇಲ್ಲಿಂದ ಅಲ್ಲಿಯವರೆಗೆ queue ನಿಂತಿರುತ್ತಾರೆ. ಅದಕ್ಕೆ ಪಹಣಿ ತನ್ನಿ ಎನ್ನುತ್ತಾರೆ, ಇನ್ನೇನೋ ತನ್ನಿ ಎನ್ನುತ್ತಾರೆ, ಏನೇನೋ ತರಿಸಿ, ತರಿಸಿ, ರೈತರನ್ನು ಅಳಿಸಿ, ಅಳಿಸಿ ಆ insurance ಎಂದರೆ ಆ ರೈತಾಪಿ ಜನಕ್ಕೆ ಅಲರ್ಜಿ ಬಂದು ಹೋಗಿದೆ. ಯಾರು insurance ಅನ್ನು ಕಟ್ಟಿಕೊಳ್ಳುತ್ತಾರೆಂದರೆ, ಸ್ವಲ್ಪ ಬುದ್ಧಿವಂತ ರೈತಾಪಿ ವರ್ಗದವರು ಮತ್ತು ಸಾಲಗಾರರು. ಯಾರು ಸಾಲ ಬ್ಯಾಂಕಿನಲ್ಲಿ ತೆಗೆದುಕೊಳ್ಳುತ್ತಾರೆ, ಅಂತಹ ರೈತಾಪಿ ವರ್ಗ ಮಾತ್ರ insurance ಅನ್ನು ಮಾಡಿಸುತ್ತಾರೆ. ಅವರು ಒಂದು statement ಕೊಡುತ್ತಾರೆ. ಒಂದು ಉದಾಹರಣೆ ಹೇಳುತ್ತೇನೆ, ಇವತ್ತು ಅರಸೀಕೆರೆಯಲ್ಲಿ ತೀವ್ರವಾದ 100% ಬರಗಾಲವಿದೆ. ಇವತ್ತು ಇಡೀ ವರ್ಷದಲ್ಲಿ ವಿಮೆಯಿಂದ ಬಂದಿರತಕ್ಕಂಥ ಹಣ 1.53 ಕೋಟಿ ರೂಪಾಯಿ ಎಂದರೆ 77,000 ರೈತ ಕುಟುಂಬಗಳು ನಮ್ಮ ಕ್ಷೇತ್ರದಲ್ಲಿವೆ. ಇವತ್ತು ಕೇವಲ loanees ಮತ್ತು non-loanees ಎರಡೂ ಸೇರಿ 6,000-7,000 ರೈತಾಪಿ ಜನ ಮಾತ್ರ insurance ತೆಗೆದುಕೊಳ್ಳುತ್ತಿದ್ದಾರೆ. TV ಗಳಲ್ಲಿ 'ಫಸಲ್ ಭೀಮಾ ಯೋಜನೆ' ಎಂದು advertisement ಕೊಡುತ್ತೀರಲ್ಲಾ, ತೆಗೆದುಕೊಂಡು ಎಲ್ಲರೂ

13-06-2017

ದುಡ್ಡನ್ನು ಹೊತ್ತುಕೊಂಡು ಹೋಗಿ ಎನ್ನುತ್ತೀರಲ್ಲಾ, ರೈತರೆಲ್ಲಾ ದುಡ್ಡನ್ನು ಕಂತೆ ಕಟ್ಟಿಕೊಂಡು ಹೋಗಿ ಎಂದು ಹೇಳುತ್ತೀರಲ್ಲಾ, ಎಲ್ಲಿ ಯಾವ ರೀತಿ ಆಗುತ್ತದೆ ಇದು? ಏಕೆ ಕಟ್ಟಿಸಲಿಲ್ಲ. ಸರ್ಕಾರದ duty ಅಲ್ಲವೇ? ಇದನ್ನು ನೀವು ಕೊಡಬೇಕು ಎನ್ನುವ ಬದ್ಧತೆ ಇದ್ದರೆ, ನೀವು ಕಂಪನಿಗೆ L-1 ರೇಟ್‌ಗೆ ಕೊಡುತ್ತೀರಿ, ಕಂಪನಿಗೆ ಏಕೆ ಕೊಡಬೇಕು? ಹಿಂದೆ Agriculture Insurance Company ಎಂದು ಇರಲಿಲ್ಲ. ಸರ್ಕಾರಿ ಸ್ವಾಮ್ಯದ ಕಂಪನಿ ಇರಲಿಲ್ಲ. ಆ ಕಂಪನಿ ಮುಖಾಂತರ ರೈತರು insurance ತೆಗೆದುಕೊಳ್ಳುತ್ತಿರಲಿಲ್ಲ. ಈಗ ನೀವು ಖಾಸಗಿ ಸಂಸ್ಥೆಯವರಿಗೆ ಕೊಟ್ಟಂಥ ಉದ್ದೇಶ ಏನು? ಯಾವ ಉದ್ದೇಶಕ್ಕೋಸ್ಕರ ಖಾಸಗಿ ಕಂಪನಿಗಳಿಗೆ ಕೊಟ್ಟಿದ್ದೀರಿ? ಇವತ್ತು All India ದಲ್ಲಿ 17 ಜನ ಖಾಸಗಿ ಕಂಪನಿಯವರು ಇದ್ದಾರೆ. ಕರ್ನಾಟಕದಲ್ಲಿ ಅಲ್ಲ, All India levelನಲ್ಲಿ ಇರತಕ್ಕಂಥವರು 17 ಜನ. ಆ 17 ಜನ ಮಹಾನ್‌ದಾತರು, ಖಾಸಗಿ ಕಂಪನಿಯವರು ರೈತಾಪಿ ಜನಕ್ಕೆ ನಿಜವಾಗಿಯೂ insurance ಕೊಡುತ್ತಾರಾ? ಲಾಭ ಇಲ್ಲದಲೇ ಬರುತ್ತಾರಾ? ಯಾರು ಈ ಕಂಪನಿಯವರು? ಇದ್ದಂತಹ ಹಳೇ ಪದ್ಧತಿಯನ್ನು ರದ್ದು ಮಾಡಿ ಏತಕ್ಕೋಸ್ಕರ ಹೊಸ ಹೆಸರಿನಲ್ಲಿ ಮಾಡಿದ್ದಾರೆ? ನಾನು ಆವತ್ತು ಅದಕ್ಕೇ ಹೇಳಿದ್ದು, ಈ ಯೋಜನೆ ಒಳ್ಳೆಯ ಉದ್ದೇಶದಿಂದ ತಂದರೂ ಕಾರ್ಯಾಚರಣೆ ಮಾಡುವ ಹಂತದಲ್ಲಿ ರೈತಾಪಿ ಜನಕ್ಕೆ ಇದರಿಂದ ಉಪಯೋಗ ಆಗುತ್ತಿಲ್ಲ.

(ಮುಂದು)

ದಿನಾಂಕ: 13-06-2017-04.00 (28) AJ/SSD

ಶ್ರೀ ಕೆ.ಎಂ. ಶಿವಲಿಂಗೇಗೌಡ (ಮುಂದು . . .)

ಸದನದಲ್ಲಿ ಇದರ ಬಗ್ಗೆ ಸಾರಾಸಗಟಾಗಿ ಚರ್ಚೆ ಆಗಬೇಕು. ಇದರ ಬಗ್ಗೆ ಕೂಲಂಕುಷವಾಗಿ ತಿಳಿದುಕೊಂಡು, ಖಾಸಗಿ ಸಂಸ್ಥೆಯವರು ನಿಜವಾಗಿಯೂ ಆದಾಯವಿಲ್ಲದೆ ಕೆಲಸ ಮಾಡುವುದಿಲ್ಲ. ಖಾಸಗಿ ಸಂಸ್ಥೆಯವರಿಗೆ ಕೊಡಿ. ಆದರೆ ರೈತ ನಾಲ್ಕು ಎಕರೆ ಭೂಮಿಯಲ್ಲಿ ಏನು ಬೆಳೆ ಬೆಳೆಯುತ್ತಾನೆ, ಅದು ನಾಶವಾದರೆ ಅದಕ್ಕೆ ಪುನ: ಪ್ರೀಮಿಯಮ್ ನಿಗದಿ ಮಾಡುತ್ತೀರಿ. ಪ್ರೀಮಿಯಮ್ ಕಟ್ಟಿದ ನಂತರ ವಿಮೆಯ ಮೊತ್ತವೇನಿದೆ ಅದನ್ನು ಖಾಸಗಿ ಸಂಸ್ಥೆಯವರು ಸಾರಾಸಗಟಾಗಿ ಕೊಡುವಂತಹ ಒಂದು ಕಾನೂನನ್ನು ಜಾರಿಗೆ ತರಬೇಕೇ ಹೊರತು, ಅದಕ್ಕೊಂದು ಅಧಿಕಾರಿ ವರ್ಗವನ್ನು ನೇಮಿಸಿ, 10 ವರ್ಷದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರಾಸರಿ ತೆಗೆದುಕೊಂಡು ಒಂದು ರೀತಿಯಲ್ಲಿ confuse ಮಾಡಿ ಆ ರೈತಾಪಿ ಜನರಿಗೆ insurance ಅನ್ನು ಅರ್ಥವಾಗದ ರೀತಿಯಲ್ಲಿ ಮಾಡುತ್ತಾರೆ. ಬಹಳಷ್ಟು ಮಟ್ಟಿಗೆ ಕಂಪನಿಗಳಿಂದ ಮತ್ತು ಅಧಿಕಾರಿ ವರ್ಗದವರಿಂದ ಅನ್ಯಾಯ ಆಗುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟನೆ ಮಾಡುತ್ತಿದ್ದೇನೆ. ರೈತರ್ಯಾರೂ ಇವತ್ತು insurance ಅನ್ನು ಕಟ್ಟುವುದಕ್ಕೆ ಹೋಗುತ್ತಿಲ್ಲ. ರೈತ ಸಂಕಷ್ಟದಲ್ಲಿರುವುದರಿಂದ ಅವರಿಗಾಗಿ insurance company ಗಳನ್ನು ಪ್ರಾರಂಭ ಮಾಡಿದ್ದೇವೆ, ಅವರಿಗೆ insurance ಕೊಡುತ್ತೇವೆಂದು ನೀವು ಸುಮ್ಮನೆ ಹೇಳುತ್ತಿದ್ದೀರಿ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ : ಶಿವಲಿಂಗೇಗೌಡರೆ, ತಾವು insurance ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದೀರಿ. ಈ insurance ಅನ್ನು ಯಾವ ರೀತಿ ಮಾಡಬೇಕೆಂದು ಸಲಹೆ ಕೊಡಿ. ಏಕೆಂದರೆ ಇದರಲ್ಲಿ ಬಹಳ ಗೊಂದಲವಿದೆ. ಇದಕ್ಕೆ ನಾವು ಕೂಡ ಸಹಕಾರ ಕೊಡುತ್ತೇವೆ. ಬಹಳ ಕಡೆಗಳಲ್ಲಿ ಬ್ರೋಕರ್ಸ್‌ಗಳು ತೆಗೆದುಕೊಂಡು ಅವರಿಗೆ ಪರಿಹಾರ ಸಿಗದ ರೀತಿಯಲ್ಲಿ ಆಗಿರುವುದನ್ನು ನೋಡಿದ್ದೇವೆ. ಇದೇ ರೀತಿ ನಮ್ಮ ಜಿಲ್ಲೆಯಲ್ಲಿಯೂ ಬಹಳಷ್ಟು ಕಡೆ ಆಗಿರುವುದನ್ನು ಮಾನ್ಯ ಸಚಿವರ ಗಮನಕ್ಕೂ ಸಹ ತಂದಿದ್ದೇವೆ. ಯಾವ ರೀತಿ ರೈತರಿಗೆ ನೇರವಾಗಿ insurance ಮಾಡಬೇಕೆನ್ನುವ point ಗೆ ಬನ್ನಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಆ ಅಂಶದ ಬಗ್ಗೆಯೂ ಹೇಳುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಜನ ತಜ್ಞರ ಜೊತೆ ಚರ್ಚೆ ಮಾಡಿರುತ್ತೇನೆ. ಈ ರೀತಿಯ ಕಾನೂನುಗಳಿಂದ ನಿಜವಾಗಿಯೂ ರೈತನ ಜೇಬಿಗೆ insurance ತಲುಪುವುದಿಲ್ಲ ಎನ್ನುವುದನ್ನು ಸಹ ಹೇಳಿದ್ದಾರೆ. ಖಾಸಗಿ ಸಂಸ್ಥೆಯವರನ್ನು ಮಧ್ಯವರ್ತಿಗಳನ್ನಾಗಿ ಮಾಡಿಕೊಂಡರೆ, ಯಾವುದೇ ಕಾರಣದಿಂದಲೂ ರೈತರಿಗೆ ನಿಜವಾದ insurance ತಲುಪುವುದಿಲ್ಲ. ಆ insurance ತಲುಪಬೇಕಾದರೆ ಸರ್ಕಾರವೇ ಮುತುವರ್ಜಿ ವಹಿಸಬೇಕು, ಸರ್ಕಾರದಿಂದಲೇ ಕಾರ್ಯರೂಪಕ್ಕೆ ಬರಬೇಕು. ಇದರ ಬಗ್ಗೆ ಸರ್ಕಾರವೇ ಗಮನ ತೆಗೆದುಕೊಂಡು ಸರ್ಕಾರದಿಂದಲೇ ಅಂದರೆ, ಸರ್ಕಾರದ ಅಧಿಕಾರಿಗಳಿಂದಲೇ ಆಗಬೇಕೇ ವಿನ: ಬೇರೆಯವರಿಂದ ಆಗುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಬ್ಯಾಂಕಿನವರನ್ನು ಬಿಟ್ಟು ಬಿಡಬೇಕು. ಇಂಡಿಯಾ ದೇಶದ ರೈತಾಪಿ ಜನರಿಗಾಗಿ ಬ್ಯಾಂಕಿನವರು ಇಲ್ಲ. ಯಾವುದೇ ಒಂದು ಬ್ಯಾಂಕಿನವರ ಹತ್ತಿರ ಹೋಗಿ ಅವರ specialty ಕೇಳಿದರೆ ಏನೇನೋ ಹೇಳುತ್ತಾರೆ. ನಮ್ಮನ್ನು ಸೆಲೆಕ್ಷನ್ ಕಮಿಟಿಗಳಿಗೆ

Chairman ರನ್ನಾಗಿ ಮಾಡುತ್ತಾರೆ. ನಾವು ಮಾಡಿಕೊಟ್ಟಿರುವಂತಹದಕ್ಕೆ ಬ್ಯಾಂಕಿನವರು ಸಾಲ ಕೊಡುವುದಿಲ್ಲ. ಅವರದೇ ಆದಂತಹ ಜನಗಳಿಗೆ ಸಾಲವನ್ನು ಕೊಡುತ್ತಾರೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇವತ್ತು ಭ್ರಷ್ಟಾಚಾರ ಎದ್ದು ನಿಂತಿದೆ ಎನ್ನುವುದನ್ನು ನಾವು ಸಾಬೀತು ಮಾಡುತ್ತೇವೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಯಾರು percentage ಕೊಡುತ್ತಾರೋ ಅವರಿಗೆ ಲೋನ್ ಮಂಜೂರಾಗುವಂತಹ ಪರಿಸ್ಥಿತಿ ಇದೆ. ಎಷ್ಟೋ ಜನ ಅನರ್ಹರಿಗೆ, ದಾಖಲೆಗಳಿಲ್ಲದವರಿಗೆ ದಾಖಲೆ ಗಳನ್ನು ಹೆಚ್ಚಿಸಿ, ಅದರ ಮೌಲ್ಯದ ಮೊತ್ತವನ್ನು ಹೆಚ್ಚಿಸಿ ಅವರಿಗೆ ಸಾಲ ಕೊಡುತ್ತಾರೆ. ಇಲ್ಲಿ ಯಾರ ಹತ್ತಿರ ದುಡಿಯುತ್ತಾರೋ, ಆ ದುಡ್ಡೆಲ್ಲಾ ಅಲ್ಲಿ ಹಾಳಾಗಿ ಹೋಗುತ್ತಿದೆ. ಇದನ್ನು ನಿಬಂಧನೆ ಮಾಡುವುದಕ್ಕೆ ಬ್ಯಾಂಕುಗಳಿಂದ ಸಾಧ್ಯವಿದೆಯೇ? ಬ್ಯಾಂಕುಗಳನ್ನು ಕಂಟ್ರೋಲ್ ಮಾಡಬಾರದೇ? ಬ್ಯಾಂಕುಗಳು ಏತಕ್ಕಾಗಿ ಇವೆ? ಈ ದೇಶದ ನಾಗರಿಕರ, ರೈತರ ಎಲ್ಲಾ ವರ್ಗದ ಜನರ ಭವಿಷ್ಯಕ್ಕೋಸ್ಕರ ಬ್ಯಾಂಕು ಗಳಿರುವುದು. ಬ್ಯಾಂಕುಗಳಿಗೆ ದುಡಿಮೆ ಮುಖ್ಯವಲ್ಲ, Service moto ಬೇಕು. Service ನ ಹಿತದೃಷ್ಟಿಯಿಂದ ಬ್ಯಾಂಕುಗಳು ಕೆಲಸ ಮಾಡಬೇಕು. ಆದರೆ ಇಂದು ಬ್ಯಾಂಕುಗಳು ಕಾಂಪಿಟೇಷನ್ ಮೇಲೆ ಕೆಲಸ ಮಾಡುತ್ತಿವೆ. ಬ್ಯಾಂಕುಗಳು ಇಷ್ಟು ಲಾಭ ಮಾಡಿದೆ, ಅಷ್ಟು ಲಾಭ ಮಾಡಿದೆ ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿವೆ. ಇವತ್ತು ನಮ್ಮಲ್ಲೇ ಇರುವ ಒಂದು ಬ್ಯಾಂಕಿನಲ್ಲಿ ಲೋನ್ ತೆಗೆದುಕೊಳ್ಳಬೇಕಾದರೆ 10% ಕಮೀಷನ್ ಕೊಡಬೇಕು. ಆಗ ಮಾತ್ರ ಸಾಲ ಮಂಜೂರಾಗುತ್ತದೆ. ಈ ರೀತಿಯ ಅವ್ಯವಸ್ಥೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಂದರೆ, ಈ ದೇಶದಲ್ಲಿ ಭ್ರಷ್ಟಾಚಾರ ಕಡಿಮೆ ಮಾಡುವುದಕ್ಕಾಗುತ್ತದೆಯೇ? ಆದ್ದರಿಂದ ನಾನು ಹೇಳುವುದೇನೆಂದರೆ ಹಾಗೂ ಮಾನ್ಯ ಸದಸ್ಯರಾದ ಮಾಲೀಕಯ್ಯ ವಿ. ಗುತ್ತೇದಾರ ಹೇಳಿದ ಹಾಗೆ, ಬ್ಯಾಂಕ್‌ವೊಂದನ್ನು ಯಾವುದೇ ಕಾರಣದಿಂದಲೂ ಬೇರೆ ಕೆಲಸಕ್ಕೆ ಬಳಸದೇ, insurance ಗಾಗಿಯೇ ಬ್ಯಾಂಕ್ ಶಾಖೆಗಳನ್ನು ತೆರೆಯಬೇಕು. ಆ ಬ್ಯಾಂಕಿನ ವ್ಯವಸ್ಥೆ insurance ಗಾಗಿಯೇ ಮೀಸಲಿರಬೇಕು. ಆ ಬ್ಯಾಂಕಿನವರು ರೈತರು ಯಾರು ಬರುತ್ತಾರೋ ಅವರಿಗೆ ಪಾಸ್‌ಬುಕ್ ಅನ್ನು issue ಮಾಡಬೇಕು, ಅವರು ಬೆಳೆ ಬೆಳೆಯುವುದಕ್ಕಿಂತಲೂ ಮುಂಚಿತವಾಗಿ ನಾನು ಇಷ್ಟು ಎಕರೆ ಭೂಮಿಯಲ್ಲಿ ಬೆಳೆ ಬೆಳೆಯುತ್ತೇನೆಂದು ಹೇಳಿ insurance ಕಟ್ಟಬೇಕು. Insurance ಕಟ್ಟಿದ ನಂತರ ಅದನ್ನು ಪಾಸ್ ಬುಕ್ ಎಂಟ್ರಿ ಮಾಡಿಸಿ ಕೊಳ್ಳಬೇಕು. ನಮ್ಮಲ್ಲೂ ಸಹ ಕೆಲವು ಜನರಿದ್ದು, ನಾವೂ 100% ಎಂದು ಹೇಳುವುದ

ಕ್ಕಾಗುವುದಿಲ್ಲ. ಎರಡು ಎಕರೆ ಭೂಮಿಯಲ್ಲಿ ಹೆಸರುಕಾಳನ್ನು ಬೆಳೆದು, insurance ಬರುತ್ತದೆನ್ನುವ ದೃಷ್ಟಿಯಿಂದ ಆರು ಎಕರೆ ಎಂದು ಹೇಳಿ duplication ಮಾಡುವುದು ಬೇಡ. ಇವರು ಏನು ಮಾಡುತ್ತಾರೆಂದರೆ ಬೆಳೆ ಬಿತ್ತನೆ ಮಾಡುವುದಕ್ಕಿಂತಲೂ ಮುಂಚಿತವಾಗಿ, ಬೆಳೆ ಬೆಳೆಯುವುದಕ್ಕಿಂತಲೂ ಮುಂಚಿತವಾಗಿ insurance ಕಟ್ಟಿಸಿಕೊಳ್ಳುವುದಿಲ್ಲ. ಬೆಳೆ ಹುಟ್ಟಿದ ನಂತರ insurance ಕಟ್ಟಿಸಿಕೊಳ್ಳುವುದಕ್ಕೆ ದಿನಾಂಕವನ್ನು ನಿಗದಿ ಮಾಡುತ್ತಾರೆ. ಇದು ಹೇಗೆ? ಆ ಸಮಯದಲ್ಲಿ ಯಾರು ಎಷ್ಟು ಬೇಕಾದರೂ ಕೊಡುತ್ತಾರೆ. ಅದರಲ್ಲೂ ವ್ಯತ್ಯಾಸವಾಗುವುದರಿಂದ ಬೆಳೆ ವಿಮೆಗೋಸ್ಕರವೇ systematic ಆಗಿ ಬ್ಯಾಂಕಿಂಗ್ ವ್ಯವಸ್ಥೆ ಬರಬೇಕು. ಇದು ಮೊದಲ ಸಲಹೆ. ಆ ಬ್ಯಾಂಕ್ ಅನ್ನು ಯಾವುದೇ ಕಾರಣದಿಂದ commercial bank ಗಳಿಗೆ ಕೊಡಬಾರದು. ಬೆಳೆ ವಿಮೆಗೋಸ್ಕರವಾಗಿಯೇ ತಾಲ್ಲೂಕಿಗೊಂದು ಅಥವಾ ಜಿಲ್ಲೆಗೊಂದು ಮಾಡಬೇಕು. ಇಲ್ಲಿಂದಲೇ ಹಣ ಬಿಡುಗಡೆಯಾಗಬೇಕು.

ಶ್ರೀ ನಾರಾಯಣಗೌಡ : ಶಿವಲಿಂಗೇಗೌಡರೆ, ತಾವು ಮಾತನಾಡುತ್ತಿದ್ದೀರಿ. ಆದರೆ ಯಾರು ಅದನ್ನು ಕೇಳಿಸಿಕೊಳ್ಳುತ್ತಿದ್ದಾರೆ. ಒಬ್ಬರಾದರೂ ಸಚಿವರಿದ್ದಾರೆಯೇ? ಮಾನ್ಯ ಅಧ್ಯಕ್ಷರೆ, ಯಾರಿದ್ದಾರೆ? ನಾವು ಒಳಗಡೆ ಬಂದು ಮಾತನಾಡುವುದರಿಂದ ಏನು ಪ್ರಯೋಜನ? ಸಚಿವರೊಬ್ಬರೂ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ : Horticulture minister ಇದ್ದಾರೆ.

ಶ್ರೀ ನಾರಾಯಣಗೌಡ : ಇಲ್ಲಿ ಸದನ ನಡೆಯುತ್ತಿದೆಯೇ ಅಥವಾ ತಮಾಷೆಯೇನಾದರೂ ನಡೆಯುತ್ತಿದೆಯೇ? ದಯವಿಟ್ಟು ಹೇಳಿ. ನಾವೆಲ್ಲರೂ ಹೊರಟು ಹೋಗುತ್ತೇವೆ. ಪಾಪ, ಅವರು ರೈತರ ಬಗ್ಗೆ ಅಷ್ಟೊಂದು ಕಾಳಜಿಯನ್ನಿಟ್ಟುಕೊಂಡು ಮಾತನಾಡುತ್ತಿರುವ ಸಮಯದಲ್ಲಿ ಯಾರೂ ಇಲ್ಲ. ಮಾತನಾಡುವುದರಿಂದ ಪ್ರಯೋಜನ ಏನೆಂದು ಹೇಳಿ.

ಅಧ್ಯಕ್ಷರು : 3-4 ಜನ ಮಂತ್ರಿಗಳಿದ್ದಾರೆ, ಅಧಿಕಾರಿಗಳಿದ್ದು ಅವರು ಕೇಳುತ್ತಿದ್ದಾರೆ. ರೆಕಾರ್ಡ್ ಆಗುತ್ತಿದೆ. ಶಿವಲಿಂಗೇ ಗೌಡರೆ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮೊದಲನೆಯದಾಗಿ ರೈತರಿಗೋಸ್ಕರ, ಪ್ರೀಮಿಯಮ್ ಕಟ್ಟುವುದಕ್ಕೆ ಪ್ರತ್ಯೇಕವಾದಂತಹ ಒಂದು ಬ್ಯಾಂಕಿಂಗ್ ವ್ಯವಸ್ಥೆಯನ್ನು ಮಾಡಬೇಕೆನ್ನುವುದು ಸಲಹೆ. ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಒಟ್ಟಾಗಿ ಸೇರಿ ಮಾಡಲಿ. ನಾವು ಬೇಡವೆಂದು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೇಳುವುದಿಲ್ಲ. ಒಟ್ಟಾರೆ ಇದನ್ನು ಮಾಡಬೇಕೆನ್ನುವುದು ನಮ್ಮ ಸಲಹೆಯಾಗಿದೆ. ಎರಡನೆಯ ಸಲಹೆ ಏನೆಂದರೆ, ಯಾವುದೇ ಕಾರಣದಿಂದ ಖಾಸಗಿ ಕಂಪನಿಯವರ ಮುಖಂಡತ್ವದಲ್ಲಿ, ಮಾರ್ಗದರ್ಶನದಲ್ಲಿ, ಅವರ ಮುಖಾಂತರ insurance company ನಡೆಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದರಿಂದ ರೈತರಿಗೆ ಮಾರಕವೇ ಹೊರತು ಒಳ್ಳೆಯದಂತೂ ಆಗುವುದಿಲ್ಲ. ಇದನ್ನು ಯಾವುದೇ ಕಾರಣದಿಂದಲೂ ಮಾಡದೇ, ರೈತಾಪಿ ಜನರಿಗೆ ಅನುಕೂಲವಾಗುವಂತೆ ನಮ್ಮ ನೌಕರ ವರ್ಗದಿಂದಲೇ ಮಾಡಬೇಕು. L-1 rate ಕೋಟ್ ಮಾಡಿರುವವರಿಗೆ ಕೊಟ್ಟರು. ಪ್ರೀಮಿಯಮ್ ಮತ್ತು ವಿಮಾ ಮೊತ್ತ ನಿಗದಿ ಮಾಡಿದರು. ಎಲ್ಲಾ ಆಯಿತು. ಆದರೆ ರೈತರು ಕಟ್ಟಿರುವಂತಹ ವಿಮೆಗೆ ಎಷ್ಟು ಹಣ ಬರುತ್ತದೆಂದು ನಿರ್ಧಾರ ಮಾಡಬೇಕಲ್ಲವೇ? ಆ ವ್ಯವಸ್ಥೆಯನ್ನು ಯಾವ ರೀತಿಯಿಟ್ಟಿದ್ದಾರೆಂದರೆ, ಬೆಳೆಯ ಏಳು ವರ್ಷಗಳ ಸರಾಸರಿ ಆವರೇಜ್‌ನ್ನು ತೆಗೆದುಕೊಳ್ಳುವುದು. ಇದರಲ್ಲೇನು ಅಡಗಿದೆಯೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ರೈತ ಏಕೆ ಕಟ್ಟುತ್ತಿಲ್ಲ, ಏತಕ್ಕೆ ಮುಂದೆ ಬರುತ್ತಿಲ್ಲ ಎನ್ನುವುದಕ್ಕೆ ಏಳು ವರ್ಷಗಳ ಕಾಲದ ಅವರೇಜ್ ಅನ್ನು ತೆಗೆದುಕೊಳ್ಳಬೇಕು. ಆ ಏಳು ವರ್ಷದಲ್ಲಿ ಎರಡು ವರ್ಷದ್ದು ಯಾವುದು ಕಡಿಮೆಯಿರುತ್ತದೆಯೋ ಅದನ್ನು ಬಿಟ್ಟು ಬಿಡುತ್ತಾರೆ, ಆ ಕೋಷ್ಠಕದಿಂದ ಎರಡು ವರ್ಷದ ಆವರೇಜ್ ಅನ್ನು ತೆಗೆದು ಹಾಕುತ್ತಾರೆ. ಉಳಿದ ಐದು ವರ್ಷದ ಸರಾಸರಿಯನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯಿರುವಾಗ ಯೂನಿಟ್ ಹೇಗೆ ಮಾಡುತ್ತಾರೆ?

ಅಧ್ಯಕ್ಷರು : ಕಡಿಮೆ ಇರುವುದನ್ನು ತೆಗೆಯುತ್ತಾರೆಯೇ ಅಥವಾ ಹೆಚ್ಚಿರುವುದನ್ನು ತೆಗೆಯುತ್ತಾರಾ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕಡಿಮೆ ಇರುವುದನ್ನು ತೆಗೆದು ಹಾಕುತ್ತಾರೆ. ಹೆಚ್ಚಿರುವ ಐದು ವರ್ಷದ್ದನ್ನು ಇಟ್ಟುಕೊಳ್ಳುತ್ತಾರೆ. ಹೆಚ್ಚಿಗೆ ಇರುವ ಐದು ವರ್ಷದ್ದನ್ನು ಇಟ್ಟುಕೊಂಡು ಯೂನಿಟ್ ಹೇಗೆ ಮಾಡುತ್ತಾರೆ? ಕಟಾವು ಮಾಡಿದ ನಂತರ ಆ ಅಧಿಕಾರಿಗಳು ಕಂಪನಿಯವರ ಜೊತೆಯಲ್ಲಿ ಹೋಗಿ ಸಮೀಕ್ಷೆ ಮಾಡುತ್ತಾರೆ. ಇದನ್ನು ಒತ್ತಿ ಒತ್ತಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಆ 17 ಜನ ಪುಣ್ಯಾತ್ಮರು ಇಡೀ ಭಾರತ ದೇಶದ ರೈತರಿಗೆ insurance ಕೊಡುವಂತಹ ದಾತರು, ಎಷ್ಟರಮಟ್ಟಿಗೆ ಇರಬೇಕು, ಅವರು ಎಷ್ಟು ಪ್ರಭಾವಿಶಾಲಿಗಳಾಗಿರಬೇಕು, ಅವರು ಕರ್ನಾಟಕದ ನೌಕರ ವರ್ಗವನ್ನು, ಅವರಿಗೆ ಸರಿಸಾಟಿಯಾಗಿ, ಆ ಕಂಪನಿಯವರನ್ನು ಎದುರಿಸುವಂತಹ ಸಾಮರ್ಥ್ಯ ನಮ್ಮ ಅಧಿಕಾರಿ ವರ್ಗದವರಿಗೆ

ಇರುತ್ತದೆಯೇ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಇದು ಬಹಳ ಪ್ರಮುಖವಾಗಿರುವಂತಹದ್ದು. ಅವರು ಹೇಳಿದ್ದನ್ನು ನಮ್ಮ ರೈತರು, ಅಧಿಕಾರಿ ವರ್ಗದವರು ಬರೆದುಕೊಡಬೇಕು. (ಮುಂದು . . .)

ಪಿ.ಸ.: 13.06.2017.04.10.(29).GM.SSD.

ಶ್ರೀ ಕೆ.ಎಂ.ಶಿವಲಿಂಗೇಗೌಡ(ಮುಂದುವರೆದುದು):

ಆದ್ದರಿಂದ, ಹೋಗಿ 7 ವರ್ಷದ ಸರಾಸರಿಯನ್ನು ತಂದು, 5 ವರ್ಷ ಸರಾಸರಿಯಲ್ಲಿ ಒಂದು ವರ್ಷ 10 ಕ್ವಿಂಟಾಲ್ ಬೆಳೆ ಬರುತ್ತದೆ, ಒಂದು ವರ್ಷ 5 ಕ್ವಿಂಟಾಲ್ ಬೆಳೆ ಬರುತ್ತದೆ, ಮತ್ತೊಂದು ವರ್ಷ 8 ಕ್ವಿಂಟಾಲ್ ಬೆಳೆ ಬರುತ್ತದೆ, ಈ ರೀತಿ ಬೆಳೆದಂಥ ಬೆಳೆಯನ್ನೆಲ್ಲಾ ಸರಾಸರಿ ಮಾಡಿ ಕೊನೆ ವರ್ಷ ನಾವು insurance ಕಟ್ಟಿದ್ದಂಥ ವರ್ಷದಲ್ಲಿ ಎಷ್ಟು ಸರಾಸರಿ ಬೆಳೆ ಬಂದಿರುತ್ತದೆಯೋ, ಹಿಂದೆಲ್ಲಾ ಎಷ್ಟು ಸರಾಸರಿ ಬೆಳೆ ಬಂದಿರುತ್ತದೆಯೋ ಅದರಲ್ಲಿ cut ಮಾಡಿ ಉಳಿದಂಥ ಇಳುವರಿಗೆ ಮಾತ್ರ insuranceನ್ನು ಕೊಡುವಂಥದ್ದು. ಹಿಂದೆ 5 ವರ್ಷಗಳ ಕಾಲ ಸರಾಸರಿ 8 ಬಂದಿದ್ದು, ಕೊನೆಗೆ insuranceನ್ನು ಕೊಡುವಂಥ ಕಾಲದಲ್ಲಿ ಆ ವರ್ಷ ಎಂಟೂವರೆ ಇದ್ದರೆ ರೈತನೇ ತುಂಬಬೇಕಾಗುತ್ತದೆ. ಇದು ಈ insurance. ರೈತನಿಗೆ ಸರಾಸರಿ ಹೀಗೆ ಲೆಕ್ಕಾಚಾರ ಮಾಡುತ್ತಾರೆಂದು ಏನು ಗೊತ್ತಿರುತ್ತದೆ? ಕೊನೆಗೆ ಇಲ್ಲಿ ಆರೂವರೆ ಬಂತು, ಮೊದಲು ಆರು ಇತ್ತು, ಈ ಬಾರಿ ಆರೂವರೆ ಬಂದುಬಿಟ್ಟಿತು, ಅರ್ಧ ಪರ್ಸೆಂಟ್ ಮಾತ್ರ, ಅರ್ಧ ಇಳುವರಿ ಏನೊಂದು 50 percentage ಏನು ಜಾಸ್ತಿ ಬರುತ್ತದೆಯೋ ಅದಕ್ಕೆ ಮಾತ್ರ insurance ಕೊಡುತ್ತಾರೆ. ಆಗ, ರೈತನಿಗೆ ಸಿಗುವುದು 500, 400, 300 ಅಥವಾ 1000 ರೂಪಾಯಿ. ಇದರಲ್ಲಿ percentageನ್ನು divide ಮಾಡಿ ಕೊಡುತ್ತಾರೆ. ಇದರಿಂದ ಯಾವ ರೀತಿ ರೈತ ಉದ್ಧಾರವಾಗುವುದಕ್ಕೆ ಸಾಧ್ಯವಾಗುತ್ತದೆ? ರೈತನಿಗೆ ಹೇಗೆ insurance ಸಿಗುತ್ತದೆ? ನಿರ್ಧಾರ ಮಾಡುವಂಥ ಸಂದರ್ಭದಲ್ಲಿ ಕಟಾವು ಮಾಡುವಂಥ. . . . . ಅವರು ಹೇಳುತ್ತಾರೆ, ನಾನು ಅಧಿಕಾರಿಗಳನ್ನು ಪ್ರಶ್ನೆ ಮಾಡಿದ್ದೇನೆ, ಕೆಡಿಪಿ ಸಭೆಯಲ್ಲಿ ಪ್ರಶ್ನೆ ಮಾಡಿದ್ದೇನೆ, ಎಲ್ಲಾ ಅಧಿಕಾರಿಗಳನ್ನು ಬಹಳ ತಾಕೀತು ಮಾಡಿ ಕೇಳಿದ್ದೇನೆ. ಯಾವ ಯಾವ ಸರ್ವೆ ನಂಬರ್‌ನಲ್ಲಿ ಕಟಾವು ಸಮೀಕ್ಷೆ ನಡೆಸಬೇಕೆಂದು ಅಲ್ಲಿಂದಲೇ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿವರಣೆ ಬಂದು ಬಿಡುತ್ತದೆ. ಕಟಾವು ಸಮೀಕ್ಷೆ ನಡೆಸುವಾಗ ಉತ್ಕೃಷ್ಟವಾಗಿ ಬೆಳೆದಂಥ ಹೊಲಕ್ಕೆ ಹೋಗುತ್ತಾನೆ. ಅವನ್ಯಾರೋ ರೈತ ಬೋರ್‌ವೆಲ್‌ನಲ್ಲಿ ನೀರನ್ನು ಸ್ವಲ್ಪ ಹಾಯಿಸಿಕೊಂಡಿರುತ್ತಾನೆ. ಅವನ ಹೊಲಕ್ಕೆ ಹೋಗಿ ಕಟಾವು ಮಾಡುತ್ತಾರೆ. ಅದರಲ್ಲಿ ಶೇಕಡಾವಾರು ಬಂದು ಬಿಡುತ್ತದೆ. ಏನೂ ಇಲ್ಲದೆಯೇ ಬೆಳೆ ಇಲ್ಲದೆ, ಮಳೆ ಇಲ್ಲದೆ ನಾಶವಾಗಿರುವಂಥ ರೈತನ ಹೊಲಕ್ಕೆ ಹೋಗಿ ಇವರು ಕಟಾವು ಮಾಡುತ್ತಾರೆ ಎನ್ನುವ ಗ್ಯಾರಂಟಿ ಏನು? ಇದನ್ನೆಲ್ಲಾ ನೋಡುವವರು ಯಾರು? ಅಂಥ Private companyಯವರು ಇದನ್ನು ಹೇಗೆ, ಯಾವ ರೀತಿ ಸೂಕ್ಷ್ಮವಾಗಿ handle ಮಾಡಬಹುದು? ಇದನ್ನು ನಾವು ಅಲ್ಲಿ ಯೋಚನೆ ಮಾಡಬೇಕು. ಇದರಿಂದ ನಮಗೆ ಅನುಮಾನವಿದೆ. ರೈತರಿಗೆ ಈ ಕಟಾವು ಸಮೀಕ್ಷೆಯಿಂದ 5 ವರ್ಷಗಳ ಕಟಾವನ್ನು ಸರಾಸರಿ ತೆಗೆದುಕೊಂಡು ಕೊನೆ ವರ್ಷದ ಸರಾಸರಿ ಬಂದಿರುವಂಥ ಬೆಲೆಗೆ ಹೋಲಿಕೆ ಮಾಡುತ್ತಾರೆ. ನಮ್ಮ ಕಡೆ ಯಾವಾಗಲೂ ಬರಗಾಲ. Average ಕಟಾವು ಬಂದಿರುವಂಥದ್ದು ಯಾವಾಗಲೂ ಕಡಿಮೆ. ನೀವು ಆ averageಗೆ insuranceನ್ನು ಕೊಡುವುದಕ್ಕೆ ಹೋದರೆ ಎಲ್ಲಿಂದ ತಂದು ಕೊಡುತ್ತೀರಿ? ಬೇರೆ ಕಡೆಯೆಲ್ಲಾ ಚೆನ್ನಾಗಿ ಬೆಳೆ ಬಂದಿರುತ್ತದೆ. ಇಡೀ ಜಿಲ್ಲೆಯನ್ನು ಒಂದು ಯೂನಿಟ್ ಆಗಿ ಮಾಡಿದರೆ ಹೇಗೆ ಆಗುತ್ತದೆ? ಜಿಲ್ಲೆಯನ್ನು ಯೂನಿಟ್ ಮಾಡಿದರೆ ಸಾಧ್ಯವೇ? ಜಿಲ್ಲೆಯಲ್ಲಿ ಯಾವುದೋ 10 ಹೊಲಗಳನ್ನು ಟೆಸ್ಟ್ ಮಾಡಿ, 10 ಹೊಲದ ಬೆಳೆಯ ಸರಾಸರಿ averageನ್ನು ನೀವು ತೆಗೆದುಕೊಳ್ಳುತ್ತೇವೆಂದರೆ ಇದು ಸಾಧ್ಯವೇ? ಈ ರೀತಿ ಅನೇಕ ಗೊಂದಲಗಳು ಈ insuranceನಲ್ಲಿ, ಈ ಯೋಜನೆಯಲ್ಲಿ ಇದ್ದಾವೆ. ಆದ್ದರಿಂದ ಇದನ್ನು ರೈತಾಪಿ ವರ್ಗಕ್ಕೆ ನೀವು insurance ಕೊಡುತ್ತಿದ್ದೇವೆಂದು ಬರೀ TV advertisement ಯಾರೇ ಕೊಟ್ಟರೂ ಸಾಧ್ಯವಾಗುವುದಿಲ್ಲ. ಇದೇನಾದರೂ ನಿಜವಾಗಿಯೂ ರೈತನಿಗೆ insurance ತಲುಪಬೇಕು ಎನ್ನುವ ಬದ್ಧತೆಯಿದ್ದರೆ, ಆ ರೈತಾಪಿ ಜನರನ್ನು ಸಂಕಷ್ಟದಿಂದ ಪಾರು ಮಾಡಬೇಕೆನ್ನುವ ಅಭಿಲಾಷೆಯಿದ್ದರೆ, ಇದನ್ನು ಒಂದು ಕ್ರಾಂತಿಕಾರಕ ಬದಲಾವಣೆಯೆಂದು ಭಾವಿಸಿಕೊಂಡು ಇದಕ್ಕೆ ಅನೇಕ ಸಕಾರಣಗಳನ್ನು ಕೊಟ್ಟು ಇದನ್ನು ಯಾವ ರೀತಿ ಬದಲಾವಣೆ ಮಾಡಿದರೆ ರೈತಾಪಿ ಜನವರ್ಗಕ್ಕೆ ಅವನು ಶಾಶ್ವತವಾಗಿ insuranceನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ವ್ಯವಸ್ಥೆಯನ್ನು ಮಾಡುವಂಥ ನಿಟ್ಟಿನಲ್ಲಿ ಪ್ರಾಮಾಣಿಕವಾದಂಥ ಕೆಲಸವನ್ನು ಮಾಡಬೇಕಾಗುತ್ತದೆ. ಸರ್ಕಾರ ಇದನ್ನು ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಂಡು ಮಾಡುತ್ತದೆ ಎನ್ನುವುದು ನಮಗೆ

ಗೊತ್ತಿಲ್ಲ. ಇದನ್ನು ಮಾಡಬೇಕು. ಈ ಯೋಜನೆಯನ್ನು ಖಾಸಗಿ ಕಂಪನಿಗಳಿಂದ ತೆಗೆಯಬೇಕು. ಬ್ಯಾಂಕಿಂಗ್ ವ್ಯವಸ್ಥೆಯಿಂದ ಮುಕ್ತರನ್ನಾಗಿ ಮಾಡಬೇಕು. ಬ್ಯಾಂಕ್‌ನ್ನು ಬೇರೆ ರೀತಿಯಲ್ಲಿ ನೇಮಿಸಬೇಕು. ಇನ್ನೂ ಅನೇಕ ಅನೇಕ ವಿಚಾರಗಳಿವೆ. ಇವತ್ತು ಇಲ್ಲಿ ಎಲ್ಲವನ್ನೂ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನೀವು 28 ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯಿಟ್ಟಿರುವುದರಿಂದ, ಕೇವಲ ಒಂದು ಕೃಷಿ ಇಲಾಖೆ ಬಗ್ಗೆ ನಾವು ಇಷ್ಟು ಹೊತ್ತಿನವರೆಗೆ ಮಾತನಾಡಿದರೆ, ಬಾಕಿ ಇಲಾಖೆಗಳ ಬಗ್ಗೆಯೂ ನಾನು ಮಾತನಾಡಬೇಕಾಗಿದೆ. ಆದ್ದರಿಂದ ದಯವಿಟ್ಟು, ಇದಕ್ಕೆ ಹೆಚ್ಚಿನ ಇನ್ನು 75% ಒಂದು ಪ್ರದೇಶದಲ್ಲಿ ಬಿತ್ತನೆ ಆಗದೇ ಇದ್ದರೆ, ಅವನಿಗೆ 25% insuranceನ್ನು RTGS ಮಾಡಬೇಕೆಂದು ಕಾನೂನು ತಂದಿದ್ದೀರಿ. 75% ಬಿತ್ತನೆ ಆಗಿಲ್ಲವೆಂದು identify ಮಾಡುವಂಥ ಮಹಾತ್ಮರು ಯಾರು? ಯಾರು ಅದನ್ನು identify ಮಾಡಿ ಕೊಡುತ್ತಾರೆ? Village Accountant ಕೆಲಸ ಮಾಡುತ್ತಿರುವ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಈ ಬಗ್ಗೆ ಎಲ್ಲಾ ಶಾಸಕರಿಗೂ ಗೊತ್ತಿದೆ. ಮಕ್ಕಳನ್ನು ಓದಿಸುವ ಸಲುವಾಗಿ ಎಲ್ಲಿಯೋ ಜಿಲ್ಲಾ ಕೇಂದ್ರದಲ್ಲಿ ಮನೆ ಮಾಡಿಕೊಂಡು ಇರುತ್ತಾನೆ. ಊರಿನಲ್ಲಿರುವ ಗ್ರಾಮ ಸಹಾಯಕರಿಗೆ ಫೋನ್ ಮಾಡುತ್ತಾನೆ. ಯಾರ್‍ಯಾರ ಹೊಲದಲ್ಲಿ ಏನೇನು ಬೆಳೆದಿದ್ದಾರೆ ಹೇಳು, ತೆಂಗು, ಹಲಸು, ಹುರುಳಿ ಎಷ್ಟು ಬೆಳೆದಿದ್ದಾರೆ ಹೇಳು ಎಂದು ಕೇಳುತ್ತಾರೆ. ಅವನು ಕೊಡುವ ಮಾಹಿತಿ ಮೇಲೆ ಇವರು ರಿಪೋರ್ಟ್‌ನ್ನು ಅವರಿಗೆ ಕೊಡುತ್ತಾರೆ. ಆ ರಿಪೋರ್ಟ್‌ನ್ನು ತಂದು ಸರ್ಕಾರಕ್ಕೆ ಕೊಡುತ್ತಾರೆ. ಅದಕ್ಕೆ ಉದ್ದ, ಅಗಲ, ಬಾಲ ಎಲ್ಲವನ್ನೂ ಕಟ್ಟಿ ಕೊನೆಯ ಹೊತ್ತಿಗೆ ಆ ರೈತನನ್ನು ಮುಳುಗಿಸಿ ಬಿಡುತ್ತಾರೆ. ಈ ರೀತಿಯ ವ್ಯವಸ್ಥೆ ಇವತ್ತಿಗೆ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ಕೃಷಿಕಾಪಿ ಜನಗಳ ಬದುಕಿನಲ್ಲಿ ಇದೊಂದು ಬಹಳ. . . ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯ ಬಗ್ಗೆ ಪ್ರಧಾನಮಂತ್ರಿಗಳು launch ಮಾಡಿದ announcement ಪೇಪರ್‌ನಲ್ಲಿ ಬಂದಿತ್ತು. ಬಹಳ ದಿಟ್ಟವಾದ ಭಾಷಣ ಮಾಡಿದ್ದರು. ಓಹೋ, ಇವತ್ತು ರೈತನ ಕನಸು ನನಸಾಯಿತು, ಇದು ಬಂದು ಬಿಡುತ್ತದೆ. ಇನ್ನ್ಯಾವ ರೈತ ಬೇಕಾದರೂ ನೇರವಾಗಿ ಹೋಗಿ insurance ಕಟ್ಟಿ ರೈತ ಬಚಾವ್ ಆದ ಎಂದು ನಾನು ನಿಜವಾಗಿಯೂ ತಿಳಿದುಕೊಂಡೆನು. ನಮ್ಮ ಕಡೆಯಂತೂ 100% ಯಾವಾಗಲೂ insuranceನ್ನೇ ಕಾಯ್ದುಕೊಂಡು ಕುಳಿತುಕೊಳ್ಳಬೇಕು. ಆ ರೀತಿ ಇರುವಂಥ ಪರಿಸ್ಥಿತಿ ನಮ್ಮದು. ನಮಗೆ ಯಾವಾಗಲೂ, ಇಲ್ಲವೆಂದರೆ ಮುಂಗಾರು ಹಾಕಿಸುತ್ತದೆ,

ಇಲ್ಲವೆಂದರೆ ಬೆಳೆ ಗೊನೆ ಬರುವ ಸಮಯಕ್ಕೆ ಮಳೆ ಕೈಕೊಡುತ್ತದೆ. ಯಾವತ್ತೂ ನಮಗೆ ಬೆಳೆ ಪೂರ್ಣ ಪ್ರಮಾಣದಲ್ಲಿ ಸಿಗದೇ ಇರುವಂಥ ಪರಿಸ್ಥಿತಿಯಿದೆ. ಈ ಬಯಲುಸೀಮೆಯ ಜನಕ್ಕೆ ಇದೊಂದು ನಿಜವಾಗಿಯೂ ಆಶಾದಾಯಕವೆಂದು ನಾವು ಒಂದು ಭಾವನೆಯನ್ನು ಇಟ್ಟುಕೊಂಡಿದ್ದೆವು. ಆದರೆ, ಅದು ರೈತರ ಕೈಗೆ ಸಿಕ್ಕಿಲ್ಲ. ಅದರ ಅಂಕಿ-ಸಂಖ್ಯೆಗಳನ್ನು ತರಿಸಿ, ನಾನು ಆಗಲೇ ಮಾತನಾಡುವಾಗ ಹೇಳಿದಂತೆ, ನನ್ನ ತಾಲ್ಲೂಕಿನ ಅಂಕಿ-ಸಂಖ್ಯೆಗಳನ್ನು ಮಾತ್ರ ತೆಗೆದುಕೊಂಡಿದ್ದೇನೆ. Insurance ಕಟ್ಟಿರುವುದರಿಂದ 1 ಕೋಟಿ 53 ಲಕ್ಷ ರೂಪಾಯಿ ಮಾತ್ರ ಬಂದಿದೆ, ಅದರ ದೃಷ್ಟಿಯಿಂದ ಬಂದಿದೆ. ಅಲ್ಲಿಗೆ 77,000 ಜನ ರೈತಾಪಿ ಕುಟುಂಬಕ್ಕೆ 1 ಕೋಟಿ 53 ಲಕ್ಷ ರೂಪಾಯಿ ಬಂದರೆ ಎಷ್ಟು ಪ್ರಮಾಣದಲ್ಲಿ ಬಂದಿದೆಯೆಂದು ಹೇಳಿ, ಅದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡು, ಇವರೂ 50%ನ್ನು ನಾವು launch ಮಾಡುತ್ತೇವೆಂದು ಇವರೂ ಹೇಳಿಕೊಂಡರು. ಅದೊಂದು ಮಹಾಸಾಧನೆ ಎಂದು ಹೇಳಿದರು. ಮಹಾ ದೊಡ್ಡ ರೈತಾಪಿ ಜನರ ಬಾಗಿಲು ಎಂದು ಹೇಳಿದರು. ಅದು ಯಾವುದೂ ಇವತ್ತು ಯಶಸ್ವಿಯಾಗಿಲ್ಲ. ಈ ಕರ್ನಾಟಕ ರಾಜ್ಯದಲ್ಲಿ ಯಾರ್‍ಯಾರು ರೈತರು ಸಾಲವನ್ನು ತೆಗೆದುಕೊಂಡಿದ್ದಾರೆಯೋ ಅವರನ್ನು ಬಿಟ್ಟು ಸಾಲ ಇಲ್ಲದೇ ಇರುವಂಥ ರೈತರಿಗೆ ಎಷ್ಟು percent ಬಂದಿದೆ ಎಂದು ಇಲ್ಲಿ ಹೇಳಿ. ನಾನು ಕೃಷಿ ಸಚಿವರಿಗೆ ಇದನ್ನೇ ಕೇಳಬೇಕು. ನಿಮ್ಮ ಹತ್ತಿರ ಸರ್ಕಾರದಲ್ಲಿ ಮಾಹಿತಿ ಸಿಗುತ್ತದೆ. ಹೇಳಿ ಸ್ವಾಮಿ, ಅದೆಷ್ಟು percent non loanees ಇವತ್ತು insurance ತೆಗೆದುಕೊಂಡಿದ್ದಾರೆ ಎಂದು ಕೇಳೋಣವೆಂದು ನಾನು ಇಲ್ಲಿ ಬಂದಿದ್ದೇನೆ. ನಮಗೆ ಅಲ್ಲೆಲ್ಲಾ ಮಾಹಿತಿ ಕೊಡುವುದಿಲ್ಲ. ನಾನು 4 ದಿವಸದಿಂದ ಎಲ್ಲರಿಗೂ ಫೋನ್ ಮಾಡುತ್ತಿದ್ದೇನೆ. ಯಾರೂ ಇದರ ಬಗ್ಗೆ ಮಾಹಿತಿ ಕೊಡುವುದಿಲ್ಲ. ನಾವಾಗಿ ನಾವೆಯೇ ಹೇಗೋ ಸ್ವಲ್ಪ ತಿಳಿದುಕೊಂಡು ಬಂದು, ತಿಳಿದಿರುವುದನ್ನು ಸ್ವಲ್ಪ ನಮ್ಮ ಮನಸ್ಸಿಗೆ ಆಧಾರವಾಗಿಟ್ಟುಕೊಂಡು ನಾನು ಹೇಳುತ್ತಿದ್ದೇನೆ ಅಷ್ಟೇ ಹೊರತು, ಇದನ್ನು ಬಹಿರಂಗವಾಗಿ ಇದೇನು, ಹೇಗೆ, ಎಂತು ಎಂದು ಒಂದು statement ಮಾಡಬೇಕು. ನಾವಾದರೂ ಅಲ್ಲಿ ಹೋಗಿ ರೈತರಿಗೆ ಹೇಳುತ್ತೇವೆ. Insurance company ಎಂದರೆ ಈ ರೀತಿ ಈ ರೀತಿಯಿದೆ ಎಂದು ಹೇಳುತ್ತೇವೆ. ಇದು ಈ ರೀತಿಯಿದೆ, ಇಷ್ಟು ಹಣ ಕಟ್ಟಬೇಕು, ಇಷ್ಟು ಬಿಡಬೇಕು, ಇಷ್ಟು ಮಾಡಬೇಕೆಂದು ನಾವು ಅಲ್ಲಿ ರೈತರಿಗೆ ಹೇಳುತ್ತೇವೆ. ಮುಚ್ಚಿಟ್ಟುಬಿಟ್ಟು, ಇದು ಹೇಗೆ ಕೊಡುತ್ತಾರೆ, ಏನು ಕೊಡುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಬಂತಾ, 1,200 ರೂಪಾಯಿ

ಯಾರೋ ಒಬ್ಬ ರೈತನಿಗೆ ಬಂದಿತು, 12,000 ರೂಪಾಯಿ ಮತ್ತೊಬ್ಬ ರೈತನಿಗೆ ಬಂದಿತು, ಅವನು ಸಂತೋಷಪಡುತ್ತಾನೆ. ಒಬ್ಬನಿಗೆ 20,000 ರೂಪಾಯಿ ಬಂದಿರಬಹುದು, ಇಲ್ಲವೆಂದು ಹೇಳುವುದಿಲ್ಲ. 3 ವರ್ಷ, 5 ವರ್ಷ, 7 ವರ್ಷಗಳಲ್ಲಿ ಆದ ಬೆಳೆಯ ಆಧಾರದ ಮೇಲೆ ಆ ಸರಾಸರಿ averageನಲ್ಲಿ ಕೆಲವರಿಗೆ ಹಣ ಬಂದಿರಬಹುದು. ಆದರೆ, ಲೋನ್ ತೆಗೆದುಕೊಳ್ಳದೇ ಇರುವಂಥ ರೈತರೇನಿದ್ದಾರೆ, ಇವತ್ತಿಗೂ ಸಹ ಆ ಬ್ಯಾಂಕಿಂಗ್ ವ್ಯವಸ್ಥೆಯೊಳಗಡೆ ಅವರು ಹೋಗಿ ಆ insuranceನ್ನು ಕಟ್ಟುವಂಥ ಪ್ರಯತ್ನವನ್ನೇ ಮಾಡಿಲ್ಲ. ಬ್ಯಾಂಕ್‌ನವರು ಕಟ್ಟಿಸಿಕೊಳ್ಳುವುದಿಲ್ಲ, ಮುಗಿದು ಹೋಯಿತು date ಎಂದು ಹೇಳುತ್ತಾರೆ. ಇದು ಈ ಖಾಸಗಿ ಕಂಪನಿಯವರ ಒಂದು ದೌರ್ಬಲ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಸರ್ಕಾರ ಅದಕ್ಕೆ ಒಳ್ಳೆಯ ದೃಷ್ಟಿಯಿಂದ ಯೋಚನೆ ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇದರ ಜೊತೆಗೆ ಹವಾಮಾನ ಆಧಾರಿತ ಬಹುವಾರ್ಷಿಕ ಬೆಳೆಗಳು. ತೆಂಗು, ಅಡಿಕೆ, ಮಾವು, ಟೊಮೇಟೋ, ಆಲೂಗಡ್ಡೆ ಇವೆಲ್ಲವೂ ಬಹುವಾರ್ಷಿಕ ಬೆಳೆಗಳ ಸಾಲಿಗೆ ಬರುತ್ತದೆ. ಈ ರೀತಿ ಬಹುವಾರ್ಷಿಕ ಬೆಳೆಗಳಲ್ಲಿ ಬಹಳ ಪ್ರಮುಖವಾಗಿ, ನಾನು ಬಹಳ ದಿವಸಗಳಿಂದ ಚರ್ಚೆ ಮಾಡುತ್ತಿರುವುದು ತೆಂಗು ಬೆಳೆಯ ಬಗ್ಗೆ. ಈ ತೆಂಗಿನ ಬೆಳೆಯ ಬಗ್ಗೆ ಅವರು guidelines ಹೊರಡಿಸಿದಾಗ 20 ದಿವಸ ಸತತವಾಗಿ ಮಳೆ ಬರದೇ ಇದ್ದರೆ, 21ನೇ ದಿವಸದಿಂದ 305 ರೂಪಾಯಿಗಳಂತೆ 19,500 ರೂಪಾಯಿ ಆಗುವವರೆಗೂ ನಾವು insuranceನ್ನು ಕೊಡುತ್ತೇವೆ. ನೀವು insuranceನ್ನು ಕಟ್ಟಿ ಎಂದು ಹೇಳಿ guidelinesನಲ್ಲಿ ಕೊಟ್ಟರು. ನಾನು ಅದನ್ನು ಓದಿದೆ. ಓಹೋ, ರೈತರ ಪಾಲಿಗೆ, ತೋಟದವರಿಗೆ ಇದೊಂದು ಮೈಸೂರು ಲಾಟರಿ ಎಂದು ತಿಳಿದುಕೊಂಡು ನಾನು ಒಂದು ಗೋಷ್ಠಿ ನಡೆಸಿದೆನು.

(ಮುಂದುವರೆದಿದೆ)

13.06.2017 / 04.20 (30) MPL-VR

**ಶ್ರೀ ಕೆ.ಎಂ.ಶಿವಲಿಂಗೇಗೌಡ (ಮುಂದು. . .)**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಓಹೋ ಇದೊಂದು ತೋಟವನ್ನು ಹೊಂದಿರುವಂತಹ ರೈತರ ಪಾಲಿಗೆ ಮೈಸೂರು ಲಾಟರಿ ಹೊಡೆಯಿತೆಂದು ತಿಳಿದುಕೊಂಡು ನಾನೊಂದು ಗೋಷ್ಠಿ ನಡೆಸಿದೆ. ಗೋಷ್ಠಿ ನಡೆಸಿ ಕಂಪನಿಯವರನ್ನು ಫೋನ್ ಮಾಡಿ ಕಷ್ಟಪಟ್ಟು ಹಿಡಿದು ಕರೆಸಿದೆ. ಕರೆಸಿ ಹೇಳಪ್ಪ ಎಂದೆ. ಮೊದಲು ಆ ಮನುಷ್ಯ ಹೇಳಿದ. ಹೌದು 21 ದಿವಸ ಸತತವಾಗಿ ಮಳೆ ಬರದಿದ್ದರೆ 21ನೇ ದಿವಸದಿಂದ 305/- ರೂ.ಗಳಂತೆ ನಾವು average ಹತ್ತೊಂಭತ್ತೂವರೆ ಸಾವಿರ (ರೂ. 19,500 ) ರೂಪಾಯಿ ಆಗುವವರೆಗೂ insurance ಕೊಡುತ್ತೇವೆಂದು ಹೇಳಿದ. ನಮ್ಮ ಜನರೆಲ್ಲ insurance ಕಟ್ಟುವುದು ಎಂದು ತೀರ್ಮಾನ ಮಾಡಿದರು. ಆ ಮನುಷ್ಯ ಮತ್ತೇನು ಮಾಡಿದ ? ನಾನೇನು ಮಾಡಿದೆ. ದೇವೇಗೌಡರು Vigilance Committee ಗೆ KDP meeting ಗೆ ಆ ಕಂಪನಿಯವರನ್ನು ಕರೆಸಿದೆ. ಏಕೆಂದರೆ ಎಲ್ಲರ ಹತ್ತಿರವೂ ವಿಮೆ ಹಣ ಕಟ್ಟಿಸಿ ಇವನೇನಾದರೂ ಕೈ ಕೊಟ್ಟಾನು ಎಂದು ಒಬ್ಬರು ಇರಲಿ ದೇವೇಗೌಡರ ಮುಂದಾಳತ್ವದಲ್ಲಿ ಇರಲಿ ಒಳ್ಳೆಯದು ಎಂದು ಕರೆಸಿದೆ. ನಮಗಂತೂ ಮಳೆ ಬರುವುದೇ ಇಲ್ಲ. 21 ದಿವಸ ಎಂಥದ್ದು? ಮೂರು ತಿಂಗಳು ಮಳೆ ಬರುವುದಿಲ್ಲ. ಅದರಲ್ಲಿ ಕಟ್ಟಿ ನಮಗೆ insurance ಏಕೆ ಬರುವುದಿಲ್ಲ? ಒಳ್ಳೆಯ insurance ಬರುತ್ತದೆ. ಹೇಗೋ ನಮಗೆ ಒಂದೊಂದು ಹೆಕ್ಟೇರಿಗೆ ಇಷ್ಟಿಷ್ಟು ದುಡ್ಡು ಸಿಕ್ಕರೆ ನಾವು ಹೇಗೋ ಜೀವನ ಮಾಡಬಹುದು atleast ರೈತಾಪಿ ಜೀವನ ಎಂದು ಕಟ್ಟಿಸಲು ಕರೆದರೆ ಅವನು ಏನು ಹೇಳಿದ ಎಂದರೆ ತೇವಾಂಶ ತೆಗೆದುಕೊಳ್ಳುತ್ತೇವೆ ಎಂದ. ಅಲ್ಲಿ ಬಂತು. ಅದೆಂಥದ್ದೋ ಕೊರೆದು ತೇವಾಂಶ ತೆಗೆದುಕೊಳ್ಳುತ್ತೇವೆ ಸರ್. ಆ ತೇವಾಂಶ ಬಂದರೆ ಮಾತ್ರ insurance ಎಂದ. ಆಗೇನಾಯಿತು? Insurance ಕಟ್ಟುವುದಕ್ಕೆ ಜನ ಇರಲಿ ನಾವು ಕಟ್ಟಿಸುವುದಕ್ಕೆ ಹಿಂದೆ-ಮುಂದೆ ಬಿದ್ದೆವು. ನಾವು ರೈತರಿಂದ ವಿಮೆ ಹಣ ಕಟ್ಟಿಸಿ ಇವನೇನಾದರೂ insurance ಅದೆಂಥದ್ದೋ ಕೋಷ್ಟಕ ತೆಗೆದುಕೊಂಡು ಕುಳಿತುಕೊಂಡು ಬಿಟ್ಟರೆ. ಅದೆಂಥದ್ದೋ ಕೋಷ್ಟಕ ತೆಗೆದುಕೊಂಡು ಬಂದ ಅವತ್ತು. ಅದನ್ನು ತೆಗೆದುಕೊಂಡು ನೋಡಿದಾಗ ಅದನ್ನೇನಾದರೂ ಕಟ್ಟಿ ನಾಳೆ ಬೆಳಿಗ್ಗೆ insurance ಬರದಿದ್ದರೆ ಜನರು ದುಡ್ಡು ಕಟ್ಟಿಸಿದ ನಮ್ಮನ್ನು ಬಿಡುತ್ತಾರಾ? 2700/- ಚಿಲ್ಲರೆ ರೂಪಾಯಿ ದುಡ್ಡು ಕಟ್ಟಿದರೆ 19,500 ಸಾವಿರ ರೂ. ಕೊಡುತ್ತೇವೆ ಎಂದರೆ ಏಕೆ ಕಟ್ಟಬಾರದು? ಎಂದು ನಾವು ಕಟ್ಟಿಸಬೇಕೆಂದು ತೀರ್ಮಾನ ಮಾಡಿದೆವು. ನಾನಂತೂ public statement



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಟ್ಟೆ. ಇದು ಒಳ್ಳೆಯ insurance. ಸತತವಾಗಿ 21 ದಿವಸ ಮಳೆ ಬರದಿದ್ದರೆ ಒಂದು ಹೆಕ್ಟೇರಿಗೆ 2700/- ರೂ. ಕಟ್ಟಿದರೆ 19,500 ಸಾವಿರ ರೂ. ಬರುತ್ತದೆ ಎಂದು guidelines ನಲ್ಲಿದೆ. ಸಚಿವರೆ guidelines ನಲ್ಲಿರುವುದು ಸತ್ಯ ತಾನೆ? ಮತ್ತೆ ಅದನ್ನು ಪ್ರಚಾರ ಮಾಡಿ ಕಟ್ಟುವುದಕ್ಕೆ ಹೋದರೆ ತೇವಾಂಶ ಎನ್ನುತ್ತಾರೆ. ತೇವಾಂಶವನ್ನು ಹೇಗೆ ಕಂಡು ಹಿಡಿಯುವುದು? ಯಾವ ತೇವಾಂಶದ ಮೇಲೆ ಕಟ್ಟುತ್ತಾರೆ? ಆಗ ರೈತರ ಹತ್ತಿರ ಬೆಳೆ ವಿಮೆ ಕಟ್ಟಿಸಿಕೊಳ್ಳುವುದನ್ನೇ ಕೈ ಬಿಟ್ಟರು. ಅದರಲ್ಲೂ ಕೆಲವರು ಕಟ್ಟಿದರು. ಕಟ್ಟಿ loss ಆಯಿತಲ್ಲ ಕಂಪನಿಗೆ. ಈ ಬಾರಿ ಪುಣ್ಯಾತ್ಮರು ಯಾರೂ ಟೆಂಡರನ್ನೇ ಹಾಕಿಲ್ಲ. ಏನು ಸಚಿವರೆ ಈ ಬಾರಿ ತೆಂಗಿನ ವಿಮೆಯನ್ನು ಕೈ ಬಿಟ್ಟಿದ್ದೀರಲ್ಲವೆ ? ಯಾರೂ ಟೆಂಡರ್ ಹಾಕಲಿಲ್ಲವೆಂದೋ ಏನೋ ಕೈ ಬಿಟ್ಟಿದ್ದೀರಿ. ವಿಮೆಯಿಂದ ಅದನ್ನು ತೆಗೆದು ಹಾಕಿದ್ದೀರಿ. ಮತ್ತೆ ನಾವು ಹೇಗೆ ಉದ್ಧಾರ ಆಗುವುದು? ತೆಂಗಿಗೆ ವಿಮೆ ಇದೆ ಎಂದು ನಾವು ತಿಳಿದುಕೊಂಡರೆ ಈ ಬಾರಿ ಏಕೆ ಕೈ ಬಿಟ್ಟರಿ?

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ : ಗೌಡರೆ ಈ insurance company ಏನಿದೆ total ಆಗಿ ರೈತರ ಶೋಷಣೆ ಮಾಡುವುದಕ್ಕೆ ಬಂದಿರುವ ಖಾಸಗಿ ಕಂಪನಿ. ಈ ಕಂಪನಿಯವರು ಇವತ್ತು ಮಾಡುತ್ತಿರುವುದು ನಿಮ್ಮ ಬೆಳೆಗಳಿಗೆ ಏನು ಪರಿಸ್ಥಿತಿ ಆಗಿದೆ ನಮ್ಮ ಅಡಿಕೆ ಬೆಳೆಗಾರರ ಪರಿಸ್ಥಿತಿಯೂ ಇದೇ ಆಗಿದೆ. ಉತ್ತರ ಕನ್ನಡದಲ್ಲಿ 03 ಕೋಟಿ 70 ಲಕ್ಷಕ್ಕೂ ಅಡಿಕೆ ಬೆಳೆಗಾರರು ನಾವು insurance ತುಂಬಿದ್ದೇವೆ. ಹವಾಮಾನ ಆಧಾರಿತ ಎಂದು 5 ನಯಾ ಪೈಸೆ insurance ಬಂದಿಲ್ಲ. ನಾನು ಅಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ. ಇದನ್ನು ಏಕೆ compulsory ಮಾಡುತ್ತೀರಿ? ಯಾವ ರೈತನಿಗೆ ಬೇಕೋ ಅವನು insurance ಮಾಡಿಕೊಳ್ಳಲಿ. ಯಾರಿಗೆ ಬೇಡ ಬಿಡಲಿ. ಯಾರು ಬೆಳೆ ಸಾಲ ತೆಗೆದುಕೊಳ್ಳುತ್ತಾರೋ ಅವರೆಲ್ಲರೂ compulsory insurance ಮಾಡಬೇಕು ಎಂದು ಅವರ ಮೇಲೆ ಹೇರುವಂತಹ ಆದೇಶ ಏಕೆ? ನಮಗೆ ಬೇಕಾದ್ದನ್ನು ನಾವು ಮಾಡಿಕೊಳ್ಳುತ್ತೇವೆ. ಮನುಷ್ಯರಿಗೆ insurance ಮಾಡುತ್ತೇವೆ. ನಮಗೆ ಬೇಕಾದರೆ ಮಾಡಿಕೊಳ್ಳುತ್ತೇವೆ. ಬೇಡವಾದರೆ ಬಿಡುತ್ತೇವೆ. ಖಾಸಗಿ ಕಂಪನಿಯವರು ಏನು ಮಾಡಿದ್ದಾರೆ ಎಂದರೆ insurance ಸಿಗದೆ ಹೋಗುವಂತೆ ನೋಡಿಕೊಳ್ಳುವುದಕ್ಕೆ ಎಂದೇ ಅಧಿಕಾರಿಗಳನ್ನು ಇಟ್ಟುಕೊಂಡಿದ್ದಾರೆ. ಯಾವುದಾದರೂ ರೂಪದಲ್ಲಿ ರೈತನಿಗೆ insurance

ಸಿಗಬಾರದು. ಆ ರೀತಿಯ plan ಮಾಡಿ ಅದಕ್ಕೆ ಅನೇಕ ಅಧಿಕಾರಿಗಳನ್ನು ನಿಯೋಜನೆ ಮಾಡಿಕೊಂಡಿದ್ದಾರೆ. ಅದರಿಂದ ನಮಗೆ ತುಂಬಾ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು : ಶಿವಲಿಂಗೇಗೌಡರೆ ಮುಗಿಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಹವಾಮಾನ ಆಧಾರಿತವಾದ insurance ನಿಂದ ಈ ಸಾರಿ ತೆಂಗಿನ ಬೆಳೆಯನ್ನು ಕೈ ಬಿಟ್ಟಿದ್ದಾರೆ. ಆದುದರಿಂದ ನಮಗೂ ಅರ್ಥವಾಗುತ್ತದೆ. ಸತತವಾದ ಬರಗಾಲಕ್ಕೆ ತುತ್ತಾಗುವಂತಹ ನಮಗೆ ಈ ರೀತಿಯಾದ insurance ಕಟ್ಟಿಸಿಕೊಳ್ಳುತ್ತೇವೆಂದು ಬೋಗಸ್ ಆಗಿ announce ಮಾಡಿದರೆ ಹೇಗೆ? ನಾನು announce ಆದಾಗಲೆ ಅಂದುಕೊಂಡೆ. ಇಷ್ಟು ಸಾವಿರ ಹೆಕ್ಟೇರ್ ಬರಬಹುದು. 21 ದಿವಸವಂತೂ ಮಳೆ ಬರದ ದಿನಗಳು ಇವತ್ತಿನಿಂದ ಬೇಕಾದಷ್ಟು ಇದೆ. ನಮಗೆ ಮಳೆ ಶುರುವಾಗುವುದು ಯಾವಾಗ ಎಂದು ನಮಗೆ ಗೊತ್ತಿದೆ. ಆ ರೈತ ಕಟ್ಟಿದಂತಹ ವಿಮೆ ಕಂತಿಗೆ ರೂ.19,500 ಸಾವಿರ insurance ಕೊಡುತ್ತೇವೆಂದು announce ಮಾಡಿದ್ದಾರಲ್ಲ, ಇದು ಸಾಧ್ಯವಾ ಎಂದು ನಮ್ಮ ಮನಸ್ಸಿಗೂ ಅನಿಸಿತು. ಇಲ್ಲ, ಕಟ್ಟಿ ಕೊಡುತ್ತೇವೆ ಎಂದು ಬಂದು ಹೇಳಿದಾಗ ನಾವು ಕಟ್ಟಲು ಮುಂದಾದಾಗ ಅದಕ್ಕೆ 21 ಅಡಚಣೆಗಳನ್ನು ತಂದು ಈ ಬ್ಯಾಂಕಿನವರು ನಮಗೆ ಕೊಟ್ಟ date ಮುಗಿದು ಹೋಯಿತು ಎಂದು ಹೇಳಿದರು. ಈ ಬ್ಯಾಂಕಿನವರದು ಒಂದು ಕತೆ. Date ಇನ್ನೂ ಇದ್ದರೂ ಕಂಪನಿಯವರ ಮಾತು ಕೇಳಿಕೊಂಡು date ಮುಗಿದು ಹೋಯಿತು ಎನ್ನುತ್ತಾರೆ. ಇದು ಹೇಗಿದೆ ಎಂದರೆ ಅಕ್ಕಿ ಮುಗಿಯಬಾರದು, ಮಕ್ಕಳು ಬಡವಾಗಬಾರದು ಎಂದು ಒಂದು ಗಾದೆ ಇದೆ. ಹಾಗೆ ಈ ಕತೆ ಆಗುವುದು ಬೇಡ. ದುಡ್ಡು ಖರ್ಚಾಗಬಾರದು, ಮಕ್ಕಳೂ ಬಡವಾಗಬಾರದು ಎಂದರೆ ಹೇಗೆ? ಮಕ್ಕಳು ಉದ್ಧಾರವಾಗಬೇಕು, ಇಲ್ಲವೆ ಅಕ್ಕಿ ಮುಗಿಯಬೇಕು, ಇಲ್ಲವೇ ಅಕ್ಕಿ ಹಾಗೆಯೇ ಇರಬೇಕು, ಮಕ್ಕಳು ಬಡವಾಗಬೇಕು. ಇಂತಹ ಕೆಲಸ insurance ಅವರದು. ಸುಮ್ಮನೆ ನಾಟಕಕ್ಕೆ ಯಾವುದೋ ಒಂದು ಉದ್ದೇಶಕ್ಕೋಸ್ಕರ ಇದೇನೋ ಇದೆ ಇದರಲ್ಲಿ ಭೂತಪ್ಪ ಎಂದು ರೈತರು ಕುಳಿತುಕೊಂಡು ಟಿ.ವಿ ಯನ್ನು ನೋಡುವುದು, ನೋಡುವುದೆ. ಸುಮ್ಮನೆ ನೋಡುವ ಕೆಲಸವಾಗುವುದು ಬೇಡ. ಇದರ ಕುರಿತು ನಾವು ಹೇಳಿದ್ದೇವೆ. ದಯವಿಟ್ಟು ತಾವು ಇದರ ಬಗೆಗೆ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಸರ್ಕಾರ ಯೋಚನೆ ಮಾಡಿ ವಿಮೆಯ ಬಗ್ಗೆ ನಿರ್ದಿಷ್ಟವಾಗಿ ಏನಾದರೂ ಮಾಡಿ ರೈತರಿಗೆ ಒಳ್ಳೆಯ ಸಂದೇಶ ಕೊಟ್ಟರೆ ನಿಮಗೆ ಒಳ್ಳೆಯ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೆಸರು ಬರುತ್ತದೆ. ಆ ರೈತ ಏನು ಆಶಾಭಾವನೆ ಇಟ್ಟುಕೊಂಡಿದ್ದಾನೆ ಅವನಿಗೆ ಒಳ್ಳೆಯದಾಗುತ್ತದೆ ಎಂಬ ದೃಷ್ಟಿಯಿಂದ ಈ ಎರಡೂ ವಿಮೆಗಳ ಬಗ್ಗೆ ಹೇಳಿದ್ದೇನೆ. ಹವಾಮಾನ ಆಧಾರಿತ ವಿಮೆ ಅದನ್ನು ಹೇಗೆ ಕಟ್ಟಿಸಿಕೊಳ್ಳುತ್ತೀರೋ, ಹೇಗೆ ಕೊಡುತ್ತೀರೋ ಆ ಪುಣ್ಯಾತ್ಮನಿಗೆ ಗೊತ್ತು. ಅದು ಹೇಗೆ ಮಾಡುತ್ತೀರೋ ಮಾಡಿ. ನಮಗೆ ರೈತರು ಉದ್ಧಾರವಾದರೆ ಸಂತೋಷ. ಆದರೆ ಯಾವ ರೈತ ವಿಮೆ ಕಟ್ಟುತ್ತೇನೆ ಎನ್ನುತ್ತಾನೋ ಅವನ ಬಳಿ ಮಾತ್ರ ವಿಮೆ ಕಟ್ಟಿಸಿಕೊಳ್ಳಬೇಕು, ಅವನಿಗೆ ಎಲ್ಲವನ್ನೂ ಕೊಡಬೇಕು. ನಿಮ್ಮ ನಿಬಂಧನೆಗಳೇನಿವೆ ತೇವಾಂಶ ಕಂಡು ಹಿಡಿಯುವುದು, ಕಟಾವು ಸಮೀಕ್ಷೆ, ಅದೆಂಥದ್ದೋ ಸಮೀಕ್ಷೆ ಎಲ್ಲಾ ಸಮೀಕ್ಷೆಗಳನ್ನು ನೀವು ಬದ್ಧವಾಗಿ ನಡೆಸಬೇಕೆಂದು ಹೇಳುತ್ತೇನೆ. ನನಗೆ ಮೊದಲಿನಿಂದಲೂ insurance ಗೆ ಸಂಬಂಧಿಸಿದಂತೆ ಸ್ವಲ್ಪ ಜಿಗುಪ್ಸೆ ಇತ್ತು. ಇನ್ಯಾವುದರಲ್ಲೂ ಈ ಕುರಿತು ಚರ್ಚೆಗೆ ಅವಕಾಶ ಸಿಗುವುದಿಲ್ಲ. ಆದುದರಿಂದ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಈ ವಿಷಯವನ್ನು ತೆಗೆದುಕೊಂಡು ಮಾತನಾಡಿದ್ದೇನೆ.

ಅಧ್ಯಕ್ಷರು : ಅವರೇನು ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅದಾದ ಮೇಲೆ ತೆಂಗಿನ ಬೆಳೆಯ ಕುರಿತು ಉತ್ತರ ಕೊಡಿ ಎಂದು ನಾನು ಕೇಳುತ್ತಲೇ ಇದ್ದೇನೆ. Joint Director ಅವರು ಮೊನ್ನೆ ಶನಿವಾರ ನಮ್ಮ ಅರಸೀಕೆರೆಗೆ ಬಂದಿದ್ದರು. 25-30 ಪ್ಲಾಟ್‌ಗಳನ್ನು ನೋಡಿದ್ದಾರೆ ಕೇಳಿ ನಿಮ್ಮ ಅಧಿಕಾರಿಗಳನ್ನು. ಅವರ ಮನಸ್ಸು ನಿಜವಾದ ರೈತ . . . ದಯವಿಟ್ಟು ನೀವು ತುಮಕೂರಿನ ಮೇಲೆ deviate ಆಗುತ್ತೀರಲ್ಲ, ನಮ್ಮ ಅರಸೀಕೆರೆಯ ಕಡೆಗೆ ಚೂರು ಬನ್ನಿ. ಹಾಗೆ ತಿಪಟೂರು ಕಡೆಗೂ ಬನ್ನಿ ದಯವಿಟ್ಟು. ಏಕೆಂದರೆ ನಾವೇ ನಾವು ಹೇಳಿಕೊಂಡು ತಿರುಗಿದರೆ ಇವನು ಎಂತಹವನು ಎಂದು ಎನ್ನುತ್ತಾರೆ. ಸರ್ಕಾರದ ಪರವಾಗಿ ಒಂದು ಸಲ ನೀವು ಬನ್ನಿ ರೈತರ ಪರಿಸ್ಥಿತಿಯನ್ನು ತೋರಿಸುತ್ತೇವೆ. ನೀವೂ ರೈತರೆ. ನಮಗೆ ಗೊತ್ತಿದೆ. ನಿಮಗೂ ಕಷ್ಟ-ಸುಖಗಳು ಗೊತ್ತಿದೆ. ಬಂದು ಅಲ್ಲಿ ರೈತನ ಪರಿಸ್ಥಿತಿ ನೋಡಿ. ಅವನ ಕಷ್ಟವನ್ನು ನೋಡಿ. ನಮ್ಮ ಕೈಯ್ಯಲ್ಲಿ ಏನಾಗದಿದ್ದರೂ ಅವನ ತೋಟಕ್ಕೆ ಹೋಗಿ ಅಯ್ಯೋ ಅಪ್ಪ ಹಿಂಗಾಗಬಾರದಾಗಿತ್ತು ಕಣಪ್ಪ ಎಂದರೆ ರೈತ ಎಷ್ಟೋ ಸಂತೋಷಪಡುತ್ತಾನೆ. ಅವನ ಮನಸ್ಸಿಗೆ ಎಷ್ಟೋ ನೆಮ್ಮದಿಯಾಗುತ್ತದೆ. ನನ್ನ ಕಷ್ಟ ಕೇಳುವುದಕ್ಕೆ ಬೆಂಗಳೂರಿನಿಂದ ಮಂತ್ರಿಗಳು ಬಂದಿದ್ದರು ಕಣಯ್ಯ ಎಂದು ಸಂತೋಷಪಡುತ್ತಾನೆ. ನಮ್ಮ ದಾವಣಗೆರೆ ಸಾಹುಕಾರರು ಬಂದಿದ್ರು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಣಯ್ಯ ಎಂದು ಜನರು ಹೇಳುತ್ತಾರೆ. ಆದುದರಿಂದ ದಯವಿಟ್ಟು ಯಾವತ್ತು ಬರುತ್ತೀರಿ ಹೇಳಿ. ಬನ್ನಿ, ಬಂದು ಪರಿಸ್ಥಿತಿಯನ್ನು ಕಣ್ಣಾರೆ ನೋಡಿ. ಕಣ್ಣಾರೆ ನೋಡುವವರೆಗೂ ಅವನ ಪರಿಸ್ಥಿತಿ ನಿಮಗೆ ಅರ್ಥವಾಗುವುದಿಲ್ಲ. ಫೋಟೋದಲ್ಲಿ ನಾವು ತೋರಿಸುತ್ತೇವೆ. ಅವೆಲ್ಲಾ ನಿಮಗೆ ಏನು ಅನಿಸುತ್ತದೆಯೋ ಗೊತ್ತಿಲ್ಲ. ಆದರೆ, ಅಲ್ಲಿಗೆ ಬಂದು ನಿಜವಾದ ಸ್ಥಿತಿಯನ್ನು ನೋಡಿ ಏನು ಮಾಡಬೇಕೆಂಬ ನಿರ್ಧಾರವನ್ನು ನೀವು ತೆಗೆದುಕೊಳ್ಳಿ. ರೈತ ಯಾವ ಸಂಕಷ್ಟದಲ್ಲಿದ್ದಾನೆ? ಅವನು ಇದ್ದಂತಹ ನೂರು ಗಿಡಗಳನ್ನು ಕಳೆದುಕೊಂಡು ಯಾವ ರೀತಿ ಬೊಬ್ಬೆ ಹೊಡೆಯುತ್ತಿದ್ದಾನೆ. ಅವನ ಪರಿಸ್ಥಿತಿ ಏನು? ಅವನು ನೂರು ಗಿಡಗಳಿರುವ ತೋಟದಲ್ಲಿದ್ದಾನೆ. ಅವನಿಗೆ ಬೇಕಾದ ಚಟ್ನಿ ಕಾಯಿಗೆ ಯಾರ ಹತ್ತಿರವಾದರೂ ಹುಡುಕಿಕೊಂಡು ಹೋಗಬೇಕು. ಆ ಪರಿಸ್ಥಿತಿ ಇದೆ. ನೂರು ಗಿಡಗಳಿರುವ ಅವನ ತೋಟದಲ್ಲಿ ಚಟ್ನಿಗೆ ಕಾಯಿಲ್ಲ. ಈ ಪರಿಸ್ಥಿತಿಯನ್ನು ನೀವು ಕಣ್ಣಿನಿಂದ ನೋಡಬೇಕಲ್ಲ. ಸರ್ಕಾರ ಇದೆ ಎಂದು ಗೊತ್ತಾಗಬೇಕಲ್ಲ. ಸರ್ಕಾರದಲ್ಲಿ ಇಂತಹ ಇಲಾಖೆ ಇದೆ, ಅವರು ಬಂದು ನಮ್ಮ ಕಷ್ಟ ನೋಡಿದರು ಎಂದು ಹೇಳಬೇಕಲ್ಲ. ನಾನು ಸುಮ್ಮನೆ 3-4 ತಿಂಗಳಿನಿಂದ ಬೊಂಬಡ ಬಡಿದುಕೊಳ್ಳುತ್ತಿದ್ದೇನೆ. ಯಾರೂ ಬರದಿದ್ದರೆ ಏನು ಮಾಡುವುದು? ತೆಂಗಿನ ಮರ ಅಂತಹ ಕಾಮಧೇನು, ಕಲ್ಪವೃಕ್ಷ ನಿಮಗೇ ಗೊತ್ತು. ನಿಮ್ಮ ನೆಂಟರಿಷ್ಟರು ಇದ್ದಾರೆ ಅಲ್ಲಿ. ನಿಮ್ಮ ನೆಂಟರಿಷ್ಟರೆಲ್ಲ ತೆಂಗಿನಕಾಯಿ ಮಂಡಿ ಸಾಹುಕಾರರು. ಅವರು ಹೇಗೇಗಿದ್ದರು? ಅವರನ್ನೇ ಕೇಳಿಕೊಳ್ಳಿ. ನಿಮ್ಮ ನೆಂಟರುಗಳನ್ನೇ ಕೇಳಿಕೊಳ್ಳಿ. ಮಂಡಿಗಳ ಪರಿಸ್ಥಿತಿ ಏನಾಗಿದೆ? ಈಗ ಕಾಯಿ, ಕೊಬ್ಬರಿ ಬರುತ್ತಿದೆಯೆ ಎಂದು ಕೇಳಿ ಗೊತ್ತಾಗುತ್ತದೆ.

ಅಧ್ಯಕ್ಷರು : Conclude ಮಾಡಿ ಶಿವಲಿಂಗೇಗೌಡರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಆ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ದಯವಿಟ್ಟು ಅಲ್ಲಿಗೆ ಬನ್ನಿ. ಬಂದು ನಿಜವಾಗಿಯೂ ಅದರ ಸಮೀಕ್ಷೆ ಮಾಡಿ. ಇವತ್ತು ಉತ್ತರ ಕೊಡಿ. ನಾನು ಈ ಉತ್ತರವನ್ನು ಏಕೆ ಕೇಳುತ್ತಿದ್ದೇನೆಂದರೆ ನಿಮ್ಮನ್ನು ನಾನು blame ಮಾಡುವುದಿಲ್ಲ.

(ಮುಂದು. . . .)

ದಿ:13-06-2017-4.30(31)-ಬಿ.ಆರ್(ಜೆಎಲ್)-ವಿ.ಆರ್



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಎಂ.ಶಿವಲಿಂಗೇಗೌಡ(ಮುಂದುವರೆದುದು): ನಿಮ್ಮ percentage ಏನಿದೆಯೋ ಅದನ್ನು ಕೊಡಿ. ಪರಿಸ್ಥಿತಿ ನೋಡಿಕೊಂಡು ಬಂದು ನಿಮ್ಮ ಸರ್ಕಾರದ ಬದ್ಧತೆ ಏನೆಂದು ಹೇಳಿ. ಪರಿಸ್ಥಿತಿಯನ್ನು ನೋಡದೆ ನೀವು ಪರಿಹಾರ ಕೊಡಲೇಬೇಡಿ, ಪರಿಸ್ಥಿತಿ ನೋಡಿ ಹೌದಪ್ಪ ಇಷ್ಟು ಪರಿಹಾರ ಕೊಡಲೇಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ. ರೈತರ ಸಹಾಯಕ್ಕೆ ಹೋಗಲೇಬೇಕು ಇಲ್ಲವಾದಲ್ಲಿ ರೈತರು ಹೋಗುತ್ತಾರೆ. ಸ್ಥಳಕ್ಕೆ ಬಂದು ನೋಡಿ ನೀವು ಏನು ಪರಿಹಾರ ಕೊಡುತ್ತೀರೋ ಕೊಡಿ. ನಾನು ಪೂರ್ಣವಾಗಿ ನಿಮ್ಮನ್ನು blame ಮಾಡುವುದಿಲ್ಲ ಇದು ಕೇಂದ್ರ ಸರ್ಕಾರದ ಮೇಲೆ ಬೀಳುತ್ತದೆ. ಕೇಂದ್ರ ಸರ್ಕಾರ ಕೂಡ ಸಮೀಕ್ಷೆ ಮಾಡಬೇಕು, ಕೇಂದ್ರ ಸರ್ಕಾರಕ್ಕೆ 900 ಕೋಟಿ ರೂ.ಗಳಿಗೆ ಪ್ರಸ್ತಾವನೆ ಕಳುಹಿಸಿದ್ದೇವೆಂದು ಸರ್ಕಾರ ಸುಮ್ಮನೆ ಕುಳಿತರೆ ಆಗುವುದಿಲ್ಲ. ಅಲ್ಲಿಯೂ ಕೂಡ ಹೋರಾಟವಾಗಬೇಕು, ಅಲ್ಲಿ ಹೋರಾಟ ಆಗಿ ಸಮೀಕ್ಷೆ ಮಾಡುವುದಕ್ಕೆ ಬರಬೇಕು. ಇವತ್ತು ಏನೇನು ಆಘಾತವಾಗಿದೆ, ಯಾವ ರೀತಿ ಅನ್ಯಾಯವಾಗಿದೆ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಆಗಬೇಕು. ಈ ದೇಶದಲ್ಲಿನ ಒಬ್ಬ ರೈತ ಅಥವಾ ಯಾವುದೋ ಒಂದು ವರ್ಗದ ಜನರು ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಾಗ ನಾವು ಅವರ ನೆರವಿಗೆ ಹೋಗಲಿಲ್ಲವೆಂದರೆ ಸರ್ಕಾರ ಏಕೆ ಇರಬೇಕು? ಜನಪ್ರತಿನಿಧಿಗಳಾದ ನಾವು ಏಕೆ ಇರಬೇಕು? ನಮಗೇನು ಇಲ್ಲಿ ಕೆಲಸ? ಇಲ್ಲಿಗೆ ನಮ್ಮನ್ನು ಬಡಿದುಕೊಳ್ಳುವುದಕ್ಕೆ ಕಳುಹಿಸಿದ್ದಾರೆ, ನಾವಿಲ್ಲಿ ಬಂದು ಬಡಿದುಕೊಳ್ಳುತ್ತಿದ್ದೇವೆ. ಈ ರೀತಿ ಬಡಿದುಕೊಳ್ಳುವಂತಹ ಸಂದರ್ಭದಲ್ಲಿ ನೀವು ನಮಗೆ ಸ್ಪಂದಿಸದೆ ಹೋದರೆ ಏನು ಪ್ರಯೋಜನ? ಕೇಂದ್ರವಾಗಿರಬಹುದು, ರಾಜ್ಯವಾಗಿರಬಹುದು ನಮ್ಮ ಪಾಲಿನದು ನಮಗೆ ಬರದೆ ಹೋದರೆ ಅಲ್ಲಿ ಹೋಗಿ ನಾವು ಏನೆಂದು ಉತ್ತರ ಹೇಳುವುದು?

ಅಧ್ಯಕ್ಷರು: ನೀವು ಹೇಳುವುದೆಲ್ಲಾ ಹೇಳಿದ್ದೀರಿ, ಸಚಿವರು ಏನು ಉತ್ತರ ಕೊಡುತ್ತಾರೆಂದು ನೋಡೋಣ ಇರಿ. ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಸಚಿವರೆ, ನೀವು ಯಾವತ್ತು ಬರುತ್ತೀರೆಂದು ಅನೌನ್ಸ್ ಮಾಡಿ ಬನ್ನಿ, ಬಂದು ನೋಡಿ ಒಂದು ಉತ್ತರ ಕೊಡಿ. ಈಗಾಗಲೇ ಸಮೀಕ್ಷೆ ಮಾಡಲು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಳುಹಿಸಿದ್ದು, ಸಮೀಕ್ಷೆ ನಡೆಯುತ್ತಿದೆ. ಜಿಲ್ಲಾಧಿಕಾರಿಗಳು ಪೂರ್ಣ ಪ್ರಮಾಣದಲ್ಲಿ ಸಮೀಕ್ಷೆ ಮಾಡುತ್ತಿದ್ದಾರೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಎರಡು ವಾರಗಳಲ್ಲಿ ಸಮೀಕ್ಷೆ ಮಾಡಿ ವರದಿ ಸಲ್ಲಿಸುವುದಕ್ಕೆ ಹೇಳಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅಷ್ಟರೊಳಗೆ ನೀವು ಕೂಡ ಒಂದು ಬಾರಿ ಬಂದು ನೋಡಿ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ: ಹೋದ ವಾರ ಬಂದಿದ್ದೆ ಆದರೆ ನೀವು ಊರಿನಲ್ಲಿ ಇರಲಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಬಂದು ನೋಡಿ, ಶಿವಲಿಂಗೇಗೌಡ ಬಡಿದುಕೊಳ್ಳುತ್ತಿರುವುದು ಸರಿಯಿದೆ ಕಣಯ್ಯ, ಇವನೇನು ಭಾಷಣ ಮಾಡುವುದಕ್ಕೋಸ್ಕರ ಬಡಿದುಕೊಳ್ಳುತ್ತಿಲ್ಲ, ನಿಜವಾಗಿ ಬಡಿದುಕೊಳ್ಳುತ್ತಿದ್ದಾನೆಂದು ಹೇಳಿ. ಅಲ್ಲಿ ಸರ್ವೆ ನಂಬರ್‌ವಾರು, ಫಲಾನುಭವಿವಾರು ಸಮೀಕ್ಷೆ ನಡೆಸುತ್ತಿದ್ದಾರೆಂದು ದೂರವಾಣಿ ಕರೆ ಮಾಡಿದಾಗ ಹೇಳಿದರು. ಒಬ್ಬೊಬ್ಬ ರೈತರದು ಎಷ್ಟೆಷ್ಟು ಮರಗಳು ಹೋಗಿದೆಯೆಂಬ ಪಟ್ಟಿಯನ್ನು ತಯಾರು ಮಾಡಿ ನೀವು ಏನು ಪರಿಹಾರ ಕೊಡುತ್ತಿರೋ ಕೊಡಿ, ಕೇಂದ್ರ ಸರ್ಕಾರ ಏನು ಕೊಡುತ್ತದೋ ಕೊಡಲಿ ನಿಮ್ಮ ಪಾಲಿನ ಮೊತ್ತವನ್ನು ನೀವು ಘೋಷಣೆ ಮಾಡಿ. ಕೇಂದ್ರ ಸರ್ಕಾರದ ಬಗ್ಗೆ ನಾವು ಇಲ್ಲಿ ಕುಳಿತು ಮಾತನಾಡುವುದಕ್ಕಾಗುವುದಿಲ್ಲ. ಈ ದೇಶದ ಮಾಜಿ ಪ್ರಧಾನ ಮಂತ್ರಿಗಳಾದಂತಹ ದೇವೇಗೌಡರು ಇದ್ದಾರೆ ಅವರ ಮುಂದಾಳತ್ವದಲ್ಲಿ ಅದೆಲ್ಲಿಗೆ ಹೋಗಬೇಕೋ, ಅದೇನು ಮಾಡಬೇಕೋ ಅದನ್ನು ಮಾಡಿಯೇ ಸಿದ್ಧ. ನಮ್ಮ ಪ್ರಾಣ ಬಿದ್ದು ಹೋದರೂ ಆ ರೈತರಿಗೆ ಪರಿಹಾರ ಕೊಡಿಸುವವರೆಗೆ ನಾವು ಬಿಡುವುದಿಲ್ಲ ಹೋರಾಟ ಮಾಡಿಯೇ ಮಾಡುತ್ತೇವೆ. ಹೋರಾಟ ಘೋಷಣೆ ಮಾಡಿದ್ದೇವೆ ಅದು ನಿಲ್ಲುವುದಿಲ್ಲ. ಏನು ಬೇಕಾದರೂ ಆಗಲಿ ರೈತರಿಗೆ ಪರಿಹಾರ ಕೊಟ್ಟು ಅವರನ್ನು ನಾವು ಉಳಿಸಿಕೊಳ್ಳಲಿಲ್ಲವೆಂದರೆ ರೈತರೆಲ್ಲರೂ ಕೂಡ ಬೆಂಗಳೂರಿನಲ್ಲಿರುವಂತಹ ಗಾರ್ಮೆಂಟ್ಸ್‌ಗೆ ವಾಚ್‌ಮೆನ್‌ಗಳಾಗುತ್ತಾರೆ. ಈಗಾಗಲೇ ಸುಮಾರು ಜನ ಬಂದಿದ್ದಾರೆ ಅವರಿಗೆ ಇನ್ನೇನು ಸಿಗುವುದಿಲ್ಲ. ಹೊಸ ಸಮವಸ್ತ್ರ ಹೊಲಿಸಿ ಸುಮ್ಮನೆ ಅಲ್ಲಿ ನಿಲ್ಲಿಸಿರುತ್ತಾರೆ ಅವರು ಸುಮ್ಮನೆ ಸಿಳ್ಳೆ ಹೊಡೆದುಕೊಂಡು ನಿಂತಿರುತ್ತಾರೆ. ರೈತರು ನಿಜವಾಗಿ ಆ ಕೆಲಸ ಮಾಡುತ್ತಿದ್ದಾರೆ. ಈ ರೀತಿ ಆದರೆ ಸರ್ಕಾರಕ್ಕೆ ನಿಜವಾಗಿಯೂ ಒಳ್ಳೆಯದಾಗುವುದಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಬೇಗ conclude ಮಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಒಳ್ಳೆಯದಾಗಬೇಕೆಂಬ ಮನಸ್ಸು ಸರ್ಕಾರಕ್ಕಿದ್ದರೆ ಇದರ ಬಗ್ಗೆ ಸೂಕ್ಷ್ಮವಾಗಿ ಯೋಚನೆ ಮಾಡಬೇಕು. ಯೋಚನೆ ಮಾಡುವಂತಹ ಕೆಲಸವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೃಷಿ ಮತ್ತು ತೋಟಗಾರಿಕೆ ಬಗ್ಗೆ ಮಾತನಾಡಿ ಆಯಿತು ಇನ್ನೂ 28 ಇಲಾಖೆಗಳ ಮೇಲೆ ಚರ್ಚೆ ಮಾಡಬೇಕೆಂದು ಆಸೆ ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು: ಮತ್ತೆ ಅವಕಾಶ ಬಂದಾಗ ಕೊಡೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಆದ್ದರಿಂದ ಸ್ವಲ್ಪ ಹೆಚ್ಚಿನ ಸಮಯಾವಕಾಶವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗಲೇ ಚರ್ಚೆ ಮುಂದುವರೆಸುತ್ತೀರಾ?

ಶ್ರೀ ಕೆ.ಎಂ.ಶಿವಲಿಂಗೇಗೌಡ: ಈಗಲೇ ಚರ್ಚೆ ಮುಂದುವರೆಸಿ ಎಂದರೆ ಮುಂದುವರೆಸುತ್ತೇನೆ, ಇಲ್ಲಾ ನಾಳೆ ಮುಂದುವರೆಸಿ ಎಂದರೆ ನಾಳೆ ಮುಂದುವರೆಸುತ್ತೇನೆ.

ಅಧ್ಯಕ್ಷರು: ಇನ್ನೂ ವಿಷಯ ಇದೆ ನಾಳೆ ನೋಡ್ದೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾಳೆ ಒಂದು ಗಂಟೆ ಕಾಲಾವಕಾಶ ಕೊಟ್ಟರೆ ಚರ್ಚೆ ಮುಂದುವರೆಸುತ್ತೇನೆ.

ಅಧ್ಯಕ್ಷರು: ಒಂದು ಗಂಟೆ ಸಮಯ ಕೊಡುವುದಕ್ಕಾಗುವುದಿಲ್ಲ ನೋಡೋಣ. ಈಗ ಸದನದ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಚ್ಚೆಪಡುತ್ತಿದ್ದೇನೆ.

**ಪ್ರಕಟಣೆ**

ಅಧ್ಯಕ್ಷರು: ತಮಗೆಲ್ಲಾ ನಿನ್ನೆ ಹೇಳಿದ ಹಾಗೆ ದಿನಾಂಕ:16-06-2017 ರವರೆಗೆ ನಿಗಧಿಯಾಗಿದ್ದ ಸಧನವನ್ನು ದಿನಾಂಕ: 21-06-2017ರವರೆಗೆ ವಿಸ್ತರಣೆ ಮಾಡಲಾಗಿದೆಯೆಂದು ನಿನ್ನೆ ಅನೌನ್ಸ್ ಮಾಡಿದ್ದೆ. ಮಾನ್ಯ ಶಾಸಕರುಗಳಿಗೆ ದಿನಾಂಕ: 16-06-2017 ರವರೆಗೆ ಕಾಲಾವಕಾಶ ನೀಡಲಾಗಿದ್ದು, ತಮ್ಮ ಬೇಡಿಕೆಗಳ ಮೇಲೆ ಚರ್ಚೆಯನ್ನು 16ನೇ ತಾರೀಖಿನವರೆಗೆ ಮಾಡಬಹುದು. ಮಾನ್ಯ ಸಚಿವರುಗಳು 19ನೇ ತಾರೀಖಿನ ದಿವಸ ಎಲ್ಲಾ ಬೇಡಿಕೆಗಳಿಗೆ ಉತ್ತರವನ್ನು ಕೊಡಲೇಬೇಕಾಗುತ್ತದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಲ್ಲಾ ಸಚಿವರುಗಳು ಸದನದಲ್ಲಿ ಹಾಜರಿರಬೇಕಾಗುತ್ತದೆ ಮತ್ತು ಸದಸ್ಯರು ಕೇಳುವಂತಹ ಸಲಹೆ, ಟೀಕೆ, ಅಭಿಪ್ರಾಯ ಹಾಗೂ clarification ಕೊಡುವುದಕ್ಕೆ 19ನೇ ತಾರೀಖಿನ ದಿವಸ ಪ್ರತಿಯೊಬ್ಬ ಸಚಿವರು ಸದನದಲ್ಲಿ ಹಾಜರಿರಬೇಕು ಇದು ಕಡ್ಡಾಯವಾಗಿದೆ. ನಾನು ಈಗಾಗಲೇ ಎಲ್ಲಾ ಸಚಿವರಿಗೆ ಪತ್ರವನ್ನು ಕೂಡ ಬರೆದಿದ್ದೇನೆ. ಇದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ಬೇಡಿಕೆ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರೆಸಿ ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯನ್ನು ಪ್ರಾರಂಭ ಮಾಡೋಣ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸರ್ಕಾರ ಬಂದು ನಾಲ್ಕು ವರ್ಷಗಳಲ್ಲಿ ಡಾ:ನಂಜುಂಡಪ್ಪ ವರದಿ ಬಗ್ಗೆ ಏನೇನು ಆಗಿದೆಯೆಂಬ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ. ಈ ಬಗ್ಗೆ ಮಾತನಾಡಲು ನಾಳೆ ಕನಿಷ್ಠ ಒಂದು ಗಂಟೆ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಏಕೆಂದರೆ, ರಾಜ್ಯದಲ್ಲಿ ಯಾವ ರೀತಿ ಪ್ರಾದೇಶಿಕ ಅಸಮಾನತೆ ಇದೆಯೆಂಬ ಬಗ್ಗೆ ನಾನು ದಾಖಲಾತಿಗಳ ಸಮೇತ ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ನಾಳೆ ಮಾತನಾಡಿ.

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಬಿ.ಬಿ. ನಿಂಗಯ್ಯನವರು 192(ಎ) ಗೆ ತಿದ್ದುಪಡಿ ತರಬೇಕೆಂದು ಕೇಳಿದ್ದೇವೆ.

ಅಧ್ಯಕ್ಷರು: ಇವತ್ತು ಈ ವಿಷಯ ಇಲ್ಲ ನೋಡೋಣ.

ಶ್ರೀ ಡಿ.ಎನ್.ಜೀವರಾಜ್: ನಾವು ಮೊನ್ನೆ ಕೊಟ್ಟಿದ್ದೇವೆ ಇದು ಬಹಳ ಮುಖ್ಯವಾಗಿದೆ. ಬಡ ಜನರ ಜಮೀನನ್ನೆಲ್ಲಾ ಕಿತ್ತುಕೊಂಡು ಹೋಗುವಂತಹ ಪರಿಸ್ಥಿತಿ ಬರುತ್ತಿದೆ.

ಅಧ್ಯಕ್ಷರು: ನಾಳೆ ನೋಡೋಣ. ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯಲ್ಲಿ ಕೆ.ಎಸ್.ಪುಟ್ಟಣ್ಣಯ್ಯ, ವಿಶ್ವೇಶ್ವರ ಹೆಗಡೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಾಗೇರಿ ಮತ್ತು ಗೋವಿಂದ ಎಂ.ಕಾರಜೋಳರವರು ಕಬ್ಬು ಬೆಳೆಗಾರರ ಬಗ್ಗೆ ಚರ್ಚಿಸುವುದಾಗಿ ತಿಳಿಸಿದ್ದಾರೆ. ಕಾಗೇರಿಯವರೆ ಯಾರು ಚರ್ಚೆ ಮಾಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಪುಟ್ಟಣ್ಣಯ್ಯರವರು ಈಗ ಇಲ್ಲ ಅವರು ಬಂದ ನಂತರ ಈ ವಿಷಯವನ್ನು ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು: ಹಾಗಾದರೆ ಈಗ ನೀವು ಪ್ರಾರಂಭ ಮಾಡುವುದಿಲ್ಲವೇ? O.K ನಂತರ ಅವಕಾಶ ಕೊಡೋಣ. Next, ಲಕ್ಷ್ಮಣ ಸಂಗಪ್ಪ ಸವದಿ ಮಾತನಾಡಿ.

ಶ್ರೀ ಗೋವಿಂದ ಎಂ.ಕಾರಜೋಳ: ಅಧ್ಯಕ್ಷರೇ, ನಾನು ready ಇದ್ದೇನೆ.

ಅಧ್ಯಕ್ಷರು: ಕಾರಜೋಳ್‌ರವರೇ ನಿಮ್ಮದೂ ಇದರಲ್ಲಿ ಹೆಸರಿದೆ. ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನನ್ನದೊಂದು ವಿಷಯ ಇದೆ ಆದರೆ ಈಗ ಮುಖ್ಯಮಂತ್ರಿಗಳು ಇಲ್ಲ, ಇದು ಬಹಳ ಜರೂರಾದ ವಿಷಯವಾಗಿದೆ. ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾಗ ಮಾತನಾಡಬೇಕಾದಂತಹ ಮುಖ್ಯವಾದ ವಿಷಯವಾಗಿದೆ. 62 ಕೋಟಿ ರೂ.ಗಳ ಅವ್ಯವಹಾರವಾಗಿರುವಂತಹ ವಿಷಯವಾಗಿರುವುದರಿಂದ ನಾಳೆ ಮುಖ್ಯಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿ ನೀವು ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ಇಲ್ಲಾ ಮುಖ್ಯಮಂತ್ರಿಗಳು ಬಂದರೆ ಆಗ ಮಾತನಾಡುತ್ತೇನೆ.

ಅಧ್ಯಕ್ಷರು: ನೋಡೋಣ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು: ಹಾಗಾದರೆ ಕಾರಜೋಳರವರು ಮಾತನಾಡಿ.

**ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

ವಿಷಯ: ರಾಜ್ಯದಲ್ಲಿನ ಕಬ್ಬು ಬೆಳೆಗಾರರ ಸಮಸ್ಯೆಗಳು ಮತ್ತು ಅವರುಗಳಿಗೆ ಆಗಿರುವ ಅನ್ಯಾಯದ ಬಗ್ಗೆ.

* * * * *

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಗೋವಿಂದ ಎಂ.ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ಸರ್ಕಾರ ಯಾವುದೇ ಕಳಕಳಿ ಕಾಳಜಿಯಿಂದ ಕಬ್ಬು ಬೆಳೆಗಾರರ ನೆರವಿಗೆ ಬರಲಿಲ್ಲ ಮತ್ತು ಕಬ್ಬು ಬೆಳೆಗಾರರಿಗೆ ವಿಮಾ ಕೂಡ ಸಿಕ್ಕಿಲ್ಲ. ವಿಮಾ ಪ್ರೀಮಿಯಮ್ ಜಾಸ್ತಿಯಾಗುತ್ತದೆಂದು ಹೇಳಿ ಇವತ್ತು ರೈತರನ್ನು ಸಂಕಷ್ಟದಲ್ಲಿಡುವಂತಹ ಪರಿಸ್ಥಿತಿಯಲ್ಲಿದ್ದಾರೆ. ಈ ಸರ್ಕಾರ ಬಂದು ನಾಲ್ಕು ವರ್ಷಗಳಾಯಿತು, ಈ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಕಬ್ಬು ಬೆಳೆಯುವಂತಹ ಕಬ್ಬು ಬೆಳೆಗಾರರು ಹೆಚ್ಚಿನ ಪ್ರಮಾಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಬ್ಬು ಬೆಳೆಗಾರರ ಪರಿಸ್ಥಿತಿ ಏನಾಗಿದೆ ಮತ್ತು ಎಷ್ಟು ಕಬ್ಬು ಬೆಳೆಗಾರರು ಕಬ್ಬು ಬೆಳೆಯುವುದನ್ನು ನಿಲ್ಲಿಸಿದ್ದಾರೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 2013-14ನೇ ಸಾಲಿನಲ್ಲಿ ರಾಜ್ಯದಲ್ಲಿನ 62 ಕಾರ್ಖಾನೆಗಳು ನುರಿಸಿರುವಂತಹ ಕಬ್ಬಿನ ಪ್ರಮಾಣ 3,83,14,228 ಮೆಟ್ರಿಕ್ ಟನ್ ಅಂದರೆ ಸುಮಾರು 3 ಕೋಟಿ 83 ಲಕ್ಷ ಎಂದರೆ ನಾಲ್ಕು ಕೋಟಿ ಅಷ್ಟು ಕಬ್ಬು ಬೆಳೆದು ನುರಿಸಿದ್ದಾರೆ. 2014-2015ನೇ ಸಾಲಿನಲ್ಲಿ 4 ಲಕ್ಷ 50,000 ಮೆಟ್ರಿಕ್ ಟನ್ ಕಬ್ಬು ಬೆಳೆದು ನುರಿಸಲಾಗಿದೆ. 2015-2016 ನೇ ಸಾಲಿನಲ್ಲಿ 3 ಕೋಟಿ 76 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಬೆಳೆದು ನುರಿಸಲಾಗಿದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಗೋವಿಂದ ಎಂ.ಕಾರಜೋಳ: 2016-2017ನೇ ಸಾಲಿನಲ್ಲಿ ಸತತವಾಗಿ ಮೂರು ವರ್ಷಗಳು ಬರ ಇದ್ದ ಕಾರಣ ಅನೇಕ ಜನ ರೈತರು ಕಬ್ಬು ಬೆಳೆಯುವುದನ್ನು ನಿಲ್ಲಿಸಿದ್ದಾರೆ. ಈ ವರ್ಷ 2016-2017ನೇ ಸಾಲಿನಲ್ಲಿ ಎರಡು ಕೋಟಿ ಮೆಟ್ರಿಕ್ ಟನ್ ಕಬ್ಬನ್ನು ಬೆಳೆದಿದ್ದಾರೆ. ನಾಲ್ಕು ಕೋಟಿ ಇದ್ದದ್ದು, ನಾಲ್ಕುವರೆ ಕೋಟಿ ಮೆಟ್ರಿಕ್ ಟನ್‌ಗೆ ಹೋಗಿ ಇವತ್ತು ಎರಡು ಕೋಟಿ ಮೆಟ್ರಿಕ್ ಟನ್‌ಗೆ ಬಂದು ನಿಂತಿದೆ. 62 ಕಾರ್ಖಾನೆಗಳು ಕಬ್ಬನ್ನು ನುರಿಸುತ್ತಿವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಮುಂದುವರೆದಿದೆ)

13-06-2017/4-40/32/HRV/PS

ಶ್ರೀ ಗೋವಿಂದ ಎಂ. ಕಾರಜೋಳ್(ಮುಂ.ವ)

ಕಾರ್ಖಾನೆಗಳವರು ಕೂಡ ಇವತ್ತು ಸಂಕಷ್ಟದಲ್ಲಿದ್ದಾರೆ. ಕಬ್ಬು ಬೆಳೆಯತಕ್ಕಂಥ ರೈತರು ಕಬ್ಬು ಬೆಳೆಯುವುದನ್ನು ನಿಲ್ಲಿಸಿದ್ದಕ್ಕಾಗಿ ಕಾರ್ಖಾನೆಗಳವರು ಕೂಡ ಇವತ್ತು ಸಂಕಷ್ಟದಲ್ಲಿದ್ದಾರೆ. ಈ ಕಾರ್ಖಾನೆಗಳು ಮುಚ್ಚುವಂಥ ಪರಿಸ್ಥಿತಿಯಲ್ಲಿವೆ. ಇವತ್ತು ರೈತರ ಆರ್ಥಿಕ ಸ್ಥಿತಿಗತಿಗಳು ಹಾಳಾಗುವ ಸಂದರ್ಭವಿದೆ. ನಾನು ಅನೇಕ ಬಾರಿ ಈ ಸದನದಲ್ಲಿ ಚರ್ಚೆಯನ್ನು ಮಾಡಿದ್ದೇನೆ. ಕಬ್ಬು ಬೆಳೆಯತಕ್ಕಂಥ ರೈತರಿಗೆ ಸರ್ಕಾರ ಪರಿಹಾರ ಕೊಡಬೇಕೆನ್ನುವ ಬೇಡಿಕೆ ಅನೇಕ ವರ್ಷಗಳಿಂದ ಇದೆ. ಕಬ್ಬಿನ ಬೆಳೆ insurance ಗೆ ಒಳಪಟ್ಟಿಲ್ಲ. ಕಬ್ಬಿನ ಬೆಳೆ ವಾಣಿಜ್ಯ ಬೆಳೆಯೆಂದು ಹೇಳಿ premium ಜಾಸ್ತಿಯಾಗುತ್ತದೆಂದು insurance ಗೆ ಒಳಪಡಿಸಿಲ್ಲ. ಆದರೆ ನಾನು ಅನೇಕ ಸಾರಿ ಸಲಹೆಯನ್ನು ಮಾಡಿ premium ಮೊತ್ತ ಹೆಚ್ಚಾದರೂ ಪರವಾಗಿಲ್ಲ ಕಬ್ಬಿನ ಬೆಳೆಯನ್ನು ಕೂಡ insurance ಗೆ ಒಳಪಡಿಸಬೇಕೆಂದು, ರೈತರಿಗೆ ನೆರವು ಸಿಗುತ್ತದೆ ಎನ್ನುವ ಕಾರಣಕ್ಕಾಗಿ ಹೇಳಿದ್ದೇನೆ. ಅಷ್ಟೇ ಅಲ್ಲದೆ ಕಬ್ಬು ಬೆಳೆಯತಕ್ಕಂಥ ರೈತರಿಗೆ ಸರಿಯಾದಂಥ ರೇಟ್‌ನ್ನು ಕಾರ್ಖಾನೆ ಮಾಲೀಕರು ಕೊಡುತ್ತಿಲ್ಲ. ಹೀಗಾಗಿ ರೈತರು ಸಂಕಷ್ಟದಲ್ಲಿದ್ದಾರೆ ಎನ್ನುವ ಕಾರಣಕ್ಕಾಗಿಯೇ ನಮ್ಮ ಸರ್ಕಾರವಿದ್ದಂಥ ಸಂದರ್ಭದಲ್ಲಿ ಮಾನ್ಯ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಾವು S.A.P. ಕಾನೂನನ್ನು ಜಾರಿಗೆ ತಂದೆವು. ಈ ಸರ್ಕಾರ ಬಂದ ಮೇಲೆ ಒಂದು ವರ್ಷ S.A.P. ಕಾನೂನು ಪ್ರಕಾರ ರೈತರಿಗೆ ರೇಟ್‌ನ್ನು ನಿಗದಿ ಮಾಡಿಕೊಟ್ಟರು. ಅದಾದ ನಂತರ ಕಳೆದ ಮೂರು ವರ್ಷಗಳಿಂದ S.A.P. Meeting ಅನ್ನು ಕರೆಯಲಿಲ್ಲ, ರಾಜ್ಯದಲ್ಲಿ ಕಬ್ಬಿನ ದರವನ್ನು ಕೂಡ ನಿಗದಿ ಮಾಡಲಿಲ್ಲ. ಇದಕ್ಕೆ ಕಾರಣವಿಷ್ಟೆ, ಈ ಸರ್ಕಾರ ಕಬ್ಬು ಬೆಳೆಯತಕ್ಕಂಥ ರೈತರ ಪರವಾಗಿಲ್ಲ, ಕಾರ್ಖಾನೆ ಮಾಲೀಕರ ಪರವಾಗಿದೆಯೆನ್ನುವುದು ಸಾಬೀತಾಯಿತು. 62 ಕಾರ್ಖಾನೆಗಳವರೇನು ಕಬ್ಬನ್ನು ನುರಿಯುತ್ತಾರೋ ಅವರ ಪರವಾಗಿ ಸರ್ಕಾರವಿದೆ, ಕಬ್ಬು ಬೆಳೆಗಾರರ ಪರವಾಗಿಲ್ಲವೆಂದು ಗೊತ್ತಾಯಿತು. ನಾನು ಏಕೆ ಈ ಬಗ್ಗೆ ನೇರವಾಗಿ ಸರ್ಕಾರದ ಮೇಲೆ ಆರೋಪ ಮಾಡುತ್ತೇನೆಂದರೆ, ನಾವು ರೈತರ ಹಿತ ಕಾಪಾಡುವುದಕ್ಕಾಗಿ S.A.P. ಕಾನೂನನ್ನು 2012 ರಲ್ಲಿ ಜಾರಿಗೆ ತಂದೆವು. ರೈತನ್ನೊಳಗೊಂಡು ಸಮಿತಿಯನ್ನು ಮಾಡಿದ್ದೆವು. ಕಬ್ಬು ಬೆಳೆಗಾರರ ಪ್ರತಿನಿಧಿ ಸೇರಿ ಸಮಿತಿಯಿತ್ತು. ಆದರೆ ಈ ಸರ್ಕಾರ ಬಂದ ಮೇಲೆ ಬಹಳ ಬುದ್ಧಿವಂತಿಕೆಯಿಂದ, ಯಾವ ಕಾರ್ಖಾನೆ ಮಾಲೀಕ ಈ ಸರ್ಕಾರಕ್ಕೆ ಕಿವಿ ಊದಿದನೋ ಗೊತ್ತಿಲ್ಲ, ಆದಾಯ ಹಂಚಿಕೆ, ಅಂದರೆ revenue sharing

formula ಜಾರಿಗೆ ತಂದರು. ಆದೇಶವನ್ನು ಈ ಬಗ್ಗೆ ಮಾಡಿದರು. ಯಾರಾದರೂ ಕಾರ್ಖಾನೆ ಮಾಲೀಕರು ನನಗೆ ಲಾಭವಾಗಿದೆಯೆಂದು ತೋರಿಸುವವರ್ಯಾರಾದರೂ ಈ ದೇಶದಲ್ಲಿ ಇದ್ದಾರೇನು? ನನಗೆ ಇಷ್ಟು ಲಾಭವಾಗಿದೆ, ರೈತನಿಗೆ ಇಷ್ಟು ಕೊಡುತ್ತೇನೆಂದು ಹೇಳುವವರು ಯಾರಾದರೂ ಇದ್ದರೆ ಅವರಿಗೆ ಭಾರತ ರತ್ನ ಪ್ರಶಸ್ತಿ ಕೊಡುವುದಕ್ಕೆ ಅಡ್ಡಿಯಿಲ್ಲ. ಸರ್ಕಾರದವರು ಆ ಕಾರ್ಖಾನೆ ಮಾಲೀಕರಿಗೆ bend ಆಗಿದ್ದಾರೆ. ಕಾರ್ಖಾನೆ ಮಾಲೀಕನ ಮುಲಾಜಿಗೆ ಒಳಪಟ್ಟಿದ್ದಾರೆ. ಹೀಗಾಗಿ ಕಬ್ಬು ಬೆಳೆಯತಕ್ಕಂಥ ರೈತನ ರಕ್ಷಣೆಗೆ ಸರ್ಕಾರ ಬರಲಿಲ್ಲ. ಅನೇಕ ಬಾರಿ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ, ಪ್ರತಿ ಪಕ್ಷದ ನಾಯಕರು, ನಾನು ಮತ್ತು ಸವದಿಯವರು ಮತ್ತು ರಾಜು ಗೌಡರು, ಪುಟ್ಟಣ್ಣಯ್ಯನವರು ಹೀಗೆ ಎಲ್ಲರೂ ಅನೇಕರು ಅನೇಕ ಬಾರಿ ಒತ್ತಾಯವನ್ನು ಮಾಡಿದ್ದೇವೆ. ಏನೆಂದು ಒತ್ತಾಯ ಮಾಡಿದ್ದೇವೆಂದರೆ, SAP ಕಾನೂನನ್ನು ಜಾರಿಗೆ ತಂದಿರತಕ್ಕಂಥದ್ದನ್ನು ಮುಂದುವರಿಸಿಕೊಂಡು ಹೋಗಿ ಪ್ರತಿ ವರ್ಷ ಕಬ್ಬಿನ ಬೆಲೆ ನಿಗದಿ ಮಾಡಬೇಕೆಂದಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ಕೋಲಾರದಲ್ಲಿ ಕಬ್ಬು ಬೆಳೆಯುವುದಿಲ್ಲ, ಸಕ್ಕರೆ ಕಾರ್ಖಾನೆ ಕೂಡ ಇಲ್ಲ. ಈ ವರ್ಷ ಸಕ್ಕರೆ ಕೆ.ಜಿ.ಗೆ ಸರಾಸರಿ 40 ರೂಪಾಯಿ ಇದೆ. ರಾಜು ಗೌಡರೆ ಈ ವರ್ಷ ಸರಾಸರಿ ಸಕ್ಕರೆ ರೇಟ್ ಎಷ್ಟಿದೆ ಹೇಳಿ.

ಶ್ರೀ ರಾಜುಗೌಡ ಅಲಗೌಡ ಕಾಗೆ:-35 ರೂ. ತನಕ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:-36, 28, 40, 42 ರೂ.ಗಳವರೆಗೂ ಹೋಗಿದೆ. ಸರಾಸರಿ 40 ರೂಪಾಯಿ ಈ ವರ್ಷ ರೇಟ್ ಸಿಕ್ಕಿದೆ. ಮೊಲಾಸಿಸ್‌ಗೂ ಹೆಚ್ಚು ರೇಟ್ ಸಿಕ್ಕಿದೆ. ಕಾರ್ಖಾನೆಗಳವರು ಲಾಭದಲ್ಲಿದ್ದಾರೆ.

ಶ್ರೀ ರಾಜುಗೌಡ ಅಲಗೌಡ ಕಾಗೆ:-ಕೆಲವು ಕಾರ್ಖಾನೆಗಳಲ್ಲಿ ಡಿಸ್ಟಿಲರಿ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:-ಡಿಸ್ಟಿಲರಿ ಮತ್ತು ಡಿಸ್ಟಿಲರಿ ಇಲ್ಲದಿರುವ ಕಾರ್ಖಾನೆಗಳು, ಈ ಎರಡೂ ರೀತಿಯದ್ದು ಇರಲಿ, ಡಿಸ್ಟಿಲರಿ ಇಲ್ಲದಿದ್ದ ಕಾರ್ಖಾನೆಗಳವರು ಹೆಚ್ಚಿನ ರೇಟ್‌ಗೆ ಮೊಲಾಸಿಸ್‌ನ್ನು ಮಾರಾಟ ಮಾಡಿಕೊಂಡಿದ್ದಾರೆ. ಬಗಾಸಿಸ್ ಮಾಡಿಕೊಂಡಿದ್ದಾರೆ. ಪ್ರೆಸ್‌ಮಡ್ ಮಾಡಿಕೊಂಡಿದ್ದಾರೆ. ಪ್ರೆಸ್‌ಮಡ್‌ನ್ನು ಮೊದಲು ಒಂದು ಕಾಲದಲ್ಲಿ ನಾವು ಇದ್ದಂಥ ಸಂದರ್ಭದಲ್ಲಿ ಪುಕ್ಕಟೆ ರೈತರಿಗೆ ಕೊಡುತ್ತಿದ್ದೆವು. ಯಾರು ಕಬ್ಬು ಕೊಡುತ್ತಾರೋ ಆ ರೈತರಿಗೆ ಪುಕ್ಕಟೆಯಾಗಿ ಇದನ್ನು ಕೊಡುತ್ತಿದ್ದೆವು. ಇವತ್ತು ಅದನ್ನು ಕೂಡ ಕಾರ್ಖಾನೆಗಳವರು ಮಾರಾಟ ಮಾಡಿಕೊಳ್ಳುತ್ತಿದ್ದಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ರಾಜುಗೌಡ ಅಲಗೌಡ ಕಾಗೆ:-ಮಾನ್ಯ ಉಪಾಧ್ಯಕ್ಷರೆ, ಕಬ್ಬಿಗೆ ಒಂದು ಟನ್‌ಗೆ 2700 ರೂ.ಗಳನ್ನು ಕೊಟ್ಟಿದ್ದಾರೆ. ಇವತ್ತು ಬ್ರೆಜಿಲ್‌ನಿಂದ raw material ತರಿಸಿ ಅದನ್ನು 30 ರೂ.ಗಳಿಗೆ ತಂದು ಮಾರಿ ಅವರು profit ಮಾಡಿಕೊಂಡಿದ್ದಾರೆ. ಆದರೆ ರೈತರಿಗೆ ಈ ಸಾರಿ ಒಂದು ಟನ್‌ಗೆ ಕಬ್ಬಿಗೆ ಕೊಟ್ಟದ್ದು 2700 ರೂಪಾಯಿ. ಕಾರ್ಖಾನೆಗಳವರು ಬ್ರೆಜಿಲ್‌ನಿಂದ raw material ತರಿಸಿ ಅದನ್ನು white ಸಕ್ಕರೆಯಾಗಿ convert ಮಾಡಿ ಅದನ್ನು ಕೆ.ಜಿ.ಗೆ 35 ರೂ.ಗಳಂತೆ ಮಾರುತ್ತಿದ್ದಾರೆ. ಒಂದು ಕೆ.ಜಿ. ಸಕ್ಕರೆಗೆ 35 ರಿಂದ 37 ರೂ.ಗಳವರೆಗೂ ಮಾರುತ್ತಿದ್ದಾರೆ. ಆದರೆ ನಮ್ಮ ರೈತರಿಗೆ ಮಾತ್ರ ಒಂದು ಟನ್ ಕಬ್ಬಿಗೆ 2700 ರೂ.ಗಳನ್ನು ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:-ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳುತ್ತೇನೆಂದರೆ ಈ ಸಂದರ್ಭದಲ್ಲಾದರೂ ರೈತರ ನೆರವಿಗೆ ಬಂದು ಹೆಚ್ಚಿನ ರೇಟ್‌ನ್ನು ಕೊಡಬೇಕಲ್ಲವೆ, ಇವತ್ತು ಯಾವ ಕಾರ್ಖಾನೆಯವರು ಒಂದು ಟನ್ ಕಬ್ಬಿಗೆ ಹೆಚ್ಚು ರೇಟ್ ಕೊಟ್ಟಿಲ್ಲ. ಕೆಲವರು 2300 ರೂ.ಗಳನ್ನು ಕೊಟ್ಟಿದ್ದಾರೆ, ಕೆಲವರು 2400 ರೂ.ಗಳನ್ನು ಕೊಟ್ಟಿದ್ದಾರೆ, ಕೆಲವರು 2500 ರೂ.ಗಳನ್ನು ಕೊಟ್ಟಿದ್ದಾರೆಯೇ ಹೊರತು uniform ಆಗಿ ಕೊಟ್ಟಿಲ್ಲ. ಆ ರೀತಿ ಕೊಡಬೇಕಲ್ಲವೆ, ಆದರೆ ಯಾರೂ ಕೊಟ್ಟಿಲ್ಲ. ಒಬ್ಬರೋ ಇಬ್ಬರೋ ಕೊಟ್ಟಿದ್ದಾರಷ್ಟೆ, 62 ಕಾರ್ಖಾನೆಗಳವರಲ್ಲಿ ಎರಡು ಕಾರ್ಖಾನೆಗಳವರು ಕೊಟ್ಟಿದ್ದಾರೆ. ಬಹುಶ: ಅಥಣಿ farmers ಗೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು:-ಮಹಾರಾಷ್ಟ್ರದಲ್ಲಿ ಏನು ಬೆಲೆ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:-ಮಹಾರಾಷ್ಟ್ರದಲ್ಲಿ ಕೂಡ ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಹೆಚ್ಚಿನ ರೇಟ್ ಕೊಟ್ಟಿದ್ದಾರೆ. ನಾನು ಈಗ ಅವರು ಕೊಟ್ಟಿರುವ ರೇಟ್ ಬಗ್ಗೆ ಮಾಹಿತಿ ತಂದಿಲ್ಲ.

ಶ್ರೀ ರಾಜುಗೌಡ ಅಲಗೌಡ ಕಾಗೆ:-3,000 ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:-3,000 ಕ್ಕಿಂತಲೂ ಹೆಚ್ಚಿನ ರೇಟ್ ಕೊಟ್ಟಿದ್ದಾರೆ. ರಾಜುಗೌಡರವರು 3,000 ರೇಟ್ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ 3,000 ಕ್ಕಿಂತಲೂ ಹೆಚ್ಚಿನ ರೇಟ್‌ನ್ನು ಮಹಾರಾಷ್ಟ್ರದಲ್ಲಿ ಕೊಟ್ಟಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಕೊಟ್ಟಿಲ್ಲ. ಅದಕ್ಕೆ ಕಾರಣವೇನೆಂದರೆ ಸರ್ಕಾರಕ್ಕೆ ಆಸಕ್ತಿಯಿಲ್ಲ. ಸರ್ಕಾರಕ್ಕೆ ರೈತರ ಪರವಾಗಿ ಆಸಕ್ತಿ ಬೇಕಾಗುತ್ತದೆ, ಕಾರ್ಖಾನೆ ಮಾಲೀಕರನ್ನು ಸರ್ಕಾರದವರು ಕರೆದು ಕಿವಿ ಹಿಂಡಬೇಕಾಗುತ್ತದೆ. ಆ ಕೆಲಸವನ್ನು ಇವರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುವುದಿಲ್ಲ. ಏಕೆ ಮಾಡುವುದಿಲ್ಲವೆಂದರೆ ಸರ್ಕಾರದವರು ಅವರ ಮುಲಾಜಿಗೊಳಗಾಗಿದ್ದಾರೆ. ಇದಷ್ಟೇ ಅಲ್ಲದೆ ಇವತ್ತು ಕೇಂದ್ರ ಸರ್ಕಾರ ಕೂಡ F.R.P. ಅನ್ನು ನಿಗದಿ ಮಾಡಿದೆ. ಕೇಂದ್ರ ಸರ್ಕಾರ ನಿಗದಿ ಮಾಡಿದಂಥ F.R.P. Rate ಅನ್ನು ಕೂಡ ಇವರು ಕೊಟ್ಟಿಲ್ಲ. ಕೇಂದ್ರ ಸರ್ಕಾರ fair and remunerative price fix ಮಾಡಿದೆ. ಅದನ್ನು ಕೂಡ ಕೊಟ್ಟಿಲ್ಲ. ಅದನ್ನಾದರೂ ಕೊಡಬೇಕಾಗಿತ್ತು. ಅದನ್ನು ಕೊಟ್ಟಿಲ್ಲ. ತಮಗೆ ಏನು ತಿಳಿಯುತ್ತದೋ ಅದನ್ನು ಕೊಟ್ಟಿದ್ದಾರೆ. ಹೀಗಾಗಿ ರೈತರು ಇವತ್ತು ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಏನು ಒತ್ತಾಯ ಮಾಡುತ್ತೇನೆಂದರೆ, ರೈತರು ಕಬ್ಬು ಬೆಳೆಯುವುದನ್ನು ನಿಲ್ಲಿಸಿದರೆಂದರೆ 62 ಕಾರ್ಖಾನೆಗಳು ಮುಚ್ಚಿಹೋಗುತ್ತವೆ. 62 ಕಾರ್ಖಾನೆಗಳು ಮುಚ್ಚಿಹೋಗಬೇಕೆ? ಕೋಟ್ಯಾಂತರ ಜನರು ನಿರುದ್ಯೋಗಿಗಳಾಗುತ್ತಾರೆ. ಒಂದು ಕಾರ್ಖಾನೆ ಎಂದರೆ ಸುಮಾರು 50 ಸಾವಿರ ಜನರು ಅದರಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ, ರೈತರು, ಕಾರ್ಮಿಕರು, ಮಾಲೀಕರು ಸೇರಿ, ಅವರೆಲ್ಲರೂ ಇವತ್ತು ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಇದಲ್ಲದೆ ರೈತನ ವಾಣಿಜ್ಯ ಬೆಳೆ ಕೂಡ ಹಾಳಾಗುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ,

ಉಪಾಧ್ಯಕ್ಷರು:-ತಾವು ಮಾತನಾಡುವುದು ಮುಗಿಯಿತಲ್ಲವೆ?

ಶ್ರೀ ಗೋವಿಂದ ಎಂ. ಕಾರಜೋಳ:-ಮಾನ್ಯ ಉಪಾಧ್ಯಕ್ಷರೆ, ಇನ್ನು ಮುಗಿದಿಲ್ಲ, ಇನ್ನು ಪ್ರಾರಂಭ ಮಾಡಿದ್ದೇನಷ್ಟೆ. ನಾವು ಇದನ್ನು ರೂಲ್ 69 ರಡಿಯಲ್ಲಿ ತಂದಿದ್ದೇವೆ. ಆದುದರಿಂದ ನಾನೊಬ್ಬನೇ ಇದರ ಮೇಲೆ ಮಾತನಾಡುವುದಿಲ್ಲ. ಇದರ ಮೇಲೆ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತಾರೆ, ಪುಟ್ಟಣ್ಣಯ್ಯನವರು ಮಾತನಾಡುತ್ತಾರೆ. ಇನ್ನು ಅನೇಕರು ಮಾತನಾಡುವವರಿದ್ದಾರೆ.

ಉಪಾಧ್ಯಕ್ಷರು:-ಆಯಿತು, ತಾವು ಮುಂದುವರೆಸಿ.

ಶ್ರೀ ಗೋವಿಂದ ಎಂ. ಕಾರಜೋಳ:-ಮಾನ್ಯ ಉಪಾಧ್ಯಕ್ಷರೆ, ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈಗೇನು ರೈತರು 4 ಕೋಟಿ ಮೆಟ್ರಿಕ್ ಟನ್ ಬೆಳೆಯತಕ್ಕಂಥವರು ಈಗ 2 ಕೋಟಿಗೆ ಬಂದಿದ್ದಾರೆ. ಅಂದರೆ 50% ಕಡಿಮೆಯಾಗಿದೆ. ಈ ವರ್ಷ ಇನ್ನು ಕಡಿಮೆಯಾಗುತ್ತದೆ, ಏಕೆಂದರೆ ಈ ವರ್ಷ ಹೊಸ ಕಬ್ಬನ್ನು ರೈತರು ನಾಡಿ ಮಾಡಲಿಲ್ಲ. ಇದ್ದಂಥ ಎರಡನೇ ಬೆಳೆ, ಮೂರನೇ ಬೆಳೆಯೂ ಕೂಡ ಒಣಗಿ ಹೋಗಿದೆ. ನೀರಿಲ್ಲದ ಕಾರಣಕ್ಕಾಗಿ ಅವು ಉಳಿದಿಲ್ಲ. 25 ರಿಂದ 30 ಪರ್ಸೆಂಟ್ ಮಾತ್ರ ಉಳಿದಿದೆ. ಅಂದರೆ ಈ ಸಾರಿ 1 ರಿಂದ 1.5 ಕೋಟಿಗೆ ಬಂದು ನಿಲ್ಲುತ್ತದೆ.

13-06-2017

ಅದಕ್ಕಿಂತಲೂ ಹೆಚ್ಚು ಕಬ್ಬು ಸಿಗುವುದಿಲ್ಲ. ಹೀಗಾದರೆ ಕಾರ್ಖಾನೆಗಳ ಪರಿಸ್ಥಿತಿಯೇನು, ಕಾರ್ಖಾನೆಗಳವರು ಮನೆಯಿಂದ ದುಡ್ಡನ್ನು ತಂದು ಹಾಕಿಲ್ಲ, ಅವರು ಬ್ಯಾಂಕ್‌ಗಳಿಂದ ಸಾಲ ತಂದು ಕಬ್ಬನ್ನು ನುರಿದಿದ್ದಾರೆ. 62 ಕಾರ್ಖಾನೆಗಳು ಎಂದರೆ ಸರಾಸರಿ ಒಂದೊಂದು ಕಾರ್ಖಾನೆಗೆ 300 ಕೋಟಿ ಎಂದಿಟ್ಟುಕೊಂಡರೂ ಸುಮಾರು ಎರಡು ಸಾವಿರ ಕೋಟಿಗಿಂತಲೂ ಹೆಚ್ಚು ಹಣದ ನಷ್ಟವಾಗುತ್ತದೆ. ಉಳಿದ ಕಾರ್ಖಾನೆಯಂತೆ ಇರತಕ್ಕಂಥ ಕಬ್ಬಿಣದ ಯಂತ್ರವನ್ನು ಮಾರಿಕೊಳ್ಳುವುದಕ್ಕೂ ಆಗುವುದಿಲ್ಲ. ಕಾರ್ಖಾನೆ ಬಂದ್ ಮಾಡಿದರೆ ಅಲ್ಲಿರತಕ್ಕಂಥ ಕಬ್ಬಿಣದ ಉಪಕರಣಗಳನ್ನು ತೂಕಕ್ಕೇ ಹಾಕಬೇಕಾಗುತ್ತದೆ. ಅಂದರೆ scrap ಗೆ ಹೋಗಬೇಕಾಗುತ್ತದೆ. ಅಂಥ ಪರಿಸ್ಥಿತಿಯಿದೆ. ಇವತ್ತು ಕಾರ್ಖಾನೆಗಳು ಹಾಳಾಗುತ್ತವೆ, 1 ಲಕ್ಷದ 80 ಸಾವಿರ ಕೋಟಿ, ಸುಮಾರು 2 ಲಕ್ಷ ಕೋಟಿಯಷ್ಟು ಹಣ ಹೋಗುತ್ತದೆ ಬ್ಯಾಂಕಿನಿಂದ, ಇದರ ಬಗ್ಗೆ ಸರ್ಕಾರ ಆಲೋಚನೆಯನ್ನು ಮಾಡಬೇಕು. ಸರ್ಕಾರಕ್ಕೆ ಕಾರ್ಖಾನೆಯಿಂದ ಆದಾಯ ಬರುತ್ತದೆ. ಸರಾಸರಿ ಒಂದೊಂದು ಸಕ್ಕರೆ ಕಾರ್ಖಾನೆಯಿಂದ ಕನಿಷ್ಠ 500 ಕೋಟಿಯಷ್ಟು ಆದಾಯ ಬರುತ್ತದೆ. Direct and indirectly ಸರ್ಕಾರಕ್ಕೆ ಆದಾಯ ಬರುತ್ತದೆ. Tax ರೂಪದಲ್ಲಿ ಬರುತ್ತದೆ, vehicle ಅನ್ನು ನಾವು engage ಮಾಡುತ್ತೇವೆ, vehicle tax ರೂಪದಲ್ಲಿ ಬರುತ್ತದೆ, ಮೊಲಾಸಿಸ್ ಮೇಲೆ tax ಬರುತ್ತದೆ, ಸಕ್ಕರೆ ಮೇಲೆ ಬರುತ್ತದೆ, ಇವೆಲ್ಲದರ ಮೇಲೂ tax ಬರುತ್ತದೆ. ಅಂದರೆ Tax ರೂಪದಲ್ಲಿ ಸರ್ಕಾರಕ್ಕೆ ಆದಾಯ ಬರುತ್ತದೆ. ಇದಿಷ್ಟೇ ಅಲ್ಲದೆ ರಸ್ತೆಗಳ ಅಭಿವೃದ್ಧಿಗೆ ನಾವು ಕಾರ್ಖಾನೆಗಳಲ್ಲಿಯೇ ಕಬ್ಬಿನ ದರದಲ್ಲಿ ಮುರಿಯುತ್ತೇವೆ.

(ಮುಂದು)

D 13.06.2017/4.50/33/HBU-PS

ಶ್ರೀ ಎಂ. ಗೋವಿಂದ ಕಾರಜೋಳ(ಮುಂದು) : ರಸ್ತೆಗಳ ಅಭಿವೃದ್ಧಿಗೆ ಕಾರ್ಖಾನೆಗಳಲ್ಲಿ ನಾವು ಕಬ್ಬಿನ ದರದಲ್ಲಿ ಮುರಿದು, ಅದನ್ನು sugar cess roads ಎಂದು ತೆಗೆದುಕೊಳ್ಳುತ್ತೇವೆ. ಹಾಗಾಗಿ ರಸ್ತೆ ಅಭಿವೃದ್ಧಿಗೆ ಕೂಡ ಹಣ ಬರುತ್ತದೆ. ಸರ್ಕಾರಕ್ಕೆ ಕೂಡ 50,000 ಕೋಟಿ ರೂಪಾಯಿಗಿಂತ ಹೆಚ್ಚು ಹಣ ಬರುವುದು directly or indirectly ನಿಂತುಹೋಗುತ್ತದೆ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ರೈತರಿಗೆ ಸಂಬಂಧಪಟ್ಟಂತೆ ಇದನ್ನು

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗಂಭೀರವಾಗಿ ಪರಿಗಣಿಸಬೇಕು. ಇಲ್ಲದಿದ್ದರೆ ರೈತರ ಪರಿಸ್ಥಿತಿ ನೆಟ್ಟಗಾಗುವುದಿಲ್ಲ. ನೀರಾವರಿ ಮಾಡುವುದಕ್ಕೆ ರೈತರು ಸಾಲ ಮಾಡಿದ್ದಾರೆ. ನೀರಾವರಿ ಇಲ್ಲದೆ ಕಬ್ಬು ಬೆಳೆಯುವುದಕ್ಕೆ ಆಗುವುದಿಲ್ಲ. ನೀರಾವರಿ ಮಾಡಬೇಕೆಂದರೆ ಬೋರ್ ಹಾಕಿದ್ದಾರೆ, ನದಿಯಿಂದ ಪೈಪ್‌ಲೈನ್ ಹಾಕಿದ್ದಾರೆ, ಹಳ್ಳದಿಂದ ಪೈಪ್‌ಲೈನ್ ಹಾಕಿದ್ದಾರೆ, ಮೋಟಾರ್ ಕೂರಿಸಿದ್ದಾರೆ, ಅದಕ್ಕಾಗಿ ಪ್ರತಿಯೊಬ್ಬ ರೈತರು ಲಕ್ಷಗಟ್ಟಲೆ, ಕೋಟಿಗಟ್ಟಲೆ ಸಾಲ ಮಾಡಿದ್ದಾರೆ. ಅವರಿಗೆ ಕೂಡ ತೊಂದರೆಯಾಗುತ್ತದೆ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಮಹಾರಾಷ್ಟ್ರದಲ್ಲಿ 3,000 ಕ್ಕಿಂತಲೂ ಹೆಚ್ಚು ದರ ಕಾರ್ಖಾನೆ ಮಾಲೀಕರಿಂದ ಕೊಡಿಸಿದ್ದಾರೆ, ಅದೇ ರೀತಿ ಕೊಡಿಸಬೇಕು. ಕಾರ್ಖಾನೆ ಮಾಲೀಕರು ಮೂರು ವರ್ಷಗಳಿಂದ ಅಂದರೆ 2013-14ನೇ ಸಾಲಿನಲ್ಲಿ 67 ಕೋಟಿ ರೂಪಾಯಿ, 2014-15 ರಲ್ಲಿ 40 ಕೋಟಿ ರೂಪಾಯಿ, 2015-16 ರಲ್ಲಿ 27 ಕೋಟಿ ರೂಪಾಯಿ ಹಾಗೂ ಈ ವರ್ಷ 31 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ. ಸುಮಾರು ನೂರಾರು ಕೋಟಿ ರೂಪಾಯಿ ಕಬ್ಬಿನ ಬಿಲ್ ಕೆಲವು ಕಾರ್ಖಾನೆಗಳವರು ರೈತರಿಗೆ ಕೊಡಬೇಕಾಗಿರುವುದು ಕೊಟ್ಟಿಲ್ಲ. ಆ ಬಾಕಿಯನ್ನು ಕೊಡಿಸುವಂಥ ಕೆಲಸ ಸರ್ಕಾರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅನೇಕ ಕಬ್ಬು ಬೆಳೆಯುವಂಥ ದೊಡ್ಡ ರೈತರು ಮಹಾರಾಷ್ಟ್ರ ಹಾಗೂ ಗೋವಾಗೆ ಗುಳೆ ಹೋಗಿದ್ದಾರೆ. ಹೊಲ ಮನೆ ಹಾಳು ಬಿದ್ದುಹೋಗಿವೆ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸರ್ಕಾರ ರೈತರನ್ನು ಬಸ್‌ಸ್ಟಾಂಡ್‌ನಲ್ಲಿ ಹಮಾಲಿ ಮಾಡುವುದಕ್ಕೆ ಹಚ್ಚಬಾರದು. ಏಕೆಂದರೆ ರೈತ ದೇಶದ ಬೆನ್ನೆಲುಬು. ರೈತರನ್ನು ಬದುಕಿಸುವ ಜವಾಬ್ದಾರಿ ಸರ್ಕಾರ ನಡೆಸುತ್ತಿರುವ ನಿಮ್ಮದಿದೆ. ಅದಕ್ಕೆ ಸಂಕಷ್ಟದಲ್ಲಿರುವ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳ ಮೂಲಕ ಕೇಂದ್ರ ಸರ್ಕಾರ 6,000 ಕೋಟಿ ರೂಪಾಯಿ interest free loan ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 50 ಕಾರ್ಖಾನೆಗಳವರು 969 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ, ಆದರೂ ರೈತರಿಗೆ ಬಿಲ್ ಕೊಟ್ಟಿಲ್ಲ. ಇದೆಂಥ ಪರಿಸ್ಥಿತಿ? ಅದಕ್ಕೆ ನಾನೇನು ಹೇಳುವುದಕ್ಕೆ ಬಯಸುತ್ತೇನೆಂದರೆ ಬಡ್ಡಿಸಹಿತ 15 ದಿವಸದಲ್ಲಿ ರೈತರಿಗೆ ಬಿಲ್ ಕೊಡಬೇಕೆಂದು ಕಾನೂನು ಇದೆ. ಏಕೆ ಬಡ್ಡಿಸಹಿತ ಕೊಡಬೇಕೆಂದರೆ ರೈತ ಬ್ಯಾಂಕಿಗೆ ಬಡ್ಡಿ ಕಟ್ಟುತ್ತಾನೆ, ಹೊರಗಡೆ ಸಾಲ ಮಾಡಿ ಬಡ್ಡಿ ಕಟ್ಟುತ್ತಾನೆ, ಬಡ್ಡಿ ಕೊಡತಕ್ಕಂಥ ರೈತನಿಗೆ ಹೊರೆಯಾಗಬಾರದಲ್ಲ ಅದಕ್ಕೆ ಸರ್ಕಾರವೇ ಕೊಡಬೇಕು. ಬಹಳ ಪ್ರೀತಿ ವ್ಯಾಮೋಹ ಕಾರ್ಖಾನೆಗಳ ಮೇಲೆ ಇತ್ತು, ಮಾಲೀಕರ ಮೇಲೆ ಇತ್ತು ಎಂದರೆ ಸರ್ಕಾರ

ಕೊಟ್ಟು ಆಮೇಲೆ ಅವರಿಂದ ತೆಗೆದುಕೊಳ್ಳಲಿ ಅಥವಾ ಸೂಟು ಬಿಡಲಿ. ಪಾಪ ಎಲ್ಲಾ ಕಾರ್ಖಾನೆ ಮಾಲೀಕರು ದಿವಾಳಿಯಾಗಿದ್ದಾರೆ, ಬಡವರಿದ್ದಾರೆ, ಬಿಪಿಎಲ್ ಕಾರ್ಡು ಹೊಂದಿರುವವರಿದ್ದಾರೆ. ಅದಕ್ಕಾಗಿ ನಾವು ಒಂದು ಬಾರಿ ಸೂಟು ಬಿಟ್ಟಿದ್ದೇವೆಂದು ಹೇಳಲಿ, ಅದನ್ನಾದರೂ ಮಾಡಲಿ. ಆದರೆ ರೈತರಿಗೆ ಆತ್ಮಹತ್ಯೆ ಮಾಡಿಸುವಂಥ ಕೆಲಸ ಮಾಡಬೇಡಿ ಎಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಈಗ ಮಾನ್ಯ ಪುಟ್ಟಣ್ಣಯ್ಯನವರು ಬರಬೇಕು.

ಉಪಾಧ್ಯಕ್ಷರು : ಪುಟ್ಟಣ್ಣಯ್ಯ ಮತ್ತು ಕಾಗೇರಿ ಯವರು ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ನನಗೆ ಮಾತನಾಡುವುದನ್ನು ಮುಗಿಸಿ ಎಂದು ಹೇಳುತ್ತೀರಿ. ಇಲ್ಲಿ ಮಾನ್ಯ ಪುಟ್ಟಣ್ಣಯ್ಯನವರು ಇಲ್ಲ.

ಉಪಾಧ್ಯಕ್ಷರು : ತಾವು ಬಹಳ ವಿಚಾರಗಳನ್ನು ಹೇಳಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ವಿಚಾರಗಳನ್ನು ಹೇಳಿದ್ದೇನೆ, ಆದರೆ ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಬೇಕಾಗಿತ್ತು. ಏಕೆಂದರೆ ಅವರು ಕಬ್ಬು ಬೆಳೆಯುವ ಜಿಲ್ಲೆಯಿಂದ ಬಂದವರು.

ಉಪಾಧ್ಯಕ್ಷರು : ಅವರು ಈಗ ಇಲ್ಲವಲ್ಲ, ಈಗ ನೀವು ಮಾತನಾಡಿ ಮುಗಿಸಿ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ, ನಂತರ clarification ಕೇಳಬಹುದು.

ಶ್ರೀ ಗೋವಿಂದ ಎಂ. ಕಾರಜೋಳ : ಆಯಿತು, ನಾನು ಸರ್ಕಾರಕ್ಕೆ ಮೂರು ಸಲಹೆಗಳನ್ನು ಕೊಡುತ್ತೇನೆ. ಒಂದು ರೈತರ ಬಾಕಿಯನ್ನು ಸರ್ಕಾರ ಕೂಡಲೇ ಬಿಡುಗಡೆ ಮಾಡಿ ಕಾರ್ಖಾನೆಯವರ ಕಡೆಯಿಂದ ವಸೂಲು ಮಾಡಿಕೊಳ್ಳಲಿ. ಎರಡನೆಯದಾಗಿ ಕಬ್ಬಿನ ಬೆಳೆ ನಾಶವಾಗಿದೆ, ಉಳಿದ 40 ಬೆಳೆಗಳಿಗೆ ವಿಮಾ ಯೋಜನೆಯಡಿ ಪರಿಹಾರ ಕೊಟ್ಟಿದ್ದೀರಿ, ಅದೇ ರೀತಿ ಒಂದು ಹೆಕ್ಟೇರ್ ನೀರಾವರಿಗೆ ಏನು ಪರಿಹಾರ ಕೊಡುತ್ತೇವೆ, ಆ ರೀತಿಯಾಗಿ ಕಬ್ಬು ನಾಶವಾದಂಥ ರೈತರಿಗೂ 2 ಕೋಟಿ ಮೆಟ್ರಿಕ್ ಟನ್ ಕಬ್ಬು ಬೆಳೆಗೆ ಸರ್ಕಾರ ಪರಿಹಾರ ಕೊಡಬೇಕು. ಮೂರನೆಯದಾಗಿ ಈ ವರ್ಷ ಮಳೆ ಬರುವ ಲಕ್ಷಣ ಇದೆ. ಮಳೆ ಬಂದರೆ ರೈತ ಹೊಸದಾಗಿ ನಾಟಿ ಮಾಡಬೇಕಾಗುತ್ತದೆ. ಅದಕ್ಕೆ ಹೊಸ ಬೆಳೆ ಮಾಡುವುದಕ್ಕೆ ಪ್ರತಿ ಹೆಕ್ಟೇರ್‌ಗೆ ಕನಿಷ್ಠ 50 ಸಾವಿರ ರೂಪಾಯಿಯಾದರೂ ರೈತನಿಗೆ ಸಾಲ ಕೊಡಬೇಕು. ಆ ರೀತಿ ಮಾಡಿದರೆ ಮಾತ್ರ ರೈತ ಉಳಿಯುತ್ತಾನೆ, ಕಾರ್ಖಾನೆಗಳು ಉಳಿಯುತ್ತವೆ ಎಂದು ನಾನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಸರ್ಕಾರ ಹೇಗಿದ್ದರೂ 1,86,000 ಕೋಟಿ ರೂಪಾಯಿ ಬಜೆಟ್ ಕೊಡುತ್ತಿದೆ. ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರಿಗೂ ಹಾಗು ಇನ್ನುಳಿದ ಬೆಳೆಗಾರರಿಗೂ ಪರಿಹಾರ ಕೊಡಬೇಕು. ಅಷ್ಟಲ್ಲದೆ ಬರದ ಪರಿಸ್ಥಿತಿಯಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ, ಮಳೆ ಎಲ್ಲೆಲ್ಲಿ ಬರುತ್ತದೆ, ಅವರಿಗೆ ಹೊಸ ಬೆಳೆ ಬೆಳೆಯುವುದಕ್ಕೆ ಗೊಬ್ಬರ ಮತ್ತು ಬೀಜ ತೆಗೆದುಕೊಳ್ಳುವುದಕ್ಕೆ ಸಾಲ ಕೊಡುವಂಥ ವ್ಯವಸ್ಥೆಯಾಗಬೇಕು. ಇದಕ್ಕೆ 10 ಸಾವಿರ ಕೋಟಿ ರೂಪಾಯಿ ಆವರ್ತ ನಿಧಿ ಎಂದು ಇಟ್ಟುಕೊಳ್ಳಬೇಕು. ಏಕೆಂದರೆ ಇವತ್ತು ತೊಗರಿ ಬೆಳೆದವರು ಬಹಳ ಸಂಕಷ್ಟದಲ್ಲಿದ್ದರು. ಬೀದರ್, ಗುಲ್ಬರ್ಗ ಮತ್ತು ಬಿಜಾಪುರದ ಕೆಲ ಭಾಗದಲ್ಲಿ ಸಕಾಲದಲ್ಲಿ ಸ್ವಲ್ಪ ಮಳೆಯಾಯಿತು. ಅವರಿಗೆ ತೊಗರಿ ಬಹಳ ಬಂಪರ್ ಬೆಳೆ ಬಂತು. ಆದರೆ ಮಾರ್ಕೆಟ್ ಇಲ್ಲದ ಕಾರಣಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂತು. ಇವತ್ತಿಗೂ ರೈತರಲ್ಲಿ ಸ್ಟಾಕ್ ಇದೆ, ಅವರಿಗೆ ಅದನ್ನು ಸಂಗ್ರಹ ಮಾಡಿ ಇಡುವುದಕ್ಕೆ ವ್ಯವಸ್ಥೆ ಇಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆಂದರೆ 10,000 ಕೋಟಿ ರೂಪಾಯಿ ಆವರ್ತ ನಿಧಿ ಹೆಚ್ಚು ಮಾಡಬೇಕು. ಈಗ ರೈತರ 2 ಕೋಟಿ ಮೆಟ್ರಿಕ್ ಟನ್ ಕಬ್ಬು ಬೆಳೆ ನಾಶವಾಗಿದೆ, ಅದಕ್ಕೆ ಪರಿಹಾರ ಕೊಡಬೇಕು. ಮತ್ತು ಮುಂದಿನ ಬೆಳೆಗೆ ಹೊಸ ಸಾಲವನ್ನು ಕೊಡಬೇಕೆಂದು ಒತ್ತಾಯ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ನಿಯಮ 69 ರ ಅಡಿ ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಸರ್ಕಾರದಿಂದ ಉತ್ತರ:**

ಶ್ರೀ ಎಂ.ಬಿ. ಪಾಟೀಲ್, ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ನಿಯಮ 69 ರ ಅಡಿಯಲ್ಲಿ ಮಾನ್ಯ ಸದಸ್ಯರುಗಳಾದ ಕೆ.ಎಸ್. ಪುಟ್ಟಣ್ಣಯ್ಯನವರು, ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಗೋವಿಂದ ಎಂ. ಕಾರಜೋಳ ರವರು ಕಬ್ಬು ಬೆಳೆಗಾರರ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಉತ್ತರವನ್ನು ನೀಡುವುದಕ್ಕೆ ಬಯಸುತ್ತೇನೆ.

(ಮಾನ್ಯ ಮಂತ್ರಿಗಳು ನೀಡಿದ ಉತ್ತರವನ್ನು ಲಗತ್ತಿಸಲಾಗಿದೆ)

13-06-2017

(ಮುಂದು)

13.06.17 - 5.00 - (34) - RD-HS

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ನಾನು clarification ಕೇಳುತ್ತೇನೆ. ನನಗೆ ಉತ್ತರ ಬಂದಿಲ್ಲ, ನಾನು ಮೂರು ಸಲಹೆಗಳನ್ನು ಕೊಟ್ಟಿದೆ. ಮೊದಲನೆಯದಾಗಿ, ಕಬ್ಬಿನ ಬೆಳೆ ನಷ್ಟವಾಗಿರುವಂಥ ರೈತರಿಗೆ ಉಳಿದ ಬೆಳೆಗಳಿಗೆ ಯಾವ ರೀತಿ ಪರಿಹಾರವನ್ನು ಕೊಟ್ಟಿದ್ದೀರಿ, ನೀರಾವರಿ ಬೆಳೆಗೆ ಏನು ಪರಿಹಾರ ಕೊಟ್ಟಿದ್ದೀರಿ ಆ ರೀತಿ ಇದಕ್ಕೂ ಕೊಡಬೇಕು. ಎರಡನೆಯದಾಗಿ, ಅವರು ಹೊಸ ಬೆಳೆ ಮಾಡುವುದಕ್ಕೆ ಸಾಲವನ್ನು ಕೊಡಬೇಕು. ಅದು ಪ್ರತಿ ಹೆಕ್ಟೇರ್‌ಗೆ 50,000 ರೂ.ಗಳನ್ನು ಕೊಡಬೇಕೆಂದು ಕೇಳಿದ್ದೇನೆ. ಮೂರನೆಯದಾಗಿ, ಕಬ್ಬಿನ ಬೆಳೆಯನ್ನು ವಿಮಾ ವ್ಯಾಪ್ತಿಗೆ ತಂದಿಲ್ಲ, ಇದನ್ನು ವಿಮಾ ವ್ಯಾಪ್ತಿಗೆ ಕೊಡಬೇಕೆಂದು ಕೇಳಿದ್ದೇನೆ. ಮತ್ತು ರೈತರು ಸಂಕಷ್ಟದಲ್ಲಿದ್ದು, ಅವರ ಬೆಳೆ ಏನು ಒಣಗಿ ಹೋಗಿದೆ, ಅವರಿಗೆ ಸಾಲ ಮನ್ನಾ ಮಾಡಬೇಕೆಂದು ಕೇಳಿದ್ದೇನೆ. ಈ ವಿಷಯಗಳಿಗೆ ಸರ್ಕಾರ ಉತ್ತರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೋವಿಂದ ಎಂ. ಕಾರಜೋಳರವರು ಹೇಳಿದ ಅಂಶಗಳನ್ನು ಸನ್ಮಾನ್ಯ ಮುಖ್ಯಮಂತ್ರಿಯವರು, ಅದರ ಸಾಧಕ-ಬಾಧಕಗಳನ್ನು ನೋಡಿಕೊಂಡು, ಆ ಬಗ್ಗೆ ಸೂಕ್ತವಾದಂಥ ನಿರ್ಧಾರವನ್ನು ಕೈಗೊಳ್ಳುತ್ತಾರೆ.

ಉಪಾಧ್ಯಕ್ಷರು: Ok.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ನಾವು ಸದನದಲ್ಲಿ ಉತ್ತರ ಕೊಡುವವರು ಸರ್ಕಾರವೆಂದು ತಿಳಿದುಕೊಂಡಿರುತ್ತೇವೆ. ನಾವು ಇಲ್ಲಿ ಮಾನ್ಯ ಎಂ.ಬಿ.ಪಾಟೀಲ್‌ರವರು ಉತ್ತರ ಕೊಟ್ಟರು ಅಥವಾ ಮಾನ್ಯ ಆರ್.ವಿ.ದೇಶಪಾಂಡೆಯವರು ಕೊಟ್ಟರೆಂದು ಕೇಳುವುದಿಲ್ಲ. ತಾವು ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಾಧಕ-ಬಾಧಕಗಳನ್ನು ನೋಡಿಕೊಂಡು ಎಂದು ಅಲ್ಲ. ಈ ಸದನದಲ್ಲಿ ಸರ್ಕಾರ ನಿರ್ದಿಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೇನೆ. ನಾನು ಹೇಳುವುದನ್ನು ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ನಾನು ಕೇಳುತ್ತಿದ್ದೇನೆ, ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ತಮಗೂ ಗೊತ್ತು. ಹಲವಾರು sugar factoryಗಳು ರೈತರಿಗೆ payment ಮಾಡಿಲ್ಲ. ಅದರ ಬಗ್ಗೆ ಸರ್ಕಾರ ರೈತರಿಗೆ ಏನು ಸಹಾಯ ಮಾಡಿದೆಯೆಂಬುದು ತಮಗೂ ಗೊತ್ತಿದೆ. ರಾಜ್ಯದಲ್ಲಿ ಮೊದಲನೇ ಬಾರಿಗೆ ಕಬ್ಬು ಬೆಳೆಗಾರರಿಗೆ ಸಹಾಯ ಮಾಡಿದೆ.

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಕಳೆದ 3 ವರ್ಷಗಳ ಹಿಂದೆ ಮಾಡಿರುವುದನ್ನು ಹೇಳಬೇಡಿ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಹೇಳುತ್ತೇನೆ. ಎರಡನೆಯದಾಗಿ, ಹಲವಾರು sugar factoryಗಳ ಮೇಲೆ action ತೆಗೆದುಕೊಂಡು, sugar stock ಅನ್ನು seize ಮಾಡಿದ್ದೇವೆ, ಕ್ರಮ ತೆಗೆದುಕೊಂಡಿದ್ದೇವೆ, ಹಲವಾರು sugar factoriesಗೆ ಪೇಮೆಂಟ್ ಮಾಡುವುದಕ್ಕೆ compel ಮಾಡಿದ್ದೇವೆ. ಇನ್ನೂ ಏನಾದರೂ ಬಾಕಿ ಇದ್ದರೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ಅದನ್ನೇ ಹೇಳಿರುವಂಥದ್ದು, difference ಕೊಟ್ಟಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ದೇಶಪಾಂಡೆಯವರು, ಹಿಂದಿನ ಹಳೆಯ ಸುದ್ದಿಯನ್ನು ಹೇಳುತ್ತಿದ್ದಾರೆ. ನಾವು ಹಿಂದಿನ ಸುದ್ದಿಗಳನ್ನು ಕೇಳುವುದಕ್ಕೆ ತಯಾರಿಲ್ಲ. ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ, ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಲ್ಲಿ ಉಳಿದ ರಾಜ್ಯಗಳಿಗೆ compare ಮಾಡಿದರೆ, ನಮ್ಮ ಸರ್ಕಾರ ಕೇವಲ 0.31% ಮಾತ್ರ ನಮ್ಮಲ್ಲಿ ಬಾಕಿ ಇರುತ್ತದೆ. ನಮ್ಮ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ: ಬೇರೆ ರಾಜ್ಯಗಳ comparative statement ಹಾಕಿ ಇಲ್ಲಿ ನನಗೆ ಉತ್ತರ ಹೇಳಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಕೊಡುವಂಥದ್ದನ್ನು ನಾನು ಕೇಳುತ್ತಿದ್ದೇನೆ. ನಾನು ಇಲ್ಲಿ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬೇರೆಯವರು ಉಳಿಸಿಕೊಂಡಿದ್ದಾರೆ, ಮಹಾರಾಷ್ಟ್ರದವರು ಉಳಿಸಿಕೊಂಡಿದ್ದಾರೆ, ಉತ್ತರ ಪ್ರದೇಶದವರು ಉಳಿಸಿಕೊಂಡಿದ್ದಾರೆಂಬುದರ ಬಗ್ಗೆ ಕೇಳುತ್ತಿಲ್ಲ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಗೋವಿಂದ ಎಂ.ಕಾರಜೋಳರವರೆ, ಬರೀ 0.31% ಮಾತ್ರ ಬಾಕಿ ಇದೆ. ನಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು.. ..

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ತಾವು ಕುಳಿತು ಕೇಳಿ.

ಶ್ರೀ ಎಂ.ಬಿ.ಪಾಟೀಲ್: ನಾನು ಈಗ ನಿಮಗೆ ಉತ್ತರ ಉತ್ತರ ಕೊಟ್ಟೆನಲ್ಲಾ, 0.31% ಮಾತ್ರ ಬಾಕಿ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ: ಅದು ಎಷ್ಟು ಬಾಕಿ ಇದೆಯೆಂಬುದು ಮುಖ್ಯವಲ್ಲ. ನಾನು comparative statement ಹಾಕಿ ಹೇಳಿ ಎಂದು ಹೇಳಲಿಲ್ಲ. ದಯವಿಟ್ಟು ತಾವು ಸರ್ಕಾರವಿದ್ದೀರಿ, ಕುಳಿತು ಕೇಳಿ. ತಾವು ಮಹಾರಾಷ್ಟ್ರದವರಿಗೆ ಹೋಲಿಕೆ ಮಾಡಿದರೆ, ಉತ್ತರ ಪ್ರದೇಶಕ್ಕೆ ಹೋಲಿಕೆ ಮಾಡಿದರೆ, ಮಹಾರಾಷ್ಟ್ರ ಸರ್ಕಾರ ಮತ್ತು ಉತ್ತರ ಪ್ರದೇಶದ ಸರ್ಕಾರ ಪ್ರತಿಯೊಬ್ಬ ರೈತನ ಸಾಲ 30,000 ರೂ.ಗಳನ್ನು ಮನ್ನಾ ಮಾಡಿದ್ದಾರೆ. ನೀವು ಘೋಷಣೆ ಮಾಡಿ ಬಿಡಿ, ನಾನು ಕುಳಿತು ಬಿಡುತ್ತೇನೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಘೋಷಣೆ ಮಾಡಿದ್ದಾರೆ. ಈ ಬಗ್ಗೆ Union Finance Minister ರವರು ಹೇಳಿದ್ದಾರೆ, ನಾವು ಯಾವ ಸಾಲವನ್ನು ಮನ್ನಾ ಮಾಡುವುದಿಲ್ಲ, ನಾವು ಯಾವ ರಾಜ್ಯಕ್ಕೂ ಸಹಾಯ ಮಾಡುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ತಾವು ಬೇರೆ ರಾಜ್ಯಕ್ಕೆ ಹೋಲಿಕೆ ಏಕೆ ಮಾಡುತ್ತೀರಿ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಯು.ಪಿ.ಎ. ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳ 72,000 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಿದರು. ಈಗ 54,000

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೋಟಿ ರೂ.ಗಳಲ್ಲಿ 44,000 ಕೋಟಿ ರೂ.ಗಳು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಇದೆ. ಕೇವಲ 10,500 ಕೋಟಿ ರೂ.ಗಳು ಮಾತ್ರ ರಾಜ್ಯದ ಸಹಕಾರಿ ಬ್ಯಾಂಕ್‌ಗಳಲ್ಲಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ತಾವು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಸರ್ಕಾರಗಳನ್ನು ಹೋಲಿಕೆ ಮಾಡಿ ಹೇಳಿದ್ದಾರೆ. ಆ ರಾಜ್ಯದವರು ಮನ್ನಾ ಮಾಡಿದ್ದಾರೆ, ನೀವು ಮಾಡಿ. ಇಲ್ಲವೆಂದರೆ ನಿಮಗೆ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿಕೊಳ್ಳುವುದಕ್ಕೆ ಯಾವ ನೈತಿಕ ಹಕ್ಕು ಇಲ್ಲ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಹಿಂದೆ ಯು.ಪಿ.ಎ. ಸರ್ಕಾರವಿದ್ದಾಗ ಮಾನ್ಯ ಮನಮೋಹನ್ ಸಿಂಗ್ ರವರು ಪ್ರಧಾನಮಂತ್ರಿಯಾಗಿದ್ದಾಗ 73,000 ಕೋಟಿ ರೂ.ಗಳು ಈ ರಾಷ್ಟ್ರದ ರೈತರ ಸಾಲ ಮನ್ನಾ ಮಾಡಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಯಾವಾಗ ಮಾಡಿದ್ದೀರಿ?

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಇವತ್ತು ಇವರ ಸರ್ಕಾರ ಮಾನ್ಯ ಮೋದಿ ಸರ್ಕಾರವಿದೆ, ಹಣಕಾಸು ಸಚಿವರು .. ..

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ನಾನು ಈಗ ಕೊಟ್ಟಿರುವಂಥ ಉತ್ತರಕ್ಕೆ ಸಂಬಂಧಪಟ್ಟಿರುವಂಥದ್ದು. ಇದು ಕಬ್ಬು ಬೆಳೆಗಾರರಿಗೆ ಸಂಬಂಧಪಟ್ಟಿರುವಂಥದ್ದು.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಕೇಂದ್ರಸರ್ಕಾರವನ್ನು ಕೇಳಿ, ಯು.ಪಿ.ಎ. ಸರ್ಕಾರ ಯಾವ ರೀತಿ ನಿರ್ಧಾರವನ್ನು ತೆಗೆದುಕೊಂಡಿದ್ದರು. 73,000 ಕೋಟಿ ರೂ.ಗಳನ್ನು ಮನ್ನಾ ಮಾಡಿದ್ದೇವೆ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ತಾವು ಮಾನ್ಯ ಜಾರ್ಜ್‌ರವರು ಉತ್ತರ ಹೇಳಿದ ಹಾಗೆ ಹೇಳಬೇಡಿ. ಮಾನ್ಯ ಜಾರ್ಜ್‌ರವರು ಬೆಂಗಳೂರು ನಗರದಲ್ಲಿದ್ದಾರೆ, ಅವರು ಕಬ್ಬು ಬೆಳೆಯುವುದಿಲ್ಲ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಸರ್ಕಾರ ಅವರಿಗೆ ಸಹಾಯ ಮಾಡುತ್ತಾ ಬಂದಿದೆ, ಸರ್ಕಾರ ರೈತರ ಪರವಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತಾ ಬಂದಿದ್ದೇವೆ.

ಉಪಾಧ್ಯಕ್ಷರು: ಆಯಿತು. ಮಾನ್ಯ ಪಾಟೀಲ್‌ರವರೆ.. .. .

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, 54,000 ಕೋಟಿ ರೂ.ಗಳಲ್ಲಿ 44,000 ಕೋಟಿ ರೂ.ಗಳು ರಾಷ್ಟ್ರೀಕೃತ ಬ್ಯಾಂಕ್‌ಗಳದ್ದಾಗಿದೆ. ಕೇವಲ 10,500 ಕೋಟಿ ರೂ.ಗಳು ಮಾತ್ರ ಸಹಕಾರಿ ಬ್ಯಾಂಕ್‌ಗಳದ್ದಾಗಿದೆ. ಹಾಗಾಗಿ ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಆಯಿತು, ಮಾನ್ಯ ಗೋವಿಂದ ಎಂ.ಕಾರಜೋಳರವರೆ, ಹೀಗೆ ಮಾಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನೀವು ಹೇಳಿದ್ದೀರಿ, ಅವರು ಕೇಳಿದ್ದಾರೆ. ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಿಲ್ಲ)

ಶ್ರೀ ಗೋವಿಂದ ಎಂ. ಕಾರಜೋಳ: ಅದನ್ನು ಬಿಟ್ಟು ಬಿಡಿ. ಮಾನ್ಯ ಎಂ.ಬಿ.ಪಾಟೀಲ್‌ರವರೆ, ನೀವು ಇದ್ದಿರಲ್ಲಾ, ತಾವು ಮಾನ್ಯ ಮನಮೋಹನ್ ಸಿಂಗ್‌ರವರು ಇದ್ದಾಗ ಕೊಡಿ ಎಂದು ಹೇಳಬೇಕಾಗಿತ್ತು. ತಾವು ಇದೇ ವಿಧಾನ ಸಭೆಯಲ್ಲಿ ಇದ್ದಿರಲ್ಲಾ, ತಾವು ಮಾನ್ಯ ಮನಮೋಹನ್ ಸಿಂಗ್‌ರವರ ಸರ್ಕಾರ ಕೊಡಲಿ ಎಂದು ಹೇಳಬೇಕಾಗಿತ್ತು. ನಾವು ಸಾಲ ಮನ್ನಾ ಮಾಡಿದಾಗ ಕೇಂದ್ರ ಸರ್ಕಾರ ಕೊಡಲಿ ಎಂದು ಕೇಳಲಿಲ್ಲ. ನಾವು ನಮ್ಮ ಸರ್ಕಾರದ ಖಜಾನೆಯಿಂದ ಕೊಟ್ಟಿದ್ದೇವೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು: ಮಾನ್ಯ ಗೋವಿಂದ ಎಂ. ಕಾರಜೋಳರವರೆ, ಈಗ ಈ ವಿಷಯದ ಬಗ್ಗೆ ಚರ್ಚೆ ಮುಗಿಯಿತು. ಮುಂದಿನ ವಿಷಯ.. ..

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ.

ಉಪಾಧ್ಯಕ್ಷರು: ಆಯಿತು, ನೀವು ಹೇಳಿದ್ದೀರಿ, ಅವರು ಕೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಆ ರಾಜ್ಯಗಳ ರೈತರಿಗೆ ಏನು ಕೊಟ್ಟಿದ್ದಾರೆ, ಅದನ್ನು ಕೊಡಲಿ.

ಉಪಾಧ್ಯಕ್ಷರು: ಆಯಿತು, ನೀವು ಕೇಳಿದ್ದೀರಿ, ಅವರು ಹೇಳಿದ್ದಾರೆ. ಹೀಗೆಯೇ ಮಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೆ, ನಿಮ್ಮದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಉಪಾಧ್ಯಕ್ಷರೆ, ಇವರು ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರವನ್ನು compare ಮಾಡಿ ಉತ್ತರ ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು: ಆಯಿತು, ಇದರ ಬಗ್ಗೆ ಚರ್ಚೆ ಮುಗಿಯಿತು.

ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ : ಇವರು ಮೂರು ವರ್ಷಗಳಲ್ಲಿ ಮೂರು ರೂಪಾಯಿಯನ್ನು ಕೊಡಲಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಅವರು ಮಾಡಿದ್ದನ್ನೇ ಇವರು ಮಾಡಲಿ.

ಉಪಾಧ್ಯಕ್ಷರು: ಆಯಿತು, ಕುಳಿತುಕೊಳ್ಳಿ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೆ, ಮುಂದಿನ ವಿಚಾರ.. .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಉಪಾಧ್ಯಕ್ಷರೆ, ಮೊದಲು ನಾನು convince ಮಾಡುತ್ತೇನೆ. ಇದು ಸಹಕಾರಿ ಕ್ಷೇತ್ರದಲ್ಲೇ ಅತೀ ದೊಡ್ಡದಾದ ಒಂದು ಹಗರಣವಿದೆ. ಇವತ್ತು ಈ ಇಲಾಖೆ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿರುವುದರಿಂದ, ದಯಮಾಡಿ ನನಗೆ ನಾಳೆ ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಆಯಿತು, ನಾಳೆ ಅವಕಾಶ ಮಾಡಿಕೊಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಮುಂದಿನ ವಿಷಯ ಮಾನ್ಯ ಎಂ.ರಾಜಣ್ಣ, ಮಾನ್ಯ ಎಂ.ಕೃಷ್ಣಾರೆಡ್ಡಿ ಮತ್ತು ಮಾನ್ಯ ಎಸ್.ಎನ್.ಸುಬ್ಬಾರೆಡ್ಡಿಯವರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಎತ್ತಿನಹೊಳೆ ಯೋಜನೆಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಬಗ್ಗೆ.

**ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ**
**ಅಲ್ಪ ಕಾಲಾವಧಿ ಚರ್ಚೆ**
**ವಿಷಯ: ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಎತ್ತಿನಹೊಳೆ ಯೋಜನೆಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಬಗ್ಗೆ.**

****

ಶ್ರೀ ಎಂ.ರಾಜಣ್ಣ(ಶಿಡ್ಲಘಟ್ಟ): ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮ ಬಯಲುಸೀಮೆಯ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಶಾಶ್ವತ ನೀರಾವರಿಗೆ ಹೋರಾಟವಾಗಿರುವ ಬಗ್ಗೆ ನಿನ್ನೆ ದಿವಸ ತಾವು ನೋಡಿದ್ದೀರಿ. ಈ ಮೂರು ಜಿಲ್ಲೆಗಳಲ್ಲಿ ಭಯಂಕರವಾದ ರೀತಿಯಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿ ಬಂದ್ ಮಾಡಿದ್ದಾರೆ. ಇವತ್ತು ನಮ್ಮ ಸರ್ಕಾರ ಬಯಲು ಸೀಮೆಯ ಈ ಮೂರು ಜಿಲ್ಲೆಗಳಲ್ಲಿ ಅಂತರ ಜಲ ಕುಸಿದು, ಇವತ್ತು 1,500 ಅಡಿಗಳ ಆಳಕ್ಕೆ ಹೋಗಿದೆ. ಇಂಥ ಒಂದು ಸಂದರ್ಭದಲ್ಲಿ ಸರ್ಕಾರದ ಮಾಹಿತಿಗಳ ಪ್ರಕಾರ ಅತ್ಯಂತ ಹೆಚ್ಚಿನ ಅಂತರ ಜಲವನ್ನು ಉಪಯೋಗಿಸಿಕೊಂಡಿದೆ ಎನ್ನುವುದನ್ನು ಕೂಡ ಸರ್ಕಾರದ ಗಮನಕ್ಕೆ ತಂದಿದೆ. ಇಂಥ ಒಂದು ಸಂದರ್ಭದಲ್ಲಿ ಅಲ್ಲಿ ಕೃಷಿ ಬಹಳಷ್ಟು ಕಡಿಮೆಯಾಗುತ್ತಿದೆ. ಇದೇ ರೀತಿ ಯಾವುದಾದರೂ ಶಾಶ್ವತ ನೀರಾವರಿ ಯೋಜನೆ ಬರದೇ ಇದ್ದರೆ, ಅದು ಮತ್ತೊಂದು ಭಾರತ ದೇಶದ ರಾಜಸ್ತಾನದಂತೆ ಮರುಭೂಮಿ ರೀತಿ ಆಗುವುದರಲ್ಲಿ ಸಂದೇಹವಿಲ್ಲವೆಂದು, ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ.

ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ. ಇವತ್ತು ಒಂದೊಂದು ಹನಿ ನೀರನ್ನು ಉಪಯೋಗಿಸಿ ಕೃಷಿ ಮಾಡುತ್ತಿದ್ದಾರೆ. ಇದರ ಜೊತೆಗೆ 1,500 ಅಡಿ ಆಳದಿಂದ ನೀರನ್ನು ತೆಗೆದು ವಿಷದ ನೀರನ್ನು ಕುಡಿಯುತ್ತಿದ್ದೇವೆ.

ಮುಂದು.. ..



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

13-06-2017/5.10/35/GG/HS

ಶ್ರೀ ಎಂ. ರಾಜಣ್ಣ (ಮುಂದುವರೆದುದು): ಇದರಿಂದಾಗಿ ಕೃಷಿ ಬಹಳಷ್ಟು ನಶಿಸಿ ಹೋಗುತ್ತಿದೆ. ಇಂಥ ಸಂದರ್ಭದಲ್ಲಿ ಸರ್ಕಾರ ಹಲವಾರು ಯೋಜನೆಗಳನ್ನು ಕೊಟ್ಟಿದೆ. ಅದು ಎತ್ತಿನಹೊಳೆ ಯೋಜನೆ ಇರಬಹುದು, ಯರಗೋಳು ಯೋಜನೆ ಇರಬಹುದು, ಕೆ.ಸಿ. ವ್ಯಾಲಿಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೊಡುವ ಯೋಜನೆ ಇರಬಹುದು, ಹೀಗೆ ಎಲ್ಲ ಯೋಜನೆಗಳನ್ನು ಕೊಟ್ಟು, ನಮ್ಮ ಬಯಲು ಸೀಮೆಯ ಜನಗಳಿಗೆ ಮತ್ತು ರೈತಾಪಿ ವರ್ಗಕ್ಕೆ ಕಣ್ಣು ಒರೆಸುತ್ತಿದೆ. ಮೂರು ವರ್ಷಗಳ ಹಿಂದೆ ಎತ್ತಿನಹೊಳೆ ಯೋಜನೆಗೆ ಪೂಜೆ ಮಾಡಿ ಎರಡು ವರ್ಷಗಳಲ್ಲಿ ನಾವು ನೀರನ್ನು ಕೊಡುತ್ತೇವೆ ಎಂದು ಹೇಳಿದಿರಿ. ಉಪಾಧ್ಯಕ್ಷರೆ, ತಮಗೂ ಗೊತ್ತಿದೆ, ತಮ್ಮ ಜಿಲ್ಲೆಯಲ್ಲಿ ಹಲವಾರು ಸಂಘಸಂಸ್ಥೆಗಳಿರಬಹುದು, ಜನಪ್ರತಿನಿಧಿಗಳಿರಬಹುದು, ನಾವೆಲ್ಲರೂ ಪಕ್ಷಾತೀತವಾಗಿ ಸಕಲೇಶಪುರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಅಲ್ಲಿಂದ ನೀರು ಬರುವುದು ಇನ್ನೂ ಬಹಳಷ್ಟು ದಿನಗಳಾಗುತ್ತದೆ. ಈ ಯೋಜನೆಗೆ ಕೇವಲ ಪೈಪ್‌ಲೈನ್ ಹಾಕುವುದು ಮತ್ತು ಭೂಮಿ ತೆಗೆದುಕೊಳ್ಳುವುದರಲ್ಲಿ ನಿಂತಿದೆಯೇ ಹೊರತು ನಮ್ಮ ಜಿಲ್ಲೆಗಳಿಗೆ ನೀರನ್ನು ಎಷ್ಟು ಕೆರೆಗಳಿಗೆ ಕೊಡುತ್ತೇವೆ, ಅದನ್ನು ಯಾವ ರೀತಿ ಮಾಡುತ್ತೇವೆ, ಆ ಕೆರೆಗಳ ಅಭಿವೃದ್ಧಿ ಹೇಗೆ, ಆ ಕೆರೆಗಳಲ್ಲಿ ಎಷ್ಟು ನೀರು ನಿಲ್ಲಿಸಬೇಕು ಎನ್ನುವುದನ್ನು ಬರೀ DPRನಲ್ಲಿ ಕೊಟ್ಟಿದ್ದಾರೆಯೇ ಹೊರತು ಇನ್ನೂ ಅವುಗಳ ಕಾಮಗಾರಿಯನ್ನು ಪ್ರಾರಂಭ ಮಾಡಿಯೇ ಇಲ್ಲ. ಈ ರೀತಿಯಲ್ಲಿ ಹೋದರೆ ನಮ್ಮ ಮುಂದಿನ ಪೀಳಿಗೆಗೆ ನೀರು ಸಿಗುವುದು ಯಾವಾಗ? ಇವತ್ತು ನಾವು ನೋಡುತ್ತಿದ್ದೇವೆ, ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಕೃಷಿ ಸಂಪೂರ್ಣವಾಗಿ ಕಡಿಮೆಯಾಗುತ್ತಿದೆ, ಅಲ್ಲಿಯ ಯುವಕರು ತಮ್ಮ ಕೈಗೆ ದುಡಿಯಲು ಕೆಲಸವಿಲ್ಲ ಎಂದು ಹೇಳಿ ವಲಸೆ ಹೋಗುತ್ತಿದ್ದಾರೆ. 60-70 ವರ್ಷದ ವೃದ್ಧರನ್ನು ಬಿಟ್ಟು ಅವರ ಮಕ್ಕಳು ಬೆಂಗಳೂರು ಮುಂತಾದ ಪಟ್ಟಣಗಳಿಗೆ ವಲಸೆ ಹೋಗಿ, ಅಲ್ಲಿ ದುಡಿಯುತ್ತಿದ್ದಾರೆ. ಇಂಥ ಪರಿಸ್ಥಿತಿ ಮುಂದುವರೆದರೆ ಕೆಲವೇ ದಿನಗಳಲ್ಲಿ ನಮ್ಮ ಜಿಲ್ಲೆಗಳು ಮರುಭೂಮಿಗಳಾಗುತ್ತವೆ. ಇಂಥ ಸಂದರ್ಭದಲ್ಲಿ ನಮ್ಮ ಘನ ಸರ್ಕಾರ ಒಂದು ಸಮಗ್ರ ಜಲ ನೀತಿಯನ್ನು ತರಬೇಕಾಗಿದೆ. ನಾವು ನೋಡುತ್ತಿದ್ದೇವೆ, ಒಂದು ಕಡೆ ಅತಿವೃಷ್ಟಿಯಿಂದಾಗಿ ಪ್ರವಾಹಗಳಾಗಿವೆ, ಮತ್ತೊಂದು ಕಡೆ ಬರಗಾಲ ತಾಂಡವವಾಡುತ್ತಿದೆ. ಇಂಥ ಸಂದರ್ಭದಲ್ಲಿ ಕೇಂದ್ರ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ C.W.C., D.R.D.O. ಮುಂತಾದವುಗಳು ಒಂದು ಸಮಗ್ರ ನೀತಿಯನ್ನು ಮಾಡಿ ಅತಿವೃಷ್ಟಿಯಿಂದಾಗಿ ಯಥೇಚ್ಛವಾಗಿ ಹರಿಯುತ್ತಿರುವ ನೀರನ್ನು ಎತ್ತಿನಹೊಳೆ ಯೋಜನೆ ಮುಖಾಂತರ ಇರಬಹುದು ಅಥವಾ ಮತ್ತೊಂದು ರೀತಿಯಲ್ಲಿ ತಂದು ನಮ್ಮ ಬಯಲುಸೀಮೆಯ ಜಿಲ್ಲೆಗಳಿಗೆ ಕೊಡಬೇಕು. ಇಲ್ಲದಿದ್ದರೆ ಈ ಜಿಲ್ಲೆಗಳು ಮರುಭೂಮಿಯಾಗಲು ಜನಪ್ರತಿನಿಧಿಗಳಾದ ನಾವು ಮತ್ತು ಸರ್ಕಾರ ಸಹಕಾರ ಕೊಟ್ಟ ಹಾಗೆ ಆಗುತ್ತದೆ. ಇಂಥ ಸಂದರ್ಭದಲ್ಲಿ ನಾನು ನಮ್ಮ ಘನ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೇ, ಅಲ್ಲಿನ ಯುವಜನತೆ ನೆಮ್ಮದಿಯಾಗಿ ಅವರ ಕೆಲಸವನ್ನು ಮಾಡಿಕೊಂಡು, ಅವರ ವೃದ್ಧ ತಂದೆತಾಯಿಯರನ್ನು ಸಾಕುವಂತಾಗಬೇಕು. ಇವತ್ತು ಅವರು ತಮ್ಮ ವೃದ್ಧ ತಂದೆತಾಯಿಯರನ್ನು ಬಿಟ್ಟು ಬೇರೆ ಪಟ್ಟಣಗಳಿಗೆ ಹೋಗುತ್ತಿದ್ದಾರೆ. ಅದರ ಜೊತೆಗೆ, ತಮಗೆ ಗೊತ್ತಿದೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹಿಂದೆ ಇಡೀ ರಾಜ್ಯಕ್ಕೆ ಆಗುವಷ್ಟು ಹಣ್ಣು ತರಕಾರಿಗಳನ್ನು ಬೆಳೆದು ಕಳುಹಿಸುತ್ತಿದ್ದೆವು. ಆದರೆ ಇವತ್ತು ಆ ರೀತಿ ಹಣ್ಣು, ತರಕಾರಿಗಳನ್ನು ಬೆಳೆಯುವುದು ಎಲ್ಲಿಗೆ ಹೋಯಿತು? ಇವತ್ತು ಕೇವಲ ಹನಿ ನೀರಾವರಿಯಲ್ಲಿ ಒಂದು ಸ್ವಲ್ಪ ಮಟ್ಟದಲ್ಲಿ ಮಾತ್ರ ಹಣ್ಣು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಒಂದು ಕಡೆ ಬೆಲೆಯ ಏರುಪೇರಿನಿಂದ ರೈತರು ಕಂಗಾಲಾಗುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದ ಕಬ್ಬು ಬೆಳೆಗಾರರ ಬಗ್ಗೆ ನಾವೆಲ್ಲ ಮಾತನಾಡುತ್ತೇವೆ. ಆದರೆ ಬಯಲುಸೀಮೆಯ ರೈತರು ಇವತ್ತು ತಾವು ಬೆಳೆದ ಟೊಮೋಟೋವನ್ನು ರಸ್ತೆಗೆ ಹಾಕುತ್ತಿದ್ದಾರೆ, ದ್ರಾಕ್ಷಿ ಬೆಳೆಯ ಬೆಲೆ ಬಹಳಷ್ಟು ಅಧೋಗತಿಗೆ ಹೋಗಿದೆ. ಇಂಥ ಸಂದರ್ಭದಲ್ಲಿ ನಾನು ಈ ಘನ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೇ, ನಮ್ಮ ಜಿಲ್ಲೆಗೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ಮಾಡಿ, ಕುಡಿಯಲು ಎಷ್ಟು ನೀರು ಬೇಕು, ಕೃಷಿಗೆ ಎಷ್ಟು ನೀರು ಬೇಕು, ದನಕರುಗಳಿಗೆ ಎಷ್ಟು ನೀರು ಬೇಕು ಎಂದು ಸಮಗ್ರ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಕಳೆದ ವರ್ಷ ಮಾರ್ಚ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರೈತ ಸಂಘಟನೆಗಳು, ಜನಪರ ಸಂಘಟನೆಗಳು, ಜನಪ್ರತಿನಿಧಿಗಳು ಎಲ್ಲರೂ ಸೇರಿ ಎಂದು ಸಭೆಯನ್ನು ಮಾಡಿ, ಆ ಸಭೆಯಲ್ಲಿ ಒಂದು ಸಮಗ್ರ ಚಿಂತನೆ ಮಾಡಿ ಎಲ್ಲ ಮೂಲಗಳಿಂದ ನೀರನ್ನು ಕ್ರೋಢೀಕರಿಸಿ, ಒಂದು ತಜ್ಞರ ಸಮಿತಿಯನ್ನು ಮಾಡಿ ಮಾಡುತ್ತೇವೆ ಎಂದು ಹೇಳಿದರು. ತಜ್ಞರ ಸಮಿತಿಯನ್ನು ಮಾಡಿದರು. ಆದರೆ ಅದು ಅಲ್ಲಿಗೇ ನಿಂತುಹೋಯಿತು. ಮೇಕೆದಾಟುವಿನಿಂದ ಇರಬಹುದು, ಕೆ.ಸಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವ್ಯಾಲಿಯಿಂದ ಇರಬಹುದು, ಹೆಬ್ಬಾಳ ವ್ಯಾಲಿಯಿಂದ ಇರಬಹುದು, ಎತ್ತಿನಹೊಳೆ ಯೋಜನೆಯಿಂದ ಇರಬಹುದು, ಯರಗೋಳು ಯೋಜನೆ ಇರಬಹುದು, ಯಾವುದರಿಂದಾದರೂ ಸರಿ, ಇನ್ನೂ ನಮಗೆ ನೀರು ಬಂದಿಲ್ಲ. ಇವತ್ತು ದ್ವಂದ್ವ ನೀತಿ ಇದೆ, ದ್ವಂದ್ವ ತೀರ್ಮಾನಗಳಿವೆ. ಈ ಸಂದರ್ಭದಲ್ಲಿ ನಮ್ಮ ಘನ ಸರ್ಕಾರಕ್ಕೆ ನಾನು ಒತ್ತಾಯ ಮಾಡುವುದೇನೆಂದರೆ, ಯಾವುದೇ ಒಂದು ಮೂಲದಿಂದಾದರೂ ನಮಗೆ ನೀರನ್ನು ಕೊಡಬೇಕು. ಇಡೀ ರಾಜ್ಯಕ್ಕೆ ಒಂದು ಸಮಗ್ರ ನೀರಾವರಿ ನೀತಿಯನ್ನು ತಂದು ನಮ್ಮ ಬಯಲುಸೀಮೆಯ ಈ ಮೂರೂ ಜಿಲ್ಲೆಗಳಿಗೆ ಶಾಶ್ವತವಾಗಿ ನೀರನ್ನು ಕೊಡಬೇಕು ಎನ್ನುವುದೇ ನಮ್ಮೆಲ್ಲರ ಆಗ್ರಹ ಮತ್ತು ಒತ್ತಾಸೆಯ ಬೇಡಿಕೆಯಾಗಿದೆ. ಜನಪ್ರತಿನಿಧಿಗಳಾಗಿ ಇಲ್ಲಿ ಕುಳಿತಿರುವ ಇವತ್ತು ನಾವು ಯಾವುದೇ ಹಳ್ಳಿಗಳಿಗೆ ಹೋದರೂ ಜನರು ನಮ್ಮನ್ನು ಕೇಳುವುದು ಇಷ್ಟೇ, ನೀವು ಏನು ಮಾಡುತ್ತಿದ್ದೀರಿ, ಶಾಶ್ವತ ನೀರಾವರಿ ಯೋಜನೆಯನ್ನು ತೆಗೆದುಕೊಂಡು ಬನ್ನಿ, ಏನಾದರೂ ಚಿಂತೆಯಿಲ್ಲ, ಮನೆಮನೆಗಳಿಂದಲೂ ನಾವು ನಿಮ್ಮ ಜೊತೆ ಬಂದು ಹೋರಾಟ ಮಾಡುತ್ತೇವೆ ಎಂದು ಹೇಳುತ್ತಾರೆ. ತಾವು ನೋಡುತ್ತಿದ್ದೀರಿ, ತಿಂಗಳುಗಳಿಂದ, ವರ್ಷಗಳಿಂದ ಈ ಹೋರಾಟ ನಡೆಯುತ್ತಿದೆ. ಆದರೆ ನಮಗೆ ಪ್ರತಿಫಲ ಸಿಕ್ಕಿಲ್ಲ. ಈ ಘನ ಸರ್ಕಾರಕ್ಕೆ ನಾನು ನಿಮ್ಮ ಮುಖೇನ ಮನವಿ ಮಾಡುವುದು ಇಷ್ಟೇ, ನಮ್ಮ ಬಯಲುಸೀಮೆಯ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆಗಳನ್ನು ಕೊಡಿ. ಈ ಸರ್ಕಾರದವರು ಮೂರು ವರ್ಷಗಳ ಹಿಂದೆ ಎತ್ತಿನಹೊಳೆ ಯೋಜನೆಗೆ ಚಿಕ್ಕಬಳ್ಳಾಪುರದ ಹತ್ತಿರ ಭೂಮಿ ಪೂಜೆ ಮಾಡಿದರು. ಆದರೆ ಇವತ್ತಿಗೂ ಯಾವುದೇ ಪ್ರತಿಫಲ ಕಾಣುತ್ತಿಲ್ಲ. ಅತಿ ವೇಗವಾಗಿ ನಮ್ಮ ಬಯಲುಸೀಮೆಯ ಜಿಲ್ಲೆಗಳಿಗೆ ನೀರನ್ನು ಕೊಡಬೇಕೆಂದು ನಿಮ್ಮ ಮುಖೇನ ಘನ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈ ಕಾರ್ಯಕ್ರಮ ಬಂದರೆ ನಮ್ಮ ಜಿಲ್ಲೆಗಳಲ್ಲಿ ಮುಂದಿನ ಪೀಳಿಗೆಯವರು ನೆಲೆಸುತ್ತಾರೆ, ಅಲ್ಲಿ ದುಡಿಯುತ್ತಾರೆ ಮತ್ತು ಅಲ್ಲಿನ ಜನತೆಗೆ ಕುಡಿಯಲು ನೀರು ಸಿಗುತ್ತದೆ, ಇಲ್ಲವಾದರೆ ಈ ಜಿಲ್ಲೆಗಳು ಮರುಭೂಮಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳುತ್ತಾ ನಾನು ತಮ್ಮ ಮುಖೇನ ಈ ಸರ್ಕಾರಕ್ಕೆ ಒಂದು ಶಾಶ್ವತ ಸಮಗ್ರ ಯೋಜನೆಯನ್ನು ಮಾಡಿ ಕೃಷಿಗೆ ಮತ್ತು ಕುಡಿಯುವ ನೀರನ್ನು ಕೊಡಬೇಕೆಂದು ಈ ಮೂಲಕ ಆಗ್ರಹ ಮಾಡುತ್ತೇನೆ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, 2013ರಲ್ಲಿ ನಾವು ನೂತನವಾಗಿ ಶಾಸಕರಾದಾಗ ನಮಗೆ ಖುಷಿಯಾಯಿತು. ಕಾರಣವೇನೆಂದರೆ, ಸರ್ಕಾರ ರಚನೆಯಾದಂಥ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದಲ್ಲಿ ನಾವು ಪಾರದರ್ಶಕ ಆಡಳಿತವನ್ನು ಕೊಡುತ್ತೇವೆ, ಪರಿಣಾಮಕಾರಿ ಆಡಳಿತವನ್ನು ಕೊಡುತ್ತೇವೆ, ಜನಪರ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದ ಮೂರು ವಾಕ್ಯಗಳನ್ನು ನೋಡಿ ನಮಗೆ ಬಹಳಷ್ಟು ಉತ್ಸಾಹ, ಹುಮ್ಮಸ್ಸು ಬಂತು. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಮನಗಂಡ ಈ ಘನ ಸರ್ಕಾರ ದಿನಾಂಕ 03-03-2014ರಂದು ಒಂದು ನೀರಾವರಿ ಯೋಜನೆಗೆ ಶಂಕುಸ್ಥಾಪನೆಯನ್ನು ಮಾಡಬೇಕೆಂದು ಹೇಳಿ, ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಆವತ್ತು ಶಂಕುಸ್ಥಾಪನೆಗೆ ದಿನಾಂಕವನ್ನು ನಿಗದಿ ಮಾಡಿತು. ಆವತ್ತಿನಿಂದ ಇವತ್ತಿನವರೆಗೂ ಆ ಭಾಗದ ಜನರಿಗೆ ಎಲ್ಲೋ ಒಂದು ಕಡೆ ದುಗುಡ, ದುಮ್ಮಾನ, ಆತಂಕ, ಸಂಶಯಗಳಿದ್ದು ಇವತ್ತಿಗೂ ಜನರು ಇದು ಪೈಪ್ ಲಾಬಿ ಎಂದು ಜನರು ಮಾತನಾಡುತ್ತಿದ್ದು, ಇವತ್ತಿಗೂ ಅದು ಜೀವಂತವಾಗಿದೆ. ಹಾಗೆ ಜೀವಂತವಾಗಿರುವಂಥಾದ್ದಕ್ಕೆ ನಮ್ಮ ಸರ್ಕಾರದಲ್ಲಿರುವಂಥ ಅಧಿಕಾರಿಗಳು ಇನ್ನೊಂದಷ್ಟು ಪುಷ್ಟಿ ಕೊಡುತ್ತಿದ್ದಾರೆ. ಹೇಗೆಂದರೆ, ಮುಖ್ಯಮಂತ್ರಿಗಳು ಬಂದು ಆವತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶಂಕುಸ್ಥಾಪನೆಯನ್ನು ಮಾಡಿದರು. ಶಂಕುಸ್ಥಾಪನೆಯನ್ನು ಅಲ್ಲಿ ಮಾಡಬೇಕಾಗಿತ್ತು, ಇಲ್ಲಿ ಮಾಡಬೇಕಾಗಿತ್ತು ಎನ್ನುವ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಎಲ್ಲಾದರೂ ಮಾಡಲಿ, ನಮ್ಮ ಜಿಲ್ಲೆಗಳಿಗೆ ನೀರು ಬರಬೇಕು ಎನ್ನುವ ಇಚ್ಛಾಶಕ್ತಿಯನ್ನು ಇಟ್ಟುಕೊಂಡು ನಾವೆಲ್ಲರೂ ಆ ಸಭೆಯಲ್ಲಿ ಭಾಗವಹಿಸಿದೆವು. ಶಂಕುಸ್ಥಾಪನೆಯಾದ ನಂತರ ತಮ್ಮ ನೇತೃತ್ವದಲ್ಲಿ ಮತ್ತು ರಮೇಶ್ ಕುಮಾರ್‌ರವರ ನೇತೃತ್ವದಲ್ಲಿ ಅನೇಕ ಸಭೆಗಳನ್ನು ಮಾಡಿದಿರಿ. ಜಲಸಂಪನ್ಮೂಲ ಸಚಿವರಾದಂಥ ಎಂ.ಬಿ. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಸಹ ಅಧಿಕಾರಿಗಳ ಜೊತೆ ಸಭೆಗಳಾಯಿತು. ಮುಖ್ಯಮಂತ್ರಿಗಳು ಅಧಿಕಾರಿಗಳ ಜೊತೆ ಇದ್ದಾಗಲೂ ಸಭೆಯನ್ನು ಮಾಡಲಾಯಿತು. ನಾವು ಗಮನಿಸಬೇಕಾಗಿರುವುದು ಏನೆಂದರೆ, ಇವತ್ತಿಗೂ ಕೂಡ ಈ ಅನುಮಾನ, ಸಂಶಯಗಳು ಜೀವಂತವಾಗಿವೆ ಎಂದರೆ ಅದಕ್ಕೆ ಕಾರಣಗಳೆಂದರೆ, ಅಧಿಕಾರಿಗಳು ಒಂದು ಸಭೆಯಲ್ಲೂ ಕೂಡ ನಿಖರವಾದಂಥ ಮತ್ತು ಸ್ಪಷ್ಟವಾದಂಥ ಮಾಹಿತಿಯನ್ನು ಕೊಟ್ಟಿಲ್ಲ. ಈ ಬಗ್ಗೆ ನಡೆದ ಎಲ್ಲ ಸಭೆಗಳಲ್ಲೂ ನಾನು ಭಾಗವಹಿಸಿದ್ದೇನೆ, ಒಂದೊಂದು ಸಭೆಯಲ್ಲಿ ಹೊಸದಾಗಿ ಒಂದೊಂದು ಜಿಲ್ಲೆಯನ್ನು ಸೇರಿಸುವುದು, ಒಂದೊಂದು ಸಭೆಯಲ್ಲಿ ಒಂದಷ್ಟು ತಾಲ್ಲೂಕುಗಳನ್ನು ಹೊಸದಾಗಿ ಸೇರಿಸುವುದು,

13-06-2017

ಒಂದೊಂದು ಸಭೆಗಳಲ್ಲಿ ಇಷ್ಟು ಟಿ.ಎಂ.ಸಿ. ಹೆಚ್ಚಾಗಿದೆ ಎನ್ನುವುದು, ಈ ರೀತಿ ಹೇಳಿಕೊಂಡು ಸಂಶಯಗಳನ್ನು ಹುಟ್ಟುಹಾಕಿಕೊಂಡು ಬಂದಿದ್ದಾರೆ. ಇವತ್ತಿಗೂ ಕೂಡ ಅವು ಜೀವಂತವಾಗಿದ್ದು, ಆ ಬಗ್ಗೆ ಜನರು ಇವತ್ತಿಗೂ ಮಾತನಾಡುತ್ತಿದ್ದಾರೆ. ನಾನು ಇವತ್ತು ಸರ್ಕಾರವನ್ನು ಕೇಳುವುದೇನೆಂದರೆ, ಯಾವುದೇ ಒಂದು ಯೋಜನೆಯನ್ನು ತಯಾರು ಮಾಡಿದಾಗ, ನಾವು ಆ ಯೋಜನೆಯನ್ನು ಪೂರ್ಣಗೊಳಿಸಬೇಕಾದರೆ ಎಷ್ಟು ಜಮೀನು ಬೇಕಾಗಿದೆ, ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೀರಿ, ಇನ್ನೆಷ್ಟು ಜಮೀನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ, ಎತ್ತಿನಹೊಳೆ ಯೋಜನೆಯಲ್ಲಿ ಎಷ್ಟು ನೀರು ಲಭ್ಯವಾಗುತ್ತದೆ ಎನ್ನುವುದನ್ನು ಹೇಳಬೇಕಾಗಿತ್ತು. ಭಾರತೀಯ ವಿಜ್ಞಾನ ಸಂಸ್ಥೆ ಕೂಡ ಈ ಯೋಜನೆಯಲ್ಲಿ 9.5 ಟಿ.ಎಂ.ಸಿ.ಗಿಂತ ಹೆಚ್ಚಿನ ನೀರು ಬರುವುದಿಲ್ಲ ಎಂದು ಹೇಳಿದೆ. ಇನ್ನೂ ಹಲವಾರು ಜಲತಜ್ಞರು ಸಾಕಷ್ಟು ವರದಿಗಳನ್ನು ಕೊಟ್ಟಿದ್ದಾರೆ. ಆದರೆ ನೀವು ಈ ಯೋಜನೆಯಿಂದ 24 ಟಿ.ಎಂ.ಸಿ. ನೀರನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಇನ್ನೊಂದಷ್ಟು ಗೊಂದಲವೆಂದರೆ, ನಾವು ಡಿಸೆಂಬರ್ ಅಂತ್ಯಕ್ಕೆ ನೀರು ಕೊಡುತ್ತೇವೆ, ಜನವರಿ ಅಂತ್ಯಕ್ಕೆ ನೀರು ಕೊಡುತ್ತೇವೆ ಎನ್ನುವಂಥ ಹೇಳಿಕೆಗಳು ಬರುತ್ತಿವೆ. ಈ ಯೋಜನೆಯ ಒಟ್ಟು ಅಂದಾಜು ಮೊತ್ತ 13,000 ಕೋಟಿ ರೂಪಾಯಿಗಳು.

(ಮುಂದುವರೆದಿದೆ)

13-06-2017 : 5-20 [36] kkd:cp 1

ಶ್ರೀ ಎಂ. ಕೃಷ್ಣಾರೆಡ್ಡಿ(ಮುಂದು)

ಇವತ್ತು ನಮ್ಮಲ್ಲಿ 2200 ಕೋಟಿ ಅಥವಾ 2300 ಕೋಟಿ ರೂಪಾಯಿ ಖರ್ಚಾಗಿರಬಹುದು. ಆದರೆ, ಈಗ 2300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಹಾಗಾದರೆ 13 ಸಾವಿರ ಕೋಟಿ ರೂಪಾಯಿ ಎಲ್ಲಿದೆ? ಜನವರಿ ಅಂತ್ಯಕ್ಕೆ ನಾವು ನೀರು ಕೊಡುತ್ತೇವೆಂದು ಹೇಳಿದ್ದಿರಿ. ಅಂದರೆ, ಚುನಾವಣೆಗಳು ಹತ್ತಿರ ಬಂದಂಥ ಸಂದರ್ಭದಲ್ಲಿ ಈ ರೀತಿಯ ಹೇಳಿಕೆಗಳನ್ನು ಜನರನ್ನು ದಾರಿತಪ್ಪಿಸುವ ರೀತಿಯಲ್ಲಿ, ಜನರಿಗೆ ಮಸಿ ಬಳಿಯುವ ರೀತಿಯಲ್ಲಿ ಆಗಬಾರದು, ಗೊಂದಲ ಮಾಡಬಾರದು. ಮೊನ್ನೆ 6ನೇ ತಾರೀಖಿನ ಉದಯವಾಣಿ ಪತ್ರಿಕೆಯನ್ನು ಓದುತ್ತಿದ್ದೆ. 6ನೇ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ತಾರೀಖಿನ ಉದಯವಾಣಿ ಪತ್ರಿಕೆಯಲ್ಲಿ 'ನಾವು ಜನವರಿ ಅಂತ್ಯಕ್ಕೆ ನೀರು ಎತ್ತುವಂಥ ಕಾರ್ಯವನ್ನು ಮಾಡುತ್ತೇವೆಂದು' ಜಲನಿಗಮದ ವಿಶ್ವೇಶ್ವರ ಎನ್ನುವ ಒಬ್ಬ ಅಧಿಕಾರಿ ಹೇಳಿದ್ದಾರೆ. ಇವತ್ತು ಹೊಸ ಕಾರುಗಳ model ಯಾವ ರೀತಿ ಇರುತ್ತದೆ, ಹೇಗೆ ಇರುತ್ತದೆ ಎನ್ನುವುದನ್ನು showroom ಗಳಲ್ಲಿ ಕಾರುಗಳನ್ನು demo ಮಾಡಿ ತೋರಿಸುತ್ತಾರಲ್ಲ, ಈ ರೀತಿ ಜನವರಿ ಅಂತ್ಯಕ್ಕೆ ಆ ನೀರನ್ನು ತೆಗೆದು ಅಲ್ಲಿ Media, ಮಾಧ್ಯಮಗಳ ಮುಂದೆ ಜನರಿಗೆ ತೋರಿಸುವಂಥದ್ದೇ? ಅಥವಾ ನೀವು ಆ ಜನವರಿ ಅಂತ್ಯಕ್ಕೆ ಎತ್ತುವಂಥ ನೀರು ನಮ್ಮ ಕೋಲಾರ ಚಿಕ್ಕಬಳ್ಳಾಪುರ ಗಡಿಭಾಗಕ್ಕೆ ಬರುವಂಥದ್ದೇ? ಈ ರೀತಿ ಗೊಂದಲ ಏಕೆ ಮಾಡಬೇಕು? ಇವತ್ತು ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಬೇಕು. ನಮ್ಮ ಜಿಲ್ಲೆಗಳಲ್ಲಿ ಇವತ್ತು ಯಾವ ರೀತಿ ನಾವು ಅನುಭವಿಸುತ್ತಿದ್ದೇವೆ, ಬಹುಶ: ಮಾನ್ಯ ಮುಖ್ಯಮಂತ್ರಿಗಳ ಆದಿಯಾಗಿ ಮಂತ್ರಿಮಂಡಲದಲ್ಲಿರತಕ್ಕಂಥ ಎಲ್ಲರೂ ಕೂಡ ರೈತ ಕುಟುಂಬದಿಂದ ಬಂದಿರತಕ್ಕಂಥವರು ಜೊತೆಗೆ ಹೈನುಗಾರಿಕೆಯನ್ನು ಕೂಡ ಅಳವಡಿಸಿಕೊಂಡು ಬಂದಿರತಕ್ಕಂಥವರು. ಆದರೆ, ಇವತ್ತು ಒಂದು ಹಸುವನ್ನು ತೊಳೆಯಬೇಕೆಂದರೆ ಎಷ್ಟು ಲೀಟರ್ ನೀರು ಬೇಕಾಗಿದೆ? ಒಂದು ಎಮ್ಮೆಯನ್ನು ತೊಳೆಯಬೇಕಾದರೆ ಎಷ್ಟು ಲೀಟರ್ ನೀರು ಬೇಕಾಗಿದೆ? ನಮಗೆ ಕುಡಿಯಲಿಕ್ಕೆ ಎಷ್ಟು ನೀರು ಬೇಕಾಗಿದೆ? ನಮ್ಮ ಪರಿಸ್ಥಿತಿ ಏನಾಗಿದೆ? ಬಹುಶ: ಇವತ್ತು ಈ ಸರ್ಕಾರಕ್ಕೆ ಅದರ ಅರಿವಿಲ್ಲ ಎಂದು ಅನಿಸುತ್ತದೆ. ಈಗಿರುವಂಥ ಸರ್ಕಾರಕ್ಕೆ ನಮ್ಮ ಪರಿಸ್ಥಿತಿಯ ಅರಿವು ಇಲ್ಲವೇ ಇಲ್ಲ. ಏಕೆಂದರೆ, ಮಾನ್ಯ ಉಪಾಧ್ಯಕ್ಷರೆ, ತಮಗೂ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಯವರು ಬರ ವೀಕ್ಷಣೆ ಮಾಡಲಿಕ್ಕೆ ಬಂದಾಗ ನಮ್ಮ ಎರಡೂ ಜಿಲ್ಲೆಗಳಲ್ಲಿ ನಾವು ಒಬ್ಬೊಬ್ಬರು 300 borewell, 400 borewell ಗಳನ್ನು ಕೊರೆಸಿದ್ದೇವೆ. ಆದರೆ, ಇವತ್ತಿನವರೆಗೂ ಅದರ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಆ ಹಣವನ್ನು ಬಿಡುಗಡೆ ಮಾಡಿ ಎಂದು ಒತ್ತಾಯ ಮಾಡಿದೆವು. ಆದರೆ, ಬಿಡುಗಡೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಅವರು ಕಳೆದ 2015ರ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಬಂದಿರತಕ್ಕಂಥದ್ದು. ಒಂದು ವರ್ಷ 3 ತಿಂಗಳು ಕಳೆದಿದೆ, ಇವತ್ತಿನವರೆಗೂ ಹಣ ಬಿಡುಗಡೆಯಾಗಿಲ್ಲ. 1 ಲಕ್ಷದ 82 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಅನ್ನು ಈ ಸರ್ಕಾರ ಮಂಡಿಸಿದ್ದು, ಪ್ರತಿ ದಿನ ನೀರು ಕುಡಿಯಬಾರದೆ? ಸ್ನಾನ ಮಾಡಬಾರದೆ,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಒಳ್ಳೆಯ ಬಟ್ಟೆ ಹಾಕಬಾರದೆ? ಅನ್ನ ತಿನ್ನಬಾರದೆ? ನಾವು 3 ಕೆ.ಜಿ. ಅಕ್ಕಿ ಕೊಡುತ್ತೇವೆಂದು ಸರ್ಕಾರ ಹೇಳುತ್ತದೆ. ನೀವು ಕೊಡುವಂಥ 3 ಕೆ.ಜಿ. ಅಕ್ಕಿಯನ್ನು ಬೇಯಿಸುವುದಕ್ಕೂ ನೀರು ಬೇಕು. ಎಳೆಮಕ್ಕಳು 4 ವರ್ಷದ, 5 ವರ್ಷದ ಮಕ್ಕಳಿಗೂ ಕೂಡ ಇವತ್ತು ನೀವು ಕೊಡತಕ್ಕಂಥ ಅಕ್ಕಿ ಸಾಲುವುದಿಲ್ಲ. ಆದರೆ, ನೀವು ಈ ರೀತಿ ಹೇಳಿಕೆಗಳನ್ನು ಕೊಟ್ಟುಕೊಂಡು, ಈ ರೀತಿ ಕ್ರಮಗಳನ್ನು ವಹಿಸಿದರೆ ಯಾವ ರೀತಿ ಈ ಸರ್ಕಾರ ನಡೆಯುತ್ತದೆ? ನಿಜವಾಗಿಯೂ ಕೂಡ ನಮಗೆ ನಾಚಿಕೆಯಾಗುತ್ತದೆ. ಈ ವರ್ಷ 1 ಲಕ್ಷ 82 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದಂಥ ಸರ್ಕಾರ ಇವತ್ತು 15 ದಿನಗಳಿಗೊಮ್ಮೆ, 20 ದಿನಗಳಿಗೊಮ್ಮೆ ನೀರು ಕೊಡುತ್ತಿದೆ. ಒಳ್ಳೊಳ್ಳೆಯ ಬಡಾವಣೆಗಳಲ್ಲಿರತಕ್ಕಂಥವರು ನೀರಿನ ಸಹವಾಸಕ್ಕೇ ಬರುತ್ತಿಲ್ಲ. ಅವರು ನೀರಿನ ಟ್ಯಾಂಕರುಗಳಲ್ಲಿ ಪೂರೈಸಿಕೊಳ್ಳುತ್ತಿದ್ದಾರೆ. ಕನಿಷ್ಠ ಬಡವರು, ದಲಿತರು, ಅಲ್ಪಸಂಖ್ಯಾತರು ವಾಸ ಮಾಡತಕ್ಕಂಥ ಕಡೆ ಒಂದು ವಾರಕ್ಕೊಮ್ಮೆಯಾದರೂ ನೀರು ಕೊಡಿ ಎಂದು ನಾವು ಅಧಿಕಾರಿಗಳಿಗೆ ಹೇಳುತ್ತೇವೆ. ಅಷ್ಟು ಬಾಯಿ ಬಾಯಿ ಬಡಿದುಕೊಂಡರೂ 15 ದಿನ, 20 ದಿವಸವಾದರೂ ನೀರು ಸರಿಯಾಗಿ ಕೊಡುವುದಿಲ್ಲ. ಅಂದರೆ, 15 ದಿನ, 20 ದಿನ ನೀರು ಕೊಡುವುದಿಲ್ಲವೆಂದರೆ ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಎಲ್ಲಿಗೆ ಹೋಗುತ್ತಿದೆ? ನಾವು ಯಾವ ಪುರುಷಾರ್ಥಕ್ಕೆ ಇಲ್ಲಿಗೆ ಬರಬೇಕು? ಯಾವ ಪುರುಷಾರ್ಥಕ್ಕೆ ನಾವು ಮಾಡಬೇಕು? ಏನಾಗುತ್ತಿದೆ ಎನ್ನುವಂಥದ್ದು ನಿಜವಾಗಿಯೂ ನಮಗೆ ಗೊತ್ತಾಗುತ್ತಿಲ್ಲ. ಇನ್ನು, ಭಾಷಣಗಳಲ್ಲಿ ಮಾತನಾಡುತ್ತಾ ಅಖಂಡ ಕರ್ನಾಟಕ ಎಂದು ಹೇಳುತ್ತಾರೆ. ಸಮಗ್ರ ಕರ್ನಾಟಕ ಎಂದು ಹೇಳುತ್ತಾರೆ. ಸಮೃದ್ಧ ಕರ್ನಾಟಕ ಎಂದು ಹೇಳುತ್ತಾರೆ. ಇವತ್ತು ಸರ್ಕಾರಕ್ಕೆ ಅರಿವು ಇರಬೇಕಾಗುತ್ತದೆ. ಯಾವ್ಯಾವ ಭಾಗದಲ್ಲಿ ನೀರಾವರಿ ಯೋಜನೆಗಳಿಲ್ಲ, ಅಂಥ ಭಾಗದಲ್ಲಿ ಎತ್ತಿನಹೊಳೆ ನೀರಾವರಿ ಯೋಜನೆಯಲ್ಲಿ SCP/TSP ಯಲ್ಲಿ check dam ಗಳನ್ನು ಮಾಡುವಂಥದ್ದು ಆಗಬೇಕು. ಅಖಂಡ ಕರ್ನಾಟಕದಲ್ಲಿರತಕ್ಕಂಥ ನಮಗೆ ಇವತ್ತು ತಾರತಮ್ಯ ಮಾಡತಕ್ಕಂಥದ್ದು ಸರಿಯಲ್ಲ. ನಮ್ಮ ತಾಲ್ಲೂಕುಗಳಲ್ಲಿ ವಿರೋಧ ಪಕ್ಷದ ಸದಸ್ಯರುಗಳ ಇರತಕ್ಕಂಥ ಕಡೆ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳನ್ನು ಕೊಡುವಂಥದ್ದು, ಆಡಳಿತ ಪಕ್ಷದ ಸದಸ್ಯರುಗಳು ಇರತಕ್ಕಂಥ ಕಡೆ 10 ಕೋಟಿ 15 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥದ್ದು.

ಉಪಾಧ್ಯಕ್ಷರು: ಕೃಷ್ಣಾ ರೆಡ್ಡಿಯವರೆ, ಯೋಜನೆಗೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ. ಬೇರೆ ವಿಚಾರಗಳು ಈಗ ಬೇಡ.

ಶ್ರೀ ಎಂ. ಕೃಷ್ಣಾ ರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಇದು ಯೋಜನೆಗೆ ಸಂಬಂಧಪಟ್ಟ ವಿಚಾರವೇ ಆಗಿದೆ. 2015ರ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ರೋನೋ ಚಂಡಮಾರುತದಲ್ಲಿ ನಮ್ಮ ತಾಲ್ಲೂಕಿನಲ್ಲಿ ವೃಷಭಾವತಿ ನದಿ ಹಾದು ಹೋಗುತ್ತದೆ. ಅದು ಆಂಧ್ರಪ್ರದೇಶದ ಕಂದಕೂರು ಕೆರೆಗೆ ಹೋಗುತ್ತದೆ. ಬಹುಶ: ಆ ಕೆರೆ, ಆ ಒಂದು ಕಾಲುವೆಯಲ್ಲಿ ಹರಿದುಹೋಗಿರುವಂಥ ನೀರನ್ನು ನಾವು ಗಮನಿಸಿದರೆ, ಬಹುಶ: ಒಳ್ಳೆಯ check dam ಗಳು ಇದ್ದಿದ್ದರೆ ಬಹುಶ: ಆ ಒಂದು ಹೋಬಳಿಯಲ್ಲಿರತಕ್ಕಂಥ ಎಲ್ಲಾ ಕೆರೆಗಳನ್ನು ತುಂಬಿಸಬಹುದಾಗಿತ್ತು. ಆದರೆ, ಅಂಥ check dam ಗಳನ್ನು ನಿರ್ಮಾಣ ಮಾಡುವುದಕ್ಕೆ ಹಣ ಕೊಡದೆ ತಾರತಮ್ಯ ಮಾಡುತ್ತಿದ್ದಾರೆ. ಆಡಳಿತ ಪಕ್ಷದಲ್ಲಿರತಕ್ಕಂಥವರಿಗೆ 10 ಕೋಟಿ ರೂಪಾಯಿಗಳನ್ನು ನೀವು ಕೊಡಿ, ನಮ್ಮದೇನೂ ತಕರಾರು ಇಲ್ಲ. ಆದರೆ, ಅಂಥ ಚಂಡಮಾರುತ ಬಂದಂಥ ಸಂದರ್ಭದಲ್ಲಿ ಹೋಗಿರತಕ್ಕಂಥ ನೀರನ್ನು ತಡೆಗಟ್ಟುವಂಥದ್ದಕ್ಕೆ check dam ಗಳನ್ನು ಕೊಡುವಂಥದ್ದು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ಆಯಿತು, ಮುಕ್ತಾಯ ಮಾಡಿ.

ಶ್ರೀ ಎಂ. ಕೃಷ್ಣಾ ರೆಡ್ಡಿ: ಆದರೆ, ಇವತ್ತು ಆ ಕೆಲಸ ಆಗುತ್ತಿಲ್ಲ. ಇವತ್ತು ಸಮಗ್ರ ಕರ್ನಾಟಕ ಎಂದು ಹೇಳುತ್ತಾರೆ. ಸಮೃದ್ಧ ಕರ್ನಾಟಕ ಎಂದು ಹೇಳುತ್ತಾರೆ. ಆದರೆ, ಆ ವೃಷಭಾವತಿ ನದಿಗೆ ಸಂಬಂಧಪಟ್ಟ ಹಾಗೆ ಎರಡು ಸೇತುವೆಗಳು 2015ರ ನವೆಂಬರ್ ಡಿಸೆಂಬರ್‌ನಲ್ಲಿ ರೋನೋ ಚಂಡಮಾರುತದಲ್ಲಿ ಕಿತ್ತುಹೋಗಿರುವಂಥದ್ದು. ಆದರೆ, ಇವತ್ತಿನವರೆಗೂ ಕೂಡ ಜಿಲ್ಲಾಪಂಚಾಯತ್‌ರವರಿಗೆ ಹೇಳಿದ್ದೇವೆ, PWD ಯವರಿಗೆ ಹೇಳಿದ್ದೇವೆ, ಸಣ್ಣ ನೀರಾವರಿ ಇಲಾಖೆಯವರಿಗೆ ಹೇಳಿದ್ದೇವೆ, ಮುಖ್ಯ ಮಂತ್ರಿಯವರಿಗೆ ಪತ್ರ ಕೊಟ್ಟಿದ್ದೇವೆ, ಯಾರೂ ಕೂಡ ಅದರ ಬಗ್ಗೆ ಗಮನಹರಿಸಿಲ್ಲ. ನಾವೇನಾದರೂ ದಾರಿ ತಪ್ಪಿ ಈ ಸದನಕ್ಕೆ ಬಂದು ಕೇಳುತ್ತಿದ್ದೇವೆಯೇ? ನಾವು ಕೇರಳ ವಿಧಾನಸಭೆಯಲ್ಲಿ ಕೇಳಬೇಕಾಗಿತ್ತೇ? ತಮಿಳುನಾಡು ವಿಧಾನಸಭೆಯಲ್ಲಿ ಕೇಳಬೇಕಾಗಿತ್ತೇ? ತೆಲಂಗಾಣ ವಿಧಾನಸಭೆಯಲ್ಲಿ ಕೇಳಬೇಕಾಗಿತ್ತೆ? ಇದು ಯಾರಿಗೆ ಸಂಬಂಧಪಟ್ಟಿರುವಂಥದ್ದು? ಆ ಸೇತುವೆಗಳು ಕರ್ನಾಟಕ ಸರ್ಕಾರಕ್ಕೆ ಸಂಬಂಧಪಟ್ಟಿದ್ದು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಲ್ಲವೇ? ಈ ಸರ್ಕಾರಕ್ಕೆ ಏನಾಗುತ್ತಿದೆ? ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುವಂಥದ್ದು ಏನೆಂದರೆ, ನಮ್ಮ ತಾಲ್ಲೂಕುಗಳಲ್ಲಾಗಲಿ, ನಮ್ಮ ಜಿಲ್ಲೆಗಳಲ್ಲಾಗಲಿ, ನೀರು ಕೊಡುವುದಕ್ಕೆ 15 ದಿವಸಗಳು, 20 ದಿವಸಗಳಾಗುತ್ತವೆ. ಖಾಸಗಿ ಬಡಾವಣೆಗಳಲ್ಲಿರತಕ್ಕಂಥವರು ಟ್ಯಾಂಕರುಗಳಲ್ಲಿ ನೀರು ತರಿಸಿಕೊಳ್ಳುತ್ತೇವೆಂದು ಅವರು ನೀರಿನ ಸಹವಾಸಕ್ಕೇ ಬರುತ್ತಿಲ್ಲ. ಇಂಥ ಪರಿಸ್ಥಿತಿ ಇದೆ. ಇದರಿಂದ ನಮಗೆಲ್ಲ ನಾಚಿಕೆಯಾಗುತ್ತಿದೆ. ನಾವು ಈ ಸರ್ಕಾರದಲ್ಲಿ, ಈ ಸದನದಲ್ಲಿದ್ದುಕೊಂಡು, 1 ಲಕ್ಷದ 82 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇರತಕ್ಕಂಥ ಸರ್ಕಾರದಲ್ಲಿ ಪ್ರತಿ ದಿನ 10 ಲೀಟರ್, 15 ಲೀಟರ್ ಕುಡಿಯುವುದಕ್ಕೆ ನೀರು ಕೊಡುವುದಿಲ್ಲವೆಂದರೆ, ಬಹುಶ: ಬರೀ ಭಾಷಣಕ್ಕೇ ಸೀಮಿತ ಆಗಬಾರದು. ಮೊನ್ನೆ ಮಾನ್ಯ ಕಾರಜೋಳ ಸಾಹೇಬರು ಹೇಳುತ್ತಿದ್ದರು, ಮಾನ್ಯ ಹೆಚ್.ಕೆ. ಪಾಟೀಲರು ಬಹಳ high-tech toilets ಕೊಡುತ್ತೇವೆ, hair dry ಕೊಡುತ್ತೇವೆ, shampoo ಕೊಡುತ್ತೇವೆಂದು. ಅವು ಯಾವುದೂ ಬೇಡ, ಕುಡಿಯುವುದಕ್ಕೆ 10 ಲೀಟರ್ ನೀರು ಕೊಟ್ಟರೆ ಸಾಕು. ಪ್ರತಿ ದಿನ ಒಬ್ಬೊಬ್ಬರಿಗೆ 10 ರಿಂದ 15 ಲೀಟರ್ ನೀರು ಕೊಟ್ಟರೆ ಸಾಕು. ಆ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮಲ್ಲಿ Nitrate, fluoride ಅಂಶ ಹೆಚ್ಚಾಗಿ ಬಹುಶ: ಇವತ್ತು ಸರ್ಕಾರವನ್ನು ನೋಡುತ್ತಿದ್ದರೆ ಅವರೆಲ್ಲಿ ಸಾಯಲಿ ಎನ್ನುವಂಥ ರೀತಿಯಲ್ಲಿ ಇಂಥ ಧೋರಣೆಯನ್ನು ಇಂಥ ನಿಲುವನ್ನು ತಾಳಿದರೆ ಬಹುಶ: ಮುಂದಿನ ದಿನಗಳಲ್ಲಿ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

ಉಪಾಧ್ಯಕ್ಷರು: ಸಾಕು, conclude ಮಾಡಿ.

ಶ್ರೀ ಎಂ. ಕೃಷ್ಣಾ ರೆಡ್ಡಿ: ಇವತ್ತು ಕರ್ನಾಟಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಇಂಥ ಗೊಂದಲದ ಹೇಳಿಕೆಗಳನ್ನು ಕೊಡುವಂಥದ್ದನ್ನು ಬಿಡಬೇಕು. ನೀವು ಸ್ಪಷ್ಟವಾಗಿ ಹೇಳಬೇಕು, ಎತ್ತಿನಹೊಳೆ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ? ಯಾವ ದಿನಾಂಕದಂದು ಪೂರ್ಣಗೊಳಿಸಲಾಗುತ್ತದೆ ಎನ್ನುವುದನ್ನು ಹೇಳಬೇಕು. ಏಕೆಂದರೆ, ಯಾವುದೇ ಒಂದು ಯೋಜನೆ ಮಾಡಬೇಕಾದರೆ ಕಾಲಮಿತಿ ಇರುತ್ತದೆ. ಆದರೆ, ಇದಕ್ಕೆ ಕಾಲಮಿತಿಯೂ ಇಲ್ಲ, ಯಾವುದೂ ಇಲ್ಲ. ಈ ರೀತಿಯ ಗೊಂದಲದ ಹೇಳಿಕೆಗಳನ್ನು ಅಧಿಕಾರಿಗಳು ಜನವರಿ ಅಂತ್ಯಕ್ಕೆ ಕೊಡುತ್ತೇವೆಂದು ಹೇಳಿದರೆ ಯಾವ ರೀತಿ ಕೊಡುತ್ತೀರಿ? ಯಾವ ರೀತಿ ನೀರನ್ನು ಮೇಲೆತ್ತಿ demo ರೀತಿಯಲ್ಲಿ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಂದರೆ ಆ ನೀರನ್ನು ಎತ್ತಿ ಮೇಲೆ ಬಿಟ್ಟು ತೋರಿಸುವಂಥದ್ದೇ? ಅಥವಾ ಅಲ್ಲಿಂದ ನೀರು ಹರಿದು ಬರುತ್ತದೆಯೇ? ಈ ರೀತಿ ಗೊಂದಲದ ಹೇಳಿಕೆಗಳು ಆಗಬಾರದು. ನಾನು ಕರ್ನಾಟಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಆದಷ್ಟು ಶೀಘ್ರ ಈ ಯೋಜನೆಗಳನ್ನು ಜಾರಿಗೆ ತರಬೇಕು. ನಮ್ಮ ಜಿಲ್ಲೆಗಳಿಗೆ ನೀರು ಹರಿದು ಬರಬೇಕೆನ್ನುವ ಒತ್ತಾಯವನ್ನು ಮಾಡುತ್ತಾ, ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಶ್ರೀ ಎಸ್.ಎನ್. ಸುಬ್ಬಾರೆಡ್ಡಿ: (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಶ್ರೀಯುತರುಗಳಾದ ಕೃಷ್ಣಾ ರೆಡ್ಡಿಯವರು, ರಾಜಣ್ಣನವರು ಎಲ್ಲಾ ವಿಷಯಗಳನ್ನು ತಿಳಿಸಿದ್ದಾರೆ.

ಉಪಾಧ್ಯಕ್ಷರು: ಅವರು ತಿಳಿಸಿದ ವಿಷಯ ಬಿಟ್ಟು ಬೇರೆ ಏನಾದರೂ ಇದ್ದರೆ ಹೇಳಿ.

ಶ್ರೀ ಎಸ್.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ತಾವು ನಮ್ಮ ಜಿಲ್ಲೆಯವರಾಗಿರುವುದರಿಂದ ನಾನು ಹೆಚ್ಚಿಗೆ ವಿಷಯ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮಗೆ ಶಾಶ್ವತವಾದ ನೀರಾವರಿ ಬೇಕೆನ್ನುವುದು ನಮ್ಮ demand ಆಗಿದೆ. ಆದರೆ, ಈಗ ಮಾಡುತ್ತಿರುವಂಥದ್ದು ತಾತ್ಕಾಲಿಕವಾಗಿರುವಂಥದ್ದು. ನಮ್ಮ K.C.Valley ಇರಬಹುದು, ಎತ್ತಿನ ಹೊಳೆ ಇರಬಹುದು, ಇವೆಲ್ಲ permanent ಯೋಜನೆಗಳಲ್ಲ, temporary ಇದ್ದ ಹಾಗೆ. Permanent ಇರುವಂಥ ನೀರಿನ source ಕೊಡಿ ಎಂದು ನಾವು ಕೇಳುತ್ತಿರುವಂಥದ್ದು. ನಮಗೆ ನೀರು ಕೊಡಿ ಎಂದು ಇದು ಆ ಭಾಗದಿಂದ 1962 ರಿಂದಲೂ demand ಇದೆ. ಇದವರೆಗೂ ಕೂಡ ಕುಡಿಯಲಿಕ್ಕೂ ನಮ್ಮ ಕೈಯಿಂದ ನೀರು ಕೊಡಲಿಕ್ಕೆ ಆಗಲಿಲ್ಲವೆಂದರೆ ನಿಜವಾಗಿಯೂ ನಾವು ಜನಪ್ರತಿನಿಧಿಗಳಾಗಿ, ಈಗ ನಮಗೇ ಅಲ್ಲಿಗೆ ಹೋಗುವುದಕ್ಕೆ ನಾಚಿಕೆಯಾಗುತ್ತದೆ. ನಾವು ಇವತ್ತು ಕೇಳುತ್ತಿರುವುದೇನೆಂದರೆ, ಸಮುದ್ರಕ್ಕೆ ಸುಮಾರು 3000 TMC ನೀರು ಹರಿದುಹೋಗುತ್ತಿದೆ. ಅದರಲ್ಲಿ 10% ನೀರು ಕೊಟ್ಟರೂ ಸಾಕು, ನಮ್ಮ ಎಲ್ಲಾ ಬಯಲುಸೀಮೆಗೂ ಆಗುತ್ತದೆ. ಕೆಲ ಪರಿಸರವಾದಿಗಳು ಇಲ್ಲಿ ಅರಣ್ಯ ನಾಶವಾಗುತ್ತದಂದು ಹೇಳುತ್ತಾರೆ. ನೀವು ನೀರು ಕೊಡಿ. ನಿಮ್ಮ ಕಡೆಗಿಂತ 100 ಪಟ್ಟಿನಷ್ಟು ಅರಣ್ಯ ಬೆಳೆಸಿಕೊಡುವುದು ನಮ್ಮ ಜವಾಬ್ದಾರಿ. ಏಕೆಂದರೆ, ಅಲ್ಲೆಲ್ಲ ನೇತ್ರಾವತಿ ತಿರುವು ಯೋಜನೆ ಮಾಡಿದರೆ ಅರಣ್ಯ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾಶವಾಗುತ್ತದೆ ಎಂದು ಕೆಲವರ objections ಇವೆ. ಖಂಡಿತವಾಗಿಯೂ ಅವು ಯಾವುದೂ ಆಗುವುದಿಲ್ಲ. ನಮಗಂತೂ atleast ಏನು ಸಮುದ್ರಕ್ಕೆ ವ್ಯರ್ಥವಾಗಿ ಹರಿಯುತ್ತಿದೆ, ಅದರಲ್ಲಿ 10% ನೀರು ಕೊಟ್ಟರೆ ಸಾಕು, ನಮ್ಮ ಭಾಗ ನಿಜವಾಗಿಯೂ ಬಹಳ ಚೆನ್ನಾಗಿರುತ್ತದೆಂದು ತಮಗೆ ಹೇಳುವುದಕ್ಕೆ ಬಯುಸತ್ತೇನೆ. ಆ ಹರಿಯುವ ನೀರಿನಲ್ಲಿ 10% ನೀರು ಕೊಟ್ಟರೆ 26 ಲಕ್ಷ ಎಕರೆ ಭೂಮಿಯಲ್ಲಿ ಬೆಳೆ ಬೆಳೆಯಬಹುದು, 8300 ಕೆರೆಗಳಿಗೆ ನೀರು ತುಂಬಿಸಬಹುದು. ತಾವು ಇನ್ನೆ ಬಂದು ನೋಡಿದ್ದೀರಿ. ಎಲ್ಲೂ ಬಂದ್ success ಆಗಲಿಲ್ಲ. ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಮಾತ್ರ success ಆಗಿದೆ. ಏಕೆಂದರೆ, ಕುಡಿಯುವ ನೀರಿಗೆ ಅಷ್ಟು ಅಲ್ಲಿ ಕಷ್ಟವಿದೆ. ಮಾನ್ಯ ಉಪಾಧ್ಯಕ್ಷರೆ, ತಮಗೊಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ನಾವು ಕುಡಿಯುತ್ತಿರುವುದು ವಿಷಯುಕ್ತ ನೀರು. ಈ ನಮಗೆ ಕೊಡುತ್ತಿರುವುದು ವಿಷದ ನೀರು. ನೀವು ನೋಡಿದ್ದೀರಿ. ಚಿಕ್ಕಬಳ್ಳಾಪುರ ಮತ್ತು ಕೋಲಾರದ ಜನರನ್ನು easy ಆಗಿ ಗುರುತು ಹಿಡಿಯಬಹುದು. ಯಾರ ಹಲ್ಲಿನಲ್ಲಿ ಹಳದಿ ಇರುತ್ತದೋ ಪಾಚಿ ಕಟ್ಟಿದ ಹಾಗೆ ಇದ್ದರೆ ಅವನು ಚಿಕ್ಕಬಳ್ಳಾಪುರದವನು ಎಂದು ಗುರುತು ಹಿಡಿಯಬಹುದು. ಅಷ್ಟು ಕೆಟ್ಟ ನೀರನ್ನು ಇವತ್ತು ನಾವು ಆ ಜನರಿಗೆ ಕುಡಿಸುತ್ತಿದ್ದೇವೆ. ನಾವು RO plant ಗಳನ್ನು ಕೇಳುತ್ತಿದ್ದೇವೆ. ಆದರೆ, ನೀವು ಚೆನ್ನಾಗಿರುವ ಜಾಗಕ್ಕೆ RO plant ಗಳನ್ನು ಕೊಡುತ್ತೀರಿ, ನಮ್ಮ ಈ ಭಾಗಕ್ಕೆ ಹೆಚ್ಚಿನ RO plantಗಳನ್ನು ಕೊಡುತ್ತಿಲ್ಲ. ದಯವಿಟ್ಟು, ಅದರ ಕಡೆ ಗಮನ ಹರಿಸಬೇಕು. ಇನ್ನು ಮಾನ್ಯ ಜಲಸಂಪನ್ಮೂಲ ಸಚಿವರಿಗೆ ನನ್ನ ಮನವಿ ಏನೆಂದರೆ, ಎತ್ತಿನ ಹೊಳೆ project ನಲ್ಲಿ SCP/TSP ಗೆ ಕೊಡುತ್ತೀರಿ. Cement roads ಕೊಡುತ್ತಿದ್ದೀರಿ. SCP/TSP ಕೊಡುವಾಗ ಕೆರೆಯಲ್ಲಿ ಹೂಳು ಎತ್ತುವುದು, check dam ನಿರ್ಮಾಣ ಮಾಡುವುದು, ಕಾಲುವೆಗಳನ್ನು ತೆಗೆಯುವುದು ಇಂಥದ್ದಕ್ಕೆ ಕೊಡಿ. CC ರಸ್ತೆಗಳನ್ನು ಎಲ್ಲಾ ಯೋಜನೆಗಳಲ್ಲಿ ಕೊಡುತ್ತಿದ್ದಾರೆ. ದಯವಿಟ್ಟು ಎತ್ತಿನ ಹೊಳೆ ಯೋಜನೆಗೆ ಸಂಬಂಧಿಸಿದಂತೆ ಏನೇ ಬರಲಿ ಈ ಕೆರೆಗಳ ಹೂಳು ಎತ್ತುವುದು ಆಗಬೇಕು.

(ಮುಂದು)

ಶ್ರೀ ಎಸ್.ಎನ್. ಸುಬ್ಬಾರೆಡ್ಡಿ (ಮುಂದು)

ನಾವು 3 ವರ್ಷಗಳ ಹಿಂದೆ ಪೂಜೆ ಮಾಡಿದೆವು. ಎರಡೂವರೆ ವರ್ಷಗಳಲ್ಲಿಯೇ ನಮಗೆ ನೀರು ಕೊಡುತ್ತೇವೆಂದು ಹೇಳಿದಿರಿ. ನಮ್ಮ ಭಾಗದಲ್ಲಿ ಎತ್ತಿನಹೊಳೆಗೆ ಸಂಬಂಧಿಸಿದ ಒಂದು ಕಾರ್ಯವೂ ನಡೆಯುತ್ತಿಲ್ಲ. ಇದುವರೆಗೂ ಭೂಮಿ acquisition ಆಗಿಲ್ಲ. ಆ ಕೆರೆಗಳ ಹೂಳು ತೆಗೆಯುವುದು ಯಾವಾಗ? ಆ ಕಾಲುವೆಗಳ ನಿರ್ಮಾಣ ಮಾಡುವುದು ಯಾವಾಗ? ನಾವು ನೀರು ಬಿಡುವುದು ಯಾವಾಗ? ಏಕೆಂದರೆ ನಮಗಂತೂ ಅಲ್ಲಿ ಆ ಜನರನ್ನು ಸಂಭಾಳಿಸುವುದು ಕಷ್ಟವಾಗುತ್ತದೆ. ಮಾನ್ಯ ಸಚಿವರಲ್ಲಿ ನಾವು ಮನವಿ ಮಾಡುತ್ತೇವೆ. 3 ತಿಂಗಳಿಗೊಮ್ಮೆಯಾದರೂ ಒಂದು ಸಭೆ ಕರೆಯಿರಿ. ಎತ್ತಿನ ಹೊಳೆ ಯೋಜನೆಯಲ್ಲಿ ಏನಾಗುತ್ತಿದೆ? ಅಲ್ಲಿ ಏನು ಕೆಲಸ ನಡೆಯುತ್ತಿದೆ? ಎಂದು ತಿಳಿಸಿದರೆ, ನಾವೂ ಕೂಡ ನಮ್ಮ ಜನರಿಗೆ ಉತ್ತರ ಕೊಡಬಹುದು. ನೀವು ಒಂದು ವರ್ಷಕ್ಕೆ ಒಂದು ಸಲ ಮೀಟಿಂಗ್ ಕರೆದ ಬಳಿಕ ಆಮೇಲೆ ಮೀಟಿಂಗ್ ಅನ್ನೇ ಕರೆಯುವುದಿಲ್ಲ. ನನ್ನದು ಒಂದು demand ಏನೆಂದರೆ, ಈ ನಾಗವಾರ ಮತ್ತು ಹೆಬ್ಬಾಳದಿಂದ ನೀರು ಕೊಡುತ್ತಿದ್ದಾರೆ. ಕೊನೆಗೆ ನಾವು ಯಾವ ಹಂತಕ್ಕೆ ಬಂದಿದ್ದೇವೆಂದರೆ, ಬೆಂಗಳೂರಿನಲ್ಲಿರುವ ಮಲಮೂತ್ರ ನೀರನ್ನು ಕೊಡಿ ನಾವು ಉಪಯೋಗಿಸಿಕೊಳ್ಳುತ್ತೇವೆಂದರೂ, ಅದನ್ನೂ ಈ ಸರ್ಕಾರದಿಂದ ಕೊಡುವುದಕ್ಕಾಗುವುದಿಲ್ಲವೆಂದರೆ ನಿಜವಾಗಿಯೂ ನಮಗೆ ಬಹಳ ಬೇಸರವಾಗುತ್ತದೆ. ಚಿಕ್ಕಬಳ್ಳಾಪುರಕ್ಕೆ ನೀವು ಯಾವ ನೀರನ್ನು ಕೊಡುತ್ತಿದ್ದೀರೆಂದರೆ, ಬೆಂಗಳೂರಿನ ಮಲಮೂತ್ರ ನೀರನ್ನು ಕೊಡುವುದು. ಅದಕ್ಕೂ ಕೂಡ ಬಾಗೇಪಲ್ಲಿಯ ಒಂದೂ ಕೆರೆಯನ್ನೂ ಸಹ ತೆಗೆದುಕೊಳ್ಳಲಿಲ್ಲವೆಂದರೆ ಏಕೆ? ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕೆರೆಗಳನ್ನು ತೆಗೆದುಕೊಳ್ಳುತ್ತೀರಿ. Except ಬಾಗೇಪಲ್ಲಿಯ ಕೆರೆಗಳನ್ನು ಬಿಟ್ಟು ನೀವು ಮಾಡಿದ್ದೀರಿ. ನನ್ನ ಬೇಡಿಕೆ ಏನೆಂದರೆ, ನಾಗಾವರ, ಹೆಬ್ಬಾಳದ ಕೆರೆ ಪೂಜೆ ಆಗುವ ದಿವಸ ಬಾಗೇಪಲ್ಲಿಯ ಕೆರೆಗಳನ್ನೂ ಸೇರಿಸಬೇಕು. ಬಾಗೇಪಲ್ಲಿಯನ್ನು ಸೇರಿಸದಿದ್ದರೆ ನಾವು ಇಲ್ಲಿ ಬಂದು ಯಾವ ಪುರುಷಾರ್ಥಕ್ಕೆ ಇಲ್ಲಿರಬೇಕು? ನಮ್ಮ ರಾಜೀನಾಮೆಯನ್ನು ಆವತ್ತೇ ಕೊಡುವುದಕ್ಕೆ ನಾನು ನಿರ್ಧಾರ ಮಾಡಿದ್ದೇನೆ. ಈಗ ಒಳ್ಳೆಯ, ಶುದ್ಧವಾದ ನೀರನ್ನು ಕೊಡುವುದಕ್ಕೆ ನಮಗೆ ಯೋಗ್ಯತೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಲ್ಲ. ಕೊನೆಯ ಪಕ್ಷ ಮಲಮೂತ್ರ ನೀರನ್ನಾದರೂ RO plant ಮಾಡಿಕೊಂಡು ಕುಡಿಯುತ್ತೇವೆಂದರೆ, ಅದನ್ನೂ ಕೊಡಿಸುವುದಕ್ಕೆ ನನಗೆ ಯೋಗ್ಯತೆ ಇಲ್ಲವೆಂದರೆ ನಾನು ಏಕೆ ಈ ಸದನಕ್ಕೆ ಬರಬೇಕು? ದಯವಿಟ್ಟು ಇದನ್ನು ಮಾನ್ಯ ಸಚಿವರು, ಮಾನ್ಯ ಮುಖ್ಯಮಂತ್ರಿಯವರು ಗಮನಿಸಿ ನನ್ನ ಈ ಕಷ್ಟವನ್ನು ನಿವಾರಿಸಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು: ಮಂಜುನಾಥ ಗೌಡ ಮಾತನಾಡಿ. ಎರಡೆರಡು ನಿಮಿಷ ಮಾತ್ರ ಮಾತನಾಡಬೇಕು. ಈಗ ಸಮಯದ ಅಭಾವ ಇದೆ.

ಶ್ರೀ ಕೆ. ಎಸ್. ಮಂಜುನಾಥ ಗೌಡ (ಮಾಲೂರು): ಮಾನ್ಯ ಉಪಾಧ್ಯಕ್ಷರೆ, ಎಲ್ಲರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಬಿಟ್ಟು ನಾನು ಹೇಳುತ್ತೇನೆ. ಹೊಸದಾಗಿ ಶಾಸಕನಾಗಿ ಈ ಸದನಕ್ಕೆ ಬಂದೆ. ನಾವೆಲ್ಲ ಒಳ್ಳೆಯ ಆಸೆ ಇಟ್ಟುಕೊಂಡು ನಮ್ಮ ಜಿಲ್ಲೆಗೆ ನೀರು ತಂದೇ ತರುತ್ತೇವೆಂದು ನಮ್ಮ ಊರಿನವರಿಗೆ ಹೇಳಿ ಬಂದಿದ್ದೇವೆ. ಯಾವತ್ತು ನಮ್ಮ ಜಿಲ್ಲೆಗೆ ನೀರು ಕೊಡುತ್ತೀರಿ ಎನ್ನುವುದನ್ನು ಸರ್ಕಾರ ಹೇಳಬೇಕು. ನಮ್ಮ ಮಾನ್ಯ ಸದಾನಂದಗೌಡರು DPR ಗೆ ಹಣ ಕೊಟ್ಟೆವು ಎಂದು ಹೇಳಿದರು. ನೀವು pipeline ಮಾಡುವುದಕ್ಕೆ ಹಣ ಕೊಟ್ಟಿದ್ದೀರಿ. ನೀರು ಕೊಡುವುದು ಯಾವಾಗ? ನಿಮ್ಮ ಸರ್ಕಾರದ ಅವಧಿ ಇನ್ನು 10 ತಿಂಗಳಿಗೆ ಮುಗಿದುಹೋಗುತ್ತದೆ. ನಿಮ್ಮ ಈ ಅವಧಿಯಲ್ಲಿ ನೀರು ಕೊಡುವುದಕ್ಕಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವಂಥದ್ದೇ. ಅವರೇ ಪುನ: ಬಂದರೆ ಖುಷಿ. ಅಖಂಡ ಕರ್ನಾಟಕ ಎಂದು ನಮ್ಮ ಕೃಷ್ಣಾ ರೆಡ್ಡಿಯವರು ಹೇಳುತ್ತಿದ್ದರು, ಮಧ್ಯ ಕರ್ನಾಟಕ, ಹೈದರಾಬಾದ್ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದೆಲ್ಲ ಇದೆ. ನೀರಿನ ವಿಷಯಕ್ಕೆ ಬಂದಾಗ ನಮ್ಮ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆ ಬಿಟ್ಟು ಹೋದ ಕರ್ನಾಟಕ. 60 ವರ್ಷಗಳಿಂದ ಇವರಿಗೆ ಕುಡಿಯುವ ನೀರು ಕೊಡಬೇಕೆಂದು ಯಾರ ಮನಸ್ಸಿಗೂ ಬರಲೇ ಇಲ್ಲ. ಕುಡಿಯುವುದು ಏನನ್ನು? ಈಗ ಕುಡಿಯುತ್ತಿರುವ ನೀರು ವಿಷಯುಕ್ತವಾಗಿದೆ. ಆ ವಿಷದ ನೀರನ್ನು ಎಷ್ಟು ದಿವಸ ಕುಡಿಯಬೇಕು? ಇನ್ನು ಎಷ್ಟು ದಿವಸ ಕೇಳಬೇಕು? ಕೇಳಿ ಕೇಳಿ ಸಾಕಾಯಿತು. ಲಾಬಿಯಲ್ಲಿ ಇವತ್ತು ನಾವೆಲ್ಲ ಕೆಲಸ ಮುಗಿಸಿಬಿಟ್ಟಿದ್ದೇವೆ, ನೀವೆಲ್ಲ ನಮಗೆ congratulations ಹೇಳಬೇಕೆಂದು Minister ಸಾಹೇಬರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೇಳುತ್ತಿದ್ದರು. ನಾವು ಹೇಳುವುದಿಲ್ಲ ಸರ್. Contractors ಬಂದು ನಿಮಗೆ ಹೇಳುತ್ತಾರಷ್ಟೆ. ಅವರ ಕೆಲಸ ಅವರು ಮಾಡಿಕೊಂಡಿದ್ದಾರೆ. ನಮಗೆ ಯಾವತ್ತೂ ಇನ್ನೂ question ಅಷ್ಟೆ. Most exploited zone ಎಂದು ನೀವೇ declare ಮಾಡುತ್ತೀರಿ. Bore ಕೊರೆಸಬಾರದೆಂದು ಹೇಳುತ್ತೀರಿ. ನೀರನ್ನು ಹೇಗೆ ಕುಡಿಯುವುದು? ಕುಡಿಯುವ ನೀರನ್ನು ಎಲ್ಲಿಂದ ತರುವುದು? ತೀರಾ ಉದಾಸೀನ ಮಾಡುತ್ತಿದ್ದಾರೆ. ನಮ್ಮನ್ನು ಯಾರೂ ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ಸರ್, ನಮ್ಮನ್ನು ಗಮನಿಸಿಕೊಳ್ಳಿ. ಇಡೀ ಅಂಥ ಬಿಜೆಪಿ ಅಲೆಯಲ್ಲಿ, ಮೋದಿ ಅಲೆಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, Bangalore Rural ಈ ನಾಲ್ಕು ಕ್ಷೇತ್ರಗಳಲ್ಲಿಯೂ ಜನರು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುತ್ತಾರೆ. ಏತಕ್ಕೆ? Ruling party, ನಮಗೆ ಕುಡಿಯುವ ನೀರು ಕೊಡುತ್ತಾರೆನ್ನುವ ಒಂದೇ ಕಾರಣಕ್ಕೆ ಅದನ್ನೆಲ್ಲ ಧಿಕ್ಕರಿಸಿ ನಿಮಗೆ vote ಕೊಡುತ್ತಾರೆ. ಆದರೆ, ನೀವು ಮಾಡಿದ್ದೇನು? ಸುಮ್ಮನೆ ಮೀಟಿಂಗ್‌ಗಳನ್ನು ಮಾಡುವುದು, 30 ಕಿ.ಮೀ. pipe line ಹಾಕಿದರೆ ನಮಗೆ ಕುಡಿಯುವ ನೀರು ಬರುತ್ತದೆಯೇ? ಸುಮ್ಮನೆ ಅಲ್ಲೆಲ್ಲೊ ನಾವೆಲ್ಲ ದೊಂಬರಾಟ ತೋರಿಸುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ತಾವೂ ಕೂಡ ನಿಮ್ಮ ತಾಲ್ಲೂಕಿಗೆ ಹೋಗಿ ನೀವು ಏನು ಹೇಳುತ್ತೀರಿ? ನಿಮ್ಮದೇ ಸರ್ಕಾರ 5 ವರ್ಷ ಇತ್ತು, ನೀರು ಕೊಡಲಿಲ್ಲವೆಂದು ನಿಮ್ಮನ್ನೇ ಜನರು ಕೇಳುತ್ತಾರೆ. ಆಗ ನೀವೇನು ಮಾಡುತ್ತೀರಿ? ನಾವು ವಿರೋಧ ಪಕ್ಷದವರು, ಬಿಡಿ. ಈ ನಮ್ಮ ಸರ್ಕಾರ ಕೊಡಲಿಲ್ಲವೆಂದು ನಾವು ಹೇಳುತ್ತೇವೆ, ನೀವೇನು ಹೇಳುತ್ತೀರಿ? ಜನರ ಜವಾಬ್ದಾರಿ ತೆಗೆದುಕೊಂಡಿದ್ದೀರಿ. ಪಕ್ಕದ ತಮಿಳುನಾಡಿನ 3 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ನಮ್ಮ ಪರಿಸ್ಥಿತಿಯ ಹಾಗೆಯೇ ಇದೆ. ಕೃಷ್ಣಗಿರಿ, ಹೊಸೂರಿಗೆಲ್ಲ ಮನೆ ಮನೆಗೂ ನೀರು ಕೊಡುತ್ತಿದ್ದಾರೆ. ಅದು ಹೇಗೆ ಕೊಡುತ್ತಿದ್ದಾರೆ ಗೊತ್ತಿದೆಯೇ? ತಮಿಳುನಾಡಿನಲ್ಲಿ ನಮ್ಮ KRS ನಿಂದ ಹರಿಯುವ ನೀರು ಹೊಗೆನಕಲ್‌ನಿಂದ ಜೈಕಾ ಯೋಜನೆಯಡಿಯಲ್ಲಿ ಬರೀ 1300 ಕೋಟಿ ರೂಪಾಯಿಗಳಲ್ಲಿ ಅವರು ಪ್ರತಿ ದಿನ existing overhead tanks ಗೆ 20 ಸಾವಿರದಿಂದ 25 ಸಾವಿರ ಲೀಟರ್ ನೀರು ಬಿಡುತ್ತಿದ್ದಾರೆ. ಇದನ್ನೂ ನಾವೂ ಕೂಡ ಮಾಡಬಹುದು. ದೇವನಹಳ್ಳಿ ತನಕ ಕಾವೇರಿ pipeline ಬಂದಿದೆ. K.R. Puram ತನಕ, ಆನೇಕಲ್ ತನಕ ಕಾವೇರಿ pipeline ಬಂದಿದೆ. ನಮಗೆ ಇನ್ನು 1 TMC ನೀರನ್ನು

allocation ತೆಗೆದುಕೊಂಡರೆ ತಾತ್ಕಾಲಿಕವಾಗಿ ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು. ಅದಕ್ಕೇನೂ ಹೆಚ್ಚು cost ತಗಲುವುದಿಲ್ಲ. ನೀವು ಇಂಥವನ್ನೆಲ್ಲ ಮಾಡಬೇಕು. ಇಲ್ಲವೆಂದರೆ ತೀರಾ ಕಷ್ಟವಿದೆ. ಕಾಂಗ್ರೆಸ್ ಪಕ್ಷ ಮತ್ತು ಇಲ್ಲಿ ruling Government ಏನಿದೆ, ನಿಮಗೆ ತೀರಾ ಕೆಟ್ಟ ಹೆಸರು ಬರುತ್ತದೆ. ನೀವು ಹಳ್ಳಿಗಳಲ್ಲೂ ಹೋಗಿ, ಈಚೆಗೆ ಬರುವುದಕ್ಕಾಗುವುದಿಲ್ಲ. ಇಷ್ಟು ದಿನ MLA ಗಳು ಯಾವುದೇ ಒಂದು ಧರಣಿಗಳಲ್ಲಿ ನಾವು ಭಾಗವಹಿಸಲಿಲ್ಲ. ಸರ್ಕಾರದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇವೆ. ಸನ್ಮಾನ್ಯ ರಮೇಶ್ ಕುಮಾರ್‌ರವರು, ನಾವು ಕುಡಿಯುವ ನೀರು ಕೊಡಿಸುತ್ತೇವೆ, ನಮ್ಮ ಜವಾಬ್ದಾರಿ ಎಂದು ನಮ್ಮನ್ನೆಲ್ಲ ಕರೆದುಕೊಂಡು ಹೋಗುತ್ತಿದ್ದರು. ಈಗ Minister ಆಗಿರುವುದರಿಂದ ಪಾಪ ಅವರು ಈಗ silent ಆಗಿಬಿಟ್ಟಿದ್ದಾರೆ. ಅಣ್ಣ ನೀವು Minister ಆಗಲಿಲ್ಲವೆಂದಿದ್ದರೆ ನಮಗೆಲ್ಲ ಒಂದು ಉತ್ಸಾಹ ಇರುತ್ತಿತ್ತು. ಈಗ ನೀವೂ ಜೋರಾಗಿ ಮಾತನಾಡುವುದಿಲ್ಲ, ನಮ್ಮನ್ನೂ ನೀವು ಜಾಸ್ತಿ ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದು ಅವರಿಗೆ ಹೇಳುತ್ತಿದ್ದೆವು. ಜಾಸ್ತಿ ಮಾತನಾಡಿದರೆ ಮಾರ್ಷಲ್‌ಗಳನ್ನು ಕರೆಸಿ ನಮ್ಮನ್ನೆ ಆಚೆಗೆ ಹಾಕುತ್ತಾರೆ. ಅಲ್ಲಿ ಜನರು ನೀರು ಯಾವಾಗ ಕೊಡುತ್ತೀರಿ ಎಂದು ಕೇಳುತ್ತಾರೆ. ಮಾನ್ಯ ಜಲಸಂಪನ್ಮೂಲ ಸಚಿವರೆ, ನಾವು ಕೇಳುವುದಿಷ್ಟೆ, ಯಾವತ್ತು ನೀರು ಕೊಡುತ್ತೀರಿ? ಈ ವರ್ಷದಲ್ಲಿ ಆಗುತ್ತದೆಯೇ? ಅಥವಾ ಇನ್ನೂ 2 ವರ್ಷ ಆಗುತ್ತದೆಯೇ? 3 ವರ್ಷ ಬೇಕಾಗುತ್ತದೆಯ? ಅಥವಾ 5 ವರ್ಷ ಸಮಯ ಬೇಕೇ? ಅಷ್ಟರವರೆಗೆ ನಾವು ಏನು ಕುಡಿಯಬೇಕೆನ್ನುವುದನ್ನು ನೀವೇ ಹೇಳಿ. ಇಲ್ಲವೆಂದರೆ, ಏಕೆ ಸುಮ್ಮನೆ ಚರ್ಚೆಗಳು, ನಾವು ಏತಕ್ಕೆ ಮಾತನಾಡಬೇಕು, MLA ಆಗಿ ಏತಕ್ಕೆ ಇರಬೇಕು? ನಾವು ಜನರಿಂದ ಉಗಿಸಿಕೊಳ್ಳುವುದಕ್ಕೆ ಹೋಗಬೇಕೇ? ನಿಮ್ಮನ್ನು ನಮ್ಮನ್ನೆಲ್ಲ ಸೇರಿಸಿ ಜನರು ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ. ನೀರು ಕೊಡುವುದಕ್ಕೆ ಆಗಲಿಲ್ಲವೆಂದರೆ ನೀವು ಏಕೆ MLA ಆಗಿದ್ದೀರಿ ಎಂದು Media ದವರು ಕೇಳುತ್ತಾರೆ. MLA ಗೆ ಆ power ಇದೆಯೇ? Power ಏನೂ ಇಲ್ಲ. MLA ಗಳಿಗೆ ಏನು power ಎಂದು ನಾನು ಇಲ್ಲಿಗೆ ಬಂದಮೇಲೆ ಗೊತ್ತಾಯಿತು. ಅದಿಲ್ಲವೆಂದಿದ್ದರೆ ಚೆನ್ನಾಗಿರುತ್ತಿತ್ತು. ನೆಮ್ಮದಿ ಜೀವನ ಕೂಡ ಇರುತ್ತಿತ್ತು. ನಾವೆಲ್ಲ ಸುಮ್ಮನೆ MLAಗಳು ಎಂದು ಹೇಳಿಕೊಳ್ಳುವುದು. ಏನು ಆಗಬೇಕಾದರೂ ತಹಶೀಲ್ದಾರರ ಹತ್ತಿರ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೋಗಬೇಕು, ಇಲ್ಲವೆಂದರೆ DC ಯವರ ಹತ್ತಿರ ಹೋಗಬೇಕು, ಇಲ್ಲಿ ಬಂದು ಎಲ್ಲ ಮಂತ್ರಿಗಳ ಹತ್ತಿರ ಹೋಗಬೇಕು. ಅವರ ಮನೆಯ ಹತ್ತಿರ ಹೋದರೆ 2 ರೂ.ಗಳ ಕೆಲಸ ಸಹ ಆಗುವುದಿಲ್ಲ. ಬಂದು ಇಲ್ಲಿ session ನಲ್ಲಿ ಕುಳಿತುಕೊಳ್ಳಿರಿ ಎಂದು ಹೇಳುತ್ತಾರೆ. ಕುಳಿತುಕೊಂಡು ಏನು ಮಾಡುವುದು? ಜನರಿಗೆ ಕುಡಿಯುವ ನೀರು ಕೊಡುವುದಕ್ಕೆ ನಮಗೆ ಯೋಗ್ಯತೆ ಇಲ್ಲ. Session ನಲ್ಲಿ ಕುಳಿತುಕೊಂಡು ಏನು ಮಾಡಬೇಕು? ಇಲ್ಲಿ ಬಂದು TA, DA ತೆಗೆದುಕೊಂಡು ಹೋಗಬೇಕು. ಅದಕ್ಕೆ ಹೇಳಿದ್ದು, ಎಲ್ಲರಿಗೂ 5 ವರ್ಷದ್ದು TA, DA ಏನು ಕೊಟ್ಟಿದ್ದಾರೆ ಅದೆಲ್ಲವನ್ನೂ ವಾಪಸ್ಸು ಸರ್ಕಾರಕ್ಕೆ ಕೊಟ್ಟುಬಿಡೋಣ. ಮೊನ್ನೆ ನಮ್ಮ ಕಮಿಟಿ ಮೀಟಿಂಗ್‌ನಲ್ಲಿಯೂ ಹಾಗೆಯೇ ಮಾಡಿದ್ದೆವು. ಆದರೆ, ನಮ್ಮ ಅಧ್ಯಕ್ಷರು ಬಿಡಲಿಲ್ಲ, ವಾಪಸ್ಸು ತೆಗೆದುಕೊಳ್ಳಲೇ ಬೇಕೆಂದು ಹಿಡಿದುಕೊಂಡರು(ಒತ್ತಾಯ ಮಾಡಿದರು). ಈ TA, DA ಗೆ ಬಂದಿರುವಂಥ MLA ಗಳು ನಾವಲ್ಲ. ಎಲ್ಲರೂ ಅಷ್ಟೆ. ಜನರಿಗೋಸ್ಕರ, ಜನರಿಗೆ ಏನೋ ಒಳ್ಳೆಯದು ಮಾಡಬೇಕೆಂದು ಮನಸ್ಸಿಟ್ಟುಕೊಂಡು ಬಂದಿರುವವರು. ಇದೇ ರೀತಿ Rule 69 ನಲ್ಲಿ ಸುಮಾರು 50 ಸಾರಿ ಚರ್ಚೆಯಾಯಿತು, ಸಾಕಷ್ಟು ಸಭೆಗಳಾಯಿತು, ನೀರನ್ನು ಯಾವಾಗ ಕೊಡುತ್ತೀರಿ? ಎನ್ನುವುದೊಂದೇ ನಮ್ಮ ಪ್ರಶ್ನೆ. ಮಾನ್ಯ ಎಂ.ಬಿ. ಪಾಟೀಲ್ ಸಾಹೇಬರೆ, ತಾವು ಈಗ answer ಕೊಡಬೇಕಾದರೆ ಎಷ್ಟು ದಿನಗಳಲ್ಲಿ ನೀರು ಕೊಡುತ್ತೀರಿ, ಹರಿಸುತ್ತೀರಿ? ಎನ್ನುವುದನ್ನು ಹೇಳಿರಿ, ನಮಗೆ ಅಷ್ಟೇ ಸಾಕು. ಅಲ್ಲಿಯತನಕ ನಾವು ಏನು ಕುಡಿಯಬೇಕು? ನೀವು RO plants ನಮ್ಮ ಹೇಳುತ್ತಿದ್ದಿರಿ. RO plants ಯಾವ ರೀತಿ ಇದೆ? ಅದು 10 ದಿನ ಸಹ work ಆಗುವುದಿಲ್ಲ. ಅದನ್ನು maintenance ಮಾಡುವವರು ಯಾರು? ಇವತ್ತು RO plants ನಲ್ಲಿ ಬರುತ್ತಿರುವ ನೀರೆಲ್ಲ ಅದೇ ಗಲೀಜು ನೀರು. ಆ plant correct ಆಗಿ work ಆಗುತ್ತಿದೆಯೇ ಎಂದು ನೋಡುವವರಿಲ್ಲ. Maintenance ಮಾಡುವವರು ಯಾರು? ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಅಷ್ಟು ಕಷ್ಟದಲ್ಲಿದ್ದೇವೆ. ವಿಶೇಷವಾಗಿ ಒಂದು RO plant extra ಕೊಟ್ಟಿದ್ದೀರಾ, ಇಲ್ಲ. ಎಲ್ಲಿ ground water ಚೆನ್ನಾಗಿದೆ, ಎಲ್ಲಿ ನದಿಗಳಿವೆ, ಅಲ್ಲಿಗೆ ಅಷ್ಟೇ RO plant ಗಳನ್ನು ಕೊಡುತ್ತಿದ್ದೀರಿ, ನಮಗೂ ಅಷ್ಟೇ RO plant ಗಳನ್ನು ಕೊಡುತ್ತಿದ್ದೀರಿ. ನಮ್ಮಲ್ಲಿ bore ಹಾಕಿಸುವುದಕ್ಕೆ ತೊಂದರೆ ಇದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Bore ಕೊರೆಯುವವರಿಗೆ ಸ್ವಂತ ಹಣದಲ್ಲಿ diesel ಗೆ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಇಲ್ಲವೆಂದರೆ ಅವರು ಕೊರೆಯುವುದಿಲ್ಲ. 1600 ಅಡಿ, 1800 ಅಡಿಗೆ ಕೊರೆಸುತ್ತಿದ್ದೇವೆ. ಆದರೂ ಅದು ಎಷ್ಟು ದಿನ ಇರುತ್ತದೋ ಎನ್ನುವ guarantee ಇಲ್ಲ. ಇವತ್ತು ಕೊರೆದಿರುತ್ತೇವೆ, ಅದು 10 ದಿನವಾದ ಮೇಲೆ bore ನಲ್ಲಿ ನೀರು ಬರುವುದು ನಿಂತುಹೋಯಿತು ಎಂದು ಹೇಳುತ್ತಾರೆ. ಇದಕ್ಕೆ ನಮಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಲುವುದಿಲ್ಲ.

ಉಪಾಧ್ಯಕ್ಷರು: ಆಯಿತು, conclude ಮಾಡಿ.

ಶ್ರೀ ಕೆ.ಎಸ್. ಮಂಜುನಾಥಗೌಡ: ಮಾನ್ಯ ಉಪಾಧ್ಯಕ್ಷರ, Borewell ಪರಿಹಾರವಲ್ಲ. ಸುಮ್ಮನೆ ನಾವು ತೋರಿಸಿಕೊಳ್ಳಲಿಕ್ಕೆ borewell ಹಾಕಿಸುತ್ತಿದ್ದೇವೆ. ಒಂದು ಊರಿನಲ್ಲಿ 10-11 borewell ಗಳನ್ನು ಹಾಕಿಸಿದ್ದೇವೆ. ಅದರಲ್ಲಿ ನೀರಿಲ್ಲ. Next ಏನು ಮಾಡುವುದು? ಮತ್ತೆ 12ನೇ bore ಹಾಕಿಸುವುದು. ಅದರಲ್ಲೂ ನೀರಿಲ್ಲ, 13ನೇ bore ಹಾಕಿಸುವುದು. ಈ ರೀತಿ ಮಾಡದೆ ನಮಗೆ ಬೇರೆ ದಾರಿಯೇ ಇಲ್ಲ. Next ಮುಂದಿನ ದಿನಗಳಲ್ಲಿ ಭೂಕಂಪ ಆಗಿ ಬಿಡುತ್ತದೆ, ಅಷ್ಟು borewell ಗಳನ್ನು ಕೊರೆದಿದ್ದೇವೆ.

ಉಪಾಧ್ಯಕ್ಷರು: ಆಯಿತು, conclude ಮಾಡಿ. ಸಂಬಂಧಪಟ್ಟ ಸಚಿವರು ಅದಕ್ಕೆ ಉತ್ತರ ಕೊಟ್ಟುಬಿಡಲಿ.

ಶ್ರೀ ಕೆ.ಎಸ್. ಮಂಜುನಾಥ ಗೌಡ: ನಮ್ಮ ಕೋಲಾರ ಜಿಲ್ಲೆಯಲ್ಲಿ more than 26 thousand borewell ಗಳನ್ನು ಕೊರೆಸಿದ್ದೇವೆ. ಅಷ್ಟಾದರೂ ನೀರಿಲ್ಲದಿದ್ದರೆ ನಾವು ಬದುಕುವುದು ಹೇಗೆ? ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಂಡು 10 ತಿಂಗಳಲ್ಲಿ ನೀರು ಹರಿಸುವಂಥ ಕೆಲಸವಾಗಬೇಕು. Simultaneous ಆಗಿ ನೀವು ಏಕೆ ಕೆಲಸ ಆರಂಭಿಸಲಿಲ್ಲ? ಕೋಲಾರ ಕಡೆಯಿಂದ ಏಕೆ pipe line ಹಾಕಿಲ್ಲಿಲ್ಲ? ತುಮಕೂರಿನಲ್ಲಿ ಏಕೆ ಆ ಕೆಲಸ ಆರಂಭಿಸಲಿಲ್ಲ? ಬರೀ ಸಕಲೇಶಪುರದಲ್ಲಿ ಬರೀ ಗೀಚಿಕೊಂಡು ಬಂದರೆ ಇನ್ನು 20 ವರ್ಷವಾದರೂ ಅದು ಆಗುವುದಿಲ್ಲ. ಈ phase ನಲ್ಲಿ ಹೋಗುತ್ತಿದ್ದೇವೆ. ನಮ್ಮ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯಲ್ಲಿ ಕೆಲಸ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಹಣದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊರತೆ ಇದೆಯೇ? ಹಣ ಎಷ್ಟು ಬೇಕಾದರೂ ಇದೆ ಎಂದು ಹೇಳುತ್ತೀರಿ. ಹಾಗಾದರೆ, ಮಾಡಿರಿ, ಕೆಲಸ ಆರಂಭಿಸಬಹುದಲ್ಲ. ನಿಮ್ಮ ಈ ಸರ್ಕಾರದ ಅವಧಿಯಲ್ಲಂತೂ ಆಗುವುದಿಲ್ಲ. Next ಬರುವ ಸರ್ಕಾರಕ್ಕೆ ನಾವು ಕಾಯಬೇಕು. ನಾವಿಲ್ಲಿ ಎಷ್ಟು ಇರುತ್ತೇವೆಯೋ guarantee ಇಲ್ಲ. ಇನ್ನು 5 ವರ್ಷದಲ್ಲಾದರೂ ನೀರು ಕೊಡುತ್ತಾರೆಂದು ಜನಗಳು ಮಾತ್ರ ಕಾಯುತ್ತಿರುತ್ತಾರೆ. ಆದರೆ, ಅಷ್ಟು ದಿನ ಕುಡಿಯುವುದು ಏನು?

ಉಪಾಧ್ಯಕ್ಷರು: ಸಾಕು, conclude ಮಾಡಿ.

ಶ್ರೀ ಕೆ.ಎಸ್. ಮಂಜುನಾಥ ಗೌಡ: ಮಾನ್ಯ ಉಪಾಧ್ಯಕ್ಷರೆ, ನಿಮ್ಮಲ್ಲೂ ಮನವಿ ಮಾಡುತ್ತೇನೆ. ನಿಮಗೂ ಕೂಡ ಕಷ್ಟ. ಈ ಎರಡು ಜಿಲ್ಲೆಗಳನ್ನು ನಾನು ಯಾವುದೇ party, ಪಕ್ಷಕ್ಕೆ ಹೋಲಿಸುತ್ತಿಲ್ಲ. ಎಲ್ಲಾ ಸರ್ಕಾರಗಳು, ಎಲ್ಲರೂ ನಮ್ಮನ್ನು ಮರೆತುಬಿಟ್ಟಿದ್ದಾರೆ. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎ. ನಾರಾಯಣಸ್ವಾಮಿ(ಹೆಬ್ಬಾಳ): ಮಾನ್ಯ ಉಪಾಧ್ಯಕ್ಷರೆ, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಎತ್ತಿನ ಹೊಳೆ ಯೋಜನೆಯನ್ನು ಲೋಕಸಭೆ ಚುನಾವಣೆಗೆ ಒಂದು ತಿಂಗಳ ಮುಂಚೆ ಚಿಕ್ಕಬಳ್ಳಾಪುರದಲ್ಲಿ ಪೂಜೆ ಮಾಡಿದರು. ಪೂಜೆ ಮಾಡಬೇಕಾದದ್ದು ನೇತ್ರಾವತಿ ನದಿಯಿಂದ ಎಲ್ಲಿ ನೀರು ತರಬೇಕಾಗಿತ್ತೊ ಅಲ್ಲಿ ಪೂಜೆ ಮಾಡಿ ಕೆಲಸ ಆರಂಭಿಸಬೇಕಾಗಿತ್ತು.

(ಮುಂದು)

ವಿಸ-13-06-2017-(38)-5-40-ಎಸ್ಕೆ-ವಿಜಿ

ಶ್ರೀ ವೈ.ಎ.ನಾರಾಯಣಸ್ವಾಮಿ : ಮುಂದು.,

ಪೂಜೆ ಮಾಡಬೇಕಾಗಿದ್ದಿದ್ದು ನೇತ್ರಾವತಿಯಿಂದ ಎಲ್ಲಿ ನೀರು ತರಬೇಕಾಗಿತ್ತೋ ಅಲ್ಲಿಂದ. ಅಲ್ಲಿ ಪೂಜೆ ಮಾಡಿ ಶುರು ಮಾಡಬೇಕಾಗಿತ್ತು. ರಾಜಕೀಯ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಮೂರು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

portion ಇದೆ. 1) Lift portion 2) Conveyance portion 3) Distribution portion. ಮಾನ್ಯ ಸದಸ್ಯರು, ಕೋಲಾರ ಜಿಲ್ಲೆಯ ಪರಿಸ್ಥಿತಿಗಳ ಬಗ್ಗೆ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ, ಅದಕ್ಕೆ ಒಂದು ಮಾತು ಸೇರಿಸುತ್ತೇನೆ. ಈ ರಾಜ್ಯದಲ್ಲಿ ಏನಾದರೂ ಅತಿ ಹೆಚ್ಚಿನ ಅಂಗವಿಕಲರು ಇದ್ದರೆ ಅದು ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮಾತ್ರ. ಅಲ್ಲಿ ಸುಮಾರು 20 ರಿಂದ 25 ಸಾವಿರ ಜನ ಇದ್ದಾರೆ. ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಯಾಗಿದ್ದಾಗ 20 ಸಾವಿರ ಜನ ಅಂಗವಿಕಲರು ಬಂದು ಧರಣಿ ಮಾಡಿದ್ದು ಇತಿಹಾಸ. ಕೋಲಾರ ಜಿಲ್ಲೆಯಲ್ಲಿ ಬರಿ ನೀರಿನ ಸಮಸ್ಯೆ ಅಲ್ಲ. ಸಾಮಾಜಿಕ ಸಮಸ್ಯೆ ಕೂಡ ಉದ್ಭವಿಸಿದೆ. ಯಾರೂ ಕೂಡ ಆ ಊರುಗಳಲ್ಲಿನ ಯುವಕರಿಗೆ ಮದುವೆ ಮಾಡಲಿಕ್ಕೆ ಹೆಣ್ಣುಗಳನ್ನು ಕೊಡುತ್ತಿಲ್ಲ. ಇದು ಭಾರೀ serious ವಿಚಾರ. ಎಲ್ಲರೂ ಇಲ್ಲಿಗೆ ವಲಸೆ ಬಂದು watchman ಆಗಿ ಕೆಲಸ ಮಾಡುತ್ತಿದ್ದಾರೆ. It has been declared as a red zone. There is 270% exploitation of under ground water. ಅದಕ್ಕೋಸ್ಕರ ಕೊಳಚೆ ನೀರನ್ನು ಸಂಸ್ಕರಿಸಿ ಕೆರೆ ತುಂಬಿಸಬೇಕು recharge ಮಾಡಬೇಕೆಂದು ತಾವು ಹೊರಟಿದ್ದೀರಿ. ಅದಕ್ಕೆ ನಮ್ಮ ಸಹಮತ ಇದೆ, ಅದಕ್ಕೆ ನಾನೇನು ವಿರೋಧಿಸುತ್ತಿಲ್ಲ. ಎತ್ತಿನಹೊಳೆ ಯೋಜನೆಯಲ್ಲಿ ನೀವು ಏನು ಸಾಧಿಸಿದ್ದು ಎಂದರೆ, ಅದರ ಮೇಲುಸ್ತುವಾರಿ ನೋಡಿಕೊಳ್ಳಲಿಕ್ಕಾಗಿ ವಿಶ್ವೇಶ್ವರಯ್ಯ ನೀರಾವರಿ ನಿಗಮ ಎಂದು ಮಾಡಿದಿರಿ. ಇದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದು ಬಿಟ್ಟು progress ಏನಿದೆ ಎಂದು ನಮಗೂ ಗೊತ್ತಿಲ್ಲ ಯಾರಿಗೂ ಗೊತ್ತಿಲ್ಲ ಜನಗಳಿಗೂ ಗೊತ್ತಾಗುತ್ತಿಲ್ಲ. ಆ ಜನರು ನಮ್ಮನ್ನು ನಂಬುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲವೇ ಇಲ್ಲ. ಹೋದ ಸಲ ಆ ಜನರು ಬೆಂಗಳೂರಿಗೆ ಬಂದಾಗ ಅವರ ಮೇಲೆ ಲಾಠಿಚಾರ್ಜ್ ಮಾಡಿ ವಾಪಸ್ ಕಳುಹಿಸಿದಿರಿ. ಎರಡು ವರ್ಷಗಳಿಂದ ಅವರ ಮೇಲಿನ case ನಿಂದಾಗಿ Court ಗೆ ಅಲೆದಾಡುತ್ತಿದ್ದಾರೆ. ನೀರು ಕೇಳಿದ್ದಕ್ಕಾಗಿ ಅವರ ಮೆಲೆ case book ಮಾಡಿದ್ದರಿಂದ ಅವರು daily Court ಗೆ ಅಲೆಯುತ್ತಿದ್ದಾರೆ. ಈಗ ಆ ಹೋರಾಟ ಎಂದರೆ ಹೋರಾಟವೂ ಬೇಡ ಆ ನೀರು ಕೊಡುವ ಮಟ್ಟದಲ್ಲಿ ಇಲ್ಲ ಎಂದು ಹೇಳುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಮಾತನ್ನು ಜ್ಞಾಪಿಸುತ್ತೇನೆ. ಬಹಳ enthusiastic and energetic and dynamic minister. ಅವರು, I have got a

separate idea to bring the water from Nethravathi. ನೇತ್ರಾವತಿಯಿಂದ ಈ ಕಡೆಗೆ ಬರಬೇಕು funneling and tunneling technology ತರುತ್ತೇನೆಂದು ನೀವು ಹೇಳಿದ್ದಿರಿ. ನಾನು council ನಲ್ಲಿದ್ದಾಗ ಮಾತನಾಡಿದಾಗ, funneling and tunneling ಎನ್ನುವ technology ತರುತ್ತೇನೆಂದು ತಾವು ಉತ್ತರ ಕೊಟ್ಟಿದ್ದೀರಿ. I got answer with me. ಇದಾದ ಮೇಲೆ ವೃಷಭಾವತಿ ಮತ್ತು ಹೆಸರುಘಟ್ಟ ಈ valley ಯನ್ನು Thames ನದಿ ತರಹ ತಯಾರು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಿರಿ. ಇದು ಯಾವುದೂ ಬೇಡ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಕೊಡಿ. ನೀವು ಕೃಷ್ಣಾ ನದಿ ಅದು ನಮ್ಮ ನದಿ ಅದು ನಮ್ಮ ಜೀವಜಲ, ಕೃಷ್ಣಾ ನದಿಯ ಯೋಜನೆಗಳನ್ನು ಕಾವೇರಿ ನದಿಯ ಯೋಜನೆಗಳನ್ನು speed up ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಅದೇ speed ಅದೇ commitment ಈ ಕಡೆ ಏಕಿಲ್ಲ? ಪಾಪ ಉಪಾಧ್ಯಕ್ಷರು ಕೇಳುತ್ತಿಲ್ಲ, ಪೀಠದ ಮೇಲೆ ಕುಳಿತಿದ್ದಾರೆ, ಅವರ ಕಷ್ಟ ನಮಗಿಂತ ಜಾಸ್ತಿ ಇದೆ. ನಾನು ನಿಮ್ಮನ್ನು ಇಷ್ಟೆ ಕೇಳುವುದು, ಈ ನಿಮ್ಮ ಸರ್ಕಾರದ ಅವಧಿ ಹತ್ತು ತಿಂಗಳಲ್ಲಿ ಮುಗಿಯುತ್ತಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ simultaneous ಆಗಿ ಕೆರೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನಿಮಗೇನು ತೊಂದರೆ? ಜಲಾಶಯದಲ್ಲಿ conveyance portionನ್ನಿನ ಕೆಲಸ ಶುರು ಮಾಡುವುದಕ್ಕೆ ಏನು ತೊಂದರೆ? Lift irrigations ನಲ್ಲಿ ಏನು ಮಾಡಿದಿರಿ, ಮಾನ್ಯ ರಮೇಶ್ ಕುಮಾರ್‌ರವರು ನಿಮ್ಮ ಪರವಾಗಿ ಮೊನ್ನೆ ಉತ್ತರಿಸಿದರು. 8 weirs ನಲ್ಲಿ 7 weirs ನ್ನು complete ಮಾಡಿದ್ದೇವೆ ಇನ್ನೊಂದು weir ನ್ನು ಕಟ್ಟುವುದು ಮಾತ್ರ ಬಾಕಿ ಇದೆ ಎಂದು ಹೇಳಿದರು. ಆದರೆ, ಬಿಳಿಗೊಂಡ್ಲು ಹತ್ತಿರ water store ಮಾಡಲಿಕ್ಕೆ ಜಲಾಶಯ ಕಟ್ಟಬೇಕಲ್ಲವೇ? ಎರಡು ಸಾವಿರ ಹೆಕ್ಟೇರ್ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಲ್ಲವೇ? ಅದರ ಬಗ್ಗೆ ನೀವು ಏಕೆ ಇನ್ನೂ ಅಧಿಸೂಚನೆ ಹೊರಡಿಸಿಲ್ಲ? ಏಕೆ ಸ್ವಾಧೀನಪಡಿಸಿಕೊಂಡಿಲ್ಲ? ಅದ್ದರಿಂದ, ನಾನು ತಮ್ಮ ಮೂಲಕ ಮನವಿ ಮಾಡುವುದು ಇಷ್ಟೆ. ಇದರಲ್ಲಿ ಪಕ್ಷ ರಾಜಕಾರಣ ಮಾಡುವುದು ಬೇಡ. ಇದು ಮಾನ್ಯ ಸದಾನಂದ ಗೌಡರವರ brain child. ಜಗದೀಶ್ ಶೆಟ್ಟರ್‌ರವರು ಕಾಸು ಕೊಟ್ಟರು. ನೀವು ಕೆಲಸ ಮಾಡುತ್ತಿದ್ದೀರಿ, ಆದರೆ ನಮ್ಮ ಆತಂಕ ಏನೆಂದರೆ, speed ಸಾಲದು,



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಿಮ್ಮ commitment ಸ್ವಲ್ಪ ಕಡಿಮೆ ಇದೆ, ಬೇರೆ ಕಡೆಗೆ commitment ಸ್ವಲ್ಪ ಜಾಸ್ತಿ ಇದೆ, ಈ ಕಡೆಗೆ ಕಡಿಮೆ ಇದೆ. ಒಂದು ರೂಪಾಯಿ tax concession ಕೂಡ ಇಲ್ಲ. ಉಪ್ಪು, ಕಾಫಿ ಪುಡಿ, ಬೀಡಿ-ಸಿಗರೇಟು ಒಂದು ರೂಪಾಯಿ ಕಡಿಮೆ ಕೊಡುತ್ತಿಲ್ಲ ಅಷ್ಟೆ tax ಕೊಡುತ್ತಿದ್ದೇವೆ. ಅದ್ದರಿಂದ, ದಯವಿಟ್ಟು ನಮ್ಮ ಮನವಿ ಏನೆಂದರೆ, ಆ ಭಾಗದ ಜನರು ನಿಜವಾಗಲೂ ನಮ್ಮ ಮಂಜುನಾಥ್‌ರವರು ಒಂದು ಮಾತು ಹೇಳಿದರು. ಆ ಭಾಗಕ್ಕೆ elections ಗೆ ಹೋಗಬೇಕಾದರೆ ನಮ್ಮನ್ನು ಓಡಿಸುತ್ತಾರೆ ಎಂದರು. Election ವಿಚಾರ ಬಿಟ್ಟು ಬಿಡಿ, ಆದರೆ ನಮ್ಮ ಬವಣೆ ಏನೆಂಬುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಾವು ಎಲ್ಲರೂ ಮನುಷ್ಯರು. ಮಾನವೀಯ ಹೃದಯದಿಂದ ನೋಡೋಣ. ಅದನ್ನು ದಯವಿಟ್ಟು ಬೇಗನೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ನಿಮ್ಮ ಇಂದಿನ ಉತ್ತರದಲ್ಲಿ ನಾಳೆಯಿಂದಲೇ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳ ಕೆಲಸ ಶುರುವಾಗಬೇಕು. ಆ conveyance portion ಕೆಲಸ ಶುರು ವಾಗಬೇಕು, ಬಿಳಿಗೊಂಡ್ಲು ಜಲಾಶಯ ಕಟ್ಟುವುದಕ್ಕೆ ನೀವು serious ಆಗಿ action ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿ ಇದರ ಬಗ್ಗೆ ಶ್ವೇತಪತ್ರವನ್ನು ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ಮೊನ್ನೆ ಒಂದು ಮಾತನ್ನು ಹೇಳಿದಾಗ ತಾವು ಇಲ್ಲಿ ಇರಲಿಲ್ಲ. ಸುನೀಲ್ ಕುಮಾರ್‌ರವರೆ, ವರಾಹಿ ಯೋಜನೆ 30 ವರ್ಷಗಳ ಹಿಂದೆ 9 ಕೋಟಿ ರೂಪಾಯಿಗಳ ಅಂದಾಜುಗಳಲ್ಲಿ ಶುರುವಾಗಿದ್ದು ನಂತರದ ದಿವಸಗಳಲ್ಲಿ 550 ಕೋಟಿ ರೂಪಾಯಿ ಆಯಿತು. ಆ ರೀತಿ ಇದು ಎಲ್ಲಿ ಆಗುತ್ತದೆಯೋ ಎನ್ನುವ ಭಯ ನಮಗೆ ಇದೆ. ನೀವು 12 ಸಾವಿರ ಕೋಟಿಗೆ plan ಮಾಡಿದಿರಿ, ನಂತರದ ದಿವಸಗಳಲ್ಲಿ 50 ಸಾವಿರ ಕೋಟಿ ಆಗಿಬಿಟ್ಟರೆ, 25 ವರ್ಷಗಳಾಗಿ ಬಿಟ್ಟರೆ ನಮ್ಮ ಗತಿ ಏನು? ಅದಕ್ಕೋಸ್ಕರ ನಿಮಗೆ ನಾವು ಎಲ್ಲರೂ ಸಹಿತ ಒಂದು ರೀತಿ watchdog ರೀತಿ ಕಾಯುತ್ತಿದ್ದೇವೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ನಾರಾಯಣ ಸ್ವಾಮಿಗಳೇ, ಏನಾಯಿತು ಏನಾಗಲಿಲ್ಲ ಗೊತ್ತಿಲ್ಲ. ವೀರಪ್ಪ ಮೊಯಿಲಿಯವರು South Canara ದಿಂದ ಕೋಲಾರದವರೆಗೆ ಬಂದಿದ್ದಾರೆ.

ಉಪಾಧ್ಯಕ್ಷರು : ಆಯಿತು ಬಿಡಿ ಆ ವಿಚಾರ ಏಕೆ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಇವರು ಹೇಳಿದ ಹಾಗೆ ಅವರು South Canara ದಿಂದ ಬಂದರೂ ನಾವು ಅದನ್ನು ನೋಡಲಿಲ್ಲ. ನೀರು ಕೊಡುತ್ತಾರೆ ಎನ್ನುವ ಒಂದೇ ಕಾರಣಕ್ಕೆ ಸದಾನಂದ ಗೌಡರವರನ್ನು, ಎಲ್ಲರನ್ನೂ ಗೆಲ್ಲಿಸಿದ್ದೇವೆ. ನೀರು ಕೊಡಲಿಲ್ಲ ಅಷ್ಟೆ. ಆ ಒಂದೇ ಉದ್ದೇಶ. South Canara, North Canara ಎಂದಲ್ಲ, ನಾವೆಲ್ಲಾ ಒಂದೆ. ನೀರು ಬೇಕು ಎನ್ನುವ ಒಂದೇ ಕಾರಣಕ್ಕೆ ನಾವು ಗೆಲ್ಲಿಸಿದೆವು.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಒಳ್ಳೆಯದು ಮಾಡಿದಿರಿ, ನಾನು ಹೇಳಿದ್ದು ಅಲ್ಲೊಂದು ಶಂಕುಸ್ಥಾಪನೆಯಾಯಿತು ಎಂದರಲ್ಲ ಅದಕ್ಕೆ ಹೇಳಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಂಜುರವರೆ, ಸದಾನಂದ ಗೌಡರಿಗೆ ಬಯಲು ಸೀಮೆಯ vote ಬೇಕಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಸಚಿವರೇ ಉತ್ತರ ಕೊಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವರು ಮಾತ್ರ ಅಲ್ಲಿ ನಮ್ಮ ಮೀನು ಸಾಯುತ್ತದೆ ಎನ್ನುತ್ತಾರೆ. ಇಲ್ಲಿ ನಮ್ಮ ಕೋಲಾರದ ಕಡೆ ಜನ ಸತ್ತು ಹೋಗುತ್ತಿದ್ದಾರೆ. ಇವರು ದಕ್ಷಿಣ ಕನ್ನಡದವರು ಅಲ್ಲಿ ನಮ್ಮ ಮೀನು ಸತ್ತು ಹೋಗುತ್ತವೆ, ಜಲಚರಗಳು ಸತ್ತು ಹೋಗುತ್ತವೆ ಎಂದು ಹೇಳುತ್ತಾರೆ. ನಾವು ಇಲ್ಲಿ ಮನುಷ್ಯರು ಸತ್ತರೂ ಪರವಾಗಿಲ್ಲ.

(ಗೊಂದಲ)

ಶ್ರೀ ವೈ.ಎ.ನಾರಾಯಣ ಸ್ವಾಮಿ : ನನಗೆ ಒಂದು clarification ಬೇಕು. ಆ ಯೋಜನೆ ಶುರುವಾದಾಗ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯವರು tail enders. ಇಲ್ಲಿಗೆ ನೀರು ಕೊಡುತ್ತೇನೆಂದು ಹೇಳಿದರು. ಬೆಂಗಳೂರಿನಲ್ಲಿ ನಾವೆಲ್ಲಾ meeting ಸೇರಿದಾದ ಮಾನ್ಯ ಜಾರ್ಜ್‌ರವರು, ಎತ್ತಿನ ಹೊಳೆಯ ನೀರನ್ನು ತಿಪ್ಪಗೊಂಡನಹಳ್ಳಿಗೆ ತುಂಬಿಸುತ್ತೇವೆಂದರು. ಆಮೇಲೆ ರಾಮನಗರಕ್ಕೆ ನೀರು ಕೊಡುತ್ತೇನೆಂದರು. ಇನ್ನು ಎಲ್ಲೆಲ್ಲಿ ಸರ್ಕಾರ commitment ಮಾಡಿದೆಯೋ ಗೊತ್ತಿಲ್ಲ. ಕೊನೆಗೆ ನೀರು ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ನನಗೆ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇವರಿಂದ ಇಷ್ಟೆ ಬೇಕಾಗಿರುವುದು. ಯಾವ ಕಾಲಮಿತಿಯೊಳಗೆ ಈ ಭಾಗದ ಜನರಿಗೆ ಎತ್ತಿನ ಹೊಳೆ ನೀರನ್ನು ಕುಡಿಸುತ್ತೀರಿ? ಎಷ್ಟು ಕೊಡಿಸುತ್ತೀರಿ? ಅದಕ್ಕೆ ನಿಮ್ಮ commitment ಏನು? ಆಮೇಲೆ ಮಾನ್ಯ ರಮೇಶ್ ಕುಮಾರ್‌ರವರು ಒಂದು ಮಾತು ಹೇಳಿದರು. ದಯವಿಟ್ಟು ಈ ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಎತ್ತಿನ ಹೊಳೆ ನೀರನ್ನು ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗೆ ತರದಿದ್ದರೆ ಮುಂದಿನ ಚುನಾವಣೆಗೆ ನಿಲ್ಲುವುದಿಲ್ಲ ಎನ್ನುವ ಮಾತನ್ನು open ಆಗಿ ಆ ಭಾಗದಲ್ಲಿ ಭಾಷಣದಲ್ಲಿ ಹೇಳಿದ್ದಾರೆ. ದಯವಿಟ್ಟು ಅವರನ್ನು ಕಾಪಾಡಿ ಮುಂದಿನ ಚುನಾವಣೆಯಲ್ಲಿ ಅವರನ್ನು ನಿಲ್ಲುವ ಹಾಗೆ ಮಾಡಿ, ನಮಗೆ ನೀರನ್ನು ಕೊಡಿ.

(ಗೊಂದಲ)

ಉಪಾಧ್ಯಕ್ಷರು : ಆಯಿತು ಬಿಡಿ ಸಚಿವರೇ ಉತ್ತರ ಕೊಡಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು) : ಮಾನ್ಯ ಉಪಾಧ್ಯಕ್ಷರೆ,

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ಇದೆ. ಈ ಎರಡೂ ಜಿಲ್ಲೆಗಳಿಗೆ ಎತ್ತಿನ ಹೊಳೆ ಶಾಶ್ವತ ಕುಡಿಯುವ ನೀರಿನ ಯೋಜನೆಯ ಬಗ್ಗೆ ಮಾನ್ಯ ಸದಸ್ಯರಾದಂಥ ರಾಜಣ್ಣನವರು, ಕೃಷ್ಣಾರೆಡ್ಡಿಯವರು, ಸುಬ್ಬಾರೆಡ್ಡಿಯವರು, ನಾರಾಯಣ ಸ್ವಾಮಿಯವರು ಮತ್ತು ನಮ್ಮ ಯುವ ಮಿತ್ರರಾದಂಥ ಶ್ರೀಯುತ ಮಂಜುನಾಥ ಗೌಡರವರು, ಬಹಳಷ್ಟು ವಿಸ್ತಾರವಾಗಿ ಈ ಬಗ್ಗೆ ಮಾತನಾಡಿದ್ದಾರೆ. ಇದಕ್ಕೆ ನಾನು ಸ್ವಲ್ಪ ಸುದೀರ್ಘವಾಗಿ ಉತ್ತರ ಕೊಡಲಿಕ್ಕೆ ಬಯಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : Answer ನಿಮಗೆ ಬಂದಿದೆಯೆ? ಅವರಿಗೆಲ್ಲಾ answer ಕೊಡಿಸಿಕೊಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಂ.ಬಿ.ಪಾಟೀಲ್ : ಇದಕ್ಕೆ answer copy ಯನ್ನು ಕೊಟ್ಟಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು : Specific ಆಗಿ ಅವರು raise ಮಾಡಿರುವ points ಬಗ್ಗೆ ಹೇಳಿ. ಅವರ ಆತಂಕ ಏನು ಇದೆ ಅದರ ಬಗ್ಗೆ ಹೇಳಿ.

ಶ್ರೀ ಎಂ.ಬಿ.ಪಾಟೀಲ್ : ಉಪಾಧ್ಯಕ್ಷರೇ ಅವರು ಇಷ್ಟೆಲ್ಲಾ ಸುದೀರ್ಘವಾಗಿ ಮಾತನಾಡಿದ ಮೇಲೆ ನಾನು ಕೆಲವೊಂದಕ್ಕೆ ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಆಯಿತು ಹೇಳಿ.

ಶ್ರೀ ಎಂ.ಬಿ.ಪಾಟೀಲ್ : ಮಾನ್ಯ ಸದಸ್ಯರ ಗಮನಕ್ಕೆ ಮತ್ತು ಮಾಧ್ಯಮದ ಗಮನಕ್ಕೂ ಕೂಡ ಇದು ಎಲ್ಲಾ ಹೋಗಬೇಕಾಗುತ್ತದೆ. ಕೃಷ್ಣಾರೆಡ್ಡಿಯವರು ಮಾತನಾಡುವಾಗ ಪದೇ ಪದೇ ಈ ಸರ್ಕಾರ, ಈ ಸರ್ಕಾರ, ಈ ಸರ್ಕಾರ ಎಂದು ಹೇಳುತ್ತಿದ್ದರು. ನಾರಾಯಣಸ್ವಾಮಿಯವರಿಗೂ ಕೂಡ ಗೊತ್ತಿದೆ. ಮಾನ್ಯ ಸದಾನಂದ ಗೌಡರವರು ಮುಖ್ಯಮಂತ್ರಿಗಳಾಗಿದ್ದಾಗ ಈ ಎತ್ತಿನ ಹೊಳೆ ಯೋಜನೆ ಪ್ರಾರಂಭವಾಯಿತು. ನಂತರ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಕೂಡ ಮುಖ್ಯಮಂತ್ರಿಗಳಾಗಿದ್ದರು. ನನಗೆ ಅನ್ನಿಸಿದ ಮಟ್ಟಿಗೆ ಎರಡೂವರೆ ವರ್ಷ ಮಾನ್ಯರಾದ ಸದಾನಂದ ಗೌಡರು ಮತ್ತು ಜಗದೀಶ್ ಶೆಟ್ಟರ್ ರವರು.

ಶ್ರೀ ವೈ.ಎ.ನಾರಾಯಣಸ್ವಾಮಿ : 2012 ರ ಮೇ ತಿಂಗಳಿನಲ್ಲಿ DPR approve ಆಗಿ cabinetಗೆ ಬಂತು.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ವೈ.ಎ.ನಾರಾಯಣಸ್ವಾಮಿ : ನೀವು 2013ಕ್ಕೆ ಅಧಿಕಾರಕ್ಕೆ ಬಂದಿರಲ್ಲವೇ? ಒಂದೇ ವರ್ಷ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ದಯವಿಟ್ಟು ಒಂದು ನಿಮಿಷ ಕೇಳಿ. ಮಾನ್ಯ ಸದಾನಂದ ಗೌಡರವರು ಮುಖ್ಯಮಂತ್ರಿಗಳಾಗಿದ್ದರು. ತದಾದ ನಂತರ ಜಗದೀಶ್ ಶೆಟ್ಟರ್‌ರವರು ಕಡೆಯದಾಗಿ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮುಖ್ಯಮಂತ್ರಿಗಳಾಗಿದ್ದರು. ಅಲ್ಲಿಂದ ಇಲ್ಲಿಯವರೆಗೆ ಈ ಯೋಜನೆಯನ್ನು ಆಗ ರೂಪಿಸಿದರು. ಮುಂದೆ tender ಕರೆದಿದ್ದರು. ಆ tender ನಲ್ಲಿ, ನಾನು ಈಗಾಗಲೇ ಅನೇಕ ಸಲ ಉತ್ತರ ಕೊಟ್ಟಿದ್ದೇನೆ. ಅವು single tenders, high premium tenders ಎಲ್ಲಾ ಆಗಿ technical sub committee ಅದನ್ನು reject ಮಾಡಲಿಕ್ಕೆ ಪ್ರಸ್ತಾವನೆ ಮಾಡಿದರು. ನಾವು ಅಧಿಕಾರಕ್ಕೆ ಬಂದೆವು. ಪದೇ ಪದೇ ಈ ಸರ್ಕಾರ ಈ ಸರ್ಕಾರ ಎಂದು ಹೇಳುತ್ತಾರೆ. ಈ ಸರ್ಕಾರ ಬಂದ ಮೇಲೆ ಎತ್ತಿನಹೊಳೆ ಯೋಜನೆ ಇರಬಹುದು, K.C. Valley ಯೋಜನೆ ಇರಬಹುದು. ಇದಕ್ಕೂ ಹಿಂದೆಯೂ ಕೂಡ ಹಿಂದಿನ ಸರ್ಕಾರಗಳು ಇದ್ದವು. ಈ ಸಮಸ್ಯೆ ಕೇವಲ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇವತ್ತು ಹುಟ್ಟಿರುವಂಥ ಸಮಸ್ಯೆಯಲ್ಲ. ನನಗೆ ಅನ್ನಿಸುತ್ತದೆ, ತಾವು ಆ ಭಾಗದಿಂದ ಬಂದವರು. ತಮಗೂ ಗೊತ್ತಿದೆ, ಕಳೆದ 15-20 ವರ್ಷಗಳಿಂದ ತಾವು ಈ ಸಮಸ್ಯೆಯನ್ನು ಎದುರಿಸುತ್ತಿದ್ದೀರಿ. ಆದರೆ, ಯಾವ ಸರ್ಕಾರಗಳು ಸಹ ಯೋಜನೆಯನ್ನು ಅನುಷ್ಠಾನಕ್ಕೆ ತಂದಿಲ್ಲ. ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಬಂದ ಮೇಲೆ ಈ ಎತ್ತಿನಹೊಳೆ ಯೋಜನೆಗೆ tender ಕರೆದು tender ನ್ನು ಅಂತಿಮಗೊಳಿಸಿ ಚಾಲನೆ ಕೊಟ್ಟೆವು.

(ಮುಂದು)

ವಿಸ:13-06-2017-(39)-5-50-ಎಸ್ಕೆ-ವಿಜಿ

ಶ್ರೀ ಎಂ.ಬಿ.ಪಾಟೀಲ್ : ಮುಂದು.,

ಇದಕ್ಕೆ ಒಂದು ಕಡೆ ವಿರೋಧ, ಮತ್ತೊಂದು ಕಡೆ ಅನೇಕ ಗೊಂದಲಗಳು ಆದವು. ಆ ಗೊಂದಲದಲ್ಲಿ ಒಬ್ಬ Hydrologyಗೆ ಸಂಬಂಧಿಸಿದ Professor yield ಬಗ್ಗೆ ಮಾತನಾಡಿದರು. ಇದರ ಜೊತೆಗೆ NGT, ಒಂದು ಕಡೆಗೆ ಭೂ ಸ್ವಾಧೀನ, ಈ ಎಲ್ಲಾ ಸಮಸ್ಯೆಗಳ ಮಧ್ಯೆ ಈ ಸರ್ಕಾರ ಕೆಲಸ ಮಾಡುತ್ತಿದೆ. ನಾನು ಈ ದಿವಸ ಉತ್ತರ ಕೊಟ್ಟಿದ್ದೇನೆ. ಆದರೂ ಕೂಡ ನಾನು ಅದನ್ನು ಓದಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೇಳಬೇಕಾಗುತ್ತದೆ. ತದನಂತರ ನನಗೊಂದು ತಾವು ಇಪ್ಪತ್ತು ನಿಮಿಷಗಳ ಸಮಯ ಕೊಡಬೇಕೆಂದು ನಾನು ವಿನಂತಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ status ಹೇಳಿ. ಅವರು ಹೇಳುವುದು ಏನೆಂದರೆ,

ಶ್ರೀ ವಿ.ಸುನೀಲ್ ಕುಮಾರ್ : ಯಾವಾಗ ನೀರು ಕೊಡುತ್ತೀರಿ ಹೇಳಿಬಿಡಿ.

ಶ್ರೀ ಎಂ.ಬಿ.ಪಾಟೀಲ್ : ಏಕೆ ನಿಮಗೆ ತೊಂದರೆಯಾಗುತ್ತದೆಯೆ? ಹಿಂದಿನ ಸರ್ಕಾರಗಳು ಏನು ಮಾಡಿಲ್ಲ ಎಂದರೆ ನಿಮಗೆ ಮುಜಗರವಾಗುತ್ತದೆಯೆ?

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ನನಗೆ ತೊಂದರೆಯಾಗುತ್ತದೆಯೋ ನಮ್ಮ ಜಿಲ್ಲೆಗೆ ತೊಂದರೆಯಾಗುತ್ತದೆಯೋ ಈ issue ಬೇರೆ ಇದೆ, ನಾನು ಆಮೇಲೆ ಮಾತನಾಡುತ್ತೇವೆ. ಅವರು ನೀರು ಯಾವಾಗ ಕೊಡುತ್ತೀರಿ ಎಂದು ಕೇಳಿದ್ದಾರೆ, ಅಷ್ಟು ಹೇಳಿದರೆ ಸಾಕು.

ಶ್ರೀ ಎಂ.ಬಿ.ಪಾಟೀಲ್ : ನಾನು ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಯಾವ ಕಾಲದಲ್ಲಿ ಏನಾಯಿತು ಎಂದು ಗೊತ್ತಿದೆ ನೀವು ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಉತ್ತರದಲ್ಲಿ ಏನೂ ಇಲ್ಲ ಉಪ್ಪೂ ಇಲ್ಲ, ಹುಳಿಯೂ ಇಲ್ಲ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಸದಾನಂದ ಗೌಡರು, ಜಗದೀಶ್ ಶೆಟ್ಟರು, ಎಂದು ಹೇಳಿದಿರಿ, ನೀವು ಬಂದು ನಾಲ್ಕು ವರ್ಷಗಳ ಕಾಲ ಏನು ಮಾಡಿದಿರಿ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ಅದನ್ನು ಹೇಳುತ್ತೇನೆ.

(ಗೊಂದಲ)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಡಿ.ಎನ್.ಜೀವರಾಜ್ : ನೀವು ಆ ತರಹ fluoride ಇರುವ ಜಿಲ್ಲೆಗಳಿಗೆ ನೀರು ಕೊಡಿ.

(ಗೊಂದಲ)

ಉಪಾಧ್ಯಕ್ಷರು : ಒಂದು ನಿಮಿಷ ಅವರು ಮಾತನಾಡುತ್ತಾರೆ ಬಿಡಿ, ಅವರು ಹೇಳಲಿ. ಅವರಿಗೆ allow ಮಾಡಿ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್ : ಮಾನ್ಯ ಉಪಾಧ್ಯಕ್ಷರೆ, ಅವರು ಬಹಳ ತೀಕ್ಷ್ಣವಾಗಿ ಮಾತನಾಡಿ ಸಚಿವರಿಗೆ ಚುಚ್ಚಿ ಹೇಳಬಹುದು, ಅವರು ನಿಮಗೆ ಹೇಳಬಾರದೇ? ಇದು ಯಾವ ನ್ಯಾಯ?

ಶ್ರೀ ಡಿ.ಎನ್.ಜೀವರಾಜ್ : ಅವರು ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು : ಅವರು ಮಾತನಾಡುತ್ತಾರೆ ಬಿಡಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ನ್ಯಾಯ ಎಂದ ಮೇಲೆ ಎಲ್ಲರಿಗೂ ಒಂದೇ ಇರಬೇಕಲ್ಲವೇ? ಇದು ಬಿಜೆಪಿ ನ್ಯಾಯ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಒಂದೇ ನಿಮಿಷ. ನನ್ನ ಪ್ರಶ್ನೆ ಏನೆಂದರೆ, ಮಂತ್ರಿಗಳು ಒಂದೇ ಒಂದು ನಿಮಿಷ ತಾವು yield ಆಗಿ. ನಾನು ಆರೋಪ ಮಾಡುತ್ತಿಲ್ಲ. ಅವರು ಚೆನ್ನಾಗಿ ಹೇಳಿದರು. ಸದಾನಂದ ಗೌಡರವರ ಕಾಲದಲ್ಲಿ start ಆಯಿತು, ಜಗದೀಶ್ ಶೆಟ್ಟರ್‌ರವರ ಕಾಲದಲ್ಲಿ ಮುಂದುವರಿಯಿತು ಎಂದರು. ಅದಕ್ಕೆ ಇವರು 20 ನೇ ಮೇ ನಲ್ಲಿ DPR ಆಯಿತು ಎಂದರು. ಈ ಪ್ರಶ್ನೆ ಏನೆಂದರೆ, ಅವರು start ಮಾಡಿದ ಉದ್ದೇಶ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ fluoride ಇದೆ, ಜನರಿಗೆ ಒಳ್ಳೆಯ ನೀರು ಕೊಡಬೇಕೆನ್ನುವ ಉದ್ದೇಶದಿಂದ ಅವರು start ಮಾಡಿದ್ದಾರೆ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಉಪಾಧ್ಯಕ್ಷರೆ, ಈಗ ನಮ್ಮ ಜೀವರಾಜ್‌ರವರು ಹೇಳುತ್ತಿದ್ದಾರೆ.

(ಗೊಂದಲ)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಡಿ.ಎನ್.ಜೀವರಾಜ್ : ಒಂದು ನಿಮಿಷ ತಾಳಿ, ಮಂತ್ರಿಗಳು yield ಆಗಿದ್ದಾರೆ, ನನಗೆ ಅವಕಾಶ ಕೊಟ್ಟಿದ್ದಾರೆ. ನೀವು ನಂತರ ಮಾತನಾಡಿ.

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಸದಾನಂದ ಗೌಡರವರು ಅಡಿಗಲ್ಲು ಹಾಕುತ್ತಾರೆ. ಇನ್ನೊಂದು ಕಡೆ ನಿಮ್ಮ ನಳಿನ್ ಕುಮಾರ್ ಕಟೀಲ್‌ರವರು ವಿರೋಧಿಸುತ್ತಾರೆ. ಇದು ನ್ಯಾಯವೇ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ನಾನು ಉತ್ತರ ಕೊಡುತ್ತೇನೆ ಬಿಡಿ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಈಗಲೂ ಸದಾನಂದ ಗೌಡರವರು ಅಲ್ಲಿಂದ ಇಲ್ಲಿಗೆ ನೀರು ಕೊಡಬೇಕು ಎನ್ನುವ ದೊಡ್ಡತನ ತೋರಿಸಿದ ಮೇಲೆ ಇವರ ಕೈಯಲ್ಲಿ ನೀರನ್ನು ಒದಗಿಸಲಿಕ್ಕಾಗಲಿಲ್ಲ ಎನ್ನುವುದನ್ನು ಇವರು ಒಪ್ಪಿಕೊಳ್ಳಬೇಕಲ್ಲವೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಸದಾನಂದ ಗೌಡರವರು ಅಡಿಗಲ್ಲು ಹಾಕುತ್ತಾರೆ. ಇನ್ನೊಂದು ಕಡೆ ನಿಮ್ಮ ನಳಿನ್ ಕುಮಾರ್ ಕಟೀಲ್‌ರವರು ವಿರೋಧಿಸುತ್ತಾರೆ. ಇದು ನ್ಯಾಯವೇ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ಅಲ್ಲಿ ನಳಿನ್ ಕುಮಾರ್ ಕಟೀಲ್‌ರವರನ್ನು ಬಿಡುತ್ತಾರೆ. ಇಲ್ಲಿ ಬಂದು ಸದಾನಂದ ಗೌಡರವರು ಅಡಿಗಲ್ಲು ಹಾಕುತ್ತಾರೆ. ನಿಮ್ಮಲ್ಲಿ ಎಷ್ಟು ಗೊಂದಲಗಳಿವೆ ಗೊತ್ತೇ? ಈ double drama ಬೇಡ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಎತ್ತಿನಹೊಳೆ ಯೋಜನೆಗೆ ನಿಮ್ಮ ಜನಾರ್ಧನ ಪೂಜಾರಿಯವರು ವಿರೋಧಿಸಿದ್ದಾರೆ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ಆ ಕಡೆ ಅಲ್ಲಿ ವಿರೋಧ ಮಾಡಿದಂಥವರು ಇವರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಜನಾರ್ಧನ ಪೂಜಾರಿಯವರು ಏನು ಹೇಳಿದ್ದಾರೆ, ನಿಮ್ಮ ಮಾಜಿ ಶಾಸಕರು ಏನು ಹೇಳಿದ್ದಾರೆ ಎಂಬುದನ್ನು ನೋಡಿ. ಸುಮ್ಮನೆ ನಳಿನ್ ಕುಮಾರ್ ಕಟೀಲ್‌ರ ಒಬ್ಬರ ಹೆಸರು ಹೇಳಬೇಡಿ. ಜನಾರ್ಧನ ಪೂಜಾರಿಯವರು ಏನು ಹೇಳಿದ್ದಾರೆಂಬುದನ್ನು ನೋಡಿ. ನಿಮ್ಮ ನಾಯಕರು ಹೇಳಿರುವುದನ್ನು ನೀವು ತಿರಸ್ಕಾರ ಮಾಡುತ್ತೀರಾ?

(ಗೊಂದಲ)

ಶ್ರೀ ಕೆ. ಅಭಯಚಂದ್ರ ಜೈನ್ : ನಿಮ್ಮ MP ಯವರು ಅಲ್ಲಿ ಏನು ಹೇಳಿದ್ದಾರೆಂಬುದನ್ನು ನೋಡಿ.

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್ : ತೊಟ್ಟಿಲೂ ತೂಗುತ್ತೀರಿ, ಮಗುವನ್ನೂ ಚಿವುಟುತ್ತೀರಿ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ನಾವು ಈಗಲೂ ಸ್ಪಷ್ಟವಾಗಿದ್ದೇವೆ.

(ಗೊಂದಲ)

ಶ್ರೀ ಕೆ.ಅಭಯಚಂದ್ರ ಜೈನ್ : ನಿಮ್ಮ MP ಗೆ ಅಲ್ಲಿ ಹೇಳಿ. ನಿಮಗೆ ಮಾನ ಮರ್ಯಾದೆ ಇರಬೇಕಲ್ಲವೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಅಲ್ಲಿ ಅವರು ಪ್ರತಿಭಟನೆ ಮಾಡುತ್ತಿದ್ದಾರೆ. ತೊಟ್ಟಿಲೂ ತೂಗುತ್ತೀರಿ, ಮಗುವನ್ನೂ ಚಿವುಟುತ್ತೀರಿ. ಎರಡೂ ಕೆಲಸ ಮಾಡುತ್ತೀರಲ್ಲ? ಯಾವುದಾದರೂ ಒಂದು ಮಾಡಿ.

ಶ್ರೀ ಎಂ.ಬಿ.ಪಾಟೀಲ್ : ಅವರದ್ದು ಯಾವಾಗಲೂ ದ್ವಂದ್ವ ನೀತಿ.

(ಗೊಂದಲ)

ಉಪಾಧ್ಯಕ್ಷರು : ಆಯಿತು ಬಿಡಿ, ನೀವು ಉತ್ತರ ಕೊಡಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಂ.ಬಿ.ಪಾಟೀಲ್ : ಉಪಾಧ್ಯಕ್ಷರೆ, ನಾನು ಲಿಖಿತ ಉತ್ತರ ಕೊಟ್ಟಿದ್ದೇನೆ. ಕೋಲಾರ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಬಗ್ಗೆ ನಾನು ಉತ್ತರ ಹೇಳಬೇಕಾಗುತ್ತದೆ. ತಾವು ಹೇಳಿ ಎಂದರೆ ಹೇಳುತ್ತೇನೆ, ಇಲ್ಲದಿದ್ದರೆ ಹಾಗೆಯೇ ಮುಖ್ಯ ಭಾಗಗಳನ್ನು ಹೇಳಬೇಕೆಂದರೂ ಆ ರೀತಿಯಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷರು : Important points ಹೇಳಿ ಸಾಕು.

ಶ್ರೀ ಎಂ.ಬಿ.ಪಾಟೀಲ್ : ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರ್ಕಾರ ಬಂದ ಮೇಲೆ ಈ tenders ನ್ನು re-tender ಮಾಡಿ ಈ ಕೆಲಸವನ್ನು ಪ್ರಾರಂಭಿಸಿದ್ದೇವೆ. ಈ ಯೋಜನೆಗೆ 12 ಸಾವಿರ ಕೋಟಿ ರೂಪಾಯಿಗಿಂತ ಜಾಸ್ತಿಯಾಗಿದ್ದು ಒಟ್ಟು 12,912.36 ಕೋಟಿ ರೂಪಾಯಿಗಳಾಗಿದೆ. ಈ ಯೋಜನೆ ಪ್ರಾರಂಭವಾದಾಗಿನಿಂದ ಈ ಕಡೆ ಭೂ ಸ್ವಾಧೀನ ಸಮಸ್ಯೆ, ಒಂದು ಕಡೆಗೆ NGT ಯಲ್ಲಿ case ನ ಸಮಸ್ಯೆ, ಇನ್ನೊಂದು ಕಡೆಗೆ ಯಾರೋ ಒಬ್ಬ Professor, ಅವರು Hydrologist ಅಲ್ಲ ಎಂದು ನಾನು ಹೇಳುತ್ತಿದ್ದೇನೆ. ಈ ಬಗ್ಗೆ ಅದಕ್ಕೆ ನಾನು ಉತ್ತರ ಕೂಡ ಕೊಟ್ಟಿದ್ದೇನೆ. ಇದೆಲ್ಲದರ ಮಧ್ಯೆ ನಾವು ಇವತ್ತು ಕೆಲಸ ಮಾಡುತ್ತಿದ್ದೇವೆ. ಇಲ್ಲಿಯವರೆಗೆ 2,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಿಂದಿನ ಸರ್ಕಾರದಲ್ಲಿ ಒಂದು ರೂಪಾಯಿ ಕೂಡ ಕೆಲಸ ಆಗಿರಲಿಲ್ಲ ಏಕೆಂದರೆ tender ಕರೆದಿದ್ದರೂ finalize ಆಗಿರಲಿಲ್ಲ. ಇದರಲ್ಲಿ ಎರಡು ಭಾಗ ಇದೆ. 1) Lift part, 2) Conveyance part. Lift scheme ನ್ನು ಇದೆಲ್ಲದರ ಮಧ್ಯೆ ನಾವು ಬಹಳಷ್ಟು ಕೆಲಸ ಮಾಡಿದ್ದೇವೆ. ತಾವು ಕೂಡ ಭೇಟಿ ನೀಡಿದ್ದೀರಿ ಇದು ನನಗೆ ಗೊತ್ತಿದೆ. ನಮ್ಮ ರಾಜಣ್ಣನವರು ಕೂಡ ಸದನ ಸಮಿತಿ ವತಿಯಿಂದ ಅವರು ಕೂಡ ಭೇಟಿ ನೀಡಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರು ಸಹ ಕೂಡ ಅಲ್ಲಿಗೆ ಭೇಟಿ ನೀಡಿದ್ದಾರೆ. ಈ ಎಲ್ಲಾ odds, ತೊಂದರೆಗಳ ಮಧ್ಯೆ ಇಲಾಖೆ ಬಹಳ ಗಣನೀಯವಾದಂಥ ಸಾಧನೆ ಮಾಡಿದೆ. Lift scheme ನಲ್ಲಿರುವ 6 weirs ನ್ನು complete ಮಾಡಿದ್ದೇವೆ. ನಮ್ಮ ಒಬ್ಬ ಅಧಿಕಾರಿಯವರು ಇಂದು statement ಕೊಟ್ಟು ಹೇಳಿದ್ದಾರೆ. ಏನು ಕೊಟ್ಟಿದ್ದಾರೆಂದರೆ, ಜನವರಿ end ವರೆಗೆ ನಾವು ಈ lift scheme ನ್ನು complete ಮಾಡಿ ಅಲ್ಲಿಂದ ನೀರು ಕೊಡುತ್ತೇವೆಂದು ಹೇಳಿದ್ದಾರೆ. Gravity canals ಗಾಗಿ ಸುಮಾರು 55 K.M.ವರೆಗೆ tender ನ್ನು ಕರೆದಿದ್ದೇವೆ. ಈ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯೋಜನೆ ಬಹಳ ತೀವ್ರಗತಿಯಲ್ಲಿ ಆಗಬೇಕೆಂದು ನಮ್ಮ ಮುಖ್ಯಮಂತ್ರಿಗಳ ಒಂದು ಆಸೆಯಾಗಿತ್ತು ಮತ್ತು ಈ ಸದನದ ಎಲ್ಲಾ ಸದಸ್ಯರದ್ದು ಕೂಡ ಆಸೆಯಾಗಿತ್ತು, ಇದರಲ್ಲಿ ಎರಡು ಮಾತಿಲ್ಲ. ಈ ಸಮಸ್ಯೆಗಳು ಬಂದ ಮೇಲೆ ಸ್ವಲ್ಪ ದಿವಸ ನಮಗೆ ಹಿನ್ನಡೆಯಾಗಿದ್ದರೂ ಕೂಡ ನಾವು ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ವೇಗವಾಗಿ ಈ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಎತ್ತಿನಹೊಳೆ ಯೋಜನೆಯಲ್ಲಿ ಸುಮಾರು 527 ಸಣ್ಣ ನೀರಾವರಿ ಕೆರೆಗಳಿಗೆ 50% ತುಂಬಿಸುವುದಕ್ಕೆ ಅವಕಾಶವಿದೆ. ಮಾನ್ಯ ಸದಸ್ಯರು ಕೇಳುತ್ತಿದ್ದರು ನಾನು ನಿಮಗೆ statement ಕೊಟ್ಟಿದ್ದೇನೆ.

ಶ್ರೀ ಕೆ.ಎಸ್.ಮಂಜುನಾಥ ಗೌಡ : ಉಪಾಧ್ಯಕ್ಷರೆ, ಒಂದು ನಿಮಿಷ.

ಉಪಾಧ್ಯಕ್ಷರು : ಮಂಜುರವರೆ ಕುಳಿತುಕೊಳ್ಳಿ ಆಮೇಲೆ clarification ಕೇಳಿ.

ಶ್ರೀ ಎಂ.ಬಿ.ಪಾಟೀಲ್ : ನನ್ನ ಉತ್ತರ ಮುಗಿದ ಮೇಲೆ ಹೇಳಿ. ಇದು 15.029 TMC ಯಷ್ಟು ಕುಡಿಯುವ ನೀರು ಪೂರೈಸುವ ಸಲುವಾಗಿ ಮತ್ತು 527 ಸಣ್ಣ ನೀರಾವರಿ ಕೆರೆಗಳಿಗೆ ಶೇಕಡ 50 ರಷ್ಟು ತುಂಬಿಸುವ ಸಲುವಾಗಿ 8.967 TMC ಯೋಜನೆಯಾಗಿರುತ್ತದೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆ 17-02-2014 ರಂದು ನೀಡಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶ ಏನೆಂದರೆ, ಒಂದು ಕಡೆ ಈಗಾಗಲೇ ಹೇಳಿದ ಹಾಗೆ ಗೊಂದಲಗಳು. ಇಲ್ಲಿ ಕೇವಲ 5-6 ತಿಂಗಳು ಮಾತ್ರ ಕೆಲಸ ಮಾಡಲಿಕ್ಕೆ ಆಗುತ್ತದೆ. ಸುಮಾರು 6 ತಿಂಗಳು ವಿಶೇಷವಾಗಿ lift component ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಈ ಕೆಲಸ ನಡೆಯುತ್ತಿದೆ. ನಮ್ಮ ಇಲಾಖಾಧಿಕಾರಿಗಳು ಮಾಡಿರುವ ಕೆಲಸದ ಬಗ್ಗೆ ನಾನು ಬಹಳ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಏಕೆಂದರೆ, ಅಲ್ಲಿಗೆ ಹೋಗಿ visit ಮಾಡಿ ನೋಡಿದವರಿಗೆ ಗೊತ್ತಾಗುತ್ತದೆ. ಸುಮ್ಮನೆ ನಾವು ನೋಡಲಾರದೆ, ಇಲ್ಲಿ ಸದನದಲ್ಲಿ ಮಾತನಾಡಿದರೆ ಬಹುಶ: ತಪ್ಪಾಗುತ್ತದೆ. ಅಲ್ಲಿ ಹೋಗಿ ನೋಡಿ ಅಲ್ಲಿ ಯಾವ ರೀತಿಯ ಸಮಸ್ಯೆಗಳಿವೆ, ಅಲ್ಲಿನ working period ಎಷ್ಟು ಇದೆ, ಅದರಲ್ಲಿನ ಸಮಸ್ಯೆಗಳೇನು ಇವೆ, ಇವೆಲ್ಲವನ್ನು ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಬಹುಶ: ಅಲ್ಲಿ ಹೋಗಿ ನೊಡಿದವರಿಗೆ ಅಲ್ಲಿ ಎಷ್ಟು ಕಷ್ಟ ಇದೆ ಎಷ್ಟು ಕೆಲಸ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ.

(ಮುಂದು)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017/6.00/40/GG/SP

ಶ್ರೀ ಎಂ.ಬಿ. ಪಾಟೀಲ್ (ಮುಂದುವರೆದುದು): ಈ ಸರ್ಕಾರ ಬಂದ ಮೇಲೆ ಎತ್ತಿನಹೊಳೆ ಮತ್ತು ಕೆ.ಸಿ. ವ್ಯಾಲಿ ಯೋಜನೆಗಳಿಗೆ ಅನುವು ಮಾಡಿಕೊಟ್ಟೆವು. ಕೆ.ಸಿ. ವ್ಯಾಲಿಯಿಂದ ಬರುವುದು sewage water ಎಂದು ಯಾರೋ ಹೇಳಿದರು. ಹೌದು, ಅದು sewage water. ಅದನ್ನು ನಾವು treat ಮಾಡಿದ ಮೇಲೆ agriculture purpose ಗೆಂದು, ಆ ನೀರನ್ನು ಕೆರೆಯಲ್ಲಿ ಬಿಟ್ಟು ನಂತರ ಕೊಡುತ್ತಿದ್ದೇವೆ. ಅದರಲ್ಲಿ ಯಾವುದೇ ತಪ್ಪಾಗುವುದಿಲ್ಲ. ಕೆ.ಸಿ. ವ್ಯಾಲಿ ಕೆಲಸವನ್ನೂ ಕೂಡ ನಮ್ಮ ಸರ್ಕಾರ ಬಂದ ಮೇಲೆ ಮಾಡಿದೆ. ಹಿಂದಿನ ಯಾವ ಸರ್ಕಾರಗಳೂ ಈ ಕೆಲಸವನ್ನು ಮಾಡಲಿಲ್ಲ. ನಮ್ಮ ಮುಖ್ಯಮಂತ್ರಿಗಳು, ಸಣ್ಣ ನೀರಾವರಿ ಮಂತ್ರಿಗಳಾದ ಜಯಚಂದ್ರರವರು ಮತ್ತು ಹಿಂದೆ ಇದ್ದಂಥ ತಂಗಡಗಿಯವರು ಎಲ್ಲರೂ ಸೇರಿ ಆ ಕೆಲಸವನ್ನು ಮಾಡಿದ್ದಾರೆ. ಇಲ್ಲಿ, ಕಮಿಟಿಯ ಬಗ್ಗೆ ಮಾತನಾಡಿದರು. Former C.W.C. Chairman ಆದಂಥ ಬಜಾಜ್‌ರವರ ನೇತೃತ್ವದಲ್ಲಿ ಸಮಿತಿಯನ್ನು ಮಾಡಿದ್ದೇವೆ. ಈ ಸಮಿತಿಯು ಈಗಾಗಲೇ ಮೂರು ಸಭೆಗಳನ್ನು ಮಾಡಿದೆ. ಇನ್ನು ಹದಿನೈದು ದಿವಸಗಳಲ್ಲಿ ಅಂದರೆ ಬಹುಶ: ದಿನಾಂಕ 15-07-2015ಕ್ಕೆ ಆ ಸಮಿತಿಯು ಅಂತಿಮ ವರದಿಯನ್ನು ಕೊಡುತ್ತಿದೆ. ಸಮಿತಿಯನ್ನು ಮಾಡಿದರೂ ಅವರು ಏನೂ ಮಾಡಿಲ್ಲ ಎನ್ನುವ ಹಾಗಿಲ್ಲ. 14 ಜನ ಸದಸ್ಯರ ಸಮಿತಿಯದು.

ಶ್ರೀ ಎಂ. ನಾರಾಯಣಸ್ವಾಮಿ: ಆ ಸಮಿತಿಯನ್ನು ಏತಕ್ಕೋಸ್ಕರ ಮಾಡಿದಿರಿ? ಆ ಸಮಿತಿಯನ್ನು ರಚನೆ ಮಾಡಿದ ಉದ್ದೇಶವೇನು ಎನ್ನುವುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್: ಇದು ತಮಗೂ ಗೊತ್ತಿದೆ, ತಾವು ವಿಧಾನ ಪರಿಷತ್ತಿನಲ್ಲಿದ್ದಾಗ ಅನೇಕ ಬಾರಿ ಇದರ ಬಗ್ಗೆ statement ಮಾಡಿದ್ದೇವೆ. ಆ ಸಮಿತಿಯನ್ನು ರಚನೆ ಮಾಡಿದ ಉದ್ದೇಶವೆಂದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಯಾವಯಾವ ಮೂಲಗಳಿಂದ ಕುಡಿಯುವ ನೀರು ಮತ್ತು ಕೃಷಿಗಾಗಿ ನೀರನ್ನು ತರಿಸಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡುವುದಾಗಿತ್ತು. ಕೇವಲ ಎತ್ತಿನಹೊಳೆ ಯೋಜನೆ ಅಷ್ಟೇ ಅಲ್ಲ, ಕೆ.ಸಿ. ವ್ಯಾಲಿ ಇರಬಹುದು, ಮೇಕೆದಾಟು ಇರಬಹುದು ಅಥವಾ ಲಿಂಗನಮಕ್ಕಿಯಿಂದ ಇರಬಹುದು, ಈ ಎಲ್ಲಾ ಮೂಲಗಳಿಂದಲೂ ನೀರನ್ನು ತರಲು ಸಾಧ್ಯವೇ

ಎನ್ನುವುದನ್ನು ಆ Committee ಮುಂದೆ ಇವತ್ತಿನ ದಿವಸ study ಮಾಡುತ್ತಿದ್ದೇವೆ. ಅದು 14 ಜನರ ಸಮಿತಿಯಾಗಿದೆ. ಇನ್ನೊಬ್ಬರು yield ಬಗ್ಗೆ ಪ್ರಸ್ತಾಪ ಮಾಡಿದರು. Yield ಬಗ್ಗೆ ಬಹಳಷ್ಟು ಗೊಂದಲವನ್ನು ಸೃಷ್ಟಿಸಲಾಗಿದೆ. ಇದಕ್ಕೆ ಕೂಡ ಅನೇಕ ಬಾರಿ ನಾನು ಉತ್ತರವನ್ನು ಕೊಟ್ಟಿದ್ದೇನೆ. Hydrologyಗೆ ಸಂಬಂಧಿಸಿದವರು yield ಬಗ್ಗೆ decide ಮಾಡುತ್ತಾರೆ. National Institute of Hydrology ಯ Hydrologist ಆದ ರಾಮಪ್ರಸಾದ್‌ರವರು ಇದನ್ನು hydrology study ಮಾಡಿ 24 ಟಿ.ಎಂ.ಸಿ. yield ಬರುತ್ತದೆಂದು ಅಂದಾಜು ಮಾಡಿದ್ದಾರೆ. ಇದಾದ ಮೇಲೆ, ನಮ್ಮ ರಾಜ್ಯದ ಬೆಳಗಾವಿಯಲ್ಲಿ National Institute of Hydrology ಶಾಖೆ ಇದ್ದು, ಅವರೂ ಕೂಡ ಈ yield ಅನ್ನು ಇವತ್ತಿನ ದಿವಸ confirm ಮಾಡಿದ್ದಾರೆ. National Institute of Hydrology ಯವರ report ultimate. ನಮ್ಮ National Institute of Hydrology ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಳಷ್ಟು ವಿಶ್ವಾಸವನ್ನು ಹೊಂದಿದೆ. ಮೂರನೆಯದಾಗಿ C.W.C.ಯಲ್ಲಿ Hydrology Department ಇದೆ. ಅವರೂ ಕೂಡ ನಾವು ಅಳವಡಿಸಿಕೊಂಡಿರುವ ಪದ್ಧತಿಯು it is in line ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 24 ಟಿ.ಎಂ.ಸಿ. yield ಬರುತ್ತದೆ ಎಂದು ನಾವೇನು ಅಂದಾಜು ಮಾಡಿದ್ದೇವೆ, ಅದನ್ನು confirm ಮಾಡುವ ರೀತಿಯಲ್ಲಿ ಅವರೂ ಕೂಡ ಹೇಳಿದ್ದಾರೆ. ಆದರೆ ಯಾರೋ ಒಬ್ಬರು, ನಾನು ಇಲ್ಲಿ ಅವರ ಹೆಸರನ್ನು ಬಳಸಲು ಬಯಸುವುದಿಲ್ಲ, who is not concerned about Hydrology, ಅವರು Indian Institute of Science ನಲ್ಲಿ ಇರಬಹುದು, ಆದರೆ ಅವರಿಗೆ Hydrology ಬಗ್ಗೆ ಏನೂ ಗೊತ್ತಿಲ್ಲ, ಅವರು ಈ ಗೊಂದಲವನ್ನು ಸೃಷ್ಟಿ ಮಾಡಿ ಒಂದು statement ಕೊಟ್ಟುಬಿಟ್ಟರು. ಅನೇಕ ಸಲ ರಾಮಪ್ರಸಾದ್‌ರವರು, ಇದಕ್ಕೆ ನೀವು ಏನು ಸಮಜಾಯಿಷಿ ಕೊಡುತ್ತೀರಿ ಎಂದು ಅವರನ್ನು ಸಮ್ಮುಖದಲ್ಲಿ ಕೇಳಿದರೂ, ಅದಕ್ಕೆ ಅವರಿಂದ ಏನೂ ಉತ್ತರವಿಲ್ಲ. ಆದರೆ ಎಲ್ಲೋ ಒಂದು ಕಡೆ ಮಾಧ್ಯಮದವರ ಮುಂದೆ ಬಂದು ಕುಳಿತು ಹೇಳಿಕೆಯನ್ನು ಕೊಟ್ಟಿದ್ದಾರೆ. C.W.C., National Institute of Hydrology ಮತ್ತು ರಾಮಪ್ರಸಾದ್, ಇವರೆಲ್ಲರೂ ಕೂಡ ಇದರಲ್ಲಿ 24 ಟಿ.ಎಂ.ಸಿ. ನೀರು ಸಿಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಕೆ.ಎಸ್. ಮಂಜುನಾಥಗೌಡರವರು ಮಾತನಾಡಲು ಅವಕಾಶವನ್ನು ಕೋರಿ ಎದ್ದು ನಿಂತರು.)

ಉಪಾಧ್ಯಕ್ಷರು: ಅವರು reply ಮುಗಿಸಲಿ, ಆಮೇಲೆ ಏನಾದರೂ ಕೇಳುವುದಿದ್ದರೆ clarification ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಹೀಗೆ ಮಧ್ಯದಲ್ಲಿ ಎದ್ದು ಕೇಳುತ್ತಾ ಹೋದರೆ ಹೇಗೆ?

ಶ್ರೀ ಎಂ.ಬಿ. ಪಾಟೀಲ್: ನೀವು ಇದ್ದಾಗ ಏನೂ ಮಾಡಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಈ ಸಮಸ್ಯೆ ಉಂಟಾಗಿಲ್ಲ. ನಮ್ಮ ಸರ್ಕಾರ ಬರುವುದಕ್ಕೆ ಮೊದಲು ನೀವೂ ಇದ್ದಿರಿ, ಅವರೂ ಇದ್ದರು, ಎಲ್ಲರೂ ಇದ್ದರಿ, ಆದರೂ ಏನು ಮಾಡಿಲ್ಲ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಅವರ ಉತ್ತರ ಮುಗಿಯಲಿ. ಮುಗಿದ ಮೇಲೆ ನಾನು clarification ಕೇಳುತ್ತೇನೆ. ನಾವು ಏನು ಮಾಡಿದ್ದೇವೆ ಎನ್ನುವುದನ್ನು ಆಗ ಹೇಳುತ್ತೇನೆ.

ಶ್ರೀ ಎಂ.ಬಿ. ಪಾಟೀಲ್: ಕಾರಜೋಳರವರೆ, ನಿಮ್ಮ ಈ ಮನೋಭಾವ ಎಲ್ಲದರಲ್ಲೂ ಇರುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ: ನೀವು 50 ವರ್ಷ ರಾಜ್ಯಭಾರ ಮಾಡಿದ್ದೀರಿ, ಏಕೆ ನೀವು ಮಾಡಲಿಲ್ಲ?

ಶ್ರೀ ಎಂ.ಬಿ. ಪಾಟೀಲ್: ಕಾರಜೋಳರವರೆ, ಬಹುಶ: ನಾವ್ಯಾರೂ ನಿಮ್ಮಂಥ ಬುದ್ಧಿಜೀವಿಗಳಲ್ಲ. ನೀವು ಬುದ್ಧಿಜೀವಿಗಳು ಎನ್ನುವುದನ್ನು ನಾನೇ ಒಪ್ಪುತ್ತೇನಲ್ಲ.

ಶ್ರೀ ಎಂ. ನಾರಾಯಣಸ್ವಾಮಿ: ಮಾನ್ಯ ಮಂತ್ರಿಗಳು ಉತ್ತರವನ್ನು divert ಮಾಡುತ್ತಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್: ನಾನು ಒಬ್ಬ ಸಚಿವರಾಗಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ನೀವು ಬಹಳ ಬುದ್ಧಿಜೀವಿಗಳು.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಗೋವಿಂದ ಎಂ ಕಾರಜೋಳ: ನಾವು ಏನೂ ಮಾಡಿಲ್ಲ ಎಂದಿರಲ್ಲ, clarification ಕೇಳುವಾಗ ನಾನು ಹೇಳುತ್ತೇನೆ.

ಉಪಾಧ್ಯಕ್ಷರು: ಅವರು ಮಾತನಾಡಲಿ, ಆಮೇಲೆ ನೀವು ಕೇಳಿ.

ಶ್ರೀ ಎಂ. ನಾರಾಯಣಸ್ವಾಮಿ: ಮಾನ್ಯ ಮಂತ್ರಿಗಳು ಉತ್ತರವನ್ನು divert ಮಾಡುತ್ತಿದ್ದಾರೆ. ನಮ್ಮ ಪ್ರಶ್ನೆ ಇಷ್ಟೇ, ಎತ್ತಿನಹೊಳೆ ಯೋಜನೆಗೆ ಸೀಮಿತವಾಗಿ ಉತ್ತರ ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್: ಎಲ್ಲ ವಿಚಾರಗಳಿಗೆ ಉತ್ತರ ಕೊಡಬೇಕಾಗುತ್ತದೆ. ನಾವು ಸಮಗ್ರವಾಗಿ ಉತ್ತರ ಕೊಡುತ್ತಿದ್ದೇವೆ.

ಶ್ರೀ ಎಂ. ನಾರಾಯಣಸ್ವಾಮಿ: ನಿಮ್ಮ ಉತ್ತರ ನೋಡಿದರೆ ಎತ್ತಿನಹೊಳೆ ಯೋಜನೆಯಲ್ಲಿ ನಿಮ್ಮ progress ಏನೂ ಇಲ್ಲ.

ಶ್ರೀ ಎಂ.ಬಿ. ಪಾಟೀಲ್: ನಾನು ಸ್ಪಷ್ಟವಾಗಿ ಉತ್ತರ ಕೊಡುತ್ತಿದ್ದೇನೆ.

ಶ್ರೀ ಎಂ. ನಾರಾಯಣಸ್ವಾಮಿ: ಯೋಜನೆ ಪ್ರಾರಂಭವಾಗಿ ನಾಲ್ಕು ವರ್ಷಗಳಾದರೂ ಇನ್ನೂ ಟೆಂಡರ್ ಕರೆದಿಲ್ಲ.

ಉಪಾಧ್ಯಕ್ಷರು: ನೀವು ಹೀಗೇ ಉತ್ತರ ಕೊಡಿ ಎಂದು ಸರ್ಕಾರಕ್ಕೆ ಹೇಳಲು ಬರುವುದಿಲ್ಲ. ಅವರು ಪೂರೈಸಲಿ.

ಶ್ರೀ ಎಂ.ಬಿ. ಪಾಟೀಲ್: ಬೈರಗುಂಡ್ಲುವಿನಲ್ಲಿ ಜಲಾಶಯದ ಸಲುವಾಗಿ, R&R ಸಲುವಾಗಿ ಒಂದು ಸಮಿತಿಯನ್ನು ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ನಾರಾಯಣಸ್ವಾಮಿಯವರೆ, ನಿಮಗೂ ಗೊತ್ತಿದೆ, lift componentನಲ್ಲಿ land acquisition ಸಮಸ್ಯೆ ಬಂದಾಗ direct purchase ಗೆ ಕೂಡ ನಮ್ಮ ಸರ್ಕಾರ ಆದೇಶ ಮಾಡಿತು. ಈ ರೀತಿ ಏನೆಲ್ಲ ಮಾಡಬೇಕೋ ಅದನ್ನು ಮಾಡಿ ನಾವು ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದೇವೆ. ಬಹುಶ: ನೀವು ಅಲ್ಲಿಗೆ ಭೇಟಿ ನೀಡಿಲ್ಲ. ನೀವು ಅಲ್ಲಿಗೆ ಹೋಗಿ ನೋಡಿದ್ದರೆ ಈ ಮಾತನ್ನು ಆಡುತ್ತಿರಲಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ: Lift portion ನಲ್ಲಿ ನಿಮ್ಮ ಬದ್ಧತೆಯನ್ನು ನಾನು ನೋಡಿದ್ದೇವೆ. ಅವರೂ ಹೋಗಿದ್ದರು. ನಾವೆಲ್ಲರೂ ಜೊತೆಗೆ ಹೋಗಿ ಅದನ್ನು ನೋಡಿಕೊಂಡು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಂದಿದ್ದೇವೆ. ನೀವು lift portionಗೆ ಎಷ್ಟು ಆದ್ಯತೆ ಕೊಟ್ಟಿದ್ದೀರೋ, ಅಲ್ಲಿಂದ ಮುಂದಕ್ಕೆ ನಿಮ್ಮ ಆದ್ಯತೆ zero ಎಂದು ತೋರಿಸುತ್ತಿದೆ. ಅದರ ಬಗ್ಗೆ ನಾನು ಹೇಳುತ್ತಿದ್ದೆನೆ.

ಶ್ರೀ ಎಂ.ಬಿ. ಪಾಟೀಲ್: ನಾನು ಉತ್ತರ ಕೊಡುವವರೆಗೆ ನಿಮಗೆ ತಾಳ್ಮೆ ಇಲ್ಲವಲ್ಲ.

ಶ್ರೀ ಎಂ. ನಾರಾಯಣಸ್ವಾಮಿ: ನೀವು ನೀರನ್ನು lift ಮಾಡಿ ಎಲ್ಲಿಗೆ ಕಳುಹಿಸುತ್ತೀರಿ? ಹೇಗೆ ಕಳುಹಿಸುತ್ತೀರಿ? ಎಲ್ಲಿ store ಮಾಡಿಕೊಳ್ಳುತ್ತೀರಿ? ಏನು ಮಾಡುತ್ತೀರಿ? ಅದರ ಬಗ್ಗೆ ಹೇಳಿ.

ಶ್ರೀ ಎಂ.ಬಿ. ಪಾಟೀಲ್: ಈಗಾಗಲೇ conveyance part ನ 55 ಕಿಲೋಮೀಟರ್‌ಗೆ ನಾವು ಟೆಂಡರ್‌ಅನ್ನು ಕರೆದಿದ್ದೇವೆ. ಬೈರಗುಂಡ್ಲು ಜಲಾಶಯದಲ್ಲಿ 5,400 ಎಕರೆ ಜಮೀನು ಬೇಕಾಗುತ್ತದೆ. ಭೂಸ್ವಾಧೀನದಿಂದ ಮುಳುಗಡೆಯಾಗುವಂಥ ಒಟ್ಟು ಪ್ರದೇಶ 5,400 ಎಕರೆ. Irrigation Schemesಗೆ Social Impact Assessment ಇಲ್ಲ. ಎತ್ತಿನಹೊಳೆ ಯೋಜನೆಯು ಕುಡಿಯುವ ನೀರಿನ ಯೋಜನೆಯಾಗಿದ್ದರೂ ಸಹ ಅದಕ್ಕೆ Social Impact Assessment ಇದೆ. ಈಗಾಗಲೇ Social Impact Assessment ವರದಿ ಸಿದ್ಧವಾಗಿದೆ. ಹೀಗೆ ಎಲ್ಲ ಪ್ರಕ್ರಿಯೆಗಳೂ ಕೂಡ ಚಾಲನೆಯಲ್ಲಿವೆ. ಇರುವಂಥ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಅಷ್ಟೇ ಅಲ್ಲ, Upper Bhadra ಯೋಜನೆಯಲ್ಲೂ ಕೂಡ, ಹಿಂದಿನ ಯಾವ ಸರ್ಕಾರವೂ ಖರ್ಚು ಮಾಡಿರದಷ್ಟು ಹಣವನ್ನು ನಮ್ಮ ಸರ್ಕಾರ Upper Bhadra ಯೋಜನೆಗಾಗಿ ಖರ್ಚು ಮಾಡಿದೆ. ನನಗೆ ಒಂದು ಆಸೆ ಇತ್ತು, Upper Bhadra Scheme ನಲ್ಲಿರುವ ಅಜ್ಜಂಪುರ ಟನಲ್ 7 ಕಿಲೋಮೀಟರ್ ಇದೆ. ಅದರಲ್ಲಿ ನಾವು ಸುಮಾರು ಐದೂವರೆ ಕಿಲೋಮೀಟರ್‌ನಷ್ಟು tunnelಅನ್ನು ಮಾಡಿದ್ದೇವೆ. ಆ tunnel ಅನ್ನು cut ಮಾಡಿ gravity ಮೂಲಕ ಚಿತ್ರದುರ್ಗಕ್ಕೆ ಕೆನಾಲ್‌ಗಳ ಮೂಲಕ ಕೆರೆಗಳನ್ನು ತುಂಬಿಸಬೇಕು ಎನ್ನುವುದು ನನ್ನ ಮತ್ತು ಮುಖ್ಯಮಂತ್ರಿಗಳ ಆಶಯವಾಗಿತ್ತು. ಆದರೆ ಅಲ್ಲಿ soft soil ಬಂದಿದೆ. Soft soil ಬಂದಿದ್ದರಿಂದಾಗಿ ನಮ್ಮ ಕೈಕಟ್ಟಿದೆ. ಹಾಗಾಗಿ, ಮುಂದಿನ ಮಳೆ ವರ್ಷದಲ್ಲಾದರೂ ನಾವು ಚಿತ್ರದುರ್ಗಕ್ಕೆ Upper Bhadra Scheme ನಿಂದ ನೀರು ಕೊಡುವಂಥಾದ್ದನ್ನು ಮಾಡುತ್ತೇವೆ. ಚಿತ್ರದುರ್ಗದ ಜನ ಆ ಬಗ್ಗೆ ನನಗೆ ನೆನಪು ಮಾಡಿದ್ದಾರೆ. ಚಿತ್ರದುರ್ಗದ ಶಾಸಕರುಗಳು ಇಲ್ಲಿ ಇರಬಹುದು. ಅಲ್ಲಿ ಕೂಡ ಕೆನಾಲ್‌ಗೆ ಟೆಂಡರ್ ಕರೆದಿದ್ದೇವೆ. ಮುಂದಿನ ಮಳೆ ವರ್ಷದಲ್ಲಿ ಅಜ್ಜಂಪುರ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

tunnel cut ಮಾಡಿ ಕೆನಾಲ್ ಮುಖಾಂತರ ನೀರು ಕೊಡುವುದನ್ನು ಮಾಡುತ್ತೇವೆ. ಕೆನಾಲ್‌ಗೆ ಕೆರೆಗಳ ಲಿಂಕ್ ಕೊಟ್ಟಿದ್ದೇವೆ. ಏಕೆಂದರೆ ಅಜ್ಜಂಪುರ tunnel cut ಆದಮೇಲೆ ನೀರು gravity ಮೇಲೆ ಹೋಗುತ್ತದೆ. ಹಾಗೆ ನಾವು ಚಿತ್ರದುರ್ಗಕ್ಕೆ ನೀರು ಕೊಡುವಂಥ ಕೆಲಸವನ್ನು ಮಾಡಲು ಬಯಸಿದ್ದೇವೆ.

(ಮುಂದುವರೆದಿದೆ)

13-06-2017-6-10-41-MS-SP.

ಶ್ರೀ ಎಂ.ಬಿ.ಪಾಟೀಲ್: (ಮುಂದು)

ಆದರೆ ಇವತ್ತಿನ ದಿವಸ ಅಲ್ಲಿ soft soil ಬಂದು ತೊಂದರೆಯಾಯಿತು. ಮುಂದಿನ ಮಳೆ ವರ್ಷದಲ್ಲಿ ನೂರಕ್ಕೆ ನೂರರಷ್ಟು ಚಿತ್ರದುರ್ಗಕ್ಕೆ ನೀರನ್ನು ಕೊಡುವ ವ್ಯವಸ್ಥೆಯಾಗುತ್ತದೆ. ಇನ್ನೊಂದು ವಿಚಾರದ ಬಗ್ಗೆ ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿದರು. Tunneling and funneling method ವಿಚಾರದ ಬಗ್ಗೆ ನೆನಪು ಮಾಡಿಕೊಡುತ್ತಿದ್ದೇನೆ. ಹಿಂದೆ ಏನು ನಮ್ಮ garland canal ನೀರಾವರಿಯಾಗಬೇಕು ಅಂತ ಹೇಳಿ ಪರಮಶಿವಯ್ಯನವರು ಒಂದು ಕನಸನ್ನು ಭಿತ್ತಿದ್ದರು. ಅವರ ಕನಸು ಏನಾಗಿತ್ತೆಂದರೆ, ಅದು ಒಂದು toposheet ಮೇಲಿತ್ತು. ವಾಸ್ತವಕ್ಕೂ ಅದಕ್ಕೂ ಏನೂ ಸಂಬಂಧ ಇರಲಿಲ್ಲ. ಈ ಬಗ್ಗೆ ನಾನು ಅನಿವಾರ್ಯವಾಗಿ ಹೇಳಲೆಬೇಕಾಗುತ್ತದೆ. ಪರಮಶಿವಯ್ಯನವರು ಹಿರಿಯರಾಗಿದ್ದು ಇವತ್ತಿನದಿವಸ ಅವರು ನಮ್ಮ ಮಧ್ಯ ಇಲ್ಲ. ಅವರಿಗೆ ನಾನು ಗೌರವಪೂರ್ವಕ ಸಲ್ಲಿಸುತ್ತೇನೆ. ಅವರು ಒಂದು sketch ಮಾಡಿ ಹಾಕಿದ್ದರಲ್ಲಾ ಅದಕ್ಕೆ ಏನು ಸಂಬಂಧ ಇರುವುದಿಲ್ಲ. ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರದೆ ಆದ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇತ್ತು. ಅವರು ಆಯಿತು, garland canal concept ಅವರ ಸಮಿತಿಯು ಮೂರು ಸಭೆಗಳನ್ನು ಮಾಡಿದೆ. Common Grid Canal

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇವೆಲ್ಲವನ್ನೂ ನೋಡುವುದಕ್ಕೆ ಅಲ್ಲಿಗೆ ಹೋದರು. ಆದರೆ ಅಲ್ಲಿ ಹೋಗಿ ನೋಡಿದಾಗ, it was just impossible, ಅಲ್ಲಿ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ಅದೇ ಕಮಿಟಿಯು ಇವತ್ತಿನ ದಿವಸ report ಅನ್ನು ಹಾಕಿತು. It was not feasible ಅಲ್ಲ possible. ಇವೆಲ್ಲಕ್ಕೂ ಹಿನ್ನೆಲೆ ಇದೆ. ಆದರೆ ಇವತ್ತು ಜನರ ದೃಷ್ಟಿಯಲ್ಲಿ ಪರಮಶಿವಯ್ಯನವರು ಬಹಳ ದೊಡ್ಡ ಸಾಧನೆ ಮಾಡಿದ್ದಾರೆಂದು ಇದೆ ಎಂದು ಜನರ ಮಧ್ಯ ಇದೆ ಅದನ್ನು ಅಳಿಸಿ ಹಾಕುವುದಕ್ಕೆ ಸಾಧ್ಯವಿಲ್ಲ, ಅದು ಬಹಳ ಕಷ್ಟ ಇದೆ. Perception ಏನಿದೆ ಅದನ್ನು ಅಳಿಸಿ ಹಾಕುವುದಕ್ಕೆ ಆಗುವುದಿಲ್ಲ. ನಾರಾಯಣಸ್ವಾಮಿಯವರೆ, ಅದೇ ಕಮಿಟಿಯು ಕೊನೆಗೆ ನಿರ್ಧಾರ ಮಾಡಿತು. So, it is not possible Garland canal, ನಾಲಾ ಕಾಲುವೆ, . . . I think Professor Srinivas Murthy ಯವರು ಆ ಕಮಿಟಿಯಲ್ಲಿ ಇದ್ದರು. ಒಂದು pilot basis ಮೇಲೆ tunneling and funneling method ಮಾಡಿ, ಆ methodನಲ್ಲಿ ಹೋಗಬೇಕೆಂದು ಹೇಳಿದರು. ನಮಗೆ ಆ ಭಾಗದಲ್ಲಿ ಇಷ್ಟೆಲ್ಲಾ ಅಲ್ಲಿ ವಿರೋಧ ಇದೆ. Tunneling and funneling method ಬಗ್ಗೆ ನಾವು ವಿಚಾರ ಮಾಡಿದ್ದೆವೆ. ಇದಕ್ಕಾಗಿ ಮತ್ತೊಂದು ಹೋರಾಟ ಪ್ರಾರಂಭವಾಗಬಾರದು, ಇರುವುದರಲ್ಲಿ ಒಂದಾದರೂ ಯೋಜನೆಯನ್ನು ಇವತ್ತಿನದಿವಸ ಮುಂದುವರೆಸಬೇಕೆಂದು ಹೇಳಿ Tunneling and funneling pilot method ಅದಕ್ಕಾಗಿ ನಾವು ಕೈಹಾಕಿಲಿಲ್ಲ. ಆದರೆ ಒಂದು ಸತ್ಯವನ್ನು ಈ ಸದನದಲ್ಲಿ ಹೇಳುತ್ತಿದ್ದೇನೆ. ಪರಮಶಿವಯ್ಯನವರು ಕನಸು ಏನು ಬಿತ್ತಿದ್ದರು, ಆ ಕನಸು ವಾಸ್ತವದ ಪ್ರಕಾರ ಇರಲಿಲ್ಲ. It was just a tophosheet ಮೇಲೆ line ಹಾಕಿರುವುದು. ಮಾನ್ಯ ಉಪಾಧ್ಯಕ್ಷರೆ, ನಾನು ಜಾಸ್ತಿ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರ ಭಾವನೆಗಳು ಏನಿವೆ ಅದನ್ನು ನಾನು ಒಪ್ಪುತ್ತೇನೆ. ಇವತ್ತು ಅಲ್ಲಿ chloride ಮಿಶ್ರಿತ ನೀರು ಇದೆ. 1200 ರಿಂದ ಹಿಡಿದು 2000 footವರೆಗೆ ಹೋದರೂ ನೀರು ಸಿಗುವುದಿಲ್ಲ. ನಾನು ಜಾಲಪ್ಪನವರ ಮನೆಗೆ ಹೋದಾಗ ಅವರ ಮನೆಯಲ್ಲಿ ಪೈಪ್ ಅನ್ನು ತೋರಿಸಿದರು. ಆ ಪೈಪ್ ಕೂಡ quotings ಆಗಿತ್ತು. ಆ ನೀರನ್ನು ಕುಡಿದ ಮೇಲೆ ಏನಾಗುತ್ತದೆಂಬ ಅರಿವು ಕೂಡ ನಮಗೆ ಇದೆ. ಹೀಗಾಗಿ ಅಲ್ಲಿಗೆ ಆದ್ಯತೆಯನ್ನು ಕೊಡಲೇಬೇಕಾಗಿದೆ. ನಾವು ಕುಡಿಯುವುದಕ್ಕೆ ನೀರು ಕೊಡದೆ ಇದ್ದರೆ

ತೊಂದರೆಯಾಗುತ್ತದೆ. ಎಷ್ಟೋ ಸಮಯದಲ್ಲಿ ನಮ್ಮ ಸರ್ಕಾರವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮುಜುಗರವನ್ನು ಅನುಭವಿಸಿದ್ದೇವೆ. ಆ ಕಡೆ ಕರಾವಳಿ ಭಾಗದಲ್ಲಿ ನಮಗೆ ವಿರೋಧವನ್ನು ಮಾಡುತ್ತಿದ್ದಾರೆ. ಅಲ್ಲಿ 2000 ಟಿಎಂಸಿ ನೀರು ಇದ್ದರೂ ಕೂಡ ಇದು ಕುಡಿಯುವ ನೀರು ಅಂದ ಮೇಲೆ pandora box open ಮಾಡುತ್ತೀರೆಂಬ ಬಗ್ಗೆ ಗೊಂದಲ ಇವತ್ತಿನ ದಿವಸ ಅಲ್ಲಿದೆ. ಈ ಎಲ್ಲಾ ವಿರೋಧದ ಮಧ್ಯೆ ಮತ್ತು ಸಮಸ್ಯೆಗಳ ಮಧ್ಯದಲ್ಲಿ ಬಹಳಷ್ಟು ಪ್ರಗತಿಯನ್ನು ಮಾಡಿದ್ದೇವೆ. ನಾವು ಇನ್ನೊಂದು ಕಮಿಟಿಯನ್ನು ಸಹ ಮಾಡಿದ್ದೆವೆ. ಅದನ್ನು ಬಹುಶ: ನಾನು ಒಪ್ಪುತ್ತೇನೆ. ಹೇಗೆ ನಮ್ಮ conveyance part ಹೋಗುತ್ತದೆ, ಬಹುಶ: ಇನ್ನು ಸ್ವಲ್ಪ ದಿವಸ ಬಿಟ್ಟು ಈ ಎಲ್ಲಾ ಕೆರೆಗಳಿಗೆ baby kitಗಳನ್ನು ಅಳವಡಿಸುವುದು ಇರಬಹುದು, ಹೂಳನ್ನು ತೆಗೆಯುವಂಥದ್ದು ಇರಬಹುದು. ನಮ್ಮ part ಏನಿದೆ, ಇದು ಹೇಗೆ ಬೃಹತ್ ನೀರಾವರಿಗೆ ಇಲಾಖೆಗೆ ಬಂತು ಎಂದು ನನಗೆ ಗೊತ್ತಿಲ್ಲ. ಏಕೆಂದರೆ, ಇದು ಕುಡಿಯುವ ನೀರಿನ ಯೋಜನೆಯಾಗಿದೆ. ಬಹುಶ: ಇದನ್ನು ಸಣ್ಣ ನೀರಾವರಿ ಇಲಾಖೆ ಮತ್ತು RDPR Department, Urban Water Supply Board ನಲ್ಲಿರಬೇಕಾಗಿತ್ತು. ಬಹುಶ: ಈ liftನಲ್ಲಿ ಬೃಹತ್ ನೀರಾವರಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಆಗ ನಿರ್ಣಯ ತೆಗೆದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ತಾವು conveyance part ಏನಾಗುತ್ತದೆಂದು ಕೇಳುತ್ತಿದ್ದೀರಿ. Gravity canal ಸುಮಾರು 0 to 55 ಬಗ್ಗೆ ನಾನು ಹೇಳಿದ್ದೇನೆ. 1200 ಕೋಟಿ ರೂಪಾಯಿಗಳದು ಟೆಂಡರ್‌ಗಳನ್ನು ನಾವು ಈಗಾಗಲೇ ಆಹ್ವಾನಿಸಿದ್ದೇವೆ. ಕಿಲೋಮೀಟರ್ 44 ರಲ್ಲಿ ಒಂದು ವೇದಾ ಕಣಿವೆಗೆ, ನಮ್ಮ yield ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳು ಇವೆ. ನಮಗೂ ಒಂದು ಆಸೆ ಇದ್ದು ಅದಕ್ಕಾಗಿ ನಾವು ಉತ್ತರವನ್ನು ಕೊಡಬೇಕಾಗಿದೆ. ಆ ಒಂದು issue ಅನ್ನು we have put it to rest. ಅದಕ್ಕೆ ನಾವು full stop ಹಾಕಬೇಕಾಗಿದೆ. ಒಂದು trial mode ಅನ್ನು ಇವತ್ತಿನದಿವಸ ಮಾಡಿ lift componantನಲ್ಲಿ ನಾವು yield ಅನ್ನು ವಾಣಿವಿಲಾಸ ಸಾಗರಕ್ಕೆ trial ಮಾಡಿ ತುಂಬಿಸಿ ತೋರಿಸಿದರೆ ಬಹುಶ: ಒಂದು ವಿಶ್ವಾಸವು ಕೂಡ ಬರುತ್ತದೆ. ಆ ಒಂದು ಕೆಲಸವನ್ನು ಮಾಡುವುದಕ್ಕೆ ಅದಕ್ಕಾಗಿ from January to April-May ಒಳಗಾಗಿ ನಾವು ನಮ್ಮ ಒಂದು ಅವಧಿಯಲ್ಲಿ ಮಾಡಿದ್ದೇವೆಂದು ತೋರಿಸುತ್ತಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕಾಗಿ ಸ್ವಲ್ಪ

ಸಮಯ ಬೇಕಾಗುತ್ತದೆ. Probably ಇವೆಲ್ಲವೂ ಆಗಿ ನಮ್ಮ part ಬೃಹತ್ ನೀರಾವರಿ ಇಲಾಖೆ ನೀರನ್ನು ನಾವು ಒಯ್ದು ಈ conveyance partಅನ್ನು complete ಮಾಡಿ ಬಹುಶ: ಮುಂದಿನ 18 ರಿಂದ 20 ತಿಂಗಳಲ್ಲಿ ನಾವು ಕೆರೆಗಳಿಗೆ ನೀರನ್ನು ಕೊಡಬಹುದಾಗಿದೆ. Further ನಾವು ಮುಂದೆ ಆ ಕೆರೆಗಳನ್ನು ಬಳಸಿಕೊಂಡು Multi Village Schemes ಎಂದು ಮಾಡಿಕೊಂಡಿದ್ದೇವೆ. ಇನ್ನು ಕೆಲವು ಕಡೆಗಳಲ್ಲಿ tankಗಳಿಗೆ ಇವತ್ತಿನದ ದಿವಸ reservoir ನಲ್ಲಿ ಮಾಡಿಕೊಳ್ಳುವುದಕ್ಕೆ ಬಯಸಿದ್ದೇವೆ. ಆ ಒಂದು ಕೆಲಸವನ್ನು ಕೂಡ co-ordination ಮೇಲೆ ಆಗಬೇಕೆಂದು ರಮೇಶ್ ಕುಮಾರ್ ಹಾಗೂ ಎಲ್ಲಾ ಶಾಸಕರ ಒತ್ತಾಯವು ಸಹ ಇತ್ತು. ಅದಕ್ಕೂ ಕೂಡ ಒಂದು ಕಮಿಟಿ ಇದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ, ನಮ್ಮ ಸಣ್ಣ ನೀರಾವರಿ ಸಚಿವರು ಕೂಡ ಇಲ್ಲಿಯೇ ಇದ್ದಾರೆ. ನಾವೆಲ್ಲರೂ ಕೂಡಿ in tune with this, lift component conveyance ಮಾಡಿದ್ದೇವೆ, ಅದರ ಜೊತೆಗೆ ಅಲ್ಲಿ ಹೂಳೆತ್ತುವಂತಹ ಕೆಲಸವು ಕೂಡ ಆಗಬೇಕಾಗಿದೆ. Baby kit ಕೂಡ ಕೊಡಬೇಕಾಗುತ್ತದೆ. ಅಲ್ಲಿ ನೀರು ಸೋರುತ್ತಿರುತ್ತದೆ. ಅಲ್ಲಿ ಹಳೆಯ ಕೆರೆಗಳು ಇವೆ. ಇವೆಲ್ಲವೂ ಆಗಬೇಕೆನ್ನುವ ದೃಷ್ಟಿಯಿಂದ ಆ ಒಂದು ಕೆಲಸವನ್ನು ಮಾಡುತ್ತೇವೆಂದು ಹೇಳುತ್ತೇನೆ. ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಈ ಕೆಲಸಗಳನ್ನು ಯಾವ ಸರ್ಕಾರಗಳು ಮಾಡಿರುವುದಿಲ್ಲ. ಎತ್ತಿನಹೊಳೆ ಯೋಜನೆ ಇರಬಹುದು, ನಾವು ಬಂದ ಮೇಲೆ ಈ ಬಗ್ಗೆ tender ಕರೆದು ಚಾಲನೆ ಕೊಟ್ಟವರು ನಾವೇ ಆಗಿದ್ದೇವೆ. ಇಷ್ಟೆಲ್ಲಾ ಸಾಧನೆಯನ್ನು ನಾವು ಮಾಡಿದ್ದೇವೆ. ಇವತ್ತಿನದಿವಸ K.C.Valley ಯಲ್ಲಿ ಸಂಸ್ಕರಿಸಿದ ನೀರನ್ನು ಕೊಡುವುದನ್ನು ನಾವು ಮಾಡಿದ್ದೇವೆ. ದಯವಿಟ್ಟು ಈ ಸರ್ಕಾರ ಏನು ಮಾಡಿದೆ ಎಂದು ಪ್ರಶ್ನೆ ಮಾಡುವುದಕ್ಕೆ ಹೋಗಬೇಡಿ. ಈ ಹಿಂದೆ ಯಾವ ಸರ್ಕಾರವು ಮಾಡದೆ ಇರುವುದನ್ನು ಈ ಸರ್ಕಾರವು ಮಾಡಿದೆ ಎನ್ನುವಂತಹ ಮಾತನ್ನು ಎಲ್ಲಾ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇದಕ್ಕೆ ನಮ್ಮ ಮುಖ್ಯಮಂತ್ರಿಗಳು ಬದ್ಧರಾಗಿ ಇದ್ದಾರೆ. ಆದರೆ ಕಾರಣಾಂತರಗಳಿಂದ ಈ ಬಗ್ಗೆ ಮಾನ್ಯ ಉಪಾಧ್ಯಕ್ಷರೆ ತಮಗೆ ಗೊತ್ತಿದೆ. NGT ಯಲ್ಲಿ ಎಷ್ಟು ಸಲ stay ಸಿಕ್ಕಿತು. ಈ ನೂತನ NGT ಯಲ್ಲಿ case ನಿರಂತರವಾಗಿ ನಡೆಯುತ್ತಿದೆ. ಇದರ ಹಿಂದೆ ಯಾರು ಇದ್ದಾರೆಂದು ನನಗೆ ಗೊತ್ತಿಲ್ಲ. ಇದರ ಹಿಂದೆ NGT ಹಿಂದೆ ಯಾರು ಇದ್ದಾರೆಂದು ಗೊತ್ತಾಗಬೇಕಾಗಿದೆ. ಪರಿಸರವಾದಿಗಳು ಇದ್ದಾರೆ ಅವರಿಗೆ ಯಾರ ಬೆಂಬಲ ಇದೆ ಎಂದು ನನಗೆ

ಗೊತ್ತಿಲ್ಲ. ಒಟ್ಟಾರೆ ಎತ್ತಿನಹೊಳೆ ಯೋಜನೆ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಇವೆಲ್ಲವೂ Upper Bhadra, ಎತ್ತಿನಹೊಳೆ ಯೋಜನೆಗಳಿಗೆ ನಮ್ಮ ಸರ್ಕಾರ... ಮಾನ್ಯ ಕಾರಜೋಳರವರು ನಮ್ಮ statistics ಬಗ್ಗೆ ಕೇಳುತ್ತಿರುತ್ತಾರೆ. Upper Bhadraದು ಮಾಹಿತಿಯನ್ನು ಸಹ ನಿಮಗೆ ಕೊಡುತ್ತೇನೆ. ನೀವು ಇದ್ದಾಗ ಎಷ್ಟು ಹಣ ಖರ್ಚು ಮಾಡಿದ್ದೀರಿ, ಸಿಂಗಟಾಲೂರು ಯೋಜನೆಗೆ ನೀವು ಎಷ್ಟು ಖರ್ಚು ಮಾಡಿದ್ದೀರಿ, ನಾವು ಎಷ್ಟು ಖರ್ಚು ಮಾಡಿದ್ದೇವೆನ್ನುವ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

ಉಪಾಧ್ಯಕ್ಷರು: ಇಲ್ಲಿ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ clarification ಅನ್ನು ನಾವು ಸಹ ಕೇಳುತ್ತೇವೆ.

ಶ್ರೀ ಎಂ.ಬಿ.ಪಾಟೀಲ್: ಈ ಎಲ್ಲಾ ಯೋಜನೆಗಳಿಗೆ ನಾವು ಒತ್ತನ್ನು ಕೊಟ್ಟಿದ್ದೇವೆ. ನಾವು ಆ ಕೆಲಸ ಮಾಡಿದ್ದೇವೆ. ಆದರೆ ಇನ್ನು ಬಹಳಷ್ಟು ಕೆಲಸ ಆಗಬೇಕಾಗಿದೆ. ಈ ಬಗ್ಗೆ ಎರಡು ಮಾತಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಬಹಳಷ್ಟು speed ಆಗಬೇಕಾಗಿದೆ. ನಮ್ಮ ಸ್ನೇಹಿತರಾದ ಮಂಜುನಾಥ್‌ರವರು ಆ ಕಡೆಯಿಂದ ಬರುವುದಕ್ಕೆ ಏತಕ್ಕಾಗಿ ಪ್ರಯತ್ನ ಮಾಡುವುದಿಲ್ಲವೆಂದು ಕೇಳಿದರು. ನಮ್ಮ ಪ್ರಕಾರ Technical reasons ನಿಂದ ಆಗಿರುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಸಚಿವರೆ, ನೀವು ಎಲ್ಲಾ ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅಲ್ಲಿ ನೀರು ಇದೆಯೋ ಇಲ್ಲವೋ ಎಂಬುದನ್ನು ಆಮೇಲೆ ನೋಡೋಣ. ಇವೆಲ್ಲವನ್ನು ಕೇಳುವುದಕ್ಕೆ ನಾವು ಬಂದಿಲ್ಲ. ನಿಮ್ಮ speed ಇದೆಯಲ್ಲಾ, ಅಲ್ಲಿ lift component ಮಾಡುತ್ತೇವೆ, ಇದನ್ನು 6 ತಿಂಗಳಲ್ಲಿ ಮಾಡುತ್ತೇವೆ, ಇನ್ನು 6 ತಿಂಗಳು ಏನು ನೀವು ಮೆರವಣಿಗೆ ಮಾಡುತ್ತೀರಾ? ಇನ್ನಾರು ತಿಂಗಳು ಈ ಬಯಲುಸೀಮೆಯಲ್ಲಿ . . .

ಶ್ರೀ ಎಂ.ಬಿ.ಪಾಟೀಲ್: ಈಗ conveyance part ಮಾಡುತ್ತಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಬಯಲು ಸೀಮೆಯ ಕಡೆಯಲ್ಲಿ ಮಾಡುತ್ತಿಲ್ಲ. ಸುಮ್ಮನೆ ಅದನ್ನು ತರುತ್ತಿದ್ದೇವೆ, ಇದನ್ನು ತರುತ್ತಿದ್ದೇವೆಂದು ಏತಕ್ಕಾಗಿ ಹೇಳುತ್ತಿದ್ದೀರಿ. Lift pipe ಹೂಣಿಕೊಂಡು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕುಳಿತುಕೊಂಡರೆ ಎತ್ತಿನಹೊಳೆಗೆ ನೀರು ಬರುತ್ತದೆಯೇ? ಈ ಬಗ್ಗೆ ಯಾರಾದರೂ ವಿರೋಧ ಮಾಡಲಿ ಅದನ್ನು ನಾವು ನೋಡಿಕೊಳ್ಳೋಣ. ಅಲ್ಲಿಗೆ ನೀರು ಬರುತ್ತದೆ.

(ಮುಂದು)

ವಿಸ. 13.06.2017/6.20/42/ಎನ್.ಸಿ.ಕೆ/ಎಸ್.ಎಸ್.ಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ(ಮುಂದು)

24 TMC ನೀರು ಇದೆ. ಮಳೆ ಬಂದಿರುವುದರಿಂದ ಈಗ ನೀರು ಹರಿಯುತ್ತಿದೆ. ಈಗ ಹೋಗಿ ನೋಡುವುದಕ್ಕೆ ಹೇಳಿ ನೀರು ಹರಿಯುತ್ತಿದೆ. ಈಗ ಯಾವಾಗ, ಯಾವತ್ತು ನೀರು ಬರುತ್ತದೆ ಎನ್ನುವುದು ನೋಡಿರುವವರಿಗೆ ಗೊತ್ತು. ಆದರೆ ಇಲ್ಲೇನಾಗಿದೆ ನೀವು 12,000 ಕೋಟಿ ರೂಪಾಯಿಗಳಿಗೆ 200-300 ಕೋಟಿ ರೂಪಾಯಿಗಳನ್ನು ಹಾಕಿದರೆ ಹೇಗೆ? ನೀವು ವರ್ಷಕ್ಕೆ 300.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಇಲ್ಲಿಯವರೆಗೆ 2,000 ಚಿಲ್ಲರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು 12,000 ಕೋಟಿ ರೂಪಾಯಿಗಳಿಗೆ ಆಗುವುದಿಲ್ಲ. 20 ಸಾವಿರ ಕೋಟಿ ರೂಪಾಯಿಗಳಿಗೆ ನಿಲ್ಲುತ್ತದೆ ಎಂದು ಇಟ್ಟುಕೊಳ್ಳೋಣ. ನೀವು ಯಾವಾಗ ಮುಗಿಸುತ್ತೀರಿ. 10 ತಿಂಗಳುಗಳಲ್ಲಿ 12,000 ಕೋಟಿ ರೂಪಾಯಿಗಳಲ್ಲಿ ಮುಗಿಸುತ್ತೀರಾ? ಹೇಗೆ ಮಾಡಲಿಕ್ಕಾಗುತ್ತದೆ. ನಿಮ್ಮ ಕೆಲಸ ನಿಧಾನವಾಗುತ್ತಿದೆ.

(ಗೊಂದಲ)

ಉಪಾಧ್ಯಕ್ಷರು: ಶಿವಲಿಂಗೇಗೌಡರೆ ಸಾಕು ಬಿಡಿ, ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ಬಿ.ಪಾಟೀಲ್: ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ.ಕೃಷ್ಣಾರೆಡ್ಡಿ: ಅವರು ಕೊಟ್ಟಿರುವ ಉತ್ತರದಲ್ಲಿ ಉಪ್ಪು ಇಲ್ಲ, ಹುಳಿ ಇಲ್ಲ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್: Conveyance part 52, lift component ಬಿಟ್ಟು conveyance partಗೆ 55 ಕಿ.ಮೀ.ಗೆ 1,200 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿದ್ದೇವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅಲ್ಲಿ ಮೂರು ವರ್ಷಗಳಿಂದ ಟೆಂಡರ್ ಕರೆಯುತ್ತಲೇ ಇದ್ದಾರೆ. ಏನೇನೋ ಸುಮ್ಮನೆ ಹೇಳುತ್ತಾರೆ. ಚಾನೆಲ್ ಬಂತು ಎಂದು ಸುಳ್ಳು ಹೇಳುವುದು. ನಾವು ದಿನ ಜನಗಳಿಂದ ಉಗಿಸಿಕೊಳ್ಳಬೇಕು.

ಶ್ರೀ ಗೋವಿಂದ.ಎಂ.ಕಾರಜೋಳ: ಸ್ವಲ್ಪ clarifications ಕೇಳಬೇಕು.

ಉಪಾಧ್ಯಕ್ಷರು: ಈಗ ಸಮಯವಿಲ್ಲ, ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಈಗಾಗಲೇ ಸಾಕಷ್ಟು ಉತ್ತರ ಹೇಳಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಉತ್ತರ ಸಾಕು ಇದನ್ನು ಮುಗಿಸಿಬಿಡಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್: ಬೈರಗೊಂಡ್ಲು ಜಲಾಶಯ ಸಹ conveyance part ನಲ್ಲೇ ಬರುತ್ತದೆ. 5,400 acresಗೆ SI ಸಿದ್ಧ ಆಗಿದೆ. ನನ್ನ ಉತ್ತರ ಇನ್ನು ಮುಗಿದಿಲ್ಲ, ಕಾರಜೋಳರವರೇ ಕುಳಿತುಕೊಳ್ಳಿ. ಬೈರಗೊಂಡ್ಲು ಜಲಾಶಯ ಅದು ಪ್ರಮುಖವಾಗಿದೆ. ಎಲ್ಲ ಸದಸ್ಯರು ಒಪ್ಪಿಕೊಳ್ಳುತ್ತಾರೆ. 5,400 ಎಕರೆಗೆ ನಾವು SI ವರದಿಯನ್ನು ಸಿದ್ಧಪಡಿಸಿದ್ದೇವೆ. ಈಗ ಮುಂದಿನ ಈ ಪ್ರಕ್ರಿಯೆಗಳನ್ನು ಪ್ರಾರಂಭಿಸಲಿಕ್ಕೂ ಸಹ ಕ್ರಮ ಕೈಗೊಳ್ಳುತ್ತೇವೆ. ಹೀಗೆ ನಮ್ಮ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಬಹಳಷ್ಟು ಬದ್ಧತೆಯನ್ನು ಹೊಂದಿದ್ದಾರೆ. ವಿಶೇಷವಾಗಿ ಅಲ್ಲಿ ಒಂದು 750 ಕೋಟಿ ರೂಪಾಯಿಗಳ aqua duct ಕೂಡ ಬರುತ್ತದೆ. ಅದಕ್ಕೂ ಕೂಡ ಇವತ್ತಿನ ದಿನ ಟೆಂಡರ್ ಕರೆದಿದ್ದೇವೆ. ಬೈರಗೊಂಡ್ಲು ಜಲಾಶಯದ 450 ಕೋಟಿ ರೂಪಾಯಿಗಳ DPR ಸಿದ್ದಪಡಿಸಿದ್ದೇವೆ. ಹೀಗಾಗಿ ನಾವು ಎಲ್ಲಿಯೂ ಕೂಡ ಹಿಂದೆ ಬಿದ್ದಿಲ್ಲ. ನಮಗೆ ಗೊತ್ತಿದೆ ನೀವೆಲ್ಲರೂ ನಮಗೆ support ಮಾಡಿದ್ದೀರಿ. ಈ ಸರ್ಕಾರ ಎತ್ತಿನಹೊಳೆ ಆಗಲಿ, Upper Bhadra ಆಗಲಿ, Minor Irrigation ನಿಂದ ನಮ್ಮ K.C.Valley ಯೋಜನೆಗಳಾಗಲಿ, ಇವೆಲ್ಲ ನಮ್ಮ ಚಿಕ್ಕಬಳ್ಳಾಪುರ, ಕೋಲಾರ , ಚಿತ್ರದುರ್ಗ, ತುಮಕೂರು, ಇದಕ್ಕೆ ಒತ್ತನ್ನು ಕೊಟ್ಟಿದ್ದೇವೆ.

ಶ್ರೀ ವೈ.ಎ.ನಾರಾಯಣಸ್ವಾಮಿ: ಮಂತ್ರಿಗಳು ಉತ್ತರದಲ್ಲಿ ಕೊಡುತ್ತಿರುವ speed ಕೆಲಸದಲ್ಲಿಲ್ಲ. ನಿಮ್ಮ ಉತ್ತರದ speed ಬಹಳ ಇದೆ. 4 ವರ್ಷ 1 ತಿಂಗಳು ಆಗಿದೆ. ಇನ್ನು ನಿಮ್ಮ ಕೈಯಲ್ಲಿ DPR

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿಸಲಿಕ್ಕಾಗಲಿಲ್ಲ ಎಂದರೆ ನೀವು ಏನು ಕೆಲಸ ಮಾಡುತ್ತೀರಿ? ಇದು ಉತ್ತರಕುಮಾರನ ಪೌರುಷದ ರೀತಿ ಇದೆ.

ಶ್ರೀ ಎಂ.ಬಿ.ಪಾಟೀಲ್: ನಾವು ಇವರ ಅಭಿನಂದನೆಯನ್ನು ಕೇಳುತ್ತಿಲ್ಲ. ಅಲ್ಲಿ ನಿಜವಾದಂಥ ಸಮಸ್ಯೆ ಇದೆ. ಅಲ್ಲಿ ಜನ ನಿಜವಾಗಲೂ ಬಹಳಷ್ಟು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ನಿಮ್ಮ ಪ್ರತಿಯೊಬ್ಬರ ಭಾವನೆ ಜೊತೆಗೆ ನಾನು ಕೂಡ ಇದ್ದೇನೆ ಎನ್ನುವಂಥ ಪ್ರಾಮಾಣಿಕವಾದಂಥ ಮಾತನ್ನು ಹೇಳುತ್ತೇನೆ. ಈ ಸರ್ಕಾರ ತಮ್ಮ ಜೊತೆಗಿದೆ. ಎಲ್ಲ ರೀತಿಯ ಪ್ರಯತ್ನವನ್ನು ಮಾಡಿದ್ದೇವೆ. ಮುಂದಿನ 10 ತಿಂಗಳುಗಳಲ್ಲಿ ಬಹಳಷ್ಟು ಕೆಲಸ ಮಾಡಿ ಇದನ್ನು ನಿರ್ಣಾಯಕ ಹಂತಕ್ಕೆ ಈ ಯೋಜನೆಯನ್ನು ತರುವುದಕ್ಕೆ ಅವಶ್ಯವಿರುವ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳಬಯಸುತ್ತೇವೆ.

(ಗೊಂದಲ)

ಉಪಾಧ್ಯಕ್ಷರು: ಆಯಿತು. ಇದರ ಬಗ್ಗೆ ಚರ್ಚೆ ಮುಗಿಯಿತು. ಈಗ ಸಮಯ ಇಲ್ಲ. ಕಾರಜೋಳರವರೇ, ನೀವು ಬೇರೆ ವಿಚಾರ ಮಾತನಾಡುವಾಗ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ. ಈಗ ಎಲ್ಲದಕ್ಕೂ ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೊಮ್ಮೆ ಇದರ ಬಗ್ಗೆ ಮಾತನಾಡುವಿರಂತೆ. ಈಗ ಸಮಯವಿಲ್ಲ.

ಶ್ರೀ ಗೋವಿಂದ.ಎಂ.ಕಾರಜೋಳ: ಸರ್, ಅವರು ನನ್ನನ್ನು ನೀವು ಏನೂ ಮಾಡಿಲ್ಲ, ನೀವು ಏನೂ ಮಾಡಿಲ್ಲ ಎಂದು ಕೆಣಕಿದ್ದಾರೆ. ಕೆಣಕಿರದಿದ್ದರೆ ನಾನು ನಾನು ಹೇಳುತ್ತಿರಲಿಲ್ಲ. ಹೆಚ್ಚಿಗೆ ಏನೂ ಕೇಳುವುದಿಲ್ಲ. ಭಾಷಣವನ್ನೂ ಮಾಡುವುದಿಲ್ಲ. ಒಂದೇ ನಿಮಿಷ ಮಾತನಾಡುತ್ತೇನೆ.

ಶ್ರೀ ಎಂ.ಬಿ.ಪಾಟೀಲ್: ಈ ಕಾರಜೋಳರವರಿಗೆ ಶಿವಪೂಜೆಯಲ್ಲಿ ಕರಡಿ ಆಡಿಸುವ ಚಟ ಬಹಳವಿದೆ. ಎಲ್ಲದರಲ್ಲೂ ವಿರೋಧ ಮಾಡುತ್ತಾರೆ. ಎತ್ತಿನಹೊಳೆ ಬಗ್ಗೆ ಇವರಿಗೇನು ಗೊತ್ತಿದೆ?

(ಗೊಂದಲ)

ಶ್ರೀ ಗೋವಿಂದ.ಎಂ.ಕಾರಜೋಳ: ಎತ್ತಿನಹೊಳೆ ರಾಜ್ಯಕ್ಕೆ ಸಂಬಂಧಿಸಿದ್ದಾಗಿದೆ.

ಶ್ರೀ ಎಂ.ಬಿ.ಪಾಟೀಲ್: ಕಾರಜೋಳರವರಿಗೆ ಶಿವಪೂಜೆಯಲ್ಲಿ ಕರಡಿ ಆಡಿಸುವ ಚಟ. ರೋಷನ್ ಬೇಗ್‌ರವರು ಹೇಳುವಂತೆ ಕಬಾಬ್ ಮೆ ಹಡ್ಡಿ ಎನ್ನುವಂತೆ ಇವರು ಮಾಡುತ್ತಾರೆ.

(ಗೊಂದಲ)

ಶ್ರೀ ಗೋವಿಂದ.ಎಂ.ಕಾರಜೋಳ: ಉತ್ತರ ಕೊಟ್ಟಿದ್ದಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಕೆಲವು clarification ಕೇಳಬೇಕು.

(ಗೊಂದಲ)

ಉಪಾಧ್ಯಕ್ಷರು: ಈಗ ಬಹಳಷ್ಟು ಉತ್ತರ ಕೊಟ್ಟಿದ್ದಾರೆ ಬಿಡಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಆ ಎತ್ತಿನಹೊಳೆ ಹೇಗಿದೆ ಎಂದು ನಿಮಗೆ ಗೊತ್ತಿಲ್ಲ?

(ಗೊಂದಲ)

ಉಪಾಧ್ಯಕ್ಷರು: ಕೃಷ್ಣಾರೆಡ್ಡಿ ಅವರು ಎದ್ದಿದ್ದಾರೆ. ಆಯಿತು.

ಶ್ರೀ ಎಂ.ಕೃಷ್ಣಾರೆಡ್ಡಿ: ನಮ್ಮ ಜಿಲ್ಲೆಯ ಜನರ ಕಷ್ಟ ಮಂತ್ರಿಗಳಿಗೆ ಗೊತ್ತಿಲ್ಲ. ನಾಲ್ಕು ವರ್ಷಗಳಲ್ಲಿ ಎಂ.ಬಿ.ಪಾಟೀಲರು ನಮ್ಮ ಚಿಕ್ಕಬಳ್ಳಾಪುರ, ಕೋಲಾರ ನಮ್ಮ ಜಿಲ್ಲೆಗಳಿಗೆ ಬಂದಿದ್ದಾರೆಂದು ಹೇಳಲಿ. ಇಲ್ಲಿ ನಿಂತುಕೊಂಡು ಮಾತನಾಡುವುದಲ್ಲ. ನಮ್ಮ ಜಿಲ್ಲೆಯ ಜನರ ಕಷ್ಟ ಅವರಿಗೆ ಗೊತ್ತಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ: 17ನೇ ಫೆಬ್ರವರಿ 2014 ರಂದು ಸರ್ಕಾರ 12,900 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದೆ. ಇದುವರೆಗೆ 2,180 ಕೋಟಿ ರೂಪಾಯಿಗಳನ್ನು ಅವರು expenditure ಮಾಡಿದ್ದಾರೆ. ಈ ವರ್ಷ ಬಜೆಟ್‌ನಲ್ಲಿ 885 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. 13ಸಾವಿರ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ ನಾಲ್ಕು ವರ್ಷಗಳ escalation ಹಿಡಿದರೆ 17,000 ಕೋಟಿ ರೂಪಾಯಿಗಳಾಗುತ್ತದೆ. 17,000 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗೆ ಈ ವರ್ಷ 885 ಕೋಟಿ ರೂಪಾಯಿಗಳ ಬಜೆಟ್ provision ಮಾಡಿದ್ದಾರೆ. ಈ speed ನಲ್ಲಿ ಮಾಡಿದರೆ 50 ವರ್ಷಗಳಾದರೂ ಆಗುವುದಿಲ್ಲ. ಎಂ.ಬಿ.ಪಾಟೀಲರಿಗೆ ಚಟವಿದೆ. ಏಕೆಂದರೆ ಬಿಜಾಪುರ ಜಿಲ್ಲೆಯಲ್ಲಿ 1963 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲು ಹಾಕಿದ್ದು 50 ವರ್ಷಗಳಾದರೂ ಇನ್ನೂ ಆಗಿಲ್ಲ. ಆ ರೀತಿ ಮಾಡಬೇಕೆಂದು ಮಾಡಿರುವಿರಾ ಹೇಗೆ?

ಶ್ರೀ ಎಂ.ಬಿ.ಪಾಟೀಲ್: ನೀವು ಇದ್ದರಲ್ಲ, ಕಾರಜೋಳರವರೆ 5 ವರ್ಷ ನಿಮ್ಮ ಸರ್ಕಾರವಿತ್ತು ನೀವು ಮಂತ್ರಿಯಾಗಿದ್ದರಲ್ಲ.

ಶ್ರೀ ಗೋವಿಂದ.ಎಂ.ಕಾರಜೋಳ: ನಾವು ಏನೂ ಮಾಡಿಲ್ಲ. ಅದರ ಸಲುವಾಗಿ ಮೊನ್ನೆ ನೀವು ಕುಳಿತು ಕೇಳಬೇಕಾಗಿತ್ತು.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಎಂ.ಬಿ.ಪಾಟೀಲ್: 5 ವರ್ಷಗಳಿದ್ದರೂ ನಿಮ್ಮ ಸರ್ಕಾರದಲ್ಲಿ ಬಹಳ ಸಾಧನೆ ಮಾಡಿದ್ದೀರಿ. ಇಡೀ ಇತಿಹಾಸ ಎಲ್ಲ ರಾಜ್ಯದ ಜನರ ಮುಂದೆ ಇದೆ. ನಿಮ್ಮನ್ನು permanent ಆಗಿ ಕೂರಿಸಿದ್ದಾರೆ.

ಶ್ರೀ ಗೋವಿಂದ.ಎಂ.ಕಾರಜೋಳ: ಸರ್ಕಾರಕ್ಕೆ ನಾನು ಏನು ಕೇಳುವುದಕ್ಕೆ ಬಯಸುತ್ತೇನೆ ಎಂದರೆ ಈ ವರ್ಷ ಎಲ್ಲವನ್ನು ಅದನ್ನು ತೆಗೆದುಕೊಂಡಿದ್ದೇವೆ. ಇದನ್ನು ತೆಗೆದುಕೊಂಡಿದ್ದೇವೆ. ಅದನ್ನು sanction ಮಾಡಿದ್ದೇವೆ. ಇದನ್ನು sanction ಮಾಡಿದ್ದೇವೆಂದು ಹೇಳಿದರೆ 1 ಲಕ್ಷ ಕೋಟಿ ರೂಪಾಯಿಗಳ Irrigation projectಗೆ ನೀವು ಎಲ್ಲದಕ್ಕೂ sanction ಮಾಡಿದ್ದೇವೆಂದು ಹೇಳುತ್ತೀರಿ. ಕೃಷ್ಣಾ ಮೇಲ್ದಂಡೆ ಯೋಜನೆ ಒಂದಕ್ಕೆ 50 ಸಾವಿರ ಕೋಟಿ ರೂಪಾಯಿಗಳು ಬೇಕು. ನಿಮ್ಮ ಅವಧಿ ಇನ್ನು 8 ತಿಂಗಳು ಇದೆ. ಇದು ಕೊನೆ ಬಜೆಟ್ ನಿಮ್ಮದು. ನಾನು ಇದಕ್ಕೆ ಎಷ್ಟು ಹಣ ಕೊಡುತ್ತೀರಿ ಎಂದು ಕೇಳುತ್ತೇನೆ. 10 ತಿಂಗಳುಗಳಲ್ಲಿ ಮುಗಿಸಿಕೊಡುವಿರಾ ಹೇಗೆ? ನಾನು ಬಹಳ ಕಳಕಳಿ ಕಾಳಜಿಯಿಂದ ಕೇಳುತ್ತಿದ್ದೇನೆ.

ಶ್ರೀ ಎಂ.ಬಿ.ಪಾಟೀಲ್: ಹಿಂದಿನ ಸರ್ಕಾರದಲ್ಲಿ ಏನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಗೋವಿಂದ.ಎಂ.ಕಾರಜೋಳ : ಹಿಂದಿನ ಸರ್ಕಾರದಲ್ಲಿ ನಾವು ಏನೂ ಮಾಡಿಲ್ಲ. ಅದಕ್ಕೆ ನಾವು ಇಲ್ಲಿದ್ದೇವೆ. ಇಲ್ಲದಿದ್ದರೆ ನೀವು ಇಲ್ಲಿರುತ್ತಿದ್ದಿರಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್: ಹಿಂದಿನ ಸರ್ಕಾರದಲ್ಲಿ ಇವರು 50ಸಾವಿರ ಕೋಟಿರೂಪಾಯಿಗಳಿಗೆ ಅಂದಾಜು ಮಾಡಿದ್ದರು. 13,206ಕೋಟಿ ರೂಪಾಯಿಗಳು Upper Krishna project ಗೆ ಇವರು ಅಂದಾಜು ಮಾಡಿದ್ದರು.

ಶ್ರೀ ಗೋವಿಂದ.ಎಂ.ಕಾರಜೋಳ: ಎಂ.ಬಿ.ಪಾಟೀಲರು ಈ ಸದನದಲ್ಲಿ 1.00 ಲಕ್ಷ ಕೋಟಿ ರೂಪಾಯಿಗಳು ಇದೆ ಎಂದು ಹೇಳಿದ್ದಾರೆ. ಎಷ್ಟು ಹಣ ಇಟ್ಟಿದ್ದೀರಿ. ಎಷ್ಟು projects complete ಮಾಡುತ್ತೀರಿ ಹೇಳಿ.



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು: ಆಯಿತು. ಈ ವಿಷಯದ ಬಗ್ಗೆ ಚರ್ಚೆ ಬೇಡ. ಈ ವಿಷಯ ಮುಗಿಯಿತು. ದಯವಿಟ್ಟು ಎಲ್ಲ ಕುಳಿತುಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆಗಳು, ಎಂ.ರಾಜಣ್ಣ ನಿಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

ಶ್ರೀ ವೈ.ಎ.ನಾರಾಯಣಸ್ವಾಮಿ: ಉಪಾಧ್ಯಕ್ಷರೆ, ನಾವೆಲ್ಲ clarifications ಕೇಳಬೇಕಾಗಿತ್ತು.

(ಗೊಂದಲ)

ಶ್ರೀ ಎಂ.ಕೃಷ್ಣಾರೆಡ್ಡಿ: ಉಪಾಧ್ಯಕ್ಷರೆ ನಮಗೆ ಎರಡು ನಿಮಿಷ ಸಮಯ ಕೊಡಿ. ಇಷ್ಟೊತ್ತು ಸಮಯ ಕೊಟ್ಟಿದ್ದೀರಿ. ನಮ್ಮ ಗಮನಸೆಳೆಯುವ questions ಎಲ್ಲ ಬಿಟ್ಟುಬಿಡುತ್ತೇವೆ, ನಮಗೆ 10 ನಿಮಿಷ ಸಮಯ ಕೊಡಿ.

(ಗೊಂದಲ)

ಉಪಾಧ್ಯಕ್ಷರು: ರಾಜಣ್ಣರವರೆ, ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು,ಸಂಸದೀಯ ವ್ಯವಹಾರಗಳು ಹಾಗು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು): ಉತ್ತರ ಕೊಟ್ಟಿದ್ದೇವೆ ನೋಡಿ.

**ಗಮನ ಸೆಳೆಯುವ ಸೂಚನೆಗಳು**

> ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಡೆಯುತ್ತಿರುವ ಕಳಪೆ ಕಾಮಗಾರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ .

----

ಶ್ರೀ ಎಂ.ರಾಜಣ್ಣ (ಶಿಡ್ಲಘಟ್ಟ): ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಡೆಯುತ್ತಿರುವ ಕಳಪೆ ಕಾಮಗಾರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗು ಸಣ್ಣ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು,ಸಂಸದೀಯ ವ್ಯವಹಾರಗಳು ಹಾಗು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು): ರಾಜಣ್ಣನವರೇ ಉತ್ತರವನ್ನು ಒದಗಿಸಿದ್ದೇನೆ.

(ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಿದೆ)

ಉಪಾಧ್ಯಕ್ಷರು: ಉತ್ತರ ಕೊಟ್ಟಿದ್ದಾರೆ ನೋಡಿ.

ಶ್ರೀ ಎಂ.ರಾಜಣ್ಣ : ಸಣ್ಣ ನೀರಾವರಿ ಇಲಾಖೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇವತ್ತೇನು ಸರ್ಕಾರದಿಂದ ಮಂಜೂರಾದ ಕಾಮಗಾರಿಗಳಿಗೆ ಗುತ್ತಿಗೆದಾರರು ಬಹಳಷ್ಟು ಕಡಿಮೆ ಹಾಕಿ ಅಲ್ಲಿ ಅಧಿಕಾರಿಗಳು ಕಳಪೆ ಕಾಮಗಾರಿ ಮಾಡಿ ಮಾನ್ಯ ಉಪ ಸಭಾಧ್ಯಕ್ಷರ ಕ್ಷೇತ್ರದಲ್ಲಿ ಹಿಂದೆ ಕಳಪೆ ಕಾಮಗಾರಿ ಮಾಡಿ ಈ ಸರ್ಕಾರಕ್ಕೆ ನಷ್ಟ ಮಾಡಿದೆ. ಇದನ್ನು ಸರಿಪಡಿಸಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು: ಉತ್ತರ ಬಂದಿದೆ. ಏನಾದರೂ clarifications ಇದ್ದರೆ ಕೇಳಿ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು,ಸಂಸದೀಯ ವ್ಯವಹಾರಗಳು ಹಾಗು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು): ಈಗಾಗಲೇ ನಿಮಗೆ ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದೇನೆ ನೋಡಿ. ಈಗ ತಾವೇ ಆರೋಪ ಮಾಡಿದ ಹಿನ್ನೆಲೆಯಲ್ಲಿ ತಾವೇ ಖುದ್ದಾಗಿ ಹೋಗಿ ನೋಡಿ ಕಾಮಗಾರಿಯೆಲ್ಲಾ ಚೆನ್ನಾಗಿ ನಡೆಯುತ್ತಿದೆ ಎನ್ನತಕ್ಕಂಥ ರೀತಿಯಲ್ಲಿ letter ಕೊಟ್ಟ ಮೇಲೆ ಅವರಿಗೆಲ್ಲ bills payment ಆಗಿದೆ. ಇದರ ಜೊತೆಗೆ ನೀವು 2016-17 ರಲ್ಲಿ ಆಗಿರುವಂಥದ್ದು ಇನ್ನೂ tenders ಆಗಿಲ್ಲ. Tenders ಆಗಬೇಕಾದಂಥ ಸಂದರ್ಭದಲ್ಲಿ ನೀವು ಏನು ಹೇಳುತ್ತಿದ್ದೀರಿ. ಕಳಪೆ ಕಂಟ್ರಾಕ್ಟರ್ಸ್ ಬಂದು ಈ ರೀತಿ ಕಳಪೆ ಕಾಮಗಾರಿ ಮಾಡುತ್ತಾರೆಂಬ ಮಾತನ್ನು ಹೇಳಿದ್ದೀರಿ. ಬಹುಶ: ಅದರಲ್ಲಿ ಏನಾದರೂ ಸ್ಪಷ್ಟವಾದ ರೀತಿಯಲ್ಲಿ ಏನಾದರೂ ಆರೋಪ ಇದ್ದರೆ ಅದನ್ನು ಲಿಖಿತವಾಗಿ ಕೊಟ್ಟರೆ ಅದರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಾನು ಬದ್ಧನಾಗಿದ್ದೇನೆ. ಆದರೆ ಇನ್ನು ಟೆಂಡರ್ ಆಗಿಲ್ಲ. ಟೆಂಡರ್ ಆಗದೇ ಇರುವಂಥ ಸಂದರ್ಭದಲ್ಲಿ ಈಗಲೇ ಈ ಪ್ರಸ್ತಾಪ ಎತ್ತಿದರೆ ಹೇಗೆ?



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅವರು ಟೆಂಡರ್ call ಮಾಡಿದಾಗ ಆಗ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಆಗ ವ್ಯಕ್ತಪಡಿಸಬಹುದು. ನನ್ನ ಗಮನಕ್ಕೆ ತರಬಹುದು. ಆಗ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ನಾನು ಉತ್ತರದಲ್ಲಿ ಕೊಟ್ಟಿದ್ದೇನೆ, ನೀವೇ ನೋಡಿ. ಟೆಂಡರ್ ಆಗದೇ ಇರುವ ಹಿನ್ನೆಲೆಯಲ್ಲಿ ಈಗ ಯಾವುದೇ ರೀತಿಯ ಕ್ರಮ ಕೈಗೊಳ್ಳುವುದಕ್ಕೂ ಕೂಡ ಕಷ್ಟವಾಗುತ್ತದೆ. ನಿರ್ದಿಷ್ಟವಾಗಿ ಏನಾದರೂ ಆರೋಪ ಇದ್ದರೆ ಅದರ ಬಗ್ಗೆ ಹೇಳಿ.

(ಮುಂದು)

13.06.2017 /6.30 (43) / JB-SSD

ಉಪಾಧ್ಯಕ್ಷರು: ಆಯಿತು.

ಶ್ರೀ ಎಂ.ರಾಜಣ್ಣ: ಮಾನ್ಯ ಮಂತ್ರಿಗಳೇ, ಟೆಂಡರ್ ಎಲ್ಲಾ ಆಗಿದೆ. ಹಿಂದೆ ಯಾರು ಕಳಪೆ ಕಾಮಗಾರಿಗೆ ಗೌರಿಬಿದನೂರಿನಲ್ಲಿಯೇ ಹೊಸೂರು ಹತ್ತಿರ ಕಳಪೆ ಕಾಮಗಾರಿಯಾಗಿ ಅದನ್ನು demolish ಮಾಡಿ ಮತ್ತೆ ಕಟ್ಟಿದ್ದಾರೆ. ಅಂತಹ ಗುತ್ತಿಗೆದಾರರಿಗೆ 30% ಮಾಡಿ ಮತ್ತೆ ಅಧಿಕಾರಿಗಳು ಟೆಂಡರ್ ಮಾಡಿದ್ದಾರೆ. ಆ ರೀತಿ ಗುತ್ತಿಗೆದಾರರಿಗೆ ಮತ್ತು ಈ ನಮ್ಮ ಅಧಿಕಾರಿಗಳು ಒಳಗೂಡಿ ಅದೇ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರಿಗೆ ಮತ್ತೆ ಟೆಂಡರ್ ಕೊಟ್ಟಿದ್ದಾರೆ. ಮತ್ತೆ ಟೆಂಡರ್ ಅವರಿಗೇ ಆಗಿದೆ.

ಉಪಾಧ್ಯಕ್ಷರು: ರಾಜಣ್ಣ ಕೆಲಸ ಶುರು ಮಾಡಿದಮೇಲೆ ಆ ತರಹ ಇದ್ದರೆ ನೀವು ಅವರ ಗಮನಕ್ಕೆ ಅಂದರೆ ಮಂತ್ರಿಗಳ ಗಮನಕ್ಕೆ ತನ್ನಿ. ಕೆಲಸ ಮಾಡದೇ ನೀವು ಹೇಗೆ ಹೇಳುತ್ತೀರಿ?

ಶ್ರೀ ಕೆ.ಎಸ್.ಮಂಜುನಾಥಗೌಡ: ರಾಜಣ್ಣನವರೆ, blacklist ಆಗಿರುವುದು ಹೇಳಿ.

ಉಪಾಧ್ಯಕ್ಷರು: ಈಗ ಮುಂದಿನ ವಿಷಯ. ಸಿ.ಟಿ.ರವಿಯವರು ಹೇಳಿ. ಇಲ್ಲ. ಯು.ಬಿ.ಬಣಕಾರ್‌ರವರು ಮಾತನಾಡಿ.

**ವಿಷಯ: ಹಾವೇರಿ ಜಿಲ್ಲೆಯಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಭಾರಿ ಮಳೆಯಿಂದಾಗಿ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಬಗ್ಗೆ.**

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

***

ಶ್ರೀ ಯು.ಬಿ.ಬಣಕಾರ್: ಮಾನ್ಯ ಉಪಾಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಭಾರಿ ಮಳೆಯಿಂದಾಗಿ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**(ಮಾನ್ಯ ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಯು.ಬಿ.ಬಣಕರ್ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಂದಿದೆ. ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಹಿರೇಕೆರೂರು ತಾಲ್ಲೂಕಿನಲ್ಲಿ ಒಟ್ಟು ರೂ.15 ಲಕ್ಷ 35 ಸಾವಿರ ರೂಪಾಯಿಗಳ ಪರಿಹಾರವನ್ನು ವಿತರಣೆ ಮಾಡಿದ್ದಾರೆ. ಆದರೆ, ದಯವಿಟ್ಟು ಇನ್ನು ಮುಂದೆ ಕಾಲಮಿತಿಯೊಳಗೆ ನಾವು ಈ ರೀತಿಯಾಗಿ ಪ್ರಶ್ನೆ ಕೇಳಿ ಪರಿಹಾರ ಪಡೆಯುವುದಕ್ಕಿಂತ ಮುಂಚಿತವಾಗಿ ಅವರಿಗೆ ವಿತರಣೆ ಮಾಡಲಿಕ್ಕೆ ಸೂಚನೆ ನೀಡಬೇಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು: o.k., ಮುಂದಿನ ವಿಷಯ, ಹೆಚ್.ಕೆ.ಕುಮಾರಸ್ವಾಮಿಯವರು ಹೇಳಿ. ಗಮನ ಸೆಳೆಯುವುದು ಕೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇನ್ನೂ ಉತ್ತರ ಬಂದಿಲ್ಲವಂತೆ.

ಉಪಾಧ್ಯಕ್ಷರು: ಉತ್ತರ ಬಂದಿಲ್ಲ. ನಾಳೆ ತೆಗೆದುಕೊಳ್ಳೋಣ. ಸಿ.ಎನ್.ಬಾಲಕೃಷ್ಣ, ಬಂದಿಲ್ಲ. ಹೆಚ್.ಡಿ.ರೇವಣ್ಣ ಮತ್ತು ಶಿವಲಿಂಗೇಗೌಡರು ಇಲ್ಲ. ಕೆ.ಜಿ.ಬೋಪಯ್ಯನವರು ಹೇಳಿ.

**ವಿಷಯ: ಮಡಿಕೇರಿ ತಾಲ್ಲೂಕು ಭಾಗಮಂಡಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಅಡ್ಡಿಪಡಿಸುತ್ತಿರುವ ಬಗ್ಗೆ.**

***

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ಮಡಿಕೇರಿ ತಾಲ್ಲೂಕು ಭಾಗಮಂಡಲ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಅಡ್ಡಿಪಡಿಸುತ್ತಿರುವ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನಸೆಳೆಯುತ್ತೇನೆ.

**(ಮಾನ್ಯ ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಿದೆ)**

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಈ ಭಾಗಮಂಡಲ ವ್ಯಾಪ್ತಿಯಲ್ಲಿ ಕಸ ವಿಲೇವಾರಿಗೆ ಜಾಗ ಗುರುತಿಸಿ . . .ಇದರ ಬಗ್ಗೆ ಬೆಳಿಗ್ಗೆಯೂ ಸಹ ಹೇಳಿದ್ದೆ.

ಉಪಾಧ್ಯಕ್ಷರು: ಇದರ ಬಗ್ಗೆ ಬೆಳಿಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಕೆ.ಜಿ.ಬೋಪಯ್ಯ: ಆದರೆ, ಇಲ್ಲಿ ಪೂರ್ತಿ ತಪ್ಪು ಉತ್ತರ ಕೊಟ್ಟಿದ್ದಾರೆ. ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಕೆಲಸವನ್ನು ತಾವು ಮಾಡಿದ್ದೀರಿ. ಇಲ್ಲಿ ಏನು ಹೇಳಿದ್ದೀರಿ ಎಂದರೆ, 10/1ರಲ್ಲಿ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಈ ಹಾರಂಗಿ ಮತ್ತೆ ಜಲಾಶಯಕ್ಕೆ ಸಂಬಂಧಿಸಿದಂತೆ 1972ರಲ್ಲಿ forest land ಕೊಟ್ಟಾಗಿದೆ. ಅವರು ಅಲ್ಲಿ ಕುಳಿತಾಗಿದೆ. ಅವರಿಗೆ ಹಕ್ಕುಪತ್ರ ಕೊಡಲಿಲ್ಲ. ಬಹುಶ: ತಾವೂ ಅಧ್ಯಕ್ಷರಾಗಿದ್ದ ಸಮಿತಿಯಲ್ಲಿ ಕೂಡ ಇದು ಬಂದಿದೆ. ಎಲ್ಲಾದರೂ ಬದಲಿ ಜಾಗದ ಚರ್ಚೆಯಾಗಿದೆಯೇ? ಏಕೆ ಸುಮ್ಮನೆ ಕೊಡುತ್ತೀರಿ? 1972ರಲ್ಲಿ Forest Conservation Act ಏನಾದರೂ ಇತ್ತಾ? 1980ರಲ್ಲಿ ಪಾರ್ಲಿಮೆಂಟ್‌ನಲ್ಲಿ ಪಾಸ್ ಆಗಿ 1984ರಲ್ಲಿ ಜಾರಿಗೆ ಬಂದಿದೆ. ಯಾರೋ ಅಧಿಕಾರಿಗಳು ನಿನ್ನೆ ಕೂಡ ಧರಣಿ ಮಾಡುತ್ತಿದ್ದರು. ಅಲ್ಲಿಯೂ ಕೂಡ ನಿಮ್ಮ DCF ರವರು ಒಪ್ಪಿಕೊಂಡಿದ್ದಾರೆ. ಆ ಜಾಗದಲ್ಲಿ ನೀವು ಮಾಡಿ ಎಂದು ಹೇಳಿದ್ದಾರೆ. ಇಲ್ಲಿ ಈ ರೀತಿ ನೀವು ಉತ್ತರ ಕೊಡುತ್ತಿದ್ದೀರಿ. ಆಮೇಲೆ ಇನ್ನೊಂದು ಏನು ಹೇಳಿದ್ದೀರಿ ಎಂದರೆ, "ಸದರಿ ಪ್ರದೇಶವು ನೀರು ಸಂಗ್ರಹಣ ಪ್ರದೇಶವಾಗಿದ್ದು, ಯಾತ್ರಿಕರಿಗೆ ಪುಣ್ಯಕ್ಷೇತ್ರವಾಗಿರುತ್ತದೆ ಎಂದು ಹೇಳಿದ್ದೀರಿ". 8 ಕಿ.ಮೀ. ಆಗುತ್ತದೆ. ಈ ಜಾಗಕ್ಕೂ ಹಾಗೂ ತಲಕಾವೇರಿಗೂ 8 ಕಿ.ಮೀ. ಆಗುತ್ತದೆ. 8 ಕಿ.ಮೀ. ದೂರದಲ್ಲಿ ಬೆಟ್ಟದಲ್ಲಿ ನೀರು ಸಂಗ್ರಹ ಮಾಡುತ್ತೇವೆಂದು ಹೇಳುತ್ತೀರಿ, ಬೆಟ್ಟದಲ್ಲಿ ನೀರು ಸಂಗ್ರಹವಾಗುತ್ತದೆಯೇ? ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ನನಗೆ ಅನುಮತಿ ಕೊಡಬೇಕು. ಸದನಕ್ಕೆ ಇವರು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಹಕ್ಕುಚ್ಯುತಿ ಮಂಡನೆ ಮಾಡಲಿಕ್ಕೆ ನನಗೆ ಅವಕಾಶ ಕೊಡಬೇಕು. ಈ ರೀತಿ ತಪ್ಪು ಉತ್ತರವನ್ನು ಕೊಟ್ಟು ತಪ್ಪು ದಾರಿಗೆ ಎಳೆಯುವಂತಹ ಕೆಲಸವೇಕೆ? "ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಜಾಗವು ತಲಕಾವೇರಿ ವನ್ಯಧಾಮದ ಗಡಿಯಿಂದ ಕೇವಲ 50 ಮೀಟರ್ ದೂರದಲ್ಲಿರುತ್ತದೆ" ಎಂದು ಹೇಳಿದ್ದೀರಿ. ಕೇವಲ 50 ಮೀಟರ್ ಆಗುತ್ತದೆಯೇ? 3 ಕಿ.ಮೀ. ಆಗುತ್ತದೆ. ಈ ರೀತಿಯ ಉತ್ತರವೇಕೆ? ಹಾಗಾದರೆ ನಿನ್ನೆ ಏಕೆ ಒಪ್ಪಿಕೊಂಡಿರಿ? ಅವರು ಧರಣಿ ಮಾಡಿದಾಗ ಗ್ರಾಮಸಭೆಯಲ್ಲಿ ಏಕೆ ಒಪ್ಪಿಕೊಂಡರು? ನಿಮ್ಮ DCF, Conservator ಎಲ್ಲರೂ ಹೋಗಿ ನೀವು ಅಲ್ಲಿ ಮಾಡಿ ಎಂದು ಹೇಳಿಬಂದು ಇವತ್ತು ಸದನಕ್ಕೆ ಈ ಉತ್ತರ ಕೊಡುವುದೇ? ಇದು ಏಕೆ ಹೀಗೆ?

ಶ್ರೀ ಬಿ. ರಮಾನಾಥ್ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆ ಮಾತನಾಡಿದ್ದೆ. ಶರಾವತಿ, ಹೇಮಾವತಿ, ಹಾರಂಗಿ ಬಗ್ಗೆ ಹೇಳಿದ್ದೆ. ಇದಕ್ಕೆ ಜಾಗ ರೈತರು ಕೊಟ್ಟಿದ್ದಾರೆ. ಒಂದು ದೇಶದ ಕೆಲಸಕ್ಕೆ, ಒಂದು ರಾಜ್ಯದ ಕೆಲಸಕ್ಕೆ ಕೊಟ್ಟಿದ್ದಾರೆ. ಆದರೆ, ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿರಲಿಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ.ಬೋಪಯ್ಯ: ಯಾವಾಗ ಮಾಡಿದ್ದೀರಿ?

ಶ್ರೀ ಬಿ. ರಮಾನಾಥ್ ರೈ: ಹೇಳುತ್ತೇನೆ. ಪರ್ಯಾಯ ವ್ಯವಸ್ಥೆಯನ್ನು ಮಾಡಿರಲಿಲ್ಲ. ಅವರಿಗೆ ಆ ಭಾಗದಲ್ಲಿ ಎಬ್ಬಿಸಿ ಮತ್ತೆ forest ಜಾಗದಲ್ಲಿ ಅವರಿಗೆ rehabilitation ಮಾಡಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ: ಯಾವಾಗ?

ಶ್ರೀ ಬಿ.ರಮಾನಾಥ್ ರೈ: ಹಿಂದೆ ಆಗಿರತಕ್ಕಂತಹ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ: ಆಗ ಬದಲಿ ಜಾಗ ಕೊಡುವುದಕ್ಕೆ ಎಲ್ಲಿತ್ತು?

ಶ್ರೀ ಬಿ.ರಮಾನಾಥ್ ರೈ: ನಾನು ಹೇಳಿದ ಮೇಲೆ ತಾವು ಮಾತನಾಡಿ. ಅದಕ್ಕಾಗಿ ಆ ಒಂದು ರೈತರಿಗೆ ಜಾಗವನ್ನು ಕೊಡುವಂತಹ. . . ಅಲ್ಲಿ ಆ ಎರಡು ಗ್ರಾಮಗಳಿವೆ. ಇಲ್ಲಿ ಕೊಟ್ಟಿದ್ದಾರೆಂದು ನಾವು ಹೇಳುತ್ತಿಲ್ಲ. ಅದಕ್ಕೆ ಪರ್ಯಾಯವಾಗಿ ನಮಗೆ ಕಂದಾಯ ಜಾಗವನ್ನು ತೋರಿಸಿದ್ದಾರೆ. ಆ ಕಂದಾಯ ಜಾಗವನ್ನು ತೋರಿಸಿದ ಸ್ಥಳ ಇದಾಗಿರುತ್ತದೆ ಎಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಏನು ಹೇಳುತ್ತೀರಿ? ಈಗ ತಲಕಾವೇರಿ ಕಾವೇರಿಯ ಉಗಮ ಸ್ಥಳವಾಗಿದೆ. ಅಲ್ಲಿ ಕಸಕಡ್ಡಿಗಳು ಇದ್ದು ಪರಿಸರ ಹಾನಿಯಾಗುತ್ತದೆ ಎಂದು ತಾವು ಹೇಳುತ್ತೀರಿ, ಹಾಗಾದರೆ 8 ಕಿ.ಮೀ.ದಲ್ಲಿದ್ದರೆ ಪರಿಸರ ಹಾನಿಯಾಗುವುದಿಲ್ಲವೆಂದು ನೀವು ಒಪ್ಪಿಕೊಂಡ ಹಾಗೆ ಆಯಿತು. ಹೇಳುತ್ತೇನೆ ನಾನು. 8 ಕಿ.ಮೀ.ದೂರದಲ್ಲಿ ಕಸಕಡ್ಡಿಗಳು ಹಾಕಿದರೆ ಪರಿಸರ ಹಾನಿಯಾಗುವಂತಹ ಪ್ರಶ್ನೆಯಿಲ್ಲ. ಆದರೆ, ನಾವು ಹೇಳುವಂತಹದ್ದು, ನೀವು ವೈಜ್ಞಾನಿಕವಾಗಿ ಮಾಡಿದರೆ ಮಾತ್ರ ಇಲ್ಲಿ ಅನುಕೂಲವಾಗುತ್ತದೆ. ಈಗ ನಮ್ಮಲ್ಲಿ solid waste management ನ ಒಂದು ನಿಬಂಧನೆಯಿದೆ. ಆ ನಿಬಂಧನೆ. . . ಇದು ಅರ್ಧ ಕಿ.ಮೀ. ಬಗ್ಗೆ ನನಗೆ ಗೊತ್ತಿಲ್ಲ. ನಾನು ಪರಿಶೀಲನೆ ಮಾಡುತ್ತೇನೆ. ಎರಡು-ಮೂರು ಕಿ.ಮೀ.ಗಳು ಇರಬಹುದು. ಆದರೆ, ಪರಿಸರ ಸೂಕ್ಷ್ಮ ವಲಯದ ಬಗ್ಗೆ . . .

ಶ್ರೀ ಕೆ.ಜಿ.ಬೋಪಯ್ಯ: ಇನ್ನೂ ಆಗಿಲ್ಲವಲ್ಲಾ?

ಶ್ರೀ ಬಿ.ರಮಾನಾಥ್ ರೈ: ಹೇಳುತ್ತೇನೆ.

ಉಪಾಧ್ಯಕ್ಷರು: Detail ಆಗಿ ಹೇಳುವುದಕ್ಕೆ ಹೋಗಬೇಡಿ. ಈಗ discussionಗೆ ಹೋಗುವುದು ಬೇಡ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಬಿ.ರಮಾನಾಥ್ ರೈ: ಪರಿಸರ ಸೂಕ್ಷ್ಮ ವಲಯ ಬಹುಶ: ತಮ್ಮ ಗಮನಕ್ಕೆ ನಾನು ತರುತ್ತೇನೆ. ನಾವು ಘೋಷಣೆ ಮಾಡದೇ ಇದ್ದರೆ deemed to 10 kilometers. ತಾವು ವಕೀಲರು ಅರ್ಥ ಮಾಡಿಕೊಳ್ಳಬೇಕು. deemed 10 ಕಿ.ಮೀ.ಗಳು. ನಾವು ಒಂದು ಕಿ.ಮೀ.ಗೆ ಘೋಷಣೆ ಮಾಡಿದ್ದೇವೆ. ಅದು ನಿಮ್ಮ ಅನುಕೂಲಕ್ಕಾಗಿ ನಾವು ಘೋಷಣೆ ಮಾಡಿದ್ದೇವೆ. ಅದನ್ನು ಡೆಲ್ಲಿಯತನಕ ಹೋಗಿ ಅದರ ಬೆನ್ನ ಹಿಂದೆ ಕುಳಿತು ನಾವು ಎಷ್ಟೋ ವರ್ಷಗಳ ನಂತರ, ವನ್ಯ ಜೀವಿ ಧಾಮಗಳು ಮತ್ತು National Park ಆಗಿ ಎಷ್ಟು ವರ್ಷಗಳಾಯಿತು? ಆದರೆ, ಪರಿಸರ ಸೂಕ್ಷ್ಮ ವಲಯವೆಂದು ಘೋಷಣೆಯಾಗಿರುವುದು ಮೊನ್ನೆ ಆಗಿದೆ. ನಮ್ಮ ಸರ್ಕಾರ ಬಂದ ಮೇಲೆ ಆಗಿದೆ. ತಾವು ಇದನ್ನು ಗಮನಿಸಬೇಕು. ಇಲ್ಲದಿದ್ದರೆ ಎಲ್ಲಾ ರಾಷ್ಟ್ರೀಯ ಉದ್ಯಾನವನದ ಸುತ್ತಮುತ್ತಲೂ 10 ಕಿ.ಮೀ. ಇರುತ್ತಿತ್ತು. ನಮ್ಮ ಪ್ರಯತ್ನದ ಅಡಿಯಲ್ಲಿ ನಾವು ಡೆಲ್ಲಿಯಲ್ಲಿ ಕುಳಿತು ಈ ಪರಿಸರ ಸೂಕ್ಷ್ಮ ವಲಯವನ್ನು ಕೆಲವು ಕಡೆಗಳಲ್ಲಿ 50 ಕಿ.ಮೀ.ಗಳಿರಬಹುದು, ಕೆಲವು ಕಡೆ 2 ಕಿ.ಮೀ. ಇರಬಹುದು, ಆದರೆ, ಒಂದು ಮಾತನ್ನು ಹೇಳುತ್ತೇನೆ. ನಾವು ಪರಿಸರ ಸೂಕ್ಷ್ಮ ವಲಯವನ್ನು, ಬಹುಶ: ನೀವು ಹೇಳುವುದು ಸರಿ, ಕಡಿಮೆಯಾಗುತ್ತದೆ. ಅದು ಘೋಷಣೆಯಾಗಿಲ್ಲ. ನೀವೇ ಹೇಳಿದ ಪ್ರಕಾರ ಅದು ಘೋಷಣೆಯಾಗಿಲ್ಲ. ಇಲ್ಲದಿದ್ದರೆ 10 ಕಿ.ಮೀ. ಎಂದು ಇರುತ್ತದೆ. ಈಗ ಘೋಷಣೆಯಾಗದೇ ಇರತಕ್ಕಂತಹ . . ನಾನು ಮಾತನಾಡುತ್ತೇನೆ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ. ನಾನು ವಕೀಲನಲ್ಲ. ತಾವು ಮಾತನಾಡಿ. ನಾನು ವಕೀಲನಲ್ಲ. ತಾವು ಮಾತನಾಡಿ. ಆದರೆ, ನಮ್ಮ commonsense ಗೆ ಬಂದ ಕೆಲವು ವಿಚಾರಗಳನ್ನು ಹೇಳುತ್ತೇನೆ. ಸಾಮಾನ್ಯ ಜ್ಞಾನದಲ್ಲಿ ಕೆಲವು ವಿಚಾರಗಳನ್ನು ನಾನು ಮಾತನಾಡುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ಅದನ್ನೇ ಇತಿಮಿತಿಯೊಳಗೆ ಹೇಳಿ. ಅಧಿಕಾರಿಗಳು ಹೇಳಿದ್ದನ್ನು ಇಲ್ಲಿ ಹೇಳಬೇಡಿ.

ಶ್ರೀ ಬಿ.ರಮಾನಾಥ್ ರೈ: ಈಗ ಕಡಿಮೆಯಿದೆ. ಆದರೆ, ಇದು ಅರಣ್ಯಪ್ರದೇಶವೆಂದು ಘೋಷಣೆಯಾಗಿರತಕ್ಕಂತಹ ಕಾರಣಕ್ಕಾಗಿ ನಿಮಗೆ ಅವಕಾಶವಿದೆ. ಇಲ್ಲವೆಂದು ಹೇಳುತ್ತಿಲ್ಲ. ನೀವು FC Act ನಲ್ಲಿ ಅರ್ಜಿ ಹಾಕಿ. ಅರಣ್ಯ ಸಂರಕ್ಷಣೆ ಕಾಯ್ದೆಯಲ್ಲಿ ಅರ್ಜಿ ಹಾಕಿ. ನಾವು ಆದಷ್ಟು ಶೀಘ್ರದಲ್ಲಿ ಅದಕ್ಕೆ ಒಪ್ಪಿಗೆ ಕೊಡುತ್ತೇವೆ. ಮತ್ತೆ solid waste management ನ ನಿಬಂಧನೆಗಳನ್ನು

ಅದಕ್ಕೆ ಸೇರಿಸುವಂತಹ ಕೆಲಸ ಮಾಡಿದರೆ ನಾವು FC Actನಲ್ಲಿ ತಮಗೆ ಅವಕಾಶವನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ಅವರು ಸುಮ್ಮನೆ ಇಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಈಗ ಇನ್ನೊಂದು ಸಲ ಚರ್ಚೆ ಮಾಡಿ.

ಶ್ರೀ ಕೆ.ಜಿ.ಬೋಪಯ್ಯ: ನಾನು ಬೆಳಿಗ್ಗೆಯೂ ಸಹ ಅದರ RTC ತೋರಿಸಿದ್ದೇನೆ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಅದನ್ನು prove ಮಾಡಿ. ನೀವು record ಪ್ರಕಾರ prove ಮಾಡಿ. Prove ಮಾಡಿದಮೇಲೆ ನೋಡೋಣ.

ಶ್ರೀ ಕೆ.ಜಿ.ಬೋಪಯ್ಯ: ಈಗ ನಾನು ಸವಾಲು ಹಾಕುತ್ತೇನೆ. ನಿಮಗೆ ಸವಾಲು ಹಾಕುತ್ತಿದ್ದೇನೆ. ನೀವು ಕೊಟ್ಟ ಉತ್ತರವೆಲ್ಲವೂ ತಪ್ಪು.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: Calling Attention Notice ಗೆ Minister ರವರು ಉತ್ತರ ಕೊಟ್ಟಿದ್ದಾರೆ. If he is not happy, other provision of rules ಪ್ರಕಾರವಾಗಿಯೂ ಸಹ action ತೆಗೆದುಕೊಳ್ಳಬಹುದು.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ನೀವು ಕಾನೂನುಬದ್ಧವಾಗಿ, record ಪ್ರಕಾರವಾಗಿ ಇದನ್ನು prove ಮಾಡಬೇಕು. ನಾವು ಹೇಳುತ್ತಿರುವಂತಹದ್ದು ತಪ್ಪು ಎಂದು ನೀವು record ಪ್ರಕಾರ, ಕಾನೂನು ಪ್ರಕಾರ . . .

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ರೆಕಾರ್ಡ್ ಈಗಲೇ ಕೊಡುತ್ತೇನೆ. ಇವತ್ತೂ ಸಹ RTC ತೆಗೆದುನೋಡಿ. ಒಂದು ಪೈಸಾರಿ ಎಂದು ಇದೆ. RTC ಇದೆ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ನೀವು ನಮ್ಮ ಗಮನಕ್ಕೆ ತನ್ನಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಕೆ.ಜಿ.ಬೋಪಯ್ಯ: ಬೆಳಿಗ್ಗೆಯೂ ಗಮನಕ್ಕೆ ತಂದಿದ್ದೇನೆ. RTC ಏನಿದೆ, ಎಂದರೆ 744 ಎಕರೆ RTC ಯಲ್ಲಿ very clear ಆಗಿ ಇದೆ. 10/1 ಎಂದು ಇದೆ.

ಉಪಾಧ್ಯಕ್ಷರು: ರಮಾನಾಥ್ ರೈರವರೆ, ನೀವು ಆಮೇಲೆ ಕರೆದು ಮಾತನಾಡಿ.

ಶ್ರೀ ಕೆ.ಜಿ.ಬೋಪಯ್ಯ: ನೀವು 2007ರಲ್ಲಿ ನೆಡುತೋಪಿಗೆ ಎಂದು ಹೇಳಿ DC ಆದೇಶ ಮಾಡಿ..

. ಉಪಾಧ್ಯಕ್ಷರು: ಬೋಪಯ್ಯನವರೆ, ಚರ್ಚೆಗೆ ಅವಕಾಶವಿಲ್ಲ. ಇದು ಗಮನ ಸೆಳೆಯುವುದು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಈ ವಿಚಾರವಾಗಿ ನಿನ್ನೆ ವಿಶೇಷ ವಾರ್ಡ್ ಸಭೆಯಾಗಿದೆ. ಆ ವಾರ್ಡ್ ಸಭೆಯಲ್ಲಿ ತೀರ್ಮಾನ ಮಾಡಿ, ಕಸ ವಿಲೇವಾರಿ ಎಂದರೆ waste management ಎಲ್ಲಾ guidelines ತೆಗೆದುಕೊಂಡೇ ಮಾಡಿರುವುದು.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಮಾನ್ಯ ಗೌರವಾನ್ವಿತ ಸದಸ್ಯರಾದ ಬೋಪಯ್ಯನವರೆ, ನಮ್ಮಲ್ಲಿ ಏನೂ ವೈಯುಕ್ತಿಕ ಸಮಸ್ಯೆಯಿಲ್ಲ. ನನಗೆ ಅರಣ್ಯ ಸಂರಕ್ಷಣೆಯ ಕಾಯ್ದೆಯಡಿಯಲ್ಲಿ ಕೆಲಸ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಅದಕ್ಕೆ ಆಮೇಲೆ ಏನೋ ಕರೆಸಿಕೊಂಡು ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ನೀವು ಸಿಟ್ಟು ಮಾಡಬೇಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: 20 ಲಕ್ಷ ರೂಪಾಯಿಗಳು ಸರ್ಕಾರದಿಂದ ಮಂಜೂರಾಗಿದೆ. waste management ದು ಏನೇನು ಕಂಡೀಷನ್ಸ್ ಇದೆಯೋ ಅದರ ಪ್ರಕಾರವೇ ಗುಂಡಿ ತೆಗೆದು ಮತ್ತೆ ಇದು ಇರುವ ಜಾಗ ತಲಕಾವೇರಿಯ ಹೊಳೆಗೂ ಹಾಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಭಾಗಮಂಡಲಕ್ಕೆ ಅರಿಕೆ ರಸ್ತೆಯಲ್ಲಿ ಗುರುತು ಮಾಡಿದರೆ ನೀವು ಅಲ್ಲಿ ಮರ ನೆಡುತ್ತೀರಿ. ಎಲ್ಲವೂ ಪೂರ್ತಿ ತಪ್ಪು.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ತಪ್ಪು ಎಂದು ಹೇಳುವಂತಹದ್ದಲ್ಲ. ನಾನು ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಕೆ.ಜಿ.ಬೋಪಯ್ಯ: ನಾನು ಕೇಳುವಂತಹದ್ದು, ನಿಮಗೆ ಹಾರಂಗಿಯಲ್ಲಿ ಹತ್ತೂರು ಮತ್ತು ಇನ್ನೊಂದು village ನಲ್ಲಿ ಅವರಿಗೆ ಹಾರಂಗಿ ಡ್ಯಾಮ್ ಆಗಿದ್ದು 1972 ಇಸವಿಯಲ್ಲಿ. Forest conservation Act ಬಂದಿದ್ದು 1980ನೇ ಇಸವಿಯಲ್ಲಿ. ಅದು ಹೇಗೆ ನೀವು ಈಗ ಜಾಗ ಕೊಡುವುದು? ಎಲ್ಲಿದೆ ಆ ಅವಕಾಶ? (ಮುಂದು . . . )

ದಿ:13-06-2017-6.40(44)-ಜೆಎಲ್-ವಿ.ಆರ್

ಶ್ರೀ ಕೆ.ಜಿ.ಬೋಪಯ್ಯ(ಮುಂದುವರೆದುದು): ನಾನು ಕೇಳುವುದೇನೆಂದರೆ, ಹತ್ತೂರು ಮತ್ತು ಇನ್ನೊಂದು ಹಳ್ಳಿಯಲ್ಲಿ ಅವರಿಗೆ.. ಹಾರಂಗಿ ಡ್ಯಾಂ ಆಗಿರುವುದು 1972ನೇ ಇಸವಿಯಲ್ಲಿ Forest Conservation Act ಬಂದಿರುವುದು 1980 ನೇ ಇಸವಿಯಲ್ಲಿ ಈಗ ಜಾಗ ಕೊಡುವುದು ಹೇಗೆ? ಈ ಅವಕಾಶ ಎಲ್ಲಿದೆ?

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಅದು ಹತ್ತೂರು ಮತ್ತು ಎಡವನಾಡು, ನೀವು ಹೇಳುವುದು ಸರಿ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಅಲ್ಲಿ ಕುಳಿತಿದ್ದು ಯಾವಾಗ?

(ಗೊಂದಲ)

ಉಪಾಧ್ಯಕ್ಷರು: ರಾಮನಾಥ ರೈ ರವರೆ ಕುಳಿತುಕೊಳ್ಳಿ ಈ ವಿಷಯವನ್ನು ಚರ್ಚೆಗೆ ಇಟ್ಟುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಹತ್ತೂರು ಮತ್ತು ಎಡವನಾಡು ಗ್ರಾಮಕ್ಕೆ ಕೊಡಬೇಕಾದರೆ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿರಲಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಸಚಿವರೆ ಕುಳಿತುಕೊಳ್ಳಿ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ.ಬೋಪಯ್ಯ: 1972 ರಲ್ಲಿ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಕಾನೂನು ಎಲ್ಲಿತ್ತು? 1980 ರಲ್ಲಿ ಕಾನೂನು ಬಂದಿದ್ದು. 1980 ರಲ್ಲಿ Forest Conservation Act ಬಂದಿರುವುದು. ತಮ್ಮ ಅಧ್ಯಕ್ಷತೆಯಲ್ಲಿಯೇ ಇದು ಚರ್ಚೆ ಆಗಿದೆ. ಚರ್ಚೆ ಆದಾಗ ಎಲ್ಲಿಯಾದರೂ ಬದಲಿ ಜಾಗ ಕೊಡಬೇಕೆಂದು ಬಂದಿದೆಯೇ? ಅವರಿಗೆ ಹಕ್ಕುಪತ್ರ ಕೊಡಿಯೆಂದು ಅಷ್ಟೆ ಡಿಮ್ಯಾಂಡ್ ಇದ್ದದ್ದು. ಈಗ ಬದಲಿ ವ್ಯವಸ್ಥೆ ಎಂದು ಏಕೆ ತಪ್ಪು ಹೇಳುತ್ತಿದ್ದೀರಿ? ಇಲ್ಲಿಯವರೆಗೆ ಚರ್ಚೆ ಆಗಿಲ್ಲ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಅವರು ಎಷ್ಟೋ ವರ್ಷಗಳ ಹಿಂದೆ ಭೂಮಿ ಕೊಟ್ಟಿದ್ದಾರೆ ಅವರಿಗೆ ಹಕ್ಕುಪತ್ರ ಕೊಟ್ಟಿರಲಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಅಷ್ಟೇ, ಕೊಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಮ್ಮ ಸರ್ಕಾರ ಬಂದು ಹಕ್ಕುಪತ್ರವನ್ನು ಕೊಟ್ಟಿದೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಹಕ್ಕುಪತ್ರ ಕೊಟ್ಟಿರುವುದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುತ್ತೇವೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ.: ನಿಮ್ಮನ್ನು ಕರೆಸಿ ಈ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಆಯಿತು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಬೋಪಯ್ಯ ರವರೆ, ನೀವು ಬುದ್ಧಿವಂತಿಕೆಯಿಂದ ಮಾತನಾಡುತ್ತೀರಿ.

(ಗೊಂದಲ)

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಕೆ.ಜಿ.ಬೋಪಯ್ಯ: ನಿನ್ನೆ ಇಡೀ ಗ್ರಾಮದವರು ಅಲ್ಲಿ ಸ್ಟ್ರೈಕ್‌ಗೆ ಕುಳಿತಿದ್ದಾರೆ. ಅಲ್ಲಿ ಹೋಗಿ ನೀವು ಮಾಡಿ ಎಂದು ಹೇಳಿ ಬಂದು ಇವತ್ತು ಸದನದಲ್ಲಿ ಈ ರೀತಿ ಉತ್ತರ ಕೊಡುವುದೆಂದರೆ ಏನರ್ಥ?

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರೆ, ಇನ್ನೊಮ್ಮೆ ಕರೆಸಿ ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಿಮ್ಮನ್ನು ಕರೆಸಿ ಮಾತನಾಡುತ್ತೇನೆ. ವಿಚಾರವನ್ನು ಚರ್ಚೆ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು: ಹಾಗೇ ಮಾಡಿ ಸದಸ್ಯರನ್ನು ಕರೆಸಿ ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಚರ್ಚೆ ಮಾಡೋಣ ಆದರೆ ನಾನು ಹೇಳುವುದೇನೆಂದರೆ, Forest Conservation Act ಅಡಿಯಲ್ಲಿ ......

(ಗೊಂದಲ)

ಉಪಾಧ್ಯಕ್ಷರು: ಈಗ details ಬೇಡ ನೀವು ಸದಸ್ಯರನ್ನು ಕರೆದು ಮಾತನಾಡಿ. ಬೋಪಯ್ಯರವರೆ, ಕರೆದು ಮಾತನಾಡಿ sortout ಮಾಡುತ್ತಾರೆ ಬಿಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಸದನಕ್ಕೆ ಈ ರೀತಿ ತಪ್ಪು ಮಾಹಿತಿ ಕೊಡುವುದು ಎಂದರೆ ಏನರ್ಥ?

ಉಪಾಧ್ಯಕ್ಷರು: ಇನ್ನೊಂದು ಬಾರಿ ಅಧಿಕಾರಿಗಳನ್ನು ಕರೆದು ಮಾತನಾಡುತ್ತಾರೆ ಬಿಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಅಂದು ಕಾಯಿದೆಯಲ್ಲಿ ಇದ್ದರೂ ಕೂಡ ಪರ್ಯಾಯ ಜಾಗವನ್ನು ತೋರಿಸಿಲ್ಲ. ನಾವು ಅದನ್ನು recordically ಚರ್ಚೆ ಮಾಡೋಣ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ.ಬೋಪಯ್ಯ: ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ಉಪಾಧ್ಯಕ್ಷರೆ ಅಧ್ಯಕ್ಷರಾಗಿರುವ ಅರ್ಜಿಗಳ ಸಮಿತಿ ಮುಂದೆ ಈ ಸಮಸ್ಯೆ ಬಂದಾಗ ಅಲ್ಲಿ ಉದ್ಭವವಾದ ಒಂದೇ ಪ್ರಶ್ನೆಯೆಂದರೆ, 1972 ರಿಂದ ಅಲ್ಲಿ ಕುಳಿತಿದ್ದಾರೆ ಅವರಿಗೆ ಹಕ್ಕುಪತ್ರ ಕೊಡಬೇಕೆಂದು ಅರ್ಜಿ ಸಮಿತಿಯಲ್ಲಿ ಸೂಚಿಸಿದ ಮೇರೆಗೆ ಹಕ್ಕುಪತ್ರ ಕೊಡಲಾಗಿದೆ. ಅವರು ಸ್ಪಾಟ್‌ಗೂ ಹೋಗಿದ್ದಾರೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಆಯಿತು ಈ ಬಗ್ಗೆ ನಾವು ಮಾತನಾಡೋಣ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಿನ್ನೆ ಒಪ್ಪಿಕೊಂಡು ಹೋಗಿದ್ದಾರೆ ಇವತ್ತು ಈ ರೀತಿ ಉತ್ತರ ಕೊಡುತ್ತಾರೆಂದರೆ ಇದರ ಅರ್ಥ ಏನು?

(ಗೊಂದಲ)

ಶ್ರೀ ಬಿ.ರಮಾನಾಥ ರೈ: ನಿನ್ನೆ ಒಪ್ಪಿಕೊಂಡಿದ್ದಾರೆಂದು ಈಗ ನೀವು ಹೇಳುತ್ತಿದ್ದೀರಿ ಅದು ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನನಗೆ ಗೊತ್ತಿಲ್ಲವೆಂದರೆ ತಾವು ಮಾಹಿತಿ ತೆಗೆದುಕೊಳ್ಳಬೇಕಲ್ಲವೇ?

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ರಮಾನಾಥ ರೈ: ಅರಣ್ಯ ಸಂರಕ್ಷಣೆ ಮಾಡುವಂತಹ ದೃಷ್ಟಿಯಲ್ಲಿ ನಾನು ಇದ್ದೇನೆ. ಅರಣ್ಯ ಸಂರಕ್ಷಣಾ ಕಾಯಿದೆಯಡಿಯಲ್ಲಿ ನೀವು online ಮೂಲಕ ಅರ್ಜಿ ಹಾಕಿ ನಾವು ಅನುಮತಿಯನ್ನು ಕೊಡುತ್ತೇವೆ. ಆದರೆ solid waste management ನಲ್ಲಿ ವೈಜ್ಞಾನಿಕವಾಗಿ ಮಾಡುವುದಕ್ಕೆ ನಾವು ಆಸ್ಪದ ಕೊಡುತ್ತೇವೆ.

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಕೆ.ಜಿ.ಬೋಪಯ್ಯ: ಅದು ಈ ಕೇಸ್‌ನಲ್ಲಿ ಅಗತ್ಯವಿಲ್ಲ. ಇದು ನಿಮ್ಮ ಫಾರೆಸ್ಟ್ ಲ್ಯಾಂಡ್ ಅಲ್ಲ.

(ಗೊಂದಲ)

ಉಪಾಧ್ಯಕ್ಷರು: ಆಯಿತು ಬಿಡಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಪರಿಸರ ಹಾನಿ ಆಗುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಿಮ್ಮ ಪರಿಸರವನ್ನು ನಾವು ಹಾಳು ಮಾಡುತ್ತಿಲ್ಲ. ಪರಿಸರ ಒಳ್ಳೆಯದು ಮಾಡುವುದಕ್ಕೆ ಕೇಳುತ್ತಿರುವುದು. ನಿಮ್ಮ ಅರಣ್ಯ ಇಲಾಖೆಯವರೇ ಪರಿಸರ ಉಳಿಸುವವರು. ಅವರು ಅರಣ್ಯವನ್ನು ಸರ್ವನಾಶ ಮಾಡುವವರು. ಮೊನ್ನೆ ತೆಗೆದಿರುವ ಆರ್.ಟಿ.ಸಿ ಇದೆ ನೋಡಿ. ಇದು ಹೇಗೆ?

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಇಲ್ಲಿ ಎರಡು ವಾದ ಇದೆ. ಪರಿಸರ ಉಳಿಸಬೇಕೆಂದು ಹೇಳುವ ವಾದವೂ ಇದೆ, ಪರಿಸರ ಬೇಡ ಎಂದು ಹೇಳುವಂತಹ ವಾದವೂ ಇದೆ. ಅರಣ್ಯ ಬೇಕು ಎಂದು ಹೇಳುವ ವಾದವೂ ಇದೆ, ಅರಣ್ಯ ಬೇಡ ಎಂದು ಹೇಳುವಂತಹ ವಾದವೂ ಇದೆ.

ಶ್ರೀ ಕೆ.ಜಿ.ಬೋಪಯ್ಯ: ಅರಣ್ಯ ಬೇಡವೆಂದು ಯಾರೂ ಕೂಡ ಹೇಳುವುದಿಲ್ಲ.

ಶ್ರೀ ಬಿ.ರಮಾನಾಥ ರೈ: ಒತ್ತುವರಿ ತೆರವು ಮಾಡಬೇಕೆಂದು ಹೇಳುವ ವಾದವೂ ಇದೆ, ಒತ್ತುವರಿಯನ್ನು ತೆರವು ಮಾಡಬಾರದೆಂದು ಹೇಳುವ ವಾದವೂ ಇದೆ.

(ಗೊಂದಲ)

ಉಪಾಧ್ಯಕ್ಷರು: ರಮಾನಾಥ ರೈ ರವರೆ ದಯವಿಟ್ಟು ಕುಳಿತುಕೊಳ್ಳಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ವಿಷಯ: ಸುರಪುರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ವಸತಿ ಯೋಜನೆಯಡಿ ಮಂಜೂರಾದ ಮನೆಗಳಿಗೆ ಬೋಗಸ್ ಬಿಲ್ಲನ್ನು ಸೃಷ್ಟಿಸಿ ಹಣ ಪಡೆದಿರುವವರ ವಿರುದ್ಧ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ.

* * * * *

ಶ್ರೀ ರಾಜ ವೆಂಕಟಪ್ಪ ನಾಯಕ(ಸುರಪುರ): ಮಾನ್ಯ ಉಪಾಧ್ಯಕ್ಷರೆ, ರಾಜೀವ್ ಗಾಂಧಿ ಹೌಸಿಂಗ್ ಸ್ಕೀಂ ನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿಯಲ್ಲಿ ಮನೆ ಕಟ್ಟದೆ ಬೋಗಸ್ ಬಿಲ್ಲುಗಳನ್ನು ಸೃಷ್ಟಿಸಿದ್ದು ಅವರ ವಿರುದ್ಧ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ ಮಾನ್ಯ ವಸತಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ವಸತಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ರಾಜ ವೆಂಕಟಪ್ಪ ನಾಯಕ: ಒಂದು ಪಂಚಾಯಿತಿಗೆ ತನಿಖೆ ಮಾಡಿಸಿ ಎಂದು Chief Executive Officer, ZP ರವರಿಗೆ ಹೇಳಿದ್ದು, ಅವರು ತನಿಖೆ ಮಾಡಿಸಿ 170 ಮನೆಗಳ ಬೋಗಸ್ ಬಿಲ್ಲುಗಳು ಆಗಿವೆಯೆಂದು ಕಂಡುಹಿಡಿದಿದ್ದಾರೆ. ಆದರೆ ಇದುವರೆಗೆ ಯಾರ ಮೇಲು ಕೂಡ ಕ್ರಮ ಕೈಗೊಂಡಿಲ್ಲ. ಒಂದೇ ಪಂಚಾಯಿತಿಯಲ್ಲಿ 170 ಮನೆಗಳು ಎಂದರೆ ಎಲ್ಲಾ ಪಂಚಾಯಿತಿಗಳಿಗೆ ರಾಜ್ಯಮಟ್ಟದ ಒಂದು ತಂಡವನ್ನು ಕಳುಹಿಸಿ ತನಿಖೆ ಮಾಡಿಸಿದರೆ ಸಾಕಷ್ಟು ಸಿಗಬಹುದು ಎಂದು ಅನುಮಾನ ಇದೆ. ದಯಮಾಡಿ ತನಿಖೆ ಮಾಡಿಸಿ.

ಉಪಾಧ್ಯಕ್ಷರು: ಪೂರ್ತಿ ತನಿಖೆ ಆಗಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಟಿ.ಬಿ.ಜಯಚಂದ್ರ: ಈಗಾಗಲೇ ಸ್ಪಷ್ಟವಾಗಿ ಉತ್ತರದಲ್ಲಿ ಹೇಳಲಾಗಿದೆ. ರಾಜನಕೊಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯಲಾದ ಅವ್ಯವಹಾರದ ಬಗ್ಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಯಾದಗಿರಿ ರವರು ಜಿಲ್ಲಾ ಮಟ್ಟದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತನಿಖಾ ತಂಡವನ್ನು ರಚಿಸಿ ದೂರುಗಳ ಕುರಿತಂತೆ ವಿವರವಾದ ಮಾಹಿತಿ ಸಲ್ಲಿಸುವಂತೆ ಸೂಚಿಸಿರುತ್ತಾರೆ. ಹಾಗಾಗಿ 170 ಮನೆಗಳನ್ನು ನಿರ್ಮಿಸದೆ ಹಣ ಪಡೆದಿದ್ದಾರೆ ಎಂದು ತಾವೇನು ಹೇಳುತ್ತಿದ್ದೀರಿ ಅದಕ್ಕೆ ಇಲ್ಲಿಂದಲೇ ಉನ್ನತ ಮಟ್ಟದ ಸಮಿತಿ ಕಳುಹಿಸಿ ತನಿಖೆ ಮಾಡಿಸುವುದಕ್ಕೆ ಒಪ್ಪಿದ್ದೇವೆ.

ಶ್ರೀ ಗುರುಪಾಟೀಲ ಶಿರವಾಳ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಪೂರಕವಾಗಿ ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ. ಇಡೀ ಜಿಲ್ಲೆಯಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯೂ ಇದೇ ವ್ಯವಸ್ಥೆ ಇದೆ. ಅದಕ್ಕೋಸ್ಕರ ಇಡೀ ಜಿಲ್ಲೆಯಲ್ಲಿ ಸಮಗ್ರವಾದ ತನಿಖೆ ಮಾಡಿದರೆ ನಿಜವಾದ ಸ್ಥಿತಿ ಏನೆಂದು ಸರ್ಕಾರಕ್ಕೆ ತಿಳಿಯುತ್ತದೆ.

ಉಪಾಧ್ಯಕ್ಷರು: ನೀವು ತನಿಖೆ ಆಗಬೇಕೆಂದು ಹೇಳುತ್ತೀರಿ.

ಶ್ರೀ ರಾಜ ವೆಂಕಟಪ್ಪ ನಾಯಕ: ಜಿಲ್ಲೆಯದ್ದು ತನಿಖೆ ಆಗಬೇಕು ಜೊತೆಗೆ ಈಗ ಕಂಡುಹಿಡಿದಿರುವ 170 ಮನೆಗಳಿಗೆ ಸಂಬಂಧಿಸಿದಂತೆ ಕಾರ್ಯದರ್ಶಿ, ಪಿ.ಡಿ.ಓ, Development officer, EO, ತಾಲ್ಲೂಕು ಪಂಚಾಯಿತಿ ಅಧಿಕಾರಿ ಯಾರಾದರೊಬ್ಬರ ಮೇಲೆ ಕ್ರಮ ತೆಗೆದುಕೊಂಡರೆ ಬೇರೆ ಗ್ರಾಮ ಪಂಚಾಯಿತಿಗಳಲ್ಲಿ ಈ ರೀತಿ ನಡೆಯುವುದಿಲ್ಲ. ದಯಮಾಡಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಮನೆ ನಿರ್ಮಾಣ ಮಾಡದೆ 170 ಫಲಾನುಭವಿಗಳಿಂದ ಹಣವನ್ನು ಪಡೆದಿರುವ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ನಾವು ಸೂಚನೆ ಕೊಡುತ್ತೇವೆ ಮತ್ತು ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆ. ತಾವು ಹೇಳಿದ ರೀತಿ ಇನ್ನು ಮುಂದೆ ಯಾವುದೇ ರೀತಿಯಲ್ಲಿಯೂ ಇಂತಹ ಪ್ರಕರಣಗಳು ಮರುಕಳುಹಿಸಿದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದು ಅದನ್ನು ಸ್ವಾಗತಿಸುತ್ತೇನೆ ಮತ್ತು ಅದೇ ರೀತಿ ಕ್ರಮವನ್ನು ಕೂಡ ಕೈಗೊಳ್ಳುತ್ತೇನೆ.

ಉಪಾಧ್ಯಕ್ಷರು: ಮುಂದಿನ ಪ್ರಶ್ನೆ ರಾಜಣ್ಣರವರಿಗೆ ಇದೆ ಆದರೆ ಉತ್ತರ ಬಂದಿಲ್ಲ. ಸಾ.ರಾ.ಮಹೇಶ್ ರವರು ಸದನದಲ್ಲಿ ಇಲ್ಲ.

ವಿಷಯ: ತರೀಕೆರೆ ವಿಧಾನ ಸಭಾ ಕ್ಷೇತ್ರದ ಕೆಲವು ಗ್ರಾಮಗಳಿಗೆ ಬಹು ಗ್ರಾಮ

13-06-2017

ಕುಡಿಯುವ ನೀರು ಯೋಜನೆ ಲಭ್ಯವಾಗದೆ ವಿಫಲವಾಗಿರುವ ಬಗ್ಗೆ.

* * * * *

ಶ್ರೀ ಜಿ.ಹೆಚ್.ಶ್ರೀನಿವಾಸ(ತರೀಕೆರೆ): ಮಾನ್ಯ ಉಪಾಧ್ಯಕ್ಷರೆ, ತರೀಕೆರೆಯಲ್ಲಿನ ಕೆಲವು ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಯೋಜನೆ ಆಗಬೇಕಾಗಿದ್ದು, ಇದುವರೆಗೆ ಆಗದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಜಿ.ಹೆಚ್.ಶ್ರೀನಿವಾಸ್: ಕರಕುಚ್ಚಿ-ಸಪ್ಪಿನಮಟ್ಟಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಪೂರ್ಣಗೊಂಡು ಹತ್ತು ವರ್ಷಗಳಾಯಿತು ಆದರೆ ಇದುವರೆಗೆ ಜನರಿಗೆ ನೀರು ಕೊಟ್ಟಿಲ್ಲ. ಅಲ್ಲಿನ ಜನರು ತುಂಬಾ ಕಷ್ಟದಲ್ಲಿದ್ದಾರೆ, ಅಧಿಕಾರಿಗಳು ನೀರು ಕೊಟ್ಟಿದ್ದೇವೆಂದು ಹೇಳುತ್ತಾರೆ ಆದರೆ ಯಾವುದೇ ಒಂದು ಗ್ರಾಮಕ್ಕೂ ಕೂಡ ನೀರನ್ನು ಕೊಟ್ಟಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ಬಹಳ ಸ್ಪಷ್ಟವಾಗಿ ಉತ್ತರ ನೀಡಲಾಗಿದೆ. ಈ ಕಾಮಗಾರಿಯಲ್ಲಿ ಇರುವ ಲೋಪದೋಷದ ಸಂಬಂಧ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಈ ಯೋಜನೆಯನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಜಿ.ಹೆಚ್.ಶ್ರೀನಿವಾಸ್: ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ನೀಡಿದ್ದೇನೆಂದು ಹೇಳುತ್ತಾರೆ. ಆದರೆ ಉತ್ತರ ಸ್ಪಷ್ಟವಾಗಿಲ್ಲ. ಏಕೆಂದರೆ ಕರಕುಚ್ಚಿ ಬಹುಗ್ರಾಮ ಕುಡಿಯುವ ನೀರು ಯೋಜನೆ 2007 ರಲ್ಲಿ ಪ್ರಾರಂಭವಾಗಿದೆ. 2017 ನೇ ಇಸವಿ ಬಂದರೂ ಕೂಡ ಒಂದೇ ಒಂದು ಗ್ರಾಮಕ್ಕೆ ಕುಡಿಯುವ ನೀರನ್ನು ಕೊಟ್ಟಿಲ್ಲ ಹಣ ಮಾತ್ರ ಖರ್ಚಾಗಿದೆ. ಬಹಳ ವೈಫಲ್ಯವಾಗಿದೆ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗುತ್ತಿಗೆದಾರರು ಪೈಪು ಹಾಕದೆ ದುಡ್ಡು ಪಡೆದು ಹೋಗುತ್ತಿದ್ದಾರೆ. ಜಾಕ್‌ವೆಲ್‌ಗಳು, ಪಂಪ್‌ಗಳು ಇವೆಲ್ಲವನ್ನು ನೋಡುತ್ತಿಲ್ಲ. ಸಾಂಕೇತಿಕವಾಗಿ ನೀರು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ ಆದರೆ ಕರಕುಚ್ಚಿ-ಸಪ್ಪಿನಮಟ್ಟಿ ಯೋಜನೆ ಪೂರ್ಣವಾಗಿ ವಿಫಲವಾಗಿದೆ. ಹತ್ತು ವರ್ಷಗಳಾದರೂ ಒಂದೇ ಒಂದು ಗ್ರಾಮಕ್ಕೂ ಕೂಡ ನೀರನ್ನು ಕೊಟ್ಟಿಲ್ಲ. ಸರ್ಕಾರದ ಹಣ ಖರ್ಚಾಗಿದೆ, ಲೋಪದೋಷಕ್ಕೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸುತ್ತೀರೋ ಏನು ಮಾಡುತ್ತಿರೋ ಗೊತ್ತಿಲ್ಲ ಆದರೆ ಇನ್ನೂ extra ಹಣ ಬೇಕೆಂದು ಕೇಳುತ್ತಿದ್ದಾರೆ. ಅಗತ್ಯವಿರುವ ಹಣವನ್ನು ಕೊಟ್ಟು ಯೋಜನೆಯನ್ನು ಪೂರ್ಣಗೊಳಿಸುತ್ತೇವೆಂದು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಶೀಘ್ರದಲ್ಲಿಯೇ ತರೀಕೆರೆಯಿಂದ ಕಡೂರಿಗೆ ಹೋಗಿರುವ ಕುಡಿಯುವ ನೀರಿನ ಯೋಜನೆ enroute villages approval ಆಗಿ ಸುಮಾರು ಒಂದು ವರ್ಷ ಆಯಿತು. ಮಾನ್ಯ ಮುಖ್ಯಮಂತ್ರಿಗಳು ತರೀಕೆರೆಗೆ ಭೇಟಿ ನೀಡಿದ್ದಾಗ ವೇದಿಕೆಯಲ್ಲಿ ಇದು approval ಆಗಿದೆಯೆಂದು ಹೇಳಿದ್ದಾರೆ. ಒಂದು ವರ್ಷವಾದರೂ ಕೂಡ ಟೆಂಡರ್ ಕರೆಯುವ ಪ್ರಕ್ರಿಯೆ ಆಗಿಲ್ಲ. ಉಸ್ತುವಾರಿ ಸಚಿವರಾದಂತಹ ಡಾ: ಜಿ.ಪರಮೇಶ್ವರ್ ರವರು ಒಂದು ವರ್ಷದ ಹಿಂದೆ ಆರು ತಿಂಗಳಲ್ಲಿ ಟೆಂಡರ್ ಕರೆದು ನೀರು ಕೊಡುತ್ತೇವೆಂದು ಹೇಳಿದರು ಆದರೆ ಇವತ್ತಿನವರೆಗೆ ಟೆಂಡರ್ ಕರೆಯುವುದಕ್ಕೆ ಆಗಿಲ್ಲ. Chief Engineer office ನಲ್ಲಿ ಸುಮಾರು ಆರು ತಿಂಗಳಿಂದ ಕಡತವಿದೆಯೆಂದು ನಮ್ಮ Executive Engineer ಹೇಳುತ್ತಾರೆ. Approval ಆಗಿ ಒಂದು ವರ್ಷವಾದರೂ ಟೆಂಡರ್ ಕರೆಯುವುದಕ್ಕೆ ಆಗಿಲ್ಲವೆಂದರೆ ಹೇಗೆ? Enroute villages ನಲ್ಲಿ 16-17 ಹಳ್ಳಿಗಳು ಬರುತ್ತವೆ ಅದೂ ಕೂಡ ಆಗಿಲ್ಲ. ತಾವು ಮಾನ್ಯ ಮಂತ್ರಿಗಳಿಗೆ ಹೇಳಿ ಆದಷ್ಟು ಬೇಗ ಟೆಂಡರ್ ಕರೆದು enroute villages ಗೆ ನೀರನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ.

ತಿದ್ದುಪಡಿಯಾಗದ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಮುಂದುವರೆದಿದೆ)

ದಿನಾಂಕ: 13-06-2017-06.50 (45) AJ/VR

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು police complaint ಕೊಟ್ಟಿದ್ದೇವೆ. ಆದರೆ ಇದರಿಂದ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಆಗುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದನ್ನು ಗಮನದಲ್ಲಿಟ್ಟುಕೊಂಡು ಅದಷ್ಟು ಬೇಗನೆ ಚಾಲನೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಬೇಕಾದ ಹಣವನ್ನು ಒದಗಿಸುತ್ತೇವೆಂದು ಹೇಳಬೇಕು. ಅದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ವಿಷಯವಿದೆ.

ಉಪಾಧ್ಯಕ್ಷರು : ಆಯಿತು. ಮಂತ್ರಿಗಳು ಈಗ ಇಲ್ಲ.

ಶ್ರೀ ಜಿ.ಹೆಚ್. ಶ್ರೀನಿವಾಸ್ : ಮಂತ್ರಿಗಳು ಇಲ್ಲದಿದ್ದರೆ ದಯಮಾಡಿ ನಾಳೆಗೆ ಹಾಕಿಕೊಳ್ಳಿ. ನಾಳೆ ಮಂತ್ರಿಗಳೇ ಉತ್ತರ ಕೊಡಲಿ.

ಶ್ರೀ ಎಂ. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ.

ಉಪಾಧ್ಯಕ್ಷರು : ರಾಜಣ್ಣ ಅವರೇ ಉತ್ತರ ಬಂದಿರುವುದಿಲ್ಲ. ನಾನು ನಿಮ್ಮನ್ನು ಆಗಲೇ ಕರೆದೆ.

ಶ್ರೀ ಎಂ. ರಾಜಣ್ಣ : ಉತ್ತರ ಬಂದಿದೆ.

ಉಪಾಧ್ಯಕ್ಷರು : ಉತ್ತರ ಬಂದಿದ್ದರೆ ಕೊನೆಯಲ್ಲಿ ಅವಕಾಶ ಕೊಡುತ್ತೇನೆ. ಎಂ.ಪಿ. ಅಪ್ಪಚ್ಚು ರಂಜನ್ ಅವರು.

ವಿಷಯ : ಕೊಡಗು ಜಿಲ್ಲೆಯಲ್ಲಿ 94ಸಿ ಅಡಿಯಲ್ಲಿ ಈವರೆಗೆ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಬಗ್ಗೆ.

*****

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್) (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ 94ಸಿ ಅಡಿಯಲ್ಲಿ ಈವರೆಗೆ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಬಗ್ಗೆ ಮತ್ತು C and D landನಲ್ಲಿಯೂ ಕೂಡ 94ಸಿ ಗೆ ಸಂಬಂಧಿಸಿದಂತೆ ಹಕ್ಕುಪತ್ರ ಕೊಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. C and D classes ಬರುತ್ತದೆ. (ಉತ್ತರ ಪ್ರತಿ ಲಗತ್ತಿಸಿದೆ)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್) : C and D classes ಕೂಡ ಸಹ ಹಕ್ಕುಪತ್ರವನ್ನು ಕೊಡುವುದಕ್ಕೆ ಆದೇಶ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಆದೇಶ ಮಾಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್) : ಏಕೆಂದರೆ ಈಗಾಗಲೇ ತಹಶೀಲ್ದಾರ್ ಅವರು C and D landನಲ್ಲಿ ಕೊಡುವುದಕ್ಕೆ ಬರುವುದಿಲ್ಲವೆಂದು ಅರ್ಜಿಗಳನ್ನು ರಿಜೆಕ್ಟ್ ಮಾಡುವಂತಹ ವ್ಯವಸ್ಥೆ ಮಾಡುತ್ತಿದ್ದಾರೆ. ಹಾಗಾಗಿ ತಾವು ಇದಕ್ಕೆ ಒಂದು ನಿರ್ದೇಶನ ನೀಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಸ್ವಲ್ಪ ನಾನು ಹೇಳುವವರಿಗೆ ಕೇಳಿ. ಅವರು ಹೇಳಿದ ಹಾಗೆ ನೀವು ಕುಣಿಯಬೇಡಿ. 50,53 ಫಾರಂ ಇವೆ. ಈಗಾಗಲೇ ಎಲ್ಲಾ ಹೇಳಿದ್ದೇನೆ.

ಶ್ರೀ ಬಿ.ಸುರೇಶ್ ಗೌಡ : ಮಾನ್ಯ ಸಚಿವರೆ, ಅದೇ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಮನವಿಯನ್ನು ಮಾಡುತ್ತಿದ್ದೇನೆ. ತಾವು ಇಲ್ಲಿ ಸ್ಪಷ್ಟವಾಗಿ ಹೇಳುತ್ತೀರಿ. ಆದರೆ ಆದೇಶ ಮಾಡುವವರು ಯಾರು? ಅಧಿಕಾರಿ ಹಕ್ಕುಪತ್ರ ಕೊಡಬೇಕಾದರೆ ಫ್ಲಾರ್ಕ್ ಮಾಡಿ, ಹಕ್ಕುಪತ್ರ ಪ್ರಿಂಟ್ ಮಾಡಿ ಸೈನ್ ಮಾಡಿದ ಮೇಲೆಯೇ ಕೊಡುವುದು. ತಾವು ಏನೇ ಹೇಳಿದರೂ, ನಾವು ಎಷ್ಟೇ ಬಾಯಿ ಬಡಿದುಕೊಂಡರೂ ಕ್ರಮ ತೆಗೆದುಕೊಳ್ಳುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಏನೂ ಬಾಯಿ ಬಡಿದುಕೊಳ್ಳಬೇಡಿ. ಮಾಡುವ ಕೆಲಸ ಮಾಡಿ.

ಶ್ರೀ ಬಿ. ಸುರೇಶ್‌ಗೌಡ : ಎಂ.ಎಲ್.ಎ. ಗಳು ಮಾಡುವುದಿಲ್ಲವೆಂದು ನಮಗೆ ಹೇಳುತ್ತೀರಿ. ಹಾಗಾಗಿ ತಾವೇ ಬಂದು ಒಂದು ಸಾರಿ ಕುಳಿತುಕೊಂಡು ಮೀಟಿಂಗ್‌ವೊಂದನ್ನು ಮಾಡಿ ಅವರನ್ನು ಸಸ್ಪೆಂಡ್ ಮಾಡಿ. ದಯವಿಟ್ಟು ನೀವು ತಹಶೀಲ್ದಾರ್ ಮತ್ತು ಎ.ಸಿ. ಅವರನ್ನು suspend ಮಾಡಿ. ಏಕೆಂದರೆ ಅವರುಗಳು ಹಕ್ಕುಪತ್ರಕ್ಕೆ ಸಹಿ ಹಾಕುವುದು. ಅವರು ಮತ್ತು ನಿಮ್ಮ ಆರ್.ಐ. ಹೋಗಿ ಮಹಜರ್ ಮಾಡಬೇಕು. ನಂತರ ನಿಮ್ಮ ಸರ್ವೆಯರ್ ಹೋಗಿ ಮಾರ್ಕ್ ಮಾಡಬೇಕು. ಆಮೇಲೆ ಹಕ್ಕುಪತ್ರವನ್ನು ತಹಶೀಲ್ದಾರ್ ಅವರು ಪ್ರಿಂಟ್ ಮಾಡಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮೊದಲು ತೀರ್ಮಾನ ಮಾಡಿ. ಕೂಡಲೇ, ನಾಲ್ಕೈದು ದಿನಗಳೊಳಗೆ ಹಕ್ಕುಪತ್ರ ಕೊಡದೇ ಹೋದರೆ ನನಗೆ report ಮಾಡಿ.


ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ಸುರೇಶ್ ಗೌಡ : ಗೋಮಾಳ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಈಗಾಗಲೇ 20 ವರ್ಷ ಆಗಿದ್ದು ವಾಸ ಮಾಡುತ್ತಿರುತ್ತಾರೆ. ಆದರೆ ಈ ಪ್ರಕರಣಗಳು ಕೋರ್ಟಿನಲ್ಲಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ನಮೂನೆ 50, ನಮೂನೆ 53ರ ಬಗ್ಗೆ ಹೇಳುತ್ತಿದ್ದೀರಾ ಅಥವಾ 94ಸಿ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ಬಿ.ಸುರೇಶ್ ಗೌಡ : ಮಾನ್ಯ ಸಚಿವರೇ, ನಾನು ನಿಮಗೆ House ನಲ್ಲಿ ಮನವಿ ಮಾಡುತ್ತಿದ್ದೇನೆ. 1000 ಅರ್ಜಿಗಳು ಬಂದಿದ್ದು, ಅದರಲ್ಲಿ 200 ಅರ್ಜಿಗಳನ್ನು ಮಾತ್ರ ಕೊಟ್ಟಿದ್ದೇವೆ. ಉಳಿದ 750 ಅರ್ಜಿಗಳಿಗೆ . . . .

ಶ್ರೀ ಕಾಗೋಡು ತಿಮ್ಮಪ್ಪ : ನೀವು 94ಸಿ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ಬಿ.ಸುರೇಶ್ ಗೌಡ : ಅದರ ಬಗ್ಗೆಯೇ ಹೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಏನಾಗಬೇಕು.

ಶ್ರೀ ಬಿ. ಸುರೇಶ್ ಗೌಡ : ಗೋಮಾಳದಲ್ಲಿ ಮನೆ ಕಟ್ಟಿಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಗೋಮಾಳದ ಕಥೆಯನ್ನು ಹೇಳುತ್ತೇನೆ ಕೇಳಿ. ಗೋಮಾಳದಲ್ಲಿ ಕೊಡಬೇಕೆಂದು ಮಾಡಿದ್ದು, ಆದರೆ ಹೈಕೋರ್ಟಿನಲ್ಲಿ ಒಂದು Writ ಆಗಿ stay ಮಾಡಿದ್ದಾರೆ. stay vacate ಆಗುವವರೆಗೆ ಕಾಯಬೇಕು.

ಶ್ರೀ ಬಿ. ಸುರೇಶ್ ಗೌಡ : ಬಗರ್ ಹುಕುಂ ಗೆ ಸಂಬಂಧಿಸಿದಂತೆ 94ಸಿ ಇರುತ್ತದೆ. ಮಾನ್ಯ ಸಚಿವರೆ, ಮನೆ ಕಟ್ಟಿಕೊಂಡಿರುವುದಕ್ಕೆ ಕೋರ್ಟ್ ಆದೇಶ ಇದೆಯೇ, ಅದಕ್ಕೂ stay ಆಗಿದೆಯೇ ಎನ್ನುವುದಕ್ಕೆ clarification ಬೇಕು. 94ಸಿ, ನಮೂನೆ 53 ಬಗರ್‌ಹುಕುಂ ಅರ್ಜಿಗಳಿಗೆ High Court stay ಆಗಿದೆ. ಮನೆಗಳನ್ನು ಕಟ್ಟಿಕೊಂಡಿರುವವರಿಗೆ 94 ಸಿ ಮತ್ತು ಬಗರ್‌ಹುಕುಂ ಅರ್ಜಿಗಳಿಗೆ ಸಂಬಂಧ ಕಲ್ಪಿಸಿ ಅಲ್ಲಿಯೂ ಮನೆಗಳ ಹಕ್ಕುಪತ್ರಗಳನ್ನು ಕೊಡುತ್ತಿಲ್ಲ. ಹಾಗಾಗಿ ನೀವು ಇದಕ್ಕೆ clarification ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲ ಎಂದು ಇದೆ. ಆದರೆ ಇದನ್ನು ಲೀಗಲ್ ಆಗಿ examine ಮಾಡಬೇಕು.

ಉಪಾಧ್ಯಕ್ಷರು : Ok., ಗುರುಪಾಟೀಲ್ ಶಿರವಾಳ ಅವರು.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಎಂ. ರಾಜಣ್ಣ : ಸಾರ್, ಉತ್ತರ ಬಂದಿರುತ್ತದೆ.

ಉಪಾಧ್ಯಕ್ಷರು : ರಾಜಣ್ಣ ಅವರೇ ಆಮೇಲೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

**ವಿಷಯ : ನಗರೋತ್ಥಾನ 3ನೇ ಹಂತದ ಯೋಜನೆ ಬಗ್ಗೆ**

********

ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ) : ಮಾನ್ಯ ಅಧ್ಯಕ್ಷರೆ, ನಗರೋತ್ಥಾನ 3ನೇ ಹಂತದ ಯೋಜನೆ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ : ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಲಾಗಿದೆ.

(ಉತ್ತರ ಪ್ರತಿ ಲಗತ್ತಿಸಿದೆ)

ಶ್ರೀ ಗುರುಪಾಟೀಲ ಶಿರವಾಳ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ಯೋಜನೆ ಕಾಲಮಿತಿಯ ಪ್ರಕಾರ ಫೆಬ್ರವರಿ ತಿಂಗಳಿನ ಹಂತದಲ್ಲಿ ಟೆಂಡರ್ ಅನ್ನು ಕರೆದು ಇಲ್ಲಿಯವರೆಗೆ ಶೇ.5ರಷ್ಟು ಪ್ರಗತಿಯನ್ನು ಸಾಧಿಸಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಆ ಕಾರ್ಯ ಆಗಿರುವುದಿಲ್ಲ. ಇನ್ನೂ ಟೆಂಡರ್ ಸಹ ಆಗಿರುವುದಿಲ್ಲ. ಹಾಗಾಗಿ ನಾನು ಈ ಸಂದರ್ಭದಲ್ಲಿ ಮಾನ್ಯ ಪೌರಾಡಳಿತ ಸಚಿವರನ್ನು ಒತ್ತಾಯ ಮಾಡುವುದೇನೆಂದರೆ, ಕಾಲಮಿತಿಯೊಳಗೆ ಈ ಯೋಜನೆ ಪ್ರಗತಿಯನ್ನು ಸಾಧಿಸಬೇಕು.

ಶ್ರೀ ಈಶ್ವರ ಬಿ. ಖಂಡ್ರೆ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಸರ್ಕಾರದ ನಗರೋತ್ಥಾನ 3ನೇ ಹಂತದ ಯೋಜನೆ ನಮ್ಮ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿರುತ್ತದೆ. ನಗರೀಕರಣ ದಿನೇ ದಿನೇ ಹೆಚ್ಚಿಗೆ ಆಗಿ ಬಹಳಷ್ಟು ನಗರ ಮತ್ತು ಪಟ್ಟಣಗಳ ಮೇಲೆ ಒತ್ತಡ ಜಾಸ್ತಿಯಾಗುತ್ತಿದೆ. ಮೂಲಭೂತಸೌಕರ್ಯಗಳ ಕೊರತೆಯಿದ್ದು ಅದನ್ನು ಸರಿಪಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು 2,886/- ಕೋಟಿ ರೂ.ಗಳ ಅನುದಾನದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಮಾನ್ಯ ಸದಸ್ಯರು ಈ ಯೋಜನೆ ವಿಳಂಬ ಆಗುತ್ತಿದೆ ಎನ್ನುವುದರಲ್ಲಿ ಆತಂಕವನ್ನು ವ್ಯಕ್ತಪಡಿಸಿರುತ್ತಾರೆ. ಸರ್ಕಾರದ ವತಿಯಿಂದ ಈಗಾಗಲೇ ನಗರೋತ್ಥಾನ ಯೋಜನೆಯ ಎರಡನೇ ಹಂತದಲ್ಲಿ ಯಾವ ಕಾರಣದಿಂದ ವಿಳಂಬವಾಗಿದೆ ಎನ್ನುವ ಬಗ್ಗೆ ಅಧ್ಯಯನ ಮಾಡಿ ಎಲ್ಲಾ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಜಿಲ್ಲಾ ಮಟ್ಟದಲ್ಲಿಯೇ

ಸ್ಥಳೀಯ ಸಂಸ್ಥೆಗಳವಾರು ಟೆಂಡರ್ ಮಾಡಬೇಕೆಂದು ಹೇಳಿ ಸೂಚನೆಯನ್ನು ಕೊಟ್ಟಿದ್ದೇವೆ. ಜಿಲ್ಲಾ ಯೋಜನಾ ಸಮಾಲೋಚಕರ ನೇಮಕಾತಿ ಮಾಡುವಂತಹದ್ದು ಮತ್ತು ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಕೊಡುವುದು, ಐದು ಕೋಟಿ ರೂ.ಗಳವರೆಗೆ ಜಿಲ್ಲಾಧಿಕಾರಿಯವರೇ ಅನುಮೋದನೆ ಕೊಡುವಂತಹ ಅಧಿಕಾರವನ್ನು ಕೊಟ್ಟಿದ್ದೇವೆ. ಕೇವಲ ಮಾರ್ಗಸೂಚಿ ಪ್ರಕಾರ ಕ್ರಿಯಾ ಯೋಜನೆ ಇದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಮಾತ್ರ ರಾಜ್ಯ ಮಟ್ಟದಲ್ಲಿ ಪ್ರಸ್ತಾವನೆ ಬರುತ್ತದೆ. ಎರಡನೇ ನಗರೋತ್ಥಾನ ಯೋಜನೆಯಲ್ಲಿ ಐದು ಸಾರಿ ಕಾಮಗಾರಿ ರಾಜ್ಯ ಮಟ್ಟಕ್ಕೆ ಬರುತ್ತಿತ್ತು. ಆದರೆ ಈಗ ಒಂದು ಸಾರಿ ಮಾತ್ರ ಕಾಮಗಾರಿ ಬರುತ್ತದೆ. ಆ ಒಂದು ನಿಟ್ಟಿನಲ್ಲಿ ವಿಳಂಬವಾಗುತ್ತಿದೆ. ಈಗಾಗಲೇ ಸುಮಾರು ಜಿಲ್ಲೆಗಳಲ್ಲಿ ಕ್ರಿಯಾಯೋಜನೆ ಮಂಜೂರಾಗಿದ್ದು, ಕಾಮಗಾರಿಗಳಿಗೆ ಚಾಲನೆ ಸಿಕ್ಕಿರುತ್ತದೆ. ಟೆಂಡರ್ ಆಗಿರುತ್ತದೆ. ಯೋಜನಾ ಸಮಾಲೋಚಕರನ್ನು ನಿಯುಕ್ತಿಗೊಳಿಸಿರುತ್ತಾರೆ. ಕೆಲವೊಂದು ಕಡೆಗಳಲ್ಲಿ ಮಾತ್ರ ಮಾರ್ಗಸೂಚಿ ಪ್ರಕಾರ, ಪ್ರಸ್ತಾವನೆ ಇಲ್ಲದ ಕಾರಣ 24.1% ಗೆ ಕೆಲವೊಂದು ಕಡೆ ಪ್ರಸ್ತಾವನೆ ಕೊಟ್ಟಿರುವುದಿಲ್ಲ. ಕೆಲವೊಂದು ಕಡೆ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿರುವುದಿಲ್ಲ. ಮಾರ್ಗಸೂಚಿ ಪ್ರಕಾರ ಇಲ್ಲದೆ ಇರುವಂತಹ ಪ್ರಸ್ತಾವನೆಗಳು ಮಾತ್ರ ವಾಪಸ್ಸು ಕಳುಹಿಸಿ ಅದನ್ನು ಸರಿಪಡಿಸಬೇಕೆಂದು ಹೇಳಿದ್ದೇವೆ. ಕಾಲಮಿತಿಯಲ್ಲಿ ಈ ಒಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದಕ್ಕೆ ಸಂಪೂರ್ಣವಾದಂತಹ ತಯಾರಿ ಮತ್ತು ಸಿದ್ದತೆಯನ್ನು ಮಾಡಿಕೊಳ್ಳುವುದಕ್ಕೆ ಅಧಿಕಾರವನ್ನು ಕೊಡಲಾಗಿದೆ. ಇದಕ್ಕೆ ಮಾನ್ಯ ಸದಸ್ಯರು ಆಸಕ್ತಿ ವಹಿಸಿ ಹೆಚ್ಚಿನ ತ್ವರಿತ ಗತಿಯಲ್ಲಿ ಮಾಡುವುದಕ್ಕೆ ಸಹಕಾರ ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : Ok., ಶ್ರೀ ಸುನಿಲ್ ಕುಮಾರ್ ರವರು

**ವಿಷಯ : ಪರಿಸರ ರಕ್ಷಣೆಯಲ್ಲಿ ವಿಶ್ವಕ್ಕೆ ಮಾದರಿಯಾಗಿ ರಾಜ್ಯಕ್ಕೆ ಕೀರ್ತಿ ತಂದಿರುವ ಸಾಲುಮರದ ತಿಮ್ಮಕ್ಕ ಅವರ ಜೀವನ ನಿರ್ವಹಣೆಯ ಜವಾಬ್ದಾರಿ ಭರವಸೆಯನ್ನು ಈಡೇರಿಸುವ ಬಗ್ಗೆ.**

*****

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಸುನೀಲ್ ಕುಮಾರ್ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಪರಿಸರ ರಕ್ಷಣೆಯಲ್ಲಿ ವಿಶ್ವಕ್ಕೆ ಮಾದರಿಯಾಗಿ ರಾಜ್ಯಕ್ಕೆ ಕೀರ್ತಿ ತಂದಿರುವ ಸಾಲುಮರದ ತಿಮ್ಮಕ್ಕ ಅವರ ಜೀವನ ನಿರ್ವಹಣೆಯ ಜವಾಬ್ದಾರಿ ಭರವಸೆಯನ್ನು ಈಡೇರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ (ಉತ್ತರ ಪ್ರತಿ ಲಗತ್ತಿಸಿದೆ)

ಶ್ರೀ ವಿ. ಸುನೀಲ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಪರಿಸರ ರಕ್ಷಣೆಯಲ್ಲಿ ಸಾಲುಮರದ ತಿಮ್ಮಕ್ಕ ಅವರ ಹೆಸರು ನಮಗೆಲ್ಲರಿಗೂ ಗೊತ್ತಿದೆ. 106 ವರ್ಷದ ಹಿರಿಯ ಮಹಿಳೆಯ ವೃದ್ಧಾಪ್ಯದ ಜೀವನ ನಿರ್ವಹಣೆಗೆ ಬಹಳ ಕಷ್ಟಪಡುವಂತಹ ಸಂದರ್ಭದಲ್ಲಿ, ಈ ಹಿಂದೆ ಬೇರೆ ಬೇರೆ ಹಂತಗಳಲ್ಲಿ ಸರ್ಕಾರ ಹತ್ತಾರು ರೀತಿಯಾದಂತಹ ಭರವಸೆಗಳನ್ನು ಸಾಲುಮರದ ತಿಮ್ಮಕ್ಕನ ಕುಟುಂಬಕ್ಕೆ ಕೊಟ್ಟಿತ್ತು. ಆದರೆ ಇವತ್ತಿನವರೆಗೆ ಭರವಸೆಯನ್ನು ಈಡೇರಿಸುವಂತಹ ಪ್ರಯತ್ನವನ್ನು ಸರ್ಕಾರ ಮಾಡಿರುವುದಿಲ್ಲ. ನಿಮ್ಮ ಉತ್ತರದಲ್ಲಿ ತಿಳಿಸಿರುವಂತೆ ಕೇವಲ ವೃದ್ಧಾಪ್ಯ ವೇತನದ 500/- ರೂ.ಗಳನ್ನು ಮಾತ್ರ ಅವರ ಕುಟುಂಬಕ್ಕೆ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ನಾನು ನಿಮ್ಮ ಹತ್ತಿರ ವಿನಂತಿ ಮಾಡುವುದೇನೆಂದರೆ, ಬಜೆಟ್‌ನಲ್ಲಿ ಸರ್ಕಾರ 'ಸಾಲು ಮರದ ತಿಮ್ಮಕ್ಕನ ನೆರಳು' ಎಂದು ಘೋಷಣೆ ಮಾಡುತ್ತದೆ. ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಬೇರೆ ಬೇರೆ ಸಂದರ್ಭಗಳಲ್ಲಿ ಅವರ ಮನೆಗೆ ಹೋಗಿ ನಿಮ್ಮ ಕುಟುಂಬದ ನಿರ್ವಹಣೆಯನ್ನು ಸರ್ಕಾರ ನೋಡುತ್ತದೆಂದು ಹೇಳಿರುತ್ತಾರೆ. ಆದರೆ ಆಸ್ಪತ್ರೆಗೆ admit ಆದಂತಹ ಸಂದರ್ಭದಲ್ಲಿ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಸರ್ಕಾರ ಭರಿಸುತ್ತದೆಂದು ಹೇಳಿರುವುದನ್ನು ನಾವು ಕೇಳಿದ್ದೇವೆ. ಆದರೆ ಇಲ್ಲಿಯತನಕ ಸರ್ಕಾರ ಯಾವುದೇ ರೀತಿಯಾದಂತಹ ವೆಚ್ಚವನ್ನು ಭರಿಸಿಲ್ಲವೆನ್ನುವುದು ನಿಮ್ಮ ಉತ್ತರದಲ್ಲಿ ಸ್ಪಷ್ಟವಾಗಿದೆ. ಸಾಲು ಮರದ ತಿಮ್ಮಕ್ಕನು ಸಹ ಬೇರೆ ಬೇರೆ ಸಂದರ್ಭಗಳಲ್ಲಿ ಇದನ್ನು ವ್ಯಕ್ತಪಡಿಸಿರುತ್ತಾರೆ. ಹಾಗಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ತಕ್ಷಣವೇ 106 ವರ್ಷದ ಇಳಿ ವಯಸ್ಸಿನಲ್ಲಿರುವಂತಹ ಸಾಲು ಮರದ ತಿಮ್ಮಕ್ಕನ ಕೊನೆಯ ದಿನಗಳ ನಿರ್ವಹಣಾ ವ್ಯವಸ್ಥೆಯಲ್ಲಿಯಾದರೂ ಸರ್ಕಾರ ಮುತುವರ್ಜಿ ವಹಿಸಿ ಆಕೆಯ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು ಮತ್ತು ಕುಟುಂಬದ ನಿರ್ವಹಣೆಯನ್ನು ಸರ್ಕಾರವೇ ಭರಿಸಬೇಕೆನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಬಿ.ಸುರೇಶ್ ಗೌಡ : ಸಾಲುಮರದ ತಿಮ್ಮಕ್ಕನವರು ಇರುವುದೇ ಒಬ್ಬರು. ಆದರೆ ಅವರಿಗೆ ಸರ್ಕಾರ ಕೊಡುವಂತಹ ಸಹಾಯಧನ ಯಾವುದಕ್ಕೂ ಪ್ರಯೋಜನವಾಗುತ್ತಿಲ್ಲ. ಅವರು ನಮ್ಮ ಕ್ಷೇತ್ರದ ಪಕ್ಕದಲ್ಲೇ ಇರುವುದರಿಂದ ಯಾವುದೇ ಕಾರ್ಯಕ್ರಮವಾದರೂ ಅವರನ್ನು ಕರೆದುಕೊಂಡು ಬಂದು ಪರಿಸರದ ಬಗ್ಗೆ, ಮರನೆಡುವ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕೆನ್ನುವಂತಹ ಸಂದರ್ಭದಲ್ಲಿ ಪ್ರಾಯೋಜಕರು ಕಾರಲ್ಲಿ ಕರೆದುಕೊಂಡು ಬರುವಂತಹ ವ್ಯವಸ್ಥೆ ಇದೆ. ಆದ್ದರಿಂದ ಅವರಿಗೆ 10,000 ರೂ.ಗಳನ್ನಾದರೂ ಪ್ರೋತ್ಸಾಹ ಧನ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇವರಿಗೆ ನಾವು ಯಾವುದಾದರೂ ರೀತಿಯಲ್ಲಿ ಸಹಾಯ ಮಾಡದಿದ್ದರೆ ಅಮಾನವೀಯವಾಗುತ್ತದೆ. ತಮ್ಮ ಇಲಾಖೆ ಒಂದೇ ಅಲ್ಲ, ಎಲ್ಲಾ ಗೌರವ ಪ್ರಶಸ್ತಿಗಳನ್ನು ನೀಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಕಂದಾಯ ಸಚಿವನಾಗಿ ಅವರ ಮನೆಗೆ ಹೋಗಿ ಸಹಾಯ ಮಾಡಿ ಬಂದಿರುತ್ತೇನೆ.

ಶ್ರೀ ವಿ. ಸುನೀಲ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಸಾಲು ಮರದ ತಿಮ್ಮಕ್ಕನವರು role model. ಪರಿಶೀಲಿಸುತ್ತೇವೆಂದರೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಆಸ್ಪತ್ರೆಯ ಖರ್ಚನ್ನು ಸಹ ಕೊಟ್ಟಿದ್ದಾರೆ.

ಶ್ರೀ ವಿ. ಸುನೀಲ್ ಕುಮಾರ್ : ಇಲ್ಲ ಸಾರ್. ಅವರ ಕುಟುಂಬ ವರ್ಗದವರು ಬಹಳ ಕ್ಲಿಯರ್ ಆಗಿ ಹೇಳಿರುತ್ತಾರೆ. ಈ ಹಿಂದೆ ಮೆಡಲ್‌ಗಳನ್ನು ಅಡವಿಟ್ಟು ಆಸ್ಪತ್ರೆಯ ವೈದ್ಯಕೀಯ ವೆಚ್ಚವನ್ನು ಭರಿಸಿ discharge ಆಗಿರುತ್ತಾರೆ. ಸುಮ್ಮನೆ ಏನೂ ಹೇಳಬೇಡಿ. ದಯಮಾಡಿ ತಿಂಗಳಿಗೆ ಒಂದಿಷ್ಟು ಹಣ ಕೊಡುತ್ತೇವೆಂದು ಹೇಳಿ.

(ಮುಂದು . . .)



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿ.ಸ.:13.06.2017.07.00.(46).ಜಿಎಂ.ಪಿಎಸ್.

ಶ್ರೀಮತಿ ಉಮಾಶ್ರೀ(ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಶ್ರೀ ಸುನಿಲ್‌ಕುಮಾರ್‌ರವರು ಕೇಳುತ್ತಿರುವ ಪ್ರಶ್ನೆ ಸರಿಯಾಗಿದೆ. ಅವರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸೌಲಭ್ಯಾವಕಾಶಗಳನ್ನು ಒದಗಿಸಿಕೊಡಿ ಎಂದು ಕೇಳುತ್ತಿದ್ದಾರೆ. ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಸಾಲು ಮರದ ತಿಮ್ಮಕ್ಕನವರು ಕಾಲಕಾಲಕ್ಕೆ ಆಸ್ಪತ್ರೆಗೆ ಸೇರಿದಂಥ ಸಂದರ್ಭದಲ್ಲಿ ನಾನು ಸಹ ಅವರನ್ನು ಭೇಟಿಯಾಗಿದ್ದೇನೆ. ಅವರಿಗೆ ಸಂಬಂಧಪಟ್ಟ ಆಸ್ಪತ್ರೆ ಖರ್ಚುಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೂ ಸಹ ಕೊಟ್ಟಿದ್ದೇವೆ ಎಂದು ತಮ್ಮ ಮೂಲಕ ಅವರಿಗೆ ಭಿನ್ನಹ ಮಾಡುತ್ತಿದ್ದೇನೆ.

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಅವರ ಮೆಡಲ್‌ಗಳನ್ನು ಅಡವಿಟ್ಟು, ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿರುವ ಸಂಗತಿ ಗೊತ್ತಾಗಿದೆ. ನಾನು ಹೇಳುತ್ತಿರುವುದೇನೆಂದರೆ ತಿಂಗಳಿಗೆ ಇಂತಿಷ್ಟು ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರ commit ಮಾಡಲಿ. ಬಜೆಟ್‌ನಲ್ಲಿ 'ಸಾಲು ಮರದ ತಿಮ್ಮಕ್ಕನ ನೆರಳು' ಎಂದು ಕಾರ್ಯಕ್ರಮ ಘೋಷಣೆ ಮಾಡುತ್ತೀರಿ. ಅವರ ನಿರ್ವಹಣೆ ವೆಚ್ಚವನ್ನು ಸರ್ಕಾರ ಭರಿಸುವುದಿಲ್ಲವೆಂದರೆ ಹೇಗೆ? ಇದನ್ನು ಮಾನವೀಯತೆಯ ನೆಲೆಯಲ್ಲಿ ಮಾಡಬೇಕು.

ಶ್ರೀಮತಿ ಉಮಾಶ್ರೀ: ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ನಮ್ಮ ಗಮನಕ್ಕೆ ಬಂದದ್ದನ್ನು ನಮ್ಮ ಇಲಾಖೆಯಿಂದ ಅವರಿಗೆ ಕೊಟ್ಟಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ವಿಶ್ವದ ನೂರು ಮಹಿಳೆಯರ ಪಟ್ಟಿಯಲ್ಲಿ ಆಕೆಯೂ ಸೇರಿದ್ದಾರೆ. ಒಂದು ಮಾಡೆಲ್ ಎಂದು ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ತಮ್ಮ ಇಲಾಖೆಯಲ್ಲಿರುವಂಥ ವೃದ್ಧಾಪ್ಯ ವೇತನ ಯೋಜನೆಯಡಿಯಲ್ಲಿ 500 ರೂಪಾಯಿಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಇದು ಕೇವಲ ಕಂದಾಯ ಇಲಾಖೆಗೆ ಮಾತ್ರ

ಸಂಬಂಧಪಡುವ ವಿಚಾರವಲ್ಲ. ಸರ್ಕಾರವಾಗಿ ಒಟ್ಟಾರೆ ಒಂದು ನಿರ್ಣಯ ಮಾಡಿ ಅವರಿಗೆ ಯಾವುದಾದರೊಂದು ರೀತಿಯಲ್ಲಿ ನಾವು ಸಹಾಯ ಮಾಡದೇ ಹೋದರೆ . . . .

ಶ್ರೀ ಬಿ.ಸುರೇಶ್‌ಗೌಡ: ಮಾನ್ಯ ಉಪಾಧ್ಯಕ್ಷರೆ, ಸಾಲುಮರದ ತಿಮ್ಮಕ್ಕನವರು ನೂರು ವರ್ಷಗಳ ಕಾಲವೇನೂ ಬದುಕುವುದಿಲ್ಲ. ಅವರು ತುಂಬಾ ಕಡು ಬಡತನದಲ್ಲಿ ಬಂದಿರುವವರು. ಕಷ್ಟದಲ್ಲಿದ್ದಾರೆ, ದಯವಿಟ್ಟು ಅವರಿಗೆ ಸರ್ಕಾರದ ವತಿಯಿಂದ ಸಹಾಯ ಮಾಡಿ.

ಉಪಾಧ್ಯಕ್ಷರು: ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಒಂದು ಪರಿಹಾರ ಕ್ರಮವನ್ನು ಕೈಗೊಳ್ಳುತ್ತಾರೆ.

ಶ್ರೀ ಬಿ.ಸುರೇಶ್‌ಗೌಡ: ಆಯಿತು ಸಾರ್.

ಶ್ರೀ ಎಂ.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು, ನನಗೆ ಮಾತನಾಡಲು ಅವಕಾಶ ಕೊಡಿ ಸಾರ್.

ಉಪಾಧ್ಯಕ್ಷರು: ರಾಜಣ್ಣನವರೆ ಕೊನೆಯಲ್ಲಿ ನಿಮಗೆ ಅವಕಾಶ ಕೊಡುತ್ತೇನೆ. ಮಧ್ಯದಲ್ಲಿ ಕರೆಯುವುದಕ್ಕೆ ಆಗುವುದಿಲ್ಲ. ತಾವು ಕುಳಿತುಕೊಳ್ಳಿ. ಶ್ರೀ ಎಸ್.ಸುರೇಶ್‌ಕುಮಾರ್ - ಇಲ್ಲ. ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ - ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಇನ್ನೂ ಉತ್ತರ ಬಂದಿಲ್ಲ. ಶ್ರೀ ಸಿ.ಟಿ.ರವಿ - ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಇನ್ನೂ ಉತ್ತರ ಬಂದಿಲ್ಲ. ಶ್ರೀ ಎಂ.ಜೆ.ಅಪ್ಪಾಜಿ - ಇದು held over ಆಗಿದೆ. ಶ್ರೀ ಜೆ.ಆರ್.ಲೋಬೋ - ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಇನ್ನೂ ಉತ್ತರ ಬಂದಿಲ್ಲ. ನಾಳೆ ಉತ್ತರ ಕೊಡಿಸುತ್ತೇನೆ.

ವಿಷಯ : ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೆ:ಪೆಬಲ್ ಬೈ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಇವರು ಕಾನೂನು ಬಾಹಿರವಾಗಿ ವಸತಿ ಸಮುಚ್ಛಯ ನಿರ್ಮಾಣ ಮಾಡಿದ್ದು, ಸದರಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.

* * *

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ವೈ.ಎ.ನಾರಾಯಣಸ್ವಾಮಿ(ಹೆಬ್ಬಾಳ): ಮಾನ್ಯ ಉಪಾಧ್ಯಕ್ಷರೆ, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಧಾಕೃಷ್ಣ ದೇವಸ್ಥಾನದ ವಾರ್ಡ್ ನಂ.18ರ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗಶೆಟ್ಟಿಹಳ್ಳಿ ಸರ್ವೆ ನಂ.6ರಲ್ಲಿ ಘೋಷಿತ ಕೊಳಚೆ ಪ್ರದೇಶ ಎಂದು ಇದ್ದರೂ ಸಹ ಅದನ್ನು violate ಮಾಡಿ private buildersಗೆ ಕೊಟ್ಟು ವಸತಿ ಸಮುಚ್ಚಯ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರದ ಮಾನ್ಯ ವಸತಿ ಸಚಿವರ ಗಮನವನ್ನು ಸೆಳೆಯಬಯಸುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ವಸತಿ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ವಸತಿ ಸಚಿವರ ಪರವಾಗಿ):ಈಗಾಗಲೇ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ. ಅದರಲ್ಲಿ ಮುಖ್ಯವಾಗಿ ನಮ್ಮ ಕೊಳಚೆ ಮಂಡಳಿ ವ್ಯಾಪ್ತಿಯಲ್ಲಿ ಬರುವುದು ಕೇವಲ 10 ಗುಂಟೆ ಮಾತ್ರ. 10 ಗುಂಟೆಯಲ್ಲಿ 36 ಮನೆಗಳು ಇದೆ. ಇನ್ನು ಬೇರೆ ಲ್ಯಾಂಡ್ ಇಲ್ಲ ಎಂದು ಹೇಳುತ್ತಿಲ್ಲ. ಒತ್ತುವರಿ ಆಗಿದೆಯೋ ಇಲ್ಲವೋ ಅದರ ಪ್ರಶ್ನೆ ಇಲ್ಲಿ ಬಂದಿಲ್ಲ. ಇಲ್ಲಿ ಕೊಳಚೆ ಮಂಡಳಿಗೆ ಸೇರಿರುವುದು ಕೇವಲ 10 ಗುಂಟೆ ಮಾತ್ರ. ಹಾಗಾಗಿ, ಈ ಉತ್ತರ ಕೊಟ್ಟಿರುವುದು ಸರಿಯಾಗಿದೆ.

ಶ್ರೀ ವೈ.ಎ.ನಾರಾಯಣಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಉತ್ತರಕ್ಕೂ ನನ್ನ ಪ್ರಶ್ನೆಗೂ ಸಂಬಂಧವಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನೀವು ಕೊಟ್ಟಿರುವ ಉತ್ತರದಲ್ಲಿ ರಾಮಕೃಷ್ಣಪ್ಪ ಸ್ಲಮ್ ಎಂದು ಕೊಟ್ಟಿದ್ದೀರಿ. ಇಲ್ಲಿ ಘೋಷಣೆ ಆಗಿರುವ ಸ್ಲಮ್ ಅಂಬೇಡ್ಕರ್ ಸ್ಲಮ್ ಎಂದು ದಿ:11.07.2007ರಂದು ಚೆಕ್‌ಬಂದಿ ಪ್ರಕಾರ 1 ಎಕರೆ 17 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳು ಮತ್ತು ಸ್ಲಮ್ ಬೋರ್ಡ್ ಅಧಿಕಾರಿಗಳು ಇಬ್ಬರೂ joint survey ಮಾಡಿ ಘೋಷಣೆ ಮಾಡಿದ್ದಾರೆ. ಆ 1 ಎಕರೆ 17 ಗುಂಟೆ ಜಮೀನು, ಇದು ಸರ್ವೆ ನಂ.6ರಲ್ಲಿ NTI ಬಡಾವಣೆ ನಿವಾಸಿಗಳು request ಮಾಡಿ ಬಿಡಿಎಗೆ ನಮ್ಮ ನಿವಾಸಿಗಳಿಗೆ ಸೈಟ್‌ನ್ನು ಮಾಡಬೇಕೆಂದು ಹೇಳಿ ಭೂಸ್ವಾಧೀನ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿಸಬೇಕೆಂದು ಕೋರಿ ಭೂಸ್ವಾಧೀನ ಮಾಡಿಸಿಕೊಂಡರು. 11 ಎಕರೆ 30 ಗುಂಟೆ, ಇದಾದ ನಂತರ ನಿವೇಶನಗಳನ್ನು ಮಾಡದೆ, ಅವರೇನು ಮಾಡಿದ್ದಾರೆಂದರೆ ಮೆ:ಪೆಬಲ್ ಬೈ ಎನ್ನುವ ಸಂಸ್ಥೆಗೆ entire areaವನ್ನು transfer ಮಾಡಿ ಸಮುಚ್ಚಯವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿದರು. ಅದಾದ ನಂತರ ಆ ಪೆಬಲ್ ಬೈ ಸಂಸ್ಥೆಯವರು ಈ 1 ಎಕರೆ 17 ಗುಂಟೆ ಜಮೀನನ್ನು ಸೇರಿಸಿಕೊಂಡು ಅದರೊಳಗಿರುವ ಬಂಡಿದಾರಿ ಹಾಗೂ ಸೆಕೆಂಡರಿ storm water drain ಎಲ್ಲವನ್ನೂ ಸೇರಿಸಿಕೊಂಡು ಬಿಬಿಎಂಪಿಗೆ ಪ್ಲಾನ್ ಅಪ್ರೂವಲ್‌ಗೆ ಅಪ್ಲೈ ಮಾಡುತ್ತಾರೆ. ಬಿಬಿಎಂಪಿಯವರು 2006ರಲ್ಲಿ ಮೊದಲನೇ ಪ್ಲಾನ್ 3 ಅಂತಸ್ತಿನ ಕಟ್ಟಡಕ್ಕೆ ಅನುಮತಿಯನ್ನು ಕೊಡುತ್ತಾರೆ. 2007ರಲ್ಲಿ ಎರಡನೇ ಪ್ಲಾನ್ ಮರುನಕ್ಷೆಗೆ 19 floor ಕಟ್ಟುವುದಕ್ಕೆ permission ಕೊಡುತ್ತಾರೆ. 2008ರಲ್ಲಿ 3ನೇ ಬಾರಿ 21 floorನ ಸಮುಚ್ಚಯ ಕಟ್ಟುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಇಲ್ಲಿ ನನ್ನ ಸಮಸ್ಯೆಯೇನೆಂದರೆ, ಇಷ್ಟು ಸ್ಲಮ್ ಜಾಗವನ್ನು acquire ಮಾಡಿಕೊಂಡು ಬಿಲ್ಡಿಂಗ್ ಕಟ್ಟಿದ್ದರೂ ಸಹ ಅದಕ್ಕೆ ಬಿಬಿಎಂಪಿ ಅಧಿಕಾರಿಗಳು OC ಕೊಟ್ಟಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಎಲ್ಲಾ ದಾಖಲೆಗಳನ್ನು ಮುಚ್ಚಿಟ್ಟು Plan approval ಮಾಡಿಕೊಟ್ಟಿದ್ದಾರೆ. 2015ರಲ್ಲಿ ಬಿಬಿಎಂಪಿ ಎಲೆಕ್ಷನ್ ಆದ Counting ದಿನವೇ ರಾತ್ರೋ ರಾತ್ರಿ ಖಾತೆಗಳನ್ನು ಮಾಡಿಕೊಟ್ಟಿದ್ದಾರೆ. ನನ್ನ ಆಗ್ರಹವೇನೆಂದರೆ, ದಯವಿಟ್ಟು ಈ ಕೊಳಚೆ ಪ್ರದೇಶವೆಂದು ಏನು 1 ಎಕರೆ 17 ಗುಂಟೆ ಜಾಗ ಘೋಷಿತವಾಗಿದೆಯೋ, ಆ ಜಮೀನನ್ನು ಆ ಬಿಲ್ಡಿಂಗ್‌ನವರಿಂದ ಬಿಡಿಸಿಕೊಡಬೇಕು. ಅಲ್ಲಿ ಬಡವರಿಗೆ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಮೊದಲನೆಯ ವಿಚಾರ. ಎರಡನೆಯದಾಗಿ, ಇಷ್ಟೆಲ್ಲಾ ದಾಖಲಾತಿಗಳು ಇದ್ದರೂ ಸಹ ಬಿಬಿಎಂಪಿ ಅಧಿಕಾರಿಗಳು ಯಾರು plan approval ಮಾಡಿ ಕೊಟ್ಟಿದ್ದಾರೆ, OC CC ಕೊಟ್ಟಿದ್ದಾರೆ ಮತ್ತು ಖಾತೆಗಳನ್ನು ಮಾಡಿ ಕೊಟ್ಟಿದ್ದಾರೆಯೋ ಅವರೆಲ್ಲರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಮತ್ತು immediate ಆಗಿ ಆ ಜಾಗವನ್ನು ತೆರವುಗೊಳಿಸಿ ನಮ್ಮ ಬಡವರಿಗೆ ಮನೆಯ ಅನುಕೂಲ ಮಾಡಿಕೊಡಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು. ನೀವು ನೀಡಿರುವ ನಿಮ್ಮ ಲಿಖಿತ ಉತ್ತರದಲ್ಲಿ ತೇಲಿಸಿಬಿಟ್ಟಿದ್ದೀರಿ. ಯಾವುದೋ ಸ್ಲಮ್ ಬಗ್ಗೆ ವಿವರಣೆ ನೀಡಿದ್ದೀರಿ. ರಾಮಕೃಷ್ಣ ಸ್ಲಮ್ ಅಲ್ಲ ಅದು. ಅಂಬೇಡ್ಕರ್ ಸ್ಲಮ್

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದು. ಬೇಕಾದರೆ ನಿಮ್ಮ ಬಳಿಗೆ documents ಕಳುಹಿಸಿ ಕೊಡುತ್ತೇನೆ. ಆದ್ದರಿಂದ ದಯವಿಟ್ಟು ಸ್ಪಷ್ಟವಾದ ಉತ್ತರವನ್ನು ನಿಮ್ಮಿಂದ ಬಯಸುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಈಗ ನಾವು ಕೊಟ್ಟಿರುವಂಥ ಉತ್ತರದಲ್ಲಿ 10 ಗುಂಟೆಗಳು ಮಾತ್ರ ಕೊಳಚೆ ಪ್ರದೇಶಕ್ಕೆ ಅಂತಿಮ ಅಧಿಸೂಚನೆಯಂತೆ ಸೇರಿದೆ ಎಂದು ಹೇಳಿದ್ದೇವೆ. ತಾವು ಹೇಳುತ್ತಿರುವುದನ್ನು ನೋಡಿದರೆ ಇದಕ್ಕೂ ಅದಕ್ಕೂ ಸಂಬಂಧವೇ ಇಲ್ಲ. ಒಂದು ಕೆಲಸ ಮಾಡಿ, ದಯಮಾಡಿ ತಾವು ಆ ದಾಖಲೆಗಳನ್ನು ಕಳುಹಿಸಿ ಕೊಡಿ. ಈ ವಿಚಾರ ಬಿಬಿಎಂಪಿಗೆ ಬರಲಿ ಅಥವಾ ಹೌಸಿಂಗ್ ಇಲಾಖೆಗೆ ಬರಲಿ, ಯಾವ ಇಲಾಖೆಗೆ ಬಂದರೂ ಸಹ ತಾವು ಹೇಳಿರುವಂಥ ವಿಚಾರ ಸತ್ಯವಾಗಿದ್ದಂಥ ಸಂದರ್ಭದಲ್ಲಿ ಅದನ್ನು ವಿಚಾರಣೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ದಾಖಲೆಗಳನ್ನು ನಮಗೆ ಕಳುಹಿಸಿ ಕೊಡಿ.

ಉಪಾಧ್ಯಕ್ಷರು: ನಾರಾಯಣಸ್ವಾಮಿಯವರೆ ದಾಖಲೆಗಳನ್ನು ಕಳುಹಿಸಿಕೊಡಿ.

ಶ್ರೀ ವೈ.ಎ.ನಾರಾಯಣಸ್ವಾಮಿ: ಕಂದಾಯ ಇಲಾಖೆ ಮತ್ತು ಬಿಡಿಎನವರು joint survey ಮಾಡಿದ್ದಾರೆ. ಆದರೂ, ಬಿಬಿಎಂಪಿಯವರು ಆ factsನ್ನು hide ಮಾಡಿ plan approval ಮಾಡಿಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಎಲ್ಲಾ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ. 15 ದಿನಗಳೊಳಗಾಗಿ ಒಂದು ನಿರ್ಧಾರಕ್ಕೆ ಬಂದು, ಸಮಿತಿ ಮಾಡಿ ಅದನ್ನೆಲ್ಲಾ ಪರಿಶೀಲನೆ ಮಾಡಿ ಆ ಜಮೀನನ್ನು ಬಿಡಿಸಿಕೊಡುವ ವ್ಯವಸ್ಥೆ ಮಾಡಬೇಕು. ಈ ತಪ್ಪು ಉತ್ತರವನ್ನು ದಯವಿಟ್ಟು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ ಇದಕ್ಕೂ ಅದಕ್ಕೂ ಸಂಬಂಧವೇ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ವಾಪಸ್ಸು ತೆಗೆದುಕೊಳ್ಳುವುದಲ್ಲ, ಈಗ ತಾವು ಹೇಳುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ನೀವು ಆ ದಾಖಲೆಗಳನ್ನು ಕಳುಹಿಸಿ ಕೊಡಿ. ಒಂದು ತಿಂಗಳೊಳಗಾಗಿ ಒಂದು enquiry ಮಾಡಿಸಿ, ನಾವು ಉತ್ತರವನ್ನು ನಿಮಗೆ ಕೊಡುತ್ತೇವೆ.

ಉಪಾಧ್ಯಕ್ಷರು: ಮುಂದಿನ ಗಮನ ಸೆಳೆಯುವ ಸೂಚನೆ ಶ್ರೀ ನಾರಾಯಣಗೌಡರು.

ವಿಷಯ : ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿ ಮುರುಕನಹಳ್ಳಿ ಗ್ರಾಮದಲ್ಲಿ ನಡೆದಿರುವ ಕೊಲೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಡಿವೈಎಸ್‌ಪಿಯವರು ಕರ್ತವ್ಯ ಲೋಪ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಸಗಿರುವುದರಿಂದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ.

* * *

ಶ್ರೀ ನಾರಾಯಣಗೌಡ(ಕೆ.ಆರ್.ಪೇಟೆ): ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿ ಮುರುಕನಹಳ್ಳಿ ಗ್ರಾಮದಲ್ಲಿ ನಡೆದಿರುವ ಕೊಲೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಡಿವೈಎಸ್‌ಪಿಯವರು ಕರ್ತವ್ಯ ಲೋಪ ಎಸಗಿರುವುದರಿಂದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ಗೃಹ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ನಾರಾಯಣಗೌಡ(ಕೆ.ಆರ್.ಪೇಟೆ): ಮಾನ್ಯ ಉಪಾಧ್ಯಕ್ಷರೆ, ಇದಕ್ಕಿಂತ ಮುಂಚೆ ನಮ್ಮ ತಾಲ್ಲೂಕಿನಲ್ಲಿ 7 ರಿಂದ 8 ಕೊಲೆಗಳಾಗಿದೆ. ಇದಕ್ಕೆ ನಂಬರ್ ಒನ್ ಕಾರಣ ಡಿವೈಎಸ್‌ಪಿಯವರೇ ಎಂದು ಕಳೆದ ಎರಡು ಮೂರು ಸೆಷನ್‌ನಿಂದ ನಾನು ಕೇಳುತ್ತಿದ್ದೇನೆ. ಆದರೆ, ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಆನಂತರ, ಲೋಕಾಯುಕ್ತ ಕೇಸ್‌ನಲ್ಲಿ ಆರೋಪಿಗಳನ್ನು ಬಿಟ್ಟು ಸ್ವರ್ಗವಾಸಿಯಾಗಿರುವಂಥ ಇಡೀ ಕೆ.ಆರ್.ಪೇಟೆ ತಾಲ್ಲೂಕಿನ ಒಂದು ಸಮುದಾಯಕ್ಕೆ ತುಂಬಾ ಹೆಸರುವಾಸಿಯಾದಂಥ ಕೆಂಗೇಗೌಡರು ಎನ್ನುವವರ ಮೇಲೆ, ಸತ್ತುಹೋಗಿರುವವರ ಮೇಲೆ FIR ಮಾಡಿದ್ದಾರೆ. ಮತ್ತೊಬ್ಬರು ತುಂಬಾ ಒಳ್ಳೆಯ ಕುಟುಂಬದಲ್ಲಿದ್ದಂಥ ನೂರ್‌ಲಖನ್ ಎನ್ನುವವರ ಮೇಲೆ, ಅವರಿಗೂ ಇವರಿಗೂ ಸಂಬಂಧವೇ ಇಲ್ಲ. ಯಾರು ಆರೋಪಿಗಳಿದ್ದಾರೆಯೋ ಅವರೇ ಇವರನ್ನು ಅವರ ಲೆಟರ್‌ನಲ್ಲಿ ಟ್ರಾನ್ಸ್‌ಫರ್ ಮಾಡಿಸಿ ಇಲ್ಲಿಗೆ ಕರೆತಂದಿದ್ದಾರೆ. ಅವರನ್ನು ಉಳಿಸುವುದಕ್ಕೆ ಬೇರೆ ಬೇರೆ ಅಮಾಯಕರನ್ನು ಈ ಕೇಸ್‌ಗಳಲ್ಲಿ ಸಿಲುಕಿಸುತ್ತಿದ್ದಾರೆ. ಆದರೆ, ಕಳೆದ ಬಾರಿಯೂ ಸಹ ಈ ಬಗ್ಗೆ ತಪಾಸಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರ ನೀಡಿದ್ದರು. ನಮ್ಮ ಕ್ಷೇತ್ರದಲ್ಲಿ ಈ ಪ್ರಕರಣಗಳಿಂದ ತುಂಬಾ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅನ್ಯಾಯವಾಗುತ್ತಿದೆ. ಒಬ್ಬ ಶಾಸಕನಾಗಿ ನಾನು ಕಳೆದ ಎರಡು ವರ್ಷಗಳಿಂದ ಹಗಲು ರಾತ್ರಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಸರ್ಕಾರದಿಂದ ಯಾವುದಕ್ಕೋಸ್ಕರ ನಮಗೆ ಇಷ್ಟೊಂದು ತೊಂದರೆ ಕೊಡುತ್ತಿದ್ದೀರಿ. ಅಲ್ಲಿ ಚಿಕ್ಕಪುಟ್ಟ murderಗಳಾಗುತ್ತಿದೆ. ಮೊನ್ನೆ ಸ್ಕೂಲ್‌ಗೆ ಹೋಗುವ ಮಗು ಕ್ರಿಕೆಟ್ ಮ್ಯಾಚ್‌ಗಾಗಿ ಹೊಡೆದಾಟವಾಗಿ ಚಿಕ್ಕಪುಟ್ಟ ಮಕ್ಕಳ murder ಆಗಿದೆ. ಆದರೆ, ಡಿವೈಎಸ್‌ಪಿಯವರು ಕಾನ್‌ಸ್ಟೇಬಲ್‌ನ್ನು ಕಳುಹಿಸಿ ಅಮಾಯಕರನ್ನು ಹಿಡಿದುಕೊಂಡು ಬಂದು ತುಂಬಾ ಬಡವರ ಕುಟುಂಬದವರಿಂದ ಹಣ ವಸೂಲಿ ಮಾಡಿದ್ದಾರೆ. ಮೊದಲು ಮರಳಿನ ದಂಧೆಗೆ ಇಳಿದಿದ್ದರು.

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮಾನ್ಯ ಗೃಹ ಮಂತ್ರಿಗಳ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಈ ವಿಚಾರಕ್ಕೆ ಗೃಹ ಮಂತ್ರಿಗಳು ಉತ್ತರ ಕೊಡಬೇಕು. ಅವರು ಈಗ ಇಲ್ಲಿ ಇಲ್ಲ. ಈಗಾಗಲೇ ಈ ವಿಷಯದ ಬಗ್ಗೆ ಎರಡನೇ ಬಾರಿ ಅಥವಾ ಮೂರನೇ ಬಾರಿ ಪ್ರಶ್ನೆ ಮಾಡಿದ್ದಾರೆ.

(ಮುಂದುವರೆದಿದೆ)

13.06.2017 / 07.10 (47) MPL-PS

**ಟಿ.ಬಿ.ಜಯಚಂದ್ರ (ಮುಂದು. . .)**

ಇದು 2ನೇ ಬಾರಿಯೋ, 3ನೇ ಬಾರಿಯೋ ಪ್ರಶ್ನೆ ಮಾಡಿರುವುದು. ನಾನೇ ಹಿಂದೆ ಉತ್ತರ ಕೊಟ್ಟಿದ್ದೇನೆ. ಹಾಗಾಗಿ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ ಗೃಹಮಂತ್ರಿಗಳಿದ್ದಾಗಲೇ ಉತ್ತರವನ್ನು ಪಡೆಯಬೇಕು.

ಡಾ: ನಾರಾಯಣಗೌಡ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇದು ಬಹಳ ಅನ್ಯಾಯವಾಗುತ್ತಿದೆ. ಮೂರನೇ ಬಾರಿ ನಾನು ಕೇಳುತ್ತಿರುವುದು.

ಶ್ರೀ ಟಿ.ಬಿ.ಜಯಚಂದ್ರ : ಆಯಿತು ಮುಂದಕ್ಕೆ ಹಾಕೋಣ ಬಿಡಿ.

ಡಾ: ನಾರಾಯಣಗೌಡ : ಒಬ್ಬ ಶಾಸಕನಾಗಿ ಅಲ್ಲಿ ನಾನು ಯಾವ ರೀತಿ ಮುಖ ತೋರಿಸಿಕೊಂಡು ಇರಬೇಕು ಹೇಳಿ.

ಉಪಾಧ್ಯಕ್ಷರು : ಆಯಿತು ನಾಳೆ ಗೃಹಮಂತ್ರಿಗಳ ಕಡೆಯಿಂದ ಉತ್ತರ ಕೊಡಿಸುತ್ತೇನೆ ಬಿಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ವಿಷಯ : ತುಮಕೂರು ತಾಲ್ಲೂಕು ಡಣನಾಯಕನಪುರ ಮತ್ತು ವದೇಕಲ್ಲು ಗ್ರಾಮಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಜಲ್ಲಿ ಕ್ರಷರ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.

***

ಶ್ರೀ ಬಿ.ಸುರೇಶ್‌ಗೌಡ (ತುಮಕೂರು ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ತುಮಕೂರು ತಾಲ್ಲೂಕು ಡಣನಾಯಕನಪುರ ಮತ್ತು ವದೇಕಲ್ಲು ಗ್ರಾಮಗಳಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಜಲ್ಲಿ ಕ್ರಷರ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ಬಿ.ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಸುಮಾರು 4-5 ಪ್ರಶ್ನೆಗಳನ್ನು ಕೇಳಿದ್ದೆ. ಒಂದು ತುಮಕೂರು ತಾಲ್ಲೂಕು ಡಣನಾಯಕನಪುರ ಗ್ರಾಮದ ಸರ್ವೆ ನಂ.43/ಪಿ1, ಪಿ2 ರಲ್ಲಿ ಮತ್ತು ವದೇಕಲ್ಲು ಗ್ರಾಮದ ಸರ್ವೆ ನಂ. 22 ರಲ್ಲಿ ಅಕ್ರಮವಾಗಿ ಜೆಲ್ಲಿಪುಡಿ ಮಾಡುವ ಘಟಕದ ಕಲ್ಲು ಗಣಿಗಾರಿಕೆ ನಡೆಸುತ್ತಿರುವ ಶ್ರೀ ಲಕ್ಷ್ಮಿ ನಾರಾಯಣ ಸ್ಟೋನ್ ಕ್ರಷರ್ಸ್ ಇವರು ಕರ್ನಾಟಕ ರಾಜ್ಯ ಮಾಲಿನ್ಯ ಅಧಿನಿಯಮ 1981 ಕಾಯಿದೆ 31-ಎ ಅಡಿಯಿರುವ ನಿಯಮಗಳನ್ನು ಉಲ್ಲಂಘನೆ ಮಾಡಿದ್ದು, ಅದರನ್ವಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮುಚ್ಚಲು ಆದೇಶ ನೀಡಿದ್ದರೂ ಸಹ ಜೆಲ್ಲಿ ಕ್ರಷರ್ ನಡೆಸಿ ಪ್ರಾಕೃತಿಕ ನೈತಿಕ ಸಂಪತ್ತು ಲೂಟಿ ಮಾಡಿದ್ದು, ಅಕ್ರಮವಾಗಿ ನಡೆಸುತ್ತಿರುವ ಜೆಲ್ಲಿ ಕ್ರಷರ್‌ನಿಂದ ವಾಯು ಮಾಲಿನ್ಯ, ಶಬ್ಧ ಮಾಲಿನ್ಯ ಉಂಟಾಗಿ ಅಕ್ಕಪಕ್ಕದ ಶಾಲಾ ಮಕ್ಕಳಿಗೆ, ಗ್ರಾಮಸ್ಥರಿಗೆ, ಪ್ರಾಣಿ ಪಕ್ಷಿಗಳಿಗೆ ತುಂಬಾ ತೊಂದರೆಯಾಗಿದ್ದು, ಸದರಿ ಪ್ರದೇಶದಲ್ಲಿ ಸುಮಾರು 10 ವರ್ಷಗಳಿಂದ 20 ಲಕ್ಷ ಮೆಟ್ರಿಕ್ ಟನ್ ಕಲ್ಲು ತೆಗೆದಿರುವ ಅಂದಾಜು ಇದ್ದು, ಪ್ರಸ್ತುತ ಈಗಿನ ಬೆಲೆ ಮತ್ತು ದಂಡ ಸೇರಿ ಸುಮಾರು ರೂ. 60.00 ಕೋಟಿ ರಾಜಧನ ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿರುವುದು ಮೇಲ್ನೋಟಕ್ಕೆ ಕಂಡು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಂದಿದ್ದು ಇದರ ವಿರುದ್ಧ ಇಲಾಖಾ ಅಧಿಕಾರಿಗಳು ಕ್ರಮ ಜರುಗಿಸದೇ ಕಣ್ಣು ಮುಚ್ಚಿ ಕುಳಿತಿರುತ್ತಾರೆ. ಸದರಿ ಜೆಲ್ಲಿ ಕ್ರಷರ್ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸಿ, ಜೆಲ್ಲಿ ಕ್ರಷರ್‌ಗೆ ಯಾವುದೇ ರೀತಿಯ ಅನುಮತಿ ನೀಡದಂತೆ ಕ್ರಮ ಕೈಗೊಳ್ಳುವಂತೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ. ಆದರೆ ಉತ್ತರ ನಮಗೆ ಏನು ಬಂದಿದೆ ಎಂದರೆ

ಉಪಾಧ್ಯಕ್ಷರು : ಸಚಿವರು ಉತ್ತರ ಹೇಳಲಿ.

ಶ್ರೀ ಬಿ.ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರ ನೀಡಿದ್ದಾರೆ. ಆದರೆ ಉತ್ತರ ಸಮರ್ಪಕವಾಗಿಲ್ಲ. ಬಹಳ ಮುಖ್ಯವಾಗಿ ಕಲ್ಲು ಪುಡಿ ಮಾಡುವ ಗಣಿಗಾರಿಕೆಗೆ ಲೈಸೆನ್ಸ್ ಕೊಡಬೇಕಾದರೆ Pollution control Board, Environment department ಮತ್ತು ಅಲ್ಲಿರುವ ಗ್ರಾಮಸ್ಥರ ಅನುಮತಿಯನ್ನು ಪಡೆದು ಲೈಸೆನ್ಸ್ ಕೊಡಬೇಕು. ಅವೆಲ್ಲವನ್ನು fulfill ಮಾಡಿದ ಮೇಲೆ ಗಣಿಯನ್ನು ನಡೆಸಬೇಕು. ಆದರೆ ಇಲ್ಲಿ 5-6 ರೀತಿಯ violations ಆಗಿವೆ. ಒಂದು ಗಡಿರೇಖೆ ಉಲ್ಲಂಘನೆಯಾಗಿದೆ. ತುಮಕೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಗಡಿ ರೇಖೆಯಲ್ಲಿ ಅಕ್ರಮವಾಗಿ ಅಂದರೆ ಅವರಿಗೆ ಕೊಟ್ಟಂತಹ ಜಾಗವನ್ನು ಬಿಟ್ಟು ಸುಮಾರು 10 ಎಕರೆ ವಿಸ್ತೀರ್ಣದಲ್ಲಿ ಸುಮಾರು 20 ಲಕ್ಷ ಮೆಟ್ರಿಕ್ ಟನ್‌ನಷ್ಟು ಸರ್ಕಾರದ ಬೊಕ್ಕಸಕ್ಕೆ ಈಗಿನ ದರದಲ್ಲಿ ನೋಡಿದರೆ 60 ಕೋಟಿ ರೂ.ಗಳು ಬರಬೇಕಾಗಿದೆ. ಆಮೇಲೆ ಪರಿಸರ. ಪರಿಸರ ಬಹಳ ಮುಖ್ಯವೆಂದು ನಮ್ಮ ಅರಣ್ಯ ಸಚಿವರು ಹೇಳುತ್ತಿರುತ್ತಾರೆ. Environment ಪೂರ್ತಿ violation ಆಗಿದೆ. ಅಲ್ಲಿ ಎರಡು ಕೆರೆಗಳಿದ್ದು ಅವೆರಡೂ ಕೆರೆಗಳು ಬಿರುಕು ಬಿಟ್ಟಿದೆ. ಅಲ್ಲಿ ಯಾವುದೇ pollution control ನಿಯಮಗಳ ಉಲ್ಲಂಘನೆಯಾಗಿದೆ. ಆ ಉಲ್ಲಂಘನೆಯಾಗಿರುವುದರಿಂದ ಕ್ರಷರ್‌ನ ಕೊಳಚೆ ನೀರು ಎಲ್ಲ ಬಂದು ಎರಡೂ ಕೆರೆಗಳ ಮಾಲಿನ್ಯವಾಗಿದೆ. ಆದುದರಿಂದ ಮಂತ್ರಿಗಳಿಗೆ ಈಗ ನಾನು ಒಂದು ಮನವಿಯನ್ನು ಕೊಟ್ಟಿದ್ದೆ. ಕಳೆದ ಅಧಿವೇಶನದಲ್ಲಿಯೂ ಕೂಡಾ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈಗಲೂ ಒಂದು ಮನವಿಯನ್ನು ಕೊಟ್ಟಿದ್ದೇನೆ. Joint commissioner ಅನ್ನು ಈಗ appoint ಮಾಡಿದ್ದಾರೆ. ಅವರು ತನಿಖೆ ಮಾಡುತ್ತಿದ್ದಾರೆ. ಬಳ್ಳಾರಿಯಲ್ಲಿ ಆದಂತಹ ಅಕ್ರಮ ಗಣಿಗಾರಿಕೆ ರೀತಿಯಲ್ಲಿ ಗಣಿಗಾರಿಕೆಯಲ್ಲಿ ಅಕ್ರಮವಾಗಿದೆ. ಆದುದರಿಂದ ಇದರ ಬಗ್ಗೆ ಸಮಗ್ರ ತನಿಖೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಡೆಸಬೇಕು. ಹಾಗೇ ಅಲ್ಲಿ ರೂಪ ಎಂದು ಒಬ್ಬರು ಇಂಜಿನಿಯರೋ, ಯಾರೋ ಇದ್ದಾರೆ. ಅವರು ಮರಳು ದಂಧೆ ಇರಬಹುದು, ಕ್ರಷರ್ ಗಣಿಗಾರಿಕೆ ದಂಧೆ ಇರಬಹುದು. ಸುಮಾರು 5 ವರ್ಷಗಳಿಂದ ಅಲ್ಲಿ ಲೂಟಿ ಮಾಡುತ್ತಿದ್ದಾಳೆ. ಎಲ್ಲವನ್ನೂ violation ಮಾಡಿ. ಅದು ಕೂಡಾ ಸಮಗ್ರ ತನಿಖೆಯಾಗಬೇಕು. ಗಡಿ ರೇಖೆ ಉಲ್ಲಂಘನೆಯಾಗಿರುವುದು, royalty ಎಷ್ಟು ಕಟ್ಟಬೇಕು? ಸಮಗ್ರ ತನಿಖೆ ಆಗಬೇಕು. ಈ ಮಧ್ಯೆ ಹೈಕೋರ್ಟಿನಲ್ಲಿ ಆ ಇಲಾಖೆ ಅದನ್ನು permission ಕೊಟ್ಟಿಲ್ಲ. ಡಿ.ಸಿ. ಯವರ ಅಧ್ಯಕ್ಷತೆಯಲ್ಲಿ . . . .

ಉಪಾಧ್ಯಕ್ಷರು : ಆಯಿತು ಅವರು ಉತ್ತರ ಹೇಳುತ್ತಾರೆ.

ಶ್ರೀ ಬಿ.ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಹೇಳಿ ಬಿಡುತ್ತೇನೆ.

ಉಪಾಧ್ಯಕ್ಷರು : ಅಲ್ಲ ನೀವು ಗಮನ ಸೆಳೆದಿದ್ದೀರಿ. ಅವರು ಉತ್ತರ ಕೊಡಲಿ. ನೀವು ಉತ್ತರ ಕೊಡಿ.

ಶ್ರೀ ವಿನಯ ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರದಲ್ಲಿ ಸಂಪೂರ್ಣವಾದ ಮಾಹಿತಿಯನ್ನು ಅವರಿಗೆ ಕೊಡಲಾಗಿದೆ. ಏಕೆಂದರೆ ಇವೆರಡು ಕ್ರಷರ್ ಬಗ್ಗೆ ಏನು ಹೇಳುತ್ತಾರೆ. ಶ್ರೀ ಲಕ್ಷ್ಮಿನಾರಾಯಣ ಸ್ಟೋನ್ ಕ್ರಷರ್ ಎನ್ನುವಂತಹದು. ಈಗಾಗಲೇ 2016 ರಲ್ಲಿ ಅವರ ಲೀಸ್ ಅವಧಿ ಮುಗಿದಿದೆ. ನಂತರ ಕ್ರಷರ್‌ಗಳು ಬಂದಿವೆ ಈಗ. ಅವೆರಡು ಕ್ರಷರ್ ಪ್ರಾರಂಭ ಇಲ್ಲ. ಆದರೆ ಅವರು ಲೀಸನ್ನು ಮತ್ತೆ renewal ಗೆ 07.07.2015 ರಲ್ಲಿ ಮತ್ತೆ ಲೀಜ್‌ಗೆ apply ಮಾಡಿಕೊಂಡಿದ್ದಾರೆ ಕಾಯಿದೆ ಪ್ರಕಾರ. ಆದರೆ ಇದುವರೆಗೆ ಅವರಿಗೆ ಲೀಸ್ ಆಗಿಲ್ಲ. ಆದರೆ ಇವರೇನು ಅಕ್ರಮವಾಗಿದೆ ಎಂದು ಹೇಳುತ್ತಿದ್ದಾರೆ, ಈಗಾಗಲೇ ನಮ್ಮ ಇಲಾಖಾ ವತಿಯಿಂದ ಹತ್ತಿರ 74 ಲಕ್ಷ penalty ಹಾಕಿತ್ತು. ನಂತರ ಶಾಸಕರು ಒಂದು ದೂರನ್ನು ಕೊಟ್ಟ ನಂತರ ಮುಂದಿನ ಇದರಲ್ಲಿ ನಾವು ಈಗಾಗಲೇ ಜಿಲ್ಲಾ task force ಸಮಿತಿ ವತಿಯಿಂದ ಜಂಟಿಯಾಗಿ ಅವರ ಜೊತೆ ಎಲ್ಲಾ ಅಧಿಕಾರಿಗಳನ್ನು ಸೇರಿಸಿ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಜೊತೆಗೆ ಸರ್ವೆ ಕೂಡಾ ಪ್ರಾರಂಭವಾಗಿದೆ. ಸರ್ವೆ ವರದಿ ಬಂದ ನಂತರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಸುರೇಶ್‌ಗೌಡ : ಮೂರು ತಿಂಗಳ ಒಳಗೆ ಡಿ.ಸಿ ಯವರು ಪರಿಶೀಲನೆ ಮಾಡಿ. . . ಅವರು ನಿಮ್ಮನ್ನೂ ಪಾರ್ಟಿ ಮಾಡಿದ್ದಾರೆ. ಅಲ್ಲಿ ಡಿ.ಸಿ. ಯನ್ನೂ ಪಾರ್ಟಿ ಮಾಡಿ ಹೈಕೋರ್ಟ್‌ಗೆ ಹೋಗಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ದ್ದಾರೆ. ಏನೆಂದರೆ 10 ವರ್ಷವಾದ ಮೇಲೆ ಒಂದು ವರ್ಷ extend ಮಾಡುವುದಕ್ಕೆ ನಮಗೆ ಕೊಡಿ ಎಂದು ಕೇಳಿದ್ದಾರೆ. ಆ ಒಂದು ವರ್ಷಕ್ಕೆ ಹೈಕೋರ್ಟ್ ಆದೇಶ ಮಾಡಿದೆ.

ಶ್ರೀ ವಿನಯ ಕುಲಕರ್ಣಿ: ಇ.ಸಿ ಬರದೆ ನಾವು ಯಾವತ್ತೂ ಕೊಟ್ಟಿಲ್ಲ. ಇ.ಸಿ ಬಂದರೆ ನಾವು ಕೊಡುತ್ತೇವೆ.

ಶ್ರೀ ಬಿ.ಸುರೇಶ್‌ಗೌಡ : ಅವರು ಹೈಕೋರ್ಟಿಗೆ ಹೋಗಿದ್ದಾರೆ.

ಉಪಾಧ್ಯಕ್ಷರು : ಸುರೇಶ್ ಗೌಡರೆ ನೀವು ನಂತರ ಹೋಗಿ ಮಾತನಾಡಿಕೊಳ್ಳಿ. ಚರ್ಚೆಗೆ ಇಟ್ಟುಕೊಂಡರೆ ಹೇಗೆ?

ಶ್ರೀ ವಿನಯ ಕುಲಕರ್ಣಿ : ಒಂದು ವರ್ಷವಾದರೂ ಲೀಸ್ ಆಗಿಲ್ಲ. ಸಮೀಪ ಎರಡು ವರ್ಷದ ಹಿಂದೆ supply ಮಾಡಿದ್ದಾರೆ. Legal ಇದ್ದಂತಹ ಸಮಯದಲ್ಲಿ ಎರಡು ವರ್ಷವಾದರೂ ಲೀಸ್ ಕೊಟ್ಟಿಲ್ಲ ಎಂದಾಗ ಅವರು ಕೋರ್ಟಿಗೆ ಹೋಗಿರುವುದು. ಇವರು ಏನು ಹೆಚ್ಚಿನ ಅಕ್ರಮ ಆಗಿದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ, ಅದರ ಮೇಲೆ ನಾವು ಈಗಾಗಲೇ ಸರ್ವೇ ಪ್ರಾರಂಭ ಮಾಡಿದ್ದೇವೆ.

ಶ್ರೀ ಬಿ.ಸುರೇಶ್‌ಗೌಡ : ಕೋರ್ಟಿಗೂ ಕೂಡಾ ನೀವು ಮೇಲ್ಮನವಿ ಸಲ್ಲಿಸಬೇಕು. ನಿಮ್ಮ ಡಿ.ಡಿ ಯವರು ಏನು ಹೇಳುತ್ತಾರೆಂದರೆ ಇದೆಲ್ಲಾ pollution control ಆಗುತ್ತದೆ.

ಉಪಾಧ್ಯಕ್ಷರು : ಆಯಿತು ಕುಮಾರಸ್ವಾಮಿಯವರು ಕೇಳಿ.

ಶ್ರೀ ಬಿ.ಸುರೇಶ್‌ಗೌಡ : ಒಂದು ನಿಮಿಷ ಸರ್. ಗಮನ ಸೆಳೆಯುತ್ತಿದ್ದೇನೆ ನಾನು.

ಉಪಾಧ್ಯಕ್ಷರು : ಅಲ್ಲ ನೀವು ಚರ್ಚೆ ಮಾಡುತ್ತಿದ್ದೀರಲ್ಲ?

ಶ್ರೀ ಬಿ.ಸುರೇಶ್‌ಗೌಡ : ಸರ್ಕಾರಕ್ಕೆ ರಾಜಧನ 60 ಕೋಟಿ ರೂ. ಇನ್ನೂ ಬರಬೇಕಾಗಿದೆ.

ಉಪಾಧ್ಯಕ್ಷರು : ಆಯಿತು. ನಂತರ ನೀವು ಮಾತನಾಡಿ.

ಶ್ರೀ ಬಿ.ಸುರೇಶ್‌ಗೌಡ : ಆದುದರಿಂದ ಹೈಕೋರ್ಟಿಗೆ ತಾವು ಮೇಲ್ಮನವಿಯನ್ನು ಸಲ್ಲಿಸಬೇಕು.

ಉಪಾಧ್ಯಕ್ಷರು: ನೀವು ಅವರನ್ನು ಕರೆಸಿಕೊಂಡು ಒಮ್ಮೆ ಮಾತನಾಡಿ. ಹೆಚ್.ಕೆ.ಕುಮಾರಸ್ವಾಮಿಯವರೆ ನೀವು ಮಾತನಾಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ವಿಷಯ : ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯ ವ್ಯಾಪ್ತಿಯಲ್ಲಿ ಯಗಚಿ ಜಲಾಶಯ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ರೈತರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ.

***

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯ ವ್ಯಾಪ್ತಿಯಲ್ಲಿ ಯಗಚಿ ಜಲಾಶಯ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ರೈತರು ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಭಾಗವಾದ ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯಲ್ಲಿ ಯಗಚಿ ಜಲಾಶಯ ನಾಲೆಗೆ ಭೂಸ್ವಾಧೀನವಾಗಿದೆ. ರೈತರು ಆ ನಾಲೆಗೆ ಜಾಗ ಬಿಟ್ಟು ಕೊಟ್ಟು ಸುಮಾರು 8 ವರ್ಷವಾಗಿದೆ. ಈವರೆಗೂ ಅವರಿಗೆ ಪರಿಹಾರ ನೀಡಿಲ್ಲ. ದಯಮಾಡಿ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಅವಾರ್ಡ್ ಆಗಿದೆ. ಕಾವೇರಿ ನೀರಾವರಿ ನಿಗಮದಿಂದ ಹಣ ಬಂದ ಕೂಡಲೇ ಹಣ ಪಾವತಿ ಮಾಡಿಸುತ್ತೇವೆ. ಇನ್ನೊಂದು ಸಾರಿ ತಕ್ಷಣ ಹಣ ಬಿಡುಗಡೆ ಮಾಡಲು ಹೇಳುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಇಷ್ಟು ವರ್ಷ ಬೇಕಾ ಸರ್ ಅವರಿಗೆ ಪರಿಹಾರ ಹಣ ನೀಡಲು. ರೈತರು ಪ್ರಾರಂಭದಲ್ಲಿಯೇ ಜಮೀನನ್ನು ಬಿಟ್ಟು ಕೊಡದಿದ್ದರೆ ಸುಮ್ಮನೆ ಹಣವನ್ನು ಕೊಡುತ್ತಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ : ಇದು ಅಂಗಡಿ ಸಾಮಾನಲ್ಲ. ಖರೀದಿಗೆ ಕೊಡುವುದು ಈಚೆಗೆ ತೆಗೆದುಕೊಂಡು ಹಾಕುವುದು. ಅದಕ್ಕೆ ವಿಧಿ ವಿಧಾನವಿದೆ. ಆ ಕಾರಣಕ್ಕಾಗಿ ವಿಳಂಬವಾಗಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ತಾವು ಹೀಗೆ ಹೇಳಿಬಿಟ್ಟರೆ ಹೇಗೆ? ಅಂಗಡಿ ಸಾಮಾನಿನ ಪ್ರಶ್ನೆಯಲ್ಲ. ಜಾಗ ಬಿಟ್ಟುಕೊಟ್ಟು 8 ವರ್ಷವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ತಕ್ಷಣ ಬಿಡುಗಡೆ ಮಾಡಲು ಹೇಳುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು : ಬಿಡುಗಡೆ ಮಾಡಿಸುತ್ತಾರೆ ಬಿಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಪ್ರಾರಂಭದಲ್ಲಿಯೇ ಜಮೀನನ್ನು ಬಿಡದಿದ್ದರೆ ಸುಮ್ಮನೆ ದುಡ್ಡು ಕೊಡುತ್ತಿದ್ದರು. ಆಮೇಲೆ ಪ್ರಕ್ರಿಯೆ ಮುಗಿಯುವುದಕ್ಕೆ 8 ವರ್ಷಗಳು ಬೇಕಾ ಸರ್. ಭೂಸ್ವಾಧೀನ ಪ್ರಕ್ರಿಯೆ ಮುಗಿಯುವುದಕ್ಕೆ 8 ವರ್ಷ ಬೇಕಾ? ಇಲ್ಲಿ 2 ಹಂತವಿದೆ. ಮೊದಲನೇ ಹಂತದಲ್ಲಿ ಹಣ ಪಾವತಿ ಆಗಬೇಕು. 2ನೇ ಹಂತಕ್ಕೆ ಇನ್ನೂ ಕೂಡಾ ಭೂಸ್ವಾಧೀನ ಪ್ರಕ್ರಿಯೆ ನಡೆದೇ ಇಲ್ಲ. ಇದು ತುಂಬಾ ವಿಳಂಬವಾಗುತ್ತದೆ. ಕಾಲಮಿತಿಯೊಳಗೆ ರೈತರಿಗೆ ಯಾವಾಗ ಪರಿಹಾರ ಕೊಡುತ್ತೀರಿ ಎಂದು ದಯಮಾಡಿ ಸಚಿವರು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಶೀಘ್ರದಲ್ಲಿ ಬಗೆಹರಿಸಿ ಎಂದು ಅವರನ್ನು ಕರೆದು ಹೇಳುತ್ತೇನೆ.

ಉಪಾಧ್ಯಕ್ಷರು : ಈಗ ಬಾಲಕೃಷ್ಣ ರವರು.

ಶ್ರೀ ಕಾಗೋಡು ತಿಮ್ಮಪ್ಪ : ಕಾನೂನಿನಲ್ಲಿ ಕಾಲಮಿತಿ ಎಂಬುದು ಇಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಹಾಗಾದರೆ ತಾವು ಹೇಳುವುದು ಎಷ್ಟು ವರ್ಷ ಬೇಕಾದರೂ ಆಗಬಹುದು ಏನು?

ಉಪಾಧ್ಯಕ್ಷರು : ಬೇಗ ಪರಿಹಾರ ಮಾಡುತ್ತಾರೆ ಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಭಾವನೆ ನಮಗೆ ಅರ್ಥವಾಗುತ್ತದೆ. ಬೇಗ ಅವರ ಹಣವನ್ನು ಪಾವತಿ ಮಾಡಿ ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ನೀವು ಹಿರಿಯರೇ ಹೀಗೆ ಹೇಳಿಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗಬೇಕು?

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿ ಈಜಿ ಬಂದವರು ನೀವು. ನನಗೆ ಪಾಠ ಹೇಳುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ : ಸರ್ ಒಂದು ನಿಮಿಷ ಹೇಳುತ್ತೇನೆ. ಒಬ್ಬ ಮ್ಯಾನೇಜರ್ ಇದ್ದಾನೆ. Retired employee ತೆಗೆದುಕೊಂಡಿದ್ದೀರಿ. ಅವನಿಗೆ ಕಪ್ಪ ಕಾಣಿಕೆ ಕೊಟ್ಟರೆ ಮಾತ್ರ ಇವು ಮುಂದುವರೆಯುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು? ಬರೆದುಕೊಡಿ ಕಪ್ಪ ಕಾಣಿಕೆ ಯಾರಿಗೆ ಕೊಟ್ಟಿದ್ದೀರಿ ಎಂದು.

ಶ್ರೀ ಹೆಚ್.ಡಿ.ರೇವಣ್ಣ : ಇವತ್ತೇ ನಾವೇ ಬರೆದುಕೊಡುತ್ತೇವೆ ಬೇಕಾದರೆ.

ಶ್ರೀ ಕಾಗೋಡು ತಿಮ್ಮಪ್ಪ : ಕೊಡಿ ಮತ್ತೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಹೆಚ್.ಡಿ.ರೇವಣ್ಣ : ನಾವಿಬ್ಬರೂ ಸೇರಿ ಬರೆದುಕೊಡೋಣ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಬೇಗ ಕಾಲಮಿತಿಯೊಳಗೆ ಪರಿಹಾರ ಕೊಡಿಸಿ.

ಉಪಾಧ್ಯಕ್ಷರು : ಈಗ ಸಿ.ಎನ್.ಬಾಲಕೃಷ್ಣ ರವರದು. ಅವರು ಇಲ್ಲ. Next ಜೆ.ಆರ್.ಲೋಬೋ. ನಿಮ್ಮದು ಉತ್ತರ ಬಂದಿದೆಯೆ?

ಶ್ರೀ ಜೆ.ಆರ್.ಲೋಬೋ : ಇಲ್ಲ ಸರ್ ಉತ್ತರ ಬಂದಿಲ್ಲ.

ಉಪಾಧ್ಯಕ್ಷರು : ಆಯಿತು ನಾಳೆ ಉತ್ತರ ಕೊಡಿಸುತ್ತೇವೆ. ಈಗ ಶ್ರೀ ದೊಡ್ಡನಗೌಡ ಹೆಚ್.ಪಾಟೀಲ ರವರು ಕೇಳಿ.

ವಿಷಯ : ಕುಷ್ಟಗಿ ಪಟ್ಟಣದ ವ್ಯಾಪ್ತಿಯಲ್ಲಿ ಕೈಗಾರಿಕೆ ವಸಾಹತು ಪ್ರಾರಂಭಿಸಲು ಭೂಸ್ವಾಧೀನಪಡಿಸಿಕೊಂಡ ರೈತರ ಜಮೀನು ಗಳಿಗೆ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ಒದಗಿಸುವ ಬಗ್ಗೆ.

***

ಶ್ರೀ ದೊಡ್ಡನಗೌಡ ಹೆಚ್.ಪಾಟೀಲ (ಕುಷ್ಟಗಿ) : ಮಾನ್ಯ ಅಧ್ಯಕ್ಷರೆ, ಕುಷ್ಟಗಿ ಪಟ್ಟಣದ ವ್ಯಾಪ್ತಿಯಲ್ಲಿ ಕೈಗಾರಿಕೆ ವಸಾಹತು ಪ್ರಾರಂಭಿಸಲು ಭೂಸ್ವಾಧೀನ ಪಡಿಸಿಕೊಂಡ ರೈತರ ಜಮೀನುಗಳಿಗೆ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ಒದಗಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

(ಉತ್ತರದ ಪ್ರತಿಯನ್ನು ಒದಗಿಸಲಾಗಿದೆ.)

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೇವೆ. ಮುಖ್ಯವಾಗಿ ನಾನು ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ 15.09.2009 ಕ್ಕೆ 123.25 ಎಕರೆ ಜಮೀನು acquire ಮಾಡುವುದಕ್ಕೆ notification ಆದ ನಂತರ 28(4) ಮಾಡುವುದಕ್ಕೆ ಆಗಿಲ್ಲ. ಮುಖ್ಯವಾಗಿ ಜಮೀನಿನ ಅಂದಾಜು 76 ಎಕರೆ ಜಮೀನು ನಿಮ್ಮ ಆಶ್ರಯ ಮನೆಗಳು ಬಂದಿವೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ದೊಡ್ಡನಗೌಡ ಹೆಚ್.ಪಾಟೀಲ : ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕೊಡುವುದು ಬೇಡ. ಯಾವುದೇ ಮನೆಗಳು ಇಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ನನಗೆ ಬಂದಿರುವ ಮಾಹಿತಿಯ ಪ್ರಕಾರ ಹೇಳುತ್ತೇನೆ. ನಾನು ಮೊದಲು ಮುಗಿಸುತ್ತೇನೆ.

(ಮುಂದು. . .)

13.06.2017/7.20/48/BR/VG

ಶ್ರೀ ಆರ್.ವಿ.ದೇಶಪಾಂಡೆ: (ಮುಂದು). . .
ಕುಷ್ಟಗಿ ಪಟ್ಟಣ ಪಂಚಾಯಿತಿಯಲ್ಲಿ ಆಶ್ರಯ programmeನಲ್ಲಿ ಮನೆಗಳನ್ನು ಕೊಡುವ ಕಾರ್ಯಕ್ರಮ ಇದೆ. ಎರಡನೆಯದು ಒಂದು Stone Polishing Unit ಇದೆ. ಹಾಗಾಗಿ, ನಮ್ಮ industrial estateಗೆ 47 ಎಕರೆ ಜಮೀನು adjacent ಇದೆ. ಹಾಗಾಗಿ, ಇದರ ಬಗ್ಗೆ ವಿಳಂಬವಾಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಬಾರದು, ಒಮ್ಮೆ ನಾವು ನೋಟಿಫೈ ಮಾಡಿದ ನಂತರ ಒಂದು ಜಮೀನು acquire ಮಾಡಿ ಜಮೀನು ಮಾಲೀಕರಿಗೆ ಸರಿ ಸಮಯದಲ್ಲಿ ಪರಿಹಾರ ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು time bound ಹಾಕಿಕೊಂಡು, acquisition ಎಷ್ಟು ಮಾಡಬೇಕೆಂದು ನಿರ್ಣಯ ಮಾಡಿ ಇದಕ್ಕೆ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ದೊಡ್ಡನಗೌಡ ಹೆಚ್.ಪಾಟೀಲ: ಇದಕ್ಕೆ ಪೂರಕವಾಗಿ ಇನ್ನೊಂದು ಪ್ರಶ್ನೆ ಇದೆ. ಈಗ ಪರಿಸ್ಥಿತಿ ಏನಾಗಿದೆಯೆಂದರೆ, ಒಂಭತ್ತು ವರ್ಷದಿಂದ ಆ ರೈತರು ಯಾವುದೇ ಬೆಳೆಗಳನ್ನು ಅಲ್ಲಿ ಬೆಳೆದಿಲ್ಲ. ಏಕೆಂದರೆ, ಈಗಾಗಲೇ ಅದನ್ನು ಕೈಗಾರಿಕಾ ಪ್ರದೇಶವೆಂದು ಘೋಷಣೆ ಮಾಡಲಾಗಿದೆ. ಅಲ್ಲಿ ಯಾವುದೇ polishing factoryಗಳು ಇಲ್ಲ. ಅವು ಬೇರೆ ಕಡೆ ಇದೆ. ಆ ಭೂಮಿಯಲ್ಲಿಲ್ಲ. ಅಲ್ಲಿ ತ್ಯಾಜ್ಯ ತಂದು ಸುರಿಯುತ್ತಿದ್ದಾರೆ. ಹಾಗಾಗಿ, ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಇಲ್ಲಿಯವರೆಗೆ ಅವರಿಗೆ ಯಾವುದೇ ಪರಿಹಾರ ದೊರಕಿಲ್ಲ. ಅದರ ಜೊತೆಗೆ ಪಟ್ಟಣ ಪಂಚಾಯಿತಿಯಿಂದ ಆಸರೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮನೆಗಳು ಎಂದು ಹೇಳಿದ್ದಾರೆ. ಯಾವುದೇ ಆಶ್ರಯ ಮನೆಗಳು ಅಲ್ಲಿ ಇಲ್ಲ. ಇದಕ್ಕೆ ಸಂಬಂಧವಿಲ್ಲ, ತಮ್ಮ ಅಧಿಕಾರಿಗಳು ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ. ಅದು ಬೇಕು, ಯೋಗ್ಯ ಇದೆಯೆಂದು ವರದಿಯನ್ನು ಸಹ ಸಲ್ಲಿಸಿದ್ದಾರೆ. ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅದನ್ನು ಕೈ ಬಿಟ್ಟರೂ ರೈತರು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಶಾಸಕರೇ, 2009ನೇ ಇಸವಿಯಲ್ಲಿ ನೋಟಿಫೈ ಮಾಡಿದ್ದೇವೆ. 8 ವರ್ಷಗಳಾಗಿವೆ, ವಿಳಂಬವಾಗಿದೆಯೆಂದು ನಾನು ಒಪ್ಪಿಕೊಂಡಿದ್ದೇವೆ. ಹಾಗಾಗಿ ನಿಗದಿತ ಸಮಯದಲ್ಲಿ ಇದರ ಬಗ್ಗೆ ನಾವು ನಿರ್ಣಯ ಮಾಡುತ್ತೇವೆ. Land acquire ಮಾಡಬೇಕೆಂದು ಇದ್ದರೆ, land acquire ಮಾಡುತ್ತೇವೆ. Land acquire ಮಾಡುವುದು ಉಪಯೋಗ ಇಲ್ಲವೆಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ದೊಡ್ಡನಗೌಡ ಹೆಚ್.ಪಾಟೀಲ: ಕಾಲಮಿತಿ ಹೇಳಿದ್ದರೆ ಒಳ್ಳೆಯದಾಗಿತ್ತು.

ಉಪಾಧ್ಯಕ್ಷರು: ಮಾಡುತ್ತೇವೆಂದು ಹೇಳಿದ್ದಾರಲ್ಲ, ಬಿಡಿ. ಈಗ ಎಂ. ಕೃಷ್ಣಾರೆಡ್ಡಿ, . .

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಉಪಾಧ್ಯಕ್ಷರು: ಈಗ ಹೆಚ್.ಡಿ.ರೇವಣ್ಣ, ಸಿ.ಎನ್.ಬಾಲಕೃಷ್ಣ ಮತ್ತು ಕೆ.ಎಂ.ಶಿವಲಿಂಗೇ ಗೌಡರವರು.

ವಿಷಯ: ಹೊಳೆನರಸೀಪುರ ಸಾರ್ವಜನಿಕ ಕಟ್ಟಡದ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು ಮತ್ತು ಅಲ್ಲಿನ ನೂತನ ಹೆರಿಗೆ ಆಸ್ಪತ್ರೆ ಕಟ್ಟಡದ ಮರುವಿನ್ಯಾಸ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ನಬಾರ್ಡ್ 23ರ ಯೋಜನೆಯಡಿ ಸೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ

***

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಹೊಳೆನರಸೀಪುರ ಸಾರ್ವಜನಿಕ ಕಟ್ಟಡದ ದುರಸ್ತಿಗೆ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು ಮತ್ತು ಅಲ್ಲಿನ ನೂತನ ಹೆರಿಗೆ ಆಸ್ಪತ್ರೆ ಕಟ್ಟಡದ ಮರುವಿನ್ಯಾಸ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ನಬಾರ್ಡ್

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯೋಜನೆಯಡಿಯಲ್ಲಿ ಸೇರಿಸಲು ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

(ಸಚಿವರ ಲಿಖಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ: ಉತ್ತರವನ್ನು ಕೊಟ್ಟಿದ್ದಾರೆ ಸರಿ, ನಮ್ಮ ಹೊಳೆನರಸೀಪುರದಲ್ಲಿ 250 bed ಆಸ್ಪತ್ರೆ ಇದೆ. ಅದು 1980ನೇ ಇಸವಿಯಲ್ಲಿ ಸನ್ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕಟ್ಟಿದಂತಹ ಆಸ್ಪತ್ರೆ. ಇವತ್ತು ಆ ಆಸ್ಪತ್ರೆಯಲ್ಲಿ ಎಲ್ಲಾ ಕಡೆ complete ಆಗಿ ಸೋರುತ್ತಿದೆ, ಕೆಲವು ಕಡೆ ಗೋಡೆಗಳು ಸೀಳು ಬಿಟ್ಟಿವೆ. ರಿಪೇರಿ ಮಾಡುವುದಕ್ಕೆ 150 ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಅದಲ್ಲದೆ, 23ನೇ ನಬಾರ್ಡ್ ಹಣಕಾಸು ಯೋಜನೆಯಲ್ಲಿ 30 ಹಾಸಿಗೆಗಳುಳ್ಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಾಡಬೇಕೆಂದು ಕೇಳಿದ್ದೇವೆ. ದಯಮಾಡಿ ಮಾನ್ಯ ಆರೋಗ್ಯ ಸಚಿವರ ಪರವಾಗಿ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಆಸ್ಪತ್ರೆ ಕಾಮಗಾರಿಗಳು ಏಕೆ ಸ್ಥಗಿತಗೊಂಡಿವೆ ಎನ್ನುವ ಕಾರಣವನ್ನು ಕೊಟ್ಟಿದ್ದೇವೆ. ತಾವು ಹೇಳುತ್ತಿರುವುದು, 250 ಹಾಸಿಗೆಯುಳ್ಳ ಆಸ್ಪತ್ರೆಯ ದುರಸ್ತಿ ಹಾಗೂ ಕಾಮಗಾರಿ ಗಳಿಗೆ 1.5 ಕೋಟಿ ರೂಪಾಯಿ ಕೊಡಬೇಕೆಂದು 2017-18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ರಿಪೇರಿ ಕೆಲಸವನ್ನು ಮಾಡಿಸಿ ಕೊಡೋಣ.

ಶ್ರೀ ಹೆಚ್.ಡಿ.ರೇವಣ್ಣ: ಆ ಆಸ್ಪತ್ರೆ ಕಟ್ಟಿಸಿ 37 ವರ್ಷವಾಯಿತು, ಅದರಿಂದ ಕೂಡಲೇ ರಿಪೇರಿ ಮಾಡಿಸಿಕೊಡಿ. ಬೇಗ ದುಡ್ಡು ಕೊಟ್ಟರೆ ಮಾಡಿಸುತ್ತೇವೆ. ಕಂದಾಯ ಮಂತ್ರಿಗಳು ಬೇಕಾದರೆ ಅವರೇ ಒಂದು ಸ್ವಲ್ಪ ದುಡ್ಡು ಕೊಟ್ಟರೆ ಮಾಡಿಸುತ್ತೇವೆ, ನಮ್ಮದೇನೂ ಅಭ್ಯಂತರ ಇಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು: ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ ಬಿಡಿ. ಈಗ ಮುಂದಿನ ಗಮನ ಸೆಳೆಯುವ ಸೂಚನೆ ನಿಮ್ಮದೇ ಇದೆ.

ವಿಷಯ: ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅವ್ಯಾಹತವಾಗಿ ನಡೆದಿರುವ ಸೆಕೆಂಡ್ಸ್ ಮದ್ಯದ ಹಾವಳಿಯನ್ನು ತಡೆದು ಎಂ.ಎಸ್.ಐ.ಎಲ್. ವತಿಯಿಂದ ಮದ್ಯದ ಅಂಗಡಿಗಳನ್ನು ಮಂಜೂರು ಮಾಡುವ ಬಗ್ಗೆ

***

ಶ್ರೀ ಹೆಚ್.ಡಿ.ರೇವಣ್ಣ: ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅವ್ಯಾಹತವಾಗಿ ನಡೆದಿರುವ ಸೆಕೆಂಡ್ಸ್ ಮದ್ಯದ ಹಾವಳಿಯನ್ನು ತಡೆದು ಎಂ.ಎಸ್.ಐ.ಎಲ್. ವತಿಯಿಂದ ಮದ್ಯದ ಅಂಗಡಿಗಳನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

(ಮಾನ್ಯ ಮುಖ್ಯ ಮಂತ್ರಿಗಳ ಲಿಖಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಹೆಚ್.ಡಿ.ರೇವಣ್ಣ: ಚನ್ನರಾಯಪಟ್ಟಣದಲ್ಲಿ ಚಿಲ್ಲರೆ ವ್ಯಾಪಾರದ ಅಂಗಡಿಗಳಲ್ಲಿ ಒಂದಕ್ಕೆ ನಾಲ್ಕು ಪಟ್ಟು ಹಣ ತೆಗೆದುಕೊಳ್ಳುತ್ತಿದ್ದಾರೆ. Highest ಬ್ರಾಂದಿ ಖರ್ಚಾಗುವುದು MSIL ಅಂಗಡಿಗಳಲ್ಲೇ. ಅಲ್ಲೊಂದು MSIL ಅಂಗಡಿ ಕೊಡಿ ಎಂದು ಬಾಲಕೃಷ್ಣರವರು ಎಲ್ಲ ಕೇಳಿದ್ದಾರೆ. ದಯಮಾಡಿ MSIL ಅಂಗಡಿಯನ್ನು ಅಲ್ಲಿ ಕೊಡುವುದಕ್ಕೆ ತೊಂದರೆ ಇದೆಯೇ? ಇದಕ್ಕೆ ಉತ್ತರ ಬಂದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹಾಸನ ಜಿಲ್ಲೆಗೆ 28 ಸನ್ನದುಗಳು ಮಂಜೂರಾಗಿವೆ. ಚನ್ನರಾಯಪಟ್ಟಣದಲ್ಲಿ ನಾಲ್ಕು ಸ್ಥಳಗಳಲ್ಲಿ ಹಂಚಿಕೆಯಾಗಿದೆ. ಚನ್ನರಾಯಪಟ್ಟಣ ನಗರ ಪ್ರದೇಶ, ಶ್ರವಣ ಬೆಳಗೊಳ, ನುಗ್ಗೇಹಳ್ಳಿ ಮತ್ತು ನವಿಲೆ ಈ ನಾಲ್ಕು ಕಡೆಗಳು ಸೂಕ್ತವಾದ ಜಾಗವೆಂದು ತೀರ್ಮಾನವಾಗಿದೆ. ಸನ್ನದು ತೆರೆಯಲು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆದರಿಂದ ಪ್ರಸ್ತಾವನೆ ಬಂದಂತಹ ಸಂದರ್ಭದಲ್ಲಿ ಕ್ರಮ ಕೈಗೊಳ್ಳುತ್ತೇವೆ. ಈಗ ನಿಮಗೆ ಯಾವ ಭಾಗದಲ್ಲಿ ಬೇಕೆಂದು ಹೇಳಿದರೆ ನಾನು ನೇರವಾಗಿ ಉತ್ತರ ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಚನ್ನರಾಯಪಟ್ಟಣ town ಗೆ MSIL ಅಂಗಡಿ ಕೊಡಿ ಎಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಚನ್ನರಾಯಪಟ್ಟಣ ನಗರ ಪ್ರದೇಶ ಇದೆ.

ಶ್ರೀ ಹೆಚ್.ಡಿ.ರೇವಣ್ಣ: ಏಕೆಂದರೆ ನಮ್ಮ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ನೀವು MSIL ಅಂಗಡಿಗೆ ಕೇಳುತ್ತಿದ್ದೀರಿ, ಖಂಡಿತವಾಗಿಯೂ ಮಾಡಿಕೊಡೋಣ.

ಉಪಾಧ್ಯಕ್ಷರು: O.K. ಈಗ ಮುಂದಿನ ಪ್ರಶ್ನೆ ಶ್ರೀ ಹೆಚ್.ಡಿ.ರೇವಣ್ಣ ಮತ್ತು ಶ್ರೀ ಶಿವಲಿಂಗೇಗೌಡರದು.

ವಿಷಯ: ಹಾಸನ ಜಿಲ್ಲೆ ಉಲಿವಾಲ ಗ್ರಾಮದ ಸರ್ವೆ ನಂ.20ರಲ್ಲಿ ನರ್ಸರಿ ಫಾರ ನಿರ್ಮಾಣಕ್ಕಾಗಿ ರೂ.100 ಲಕ್ಷಗಳ ಅನುದಾನವನ್ನು ಮತ್ತು ಹೇಮಾವತಿ ನದಿಗೆಅಡ್ಡಲಾಗಿ ಕಟ್ಟಿರುವ 02 ಸೇತುವೆಗಳ ನಡುವಿನ ಸರ್ಕಾರಿ ಜಾಗದಲ್ಲಿ ಉದ್ಯಾನವನ್ನು ನಿರ್ಮಿಸುವ ಕಾಮಗಾರಿಗೆ ರೂ.50 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

***

ಶ್ರೀ ಹೆಚ್.ಡಿ.ರೇವಣ್ಣ: ಹಾಸನ ಜಿಲ್ಲೆ ಉಲಿವಾಲ ಗ್ರಾಮದ ಸರ್ವೆ ನಂ.20ರಲ್ಲಿ ನರ್ಸರಿ ಫಾರ ನಿರ್ಮಾಣಕ್ಕಾಗಿ ರೂ.100 ಲಕ್ಷಗಳ ಅನುದಾನವನ್ನು ಮತ್ತು ಹೇಮಾವತಿ ನದಿಗೆಅಡ್ಡಲಾಗಿ ಕಟ್ಟಿರುವ 02 ಸೇತುವೆಗಳ ನಡುವಿನ ಸರ್ಕಾರಿ ಜಾಗದಲ್ಲಿ ಉದ್ಯಾನವನ್ನು ನಿರ್ಮಿಸುವ ಕಾಮಗಾರಿಗೆ ರೂ.50 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯ ಬಯುಸತ್ತೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಸಚಿವರ ಲಿಖಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಹೆಚ್.ಡಿ.ರೇವಣ್ಣ: ಚನ್ನರಾಯಪಟ್ಟಣ ಹೊಳೇ ನರಸೀಪುರದ ಮಧ್ಯೆ ಒಂದು bridge ಇದೆ. Bridge ಪಕ್ಕ ಸುಮಾರು 2 ಎಕರೆ ಜಾಗವಿದೆ. ಅವರು ಇವರು ಒತ್ತುವರಿ ಮಾಡುತ್ತಿದ್ದಾರೆ.

ದಯಮಾಡಿ, ನಮ್ಮ ಕಂದಾಯ ಸಚಿವರು ಆ ಜಾಗವನ್ನು Horticulture ಗೆ ಕೊಡಿಸಿದ್ದಾರೆ. ಅದರಲ್ಲಿ, farm ಮಾಡುವುದಕ್ಕೆ ಎಂದು ಹೇಳಿ, bridge ಮಧ್ಯೆ ಬಂದಿದೆ, ಅಲ್ಲಿ park ಮತ್ತು nursery ಮಾಡುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿದ್ದೇವೆ. ದಯಮಾಡಿ ಉತ್ತರ ಕೊಡಿ.

ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ: ಉತ್ತರ ಕೊಟ್ಟಿದ್ದಾರೆ. ದಯಮಾಡಿ ಮಾಡಿ ಕೊಡಿ ಎಂದು ಕೇಳುತ್ತಿದ್ದೇನೆ. Last time 22ನೇ ನಬಾರ್ಡ್‌ನಲ್ಲಿ ಸೇರಿಸಿದ್ದಾರೆ, ಅದನ್ನು ದಯಮಾಡಿ ಮಾಡಿಸಿಕೊಡಿ.

ಶ್ರೀ ಟಿ.ಬಿ.ಜಯಚಂದ್ರ: ಈಗ ಅವರು ಹೇಳಿರುವುದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಉಪಾಧ್ಯಕ್ಷರು: O.K. ಮಾಡಿಕೊಡಿ. ಈಗ ಮುಂದಿನ ಪ್ರಶ್ನೆ ಶ್ರೀ ವಿ.ಸುನಿಲ್ ಕುಮಾರ್‌ರವರದು.

ವಿಷಯ: ರಾಜ್ಯದಲ್ಲಿ ಸರ್ಕಾರಿ ಜಮೀನುಗಳನ್ನು ಅವೈಜ್ಞಾನಿಕವಾಗಿ ಡೀಮ್ಡ್ ಫಾರೆಸ್ಟ್ ಪಟ್ಟಿಗೆ ಸೇರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಬಗ್ಗೆ

***

ಶ್ರೀ ವಿ.ಸುನೀಲ್ ಕುಮಾರ್: ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಅವೈಜ್ಞಾನಿಕವಾಗಿ deemed forest ಅನ್ನು ಪಟ್ಟಿಗೆ ಸೇರಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಕುರಿತು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

(ಸಚಿವರ ಲಿಖಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ರಮಾನಾಥ ರೈ, ಮಾನ್ಯ ಅರಣ್ಯ ಸಚಿವರು: ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ವಿ.ಸುನೀಲ್ ಕುಮಾರ್: ಉತ್ತರವನ್ನು ಕೊಟ್ಟಿದ್ದೀರಿ. ಒಟ್ಟು ಎಷ್ಟು ಎಕರೆ deemed forest ಅನ್ನು ರಾಜ್ಯದಲ್ಲಿ ಗುರುತಿಸಲಾಗಿತ್ತು? ಅದರಲ್ಲಿ ಎಷ್ಟು ಎಕರೆಯನ್ನು ವಿರಹಿತಗೊಳಿಸಬೇಕೆಂದು ತೀರ್ಮಾನ ಮಾಡಿದ್ದೀರಿ ಎನ್ನುವ ಜಿಲ್ಲಾವಾರು ಮಾಹಿತಿಯನ್ನು ಕೊಟ್ಟಿಲ್ಲ. ಎರಡನೆಯದು, ವಿರಹಿತಗೊಳಿಸಿರುವುದನ್ನು ಅಂತಿಮ ಯಾವಾಗ ಮಾಡುತ್ತೀರಿ? 2014ರಿಂದ ವಿರಹಿತಗೊಳಿಸುತ್ತೇವೆಂದು ಹೇಳುತ್ತಿದ್ದೀರಿ. ಎಷ್ಟು ಎಕರೆಯನ್ನು ವಿರಹಿತಗೊಳಿಸಬೇಕೆಂದು ನಿಮ್ಮ ಜಿಲ್ಲಾವಾರು ಸರ್ವೆಯಲ್ಲಿ ಆಗಿದೆ? ಯಾವತ್ತು ಅದನ್ನು ವಿರಹಿತಗೊಳಿಸುವಂತೆ ನಿರ್ಣಯ ಮಾಡುತ್ತೀರಿ?

ಶ್ರೀ ಬಿ.ರಮಾನಾಥ ರೈ: 1997ರಲ್ಲಿ 10 ಲಕ್ಷ ಹೆಕ್ಟೇರ್ ಜಮೀನನ್ನು deemed forest ಎಂದು ಹೇಳಿ ಸುಪ್ರೀಂ ಕೋರ್ಟ್‌ಗೆ affidavit ಸಲ್ಲಿಸಿದೆವು. Affidavit ವೈಜ್ಞಾನಿಕವಾಗಿ ಇಲ್ಲ. ಸರಿಯಾದ ಮಾಹಿತಿಗಳು ಇಲ್ಲ ಎಂದು ಹೇಳಿ, ವಾಪಸ್ಸು ಕಳುಹಿಸಿದರು. ಆ ನಂತರ ಮತ್ತೊಮ್ಮೆ affidavit ಸಲ್ಲಿಸಿದೆವು. ಅರಣ್ಯ ಇಲಾಖೆ ಮಾತ್ರ ಈ ವರದಿಯನ್ನು ಕೊಟ್ಟಿತ್ತು. ಅದನ್ನು ಸಹ ಸರಿಯಾದ ರೀತಿಯಲ್ಲಿ ಕೊಟ್ಟಿರಲಿಲ್ಲ. ಅದಕ್ಕಾಗಿ ಅವರು ಪುನ: ವಾಪಸ್ಸು ಕಳುಹಿಸಿದರು. ಇದು 1997ನೇ ಇಸವಿಯಿಂದ ನಡೆಯುತ್ತಿದೆ. ಅದರ ಮಧ್ಯೆ 2007ರಲ್ಲಿ ಇದರ ಬಗ್ಗೆ ಒಂದು Expert Committee ಯನ್ನು ಸಹ ಮಾಡಿದರು. CECಯವರು ತಿಳಿಸಿದ ಪ್ರಕಾರ ಅದನ್ನು ಮಾಡಿದ್ದಾರೆ. Expert Committee ಮಾಡಿದ ಮೇಲೂ ಸರಿಯಾಗಿ ಮಾಡಿರಲಿಲ್ಲ. ನಾವು ಈಗ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯವರು ಸೇರಿ, ಇಡೀ ರಾಜ್ಯದಲ್ಲಿ ಜಂಟಿಯಾಗಿ ಸರ್ವೇ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದರಲ್ಲಿ ಜಿಲ್ಲಾಧಿಕಾರಿಗಳ ರಾಜ್ಯ ಮಟ್ಟದ ಸಮಿತಿ, ವಿಭಾಗ ಮಟ್ಟದ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ಮಾಡಿ ಎರಡೂ ಇಲಾಖೆಗಳು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಒಟ್ಟು ಸೇರಿ ನಾವು ರಾಜ್ಯವ್ಯಾಪಿ ಸರ್ವೇಯನ್ನು ಮಾಡಿದ್ದೇವೆ. ಸರ್ವೇ ಮಾಡಿ ನಿಖರವಾಗಿ deemed forest ಇಷ್ಟು ಎಂದು ಹೇಳಿ ನಾವು ವರದಿಯನ್ನು ನೀಡುವ ಬಗ್ಗೆ ಎರಡು ಬಾರಿ ಕ್ಯಾಬಿನೆಟ್‌ಗೆ ಬಂದಿತು. ಕಳೆದ ಕ್ಯಾಬಿನೆಟ್‌ನಲ್ಲು ಸಹ ಬಂದಿತು. ನಮ್ಮ ಕಂದಾಯ ಸಚಿವರು ಇದನ್ನು ಕೂಲಂಕಷವಾಗಿ ನೋಡದೆ, ಮತ್ತೊಮ್ಮೆ affidavit ಸಲ್ಲಿಸಿದರೆ ಜನರಿಗೆ ತೊಂದರೆಯಾಗಬಾರದೆಂದು ಹೇಳಿ, ಮಂತ್ರಿಗಳಿಗೆ ಸಲಹೆ ಕೊಟ್ಟರು. ಅದರ ಬಗ್ಗೆ ಕ್ಯಾಬಿನೆಟ್ ನೋಟ್ ಇದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಇನ್ನೊಂದು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳೋಣ ಎಂದು ಹೇಳುವ ಕಾರಣಕ್ಕೆ ವಾಪಸ್ಸು ಬಂದಿತು.

(ಮುಂದು)

13-06-2017/7-30/49/HRV/VG

ಶ್ರೀ ಬಿ.ರಮಾನಾಥ ರೈ (ಮುಂ.ವ):-

ಕಳೆದ ಕ್ಯಾಬಿನೆಟ್‌ನಲ್ಲಿಯೂ ಕೂಡ ಬಂತು. ನಮ್ಮ ಕಂದಾಯ ಸಚಿವರು, ಇದನ್ನು ನಾವು ಕೂಲಂಕುಷವಾಗಿ ನೋಡದೆ ಮತ್ತೊಮ್ಮೆ ನಾವು affidavit ಕೊಟ್ಟು ಜನರಿಗೆ ತೊಂದರೆಯಾಗುವಂಥದ್ದು ಆಗಬಾರದು ಎಂದು ಹೇಳಿ ಕ್ಯಾಬಿನೆಟ್ ನೋಟ್ ಏನಿತ್ತೋ ಅದರ ಬಗ್ಗೆ ನಾವು ಪರಿಶೀಲನೆ ಮಾಡಿ ಇನ್ನೊಂದು ಕ್ಯಾಬಿನೆಟ್‌ನಲ್ಲಿ ಅದನ್ನು ಇಡೋಣ ಎನ್ನುವಂಥ ಕಾರಣಕ್ಕಾಗಿ ಅದು ವಾಪಸ್ ಬಂತು. ಅದರಲ್ಲಿ ನೈಜವಾಗಿ ಏನೇನು ಸಮಸ್ಯೆಗಳಿತ್ತೋ ಅದನ್ನು ಹೊರತುಪಡಿಸಿ ಜನಹಿತವನ್ನು ಗಮನದಲ್ಲಿಟ್ಟುಕೊಂಡು ನಿಜವಾಗಿ deemed forest ಎಷ್ಟು ಎನ್ನತಕ್ಕಂಥದ್ದನ್ನು ಹೇಳಿ ಮಾಡಿ ಇದರ ಬಗ್ಗೆ ಅಂತಿಮವಾಗಿ ಮುಂದಿನ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ಅದನ್ನು ನಾವು ಸುಪ್ರೀಂಕೋರ್ಟಿಗೆ ಕಳುಹಿಸುವ ಅಂತಿಮ ಹಂತದಲ್ಲಿ ನಾವಿದ್ದೇವೆ. ಇದಕ್ಕೆ ಇಡೀ ರಾಜ್ಯದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ಸಂಪೂರ್ಣವಾಗಿ ಪರಿಣಾಮಕಾರಿಯಾಗಿ ಜಂಟಿ ಸರ್ವೆಯನ್ನು ಮಾಡಿ ಎರಡ್ಮೂರು ವರ್ಷಗಳಿಂದ ಇದೇ ಕೆಲಸವನ್ನು ಮಾಡಿ ಈಗ ಜಂಟಿ ಸರ್ವೆ ಸಂಪೂರ್ಣವಾದ ನಂತರ ನಾವು ಇದರ ಬಗ್ಗೆ affidavit ಕೊಡಬೇಕು. ಏಕೆಂದರೆ ನಮಗೆ

ಯಾವುದೇ ರೀತಿಯಲ್ಲಿಯೂ ಮತ್ತೆ ಸಮಸ್ಯೆಯಾಗಬಾರದು ಎಂದು ಹೇಳಿ ನಮ್ಮ ಕಂದಾಯ ಸಚಿವರು ಪ್ರತಿ ಸಾರಿ ಹೇಳಿದ್ದಾರೆ. ಪ್ರತಿ ಬಾರಿ ಕ್ಯಾಬಿನೆಟ್‌ನಲ್ಲಿ ಇದು ಬಂದಿದೆ. ನಮ್ಮ ದೇಶಪಾಂಡೆ ಸಾಹೇಬರು ಕೂಡ ಇದನ್ನು ನಾವು ಸರಿಯಾದ ರೀತಿಯಲ್ಲಿ ಮಾಡಬೇಕು ಎಂದಿದ್ದಾರೆ. ಇದನ್ನು ಕಳುಹಿಸಿಯಾದ ಮೇಲೆ ಜನರಿಗೆ ತೊಂದರೆಯಾಗಬಾರದು. ಮತ್ತೆ ಇದು ಸಮಸ್ಯೆಯಾಗಬಾರದು, ಯಾವುದೇ ರೀತಿಯ ಸಮಸ್ಯೆಯಾಗಬಾರದು ಎನ್ನುವಂಥ ನಿಟ್ಟಿನಲ್ಲಿ ಇದು ಸ್ವಲ್ಪ ನಿಧಾನವಾಗಿದೆ. ಏಕೆಂದರೆ, ಹೊನ್ನೆ ಕ್ಯಾಬಿನೆಟ್‌ನಲ್ಲಿ ಮತ್ತು ಅದರ ಹಿಂದಿನ ಕ್ಯಾಬಿನೆಟ್‌ನಲ್ಲಿಯೂ ಇದು ಬಂದಿತ್ತು. ಈಗ ಇದು ಮೂರನೇ ಕ್ಯಾಬಿನೆಟ್‌ನಲ್ಲಿ ಇದನ್ನು ಇಟ್ಟು ಇದರ ಬಗ್ಗೆ affidavit ಸಲ್ಲಿಸುತ್ತೇವೆ.

ಶ್ರೀ ವಿ. ಸುನೀಲ್‌ಕುಮಾರ್:-ಮಾನ್ಯ ಸಚಿವರೆ ನಿಮ್ಮ ನಿಲುವನ್ನು ನಾನು ಸ್ವಾಗತಿಸುತ್ತೇನೆ. ಕಂದಾಯ ಮತ್ತು ಅರಣ್ಯ ಇಲಾಖೆಯವರು ಜಂಟಿ ಸರ್ವೆ ಮಾಡಿರುವುದು ನಮಗೆ ಗೊತ್ತಿದೆ. ಆದರೆ ತುಂಬಾ ಜನಗಳಿಗೆ ಮತ್ತು ಜನ ಪ್ರತಿನಿಧಿಗಳಿಗೆ ಇದರ ಬಗ್ಗೆ ಮಾಹಿತಿ ಕೊಡಿ ಎಂದರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿ ಇದರ ಬಗ್ಗೆ ನಮಗೆ ಮಾಹಿತಿ ಇದುವರೆಗೂ ಕೊಟ್ಟಿಲ್ಲ. ನಾನು ಅದಕ್ಕಾಗಿಯೇ ಕೇಳುವುದೇನೆಂದರೆ ಎಷ್ಟು ಎಕರೆಯನ್ನು ವಿರಹಿತಗೊಳಿಸಬೇಕೆಂದು ನೀವು ಜಂಟಿ ಸರ್ವೆಯಲ್ಲಿ final ಮಾಡಿದ್ದೀರಿ? ನೀವು ಹೇಳುತ್ತಿರುವುದು ಮತ್ತು ನಿಮ್ಮ ಕಾಳಜಿ ನನಗೆ ಅರ್ಥವಾಗುತ್ತದೆ. ಯಾವುದೇ ಸಮಸ್ಯೆಯಾಗಬಾರದು ಎನ್ನುವ ಕಾರಣಕ್ಕೆ ಮುಂದಿನ ಕ್ಯಾಬಿನೆಟ್‌ಗೆ ಇದನ್ನು ತರುತ್ತಿದ್ದೇನೆಂದು ಹೇಳುತ್ತಿದ್ದೀರಿ. ಆದರೆ ಎಷ್ಟು ಎಕರೆಯನ್ನು ನೀವು ವಿರಹಿತಗೊಳಿಸಬೇಕೆಂದು final ಮಾಡಿದ್ದೀರಿ ಹೇಳಿ. ಇದರ ಪರಿಣಾಮ 94C, 94 CC, 53ಗಳಿಗೆ ಸಂಬಂಧಿಸಿದ ಯಾವುದೇ ಫೈಲ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ಈಗ ಆಗುತ್ತಿಲ್ಲ. ಸರ್ಕಾರಿ ಉಪಯೋಗಕ್ಕೂ ಕೂಡ ಮಾಡುವುದಕ್ಕೆ ಆಗುತ್ತಿಲ್ಲದಿರುವುದು ನಿಮಗೆಲ್ಲರಿಗೂ ಗೊತ್ತಿದೆ. ಆದುದರಿಂದ ನೀವು ಎಷ್ಟು ಎಕರೆಯನ್ನು ವಿರಹಿತ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ ಎಂಬ ಬಗ್ಗೆ ಹೇಳಿ. ಮುಂದಿನ ಕ್ಯಾಬಿನೆಟ್‌ಗೆ ಇದು ಬಂದ ನಂತರ ಇದನ್ನು ಫೈನಲ್ ಮಾಡುತ್ತೀರ ಎಂಬ ಬಗ್ಗೆ ಸ್ಪಷ್ಟಪಡಿಸಿ. ಏಕೆಂದರೆ ನೀವು ಕಳೆದ ನಾಲ್ಕು ವರ್ಷದಿಂದ ಇದನ್ನೇ ಹೇಳುತ್ತಿದ್ದೀರಿ, ಕ್ಯಾಬಿನೆಟ್ ಸಬ್ ಕಮಿಟಿಗೆ ಹೋಗಬೇಕು, ಕ್ಯಾಬಿನೆಟ್ ಸಬ್ ಕಮಿಟಿಗೆ ಹೋಗಬೇಕೆನ್ನುತ್ತಿದ್ದೀರಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ. ರಮಾನಾಥ ರೈ:-ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸುನಿಲ್‌ಕುಮಾರ್ ಸೇರಿದಂತೆ ಎಲ್ಲಾ ಸದಸ್ಯರ ಆತುರತೆ ಮತ್ತು ಅಭಿಪ್ರಾಯವೇನೆಂದರೆ ಇದನ್ನು ಸರಿಪಡಿಸಬೇಕೆಂಬುದೇ ಆಗಿದೆ. ನಾವು ಕೂಡ ಇದು ಸರಿಯಾದಂಥ ರೀತಿಯಲ್ಲಿ ಆಗಬೇಕು ಎನ್ನುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡಿದ್ದೇವೆ. ಆದ್ದರಿಂದ ನಾವು ಇದನ್ನು ಮೊನ್ನೆ ಕ್ಯಾಬಿನೆಟ್‌ನಲ್ಲಿ ತಂದಾಗ ಬಹುಶ: ಕೂಲಂಕುಷವಾಗಿ ಇದರ ಬಗ್ಗೆ ಚರ್ಚೆಯಾಗಿದೆ. ಯಾವುದೇ ಸಮಸ್ಯೆಗಳು ಬರಬಾರದು ಎಂದು ಹೇಳಿ ಬಹುಶ: ಎಲ್ಲ ಉಸ್ತುವಾರಿ ಮಂತ್ರಿಗಳಿಗೆ ಈ ಒಂದು ಕ್ಯಾಬಿನೆಟ್‌ಗೆ ತರತಕ್ಕಂಥ ವಿಚಾರವನ್ನು ಹೇಳಿ ಮಾಹಿತಿ ಕೊಡಬೇಕು ಎಂದು ಹೇಳಿದ್ದೇವಲ್ಲದೆ ತಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಿಗೂ ಕೂಡ ಕಳುಹಿಸಿಕೊಡುತ್ತೇವೆ.

ಶ್ರೀ ವಿ. ಸುನೀಲ್‌ಕುಮಾರ್:-ಮಾನ್ಯ ಸಚಿವರೆ, ನೀವು survey number wise ನಮ್ಮ ಗಮನಕ್ಕೆ ಯಾರಿಗೂ ತರಲಿಲ್ಲವೆಂದರೆ ನಮಗೆ ಇದರ ಬಗ್ಗೆ ಗೊತ್ತಾಗಲಿಲ್ಲವೆಂದರೆ ನಾಡಿದ್ದು ಯಾವುದಾದರೂ ಕೈಬಿಟ್ಟು ಹೋಗಲಿಲ್ಲವೆಂದರೆ ಮತ್ತೆ ಇದು ನಮಗೆ ಸಮಸ್ಯೆಯಾಗುತ್ತದೆ. ಹೀಗಾಗಿ survey number wise ನಮಗೆ ಗೊತ್ತಾಗಬೇಕು ಎನ್ನುವ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ:-ಹಿಂದಿನ ಸಾರಿ ಎಲ್ಲ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ತೋರಿಸಿ ಇದನ್ನು ಮಾಡಬೇಕು ಎಂದು ಹೇಳಿದ್ದೆವು. ಆ ನಂತರ ಇದನ್ನು final ಮಾಡುವಾಗ ಮತ್ತೊಂದು ಸಾರಿ ಎಲ್ಲಾ ಉಸ್ತುವಾರಿ ಮಂತ್ರಿಗಳು, ಬಹುಶ: ತಮಗೂ ಗೊತ್ತಿರಬಹುದು.

ಶ್ರೀ ವಿ. ಸುನೀಲ್‌ಕುಮಾರ್:-ಇದರಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಮುತುವರ್ಜಿ ತೆಗೆದುಕೊಳ್ಳಲಿಲ್ಲವೆಂದರೆ ಕಂದಾಯ ಇಲಾಖೆಯ ಎಲ್ಲ ಭೂಮಿಗಳನ್ನು forest ಎಂದು ಮಾಡುತ್ತಾರಷ್ಟೆ. ಅದಕ್ಕಾಗಿ ನಾನು ಕೇಳಿದ್ದು, survey number ತೆಗೆದುಕೊಂಡು ಎಷ್ಟು ಎಕರೆಯನ್ನು ತಾವು ವಿರಹಿತಗೊಳಿಸುತ್ತೀದ್ದೀರೆಂದು.

ಉಪಾಧ್ಯಕ್ಷರು:-ಮಾನ್ಯ ಸಚಿವರೆ, ಇದರ ಬಗ್ಗೆ ನೀವು ಒಂದು ಸಭೆ ಮಾಡುವುದು ಒಳ್ಳೆಯದೆನಿಸುತ್ತದೆ. ಆದುದರಿಂದ ನೀವು ಒಂದು ಸಭೆಯನ್ನು ಮಾಡಿ.

ಶ್ರೀ ಬಿ. ರಮಾನಾಥ ರೈ:-ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯತಕ್ಕಂಥ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಕಂದಾಯ ಇಲಾಖೆಗೆ ಸಂಬಂಧಪಟ್ಟವರು ಬಹುಶ: ನಾನು ಒಂದು ಮಾತನ್ನು ಹೇಳುತ್ತೇನೆ, ಈಗ ಎಷ್ಟು ಬಿಟ್ಟಿದ್ದೇವೆ ಎಂದು ಹೇಳುವಂಥದ್ದಲ್ಲ,

ಶ್ರೀ ವಿ. ಸುನೀಲ್‌ಕುಮಾರ್:-ನೀವು ಎಷ್ಟು ಎಕರೆಯನ್ನು ವಿರಹಿತಗೊಳಿಸಬೇಕೆಂದು ತೀರ್ಮಾನ ಮಾಡಿದ್ದೀರಿ ಎಂಬ ಬಗ್ಗೆ ಸ್ಪಷ್ಟಪಡಿಸಿ.

ಶ್ರೀ ಬಿ. ರಮಾನಾಥ ರೈ:-ವಿರಹಿತಗೊಳಿಸುವ ಪ್ರಶ್ನೆಯಲ್ಲ, ಯಾವುದು ನಿಜವಾಗಿ deemed forest ಗೆ , ,

ಶ್ರೀ ವಿ. ಸುನೀಲ್‌ಕುಮಾರ್:-ನೀವು ಇದನ್ನು ಕ್ಯಾಬಿನೆಟ್‌ಗೆ ಸಬ್ ಕಮಿಟಿಗೆ ಕಳುಹಿಸಬೇಕು ಎನ್ನುವುದು ಒಂದು ಕಡೆ ಇರಲಿ. ಎಷ್ಟು ಎಕರೆಯನ್ನು ನೀವು ವಿರಹಿತಗೊಳಿಸಬೇಕೆಂದು ತೀರ್ಮಾನ ಮಾಡಿದ್ದೀರೆ ಎಂಬ ಬಗ್ಗೆ ಮೊದಲು ಸ್ಪಷ್ಟ ಮಾಡಿ. ಮಾನ್ಯ ಸಚಿವರೆ, ನಿಮಗೆ ಗೊತ್ತಿದೆ, ಇದರಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದರೆ ಬಹಳ ಸಮಸ್ಯೆಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-ಸುನೀಲ್‌ಕುಮಾರ್‌ರವರೆ, ನೀವು ಯಾವ ಜಮೀನಿಗೆ ಸಂಬಂಧಪಟ್ಟಂತೆ ನಿಮ್ಮ ಪ್ರಶ್ನೆಗಳು ಇವೆ.

ಶ್ರೀ ವಿ. ಸುನೀಲ್‌ಕುಮಾರ್:-ಮಾನ್ಯ ಸಚಿವರೆ, ಈಗ deemed forest ಎಂದು declare ಮಾಡಿದುದರೆ ಪರಿಣಾಮವಾಗಿ , ,

ಶ್ರೀ ಕಾಗೋಡು ತಿಮ್ಮಪ್ಪ:-ಯಾವ ಜಮೀನು?

ಶ್ರೀ ವಿ. ಸುನೀಲ್‌ಕುಮಾರ್:-ಕಂದಾಯ ಮತ್ತು ಎಲ್ಲದರದ್ದು, ನಮ್ಮಲ್ಲಿ ಕಂದಾಯ ಭೂಮಿಯದ್ದೇ major ಇದೆ. ಈಗ ಜನ ವಸತಿ ಪ್ರದೇಶಗಳು ಕೂಡ deemed forest ಆಗಿದೆ.

ಶ್ರೀ ಬಿ.ಬಿ. ನಿಂಗಯ್ಯ:-ಈಗ ನಮ್ಮಲ್ಲಿ ಎಲ್ಲಾ ಕಡೆ ಅಕೇಷಿಯಾ plantations ಹಾಕಿ ಬೆಳೆಸಿದ್ದಾರೆ. ಇದು forest ತರಹ ಕಾಣುತ್ತಿದೆ. ಆದರೆ ಅದು ಅರಣ್ಯವಲ್ಲ.

ಶ್ರೀ ವಿ. ಸುನೀಲ್‌ಕುಮಾರ್:-ಮಾನ್ಯ ಸಚಿವರೆ, ಈಗ 53 ರಲ್ಲಿ 90% deemed ಇದೆ. 94 CC ಯಲ್ಲಿಯೂ 90% deemed ಇದೆ.



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಹೆಚ್.ಕೆ. ಕುಮಾರಸ್ವಾಮಿ:-ಈಗ ಗೋಮಾಳವನ್ನೆಲ್ಲ forest ಎಂದು ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:-ನಿಂಗಯ್ಯನವರೆ, ಒಂದು ನಿಮಿಷ ತಾಳಿ. ಸ್ವಾಮಿ ನಿಮ್ಮ ಪಕ್ಕದಲ್ಲಿಯೇ ಒಬ್ಬರು ಕುಳಿತಿದ್ದಾರಲ್ಲ, ನಿಮ್ಮಲ್ಲಿ ಹಾಡಿ, ನಮ್ಮಲ್ಲಿ ಕಾನು, ಕುಮ್ಕಿ, ನಮ್ಮಲ್ಲಿ ಕಾನು, ಸೊಪ್ಪಿನಬೆಟ್ಟ, ಅವರಲ್ಲಿ ಸೊಪ್ಪಿನಬೆಟ್ಟ, ಕೊಡಗಿನಲ್ಲಿ ಪೈಸಾರಿ, ಇವೆಲ್ಲಾ ಇದೇ ತಾನೆ. ಇಲ್ಲಿ ಒಂದೆರಡು ಸಾರಿ ಸದನದಲ್ಲಿ ಘರ್ಜನೆ ಮಾಡಿದ್ದಾರೆಯೆ?

ಶ್ರೀ ವಿ. ಸುನೀಲ್‌ಕುಮಾರ್:- ಪ್ರತಿಸಾರಿಯೂ ನಾವು ಮಾಡುತ್ತಲೇ ಇದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:-ಮಾಡಿ. ಕಂದಾಯ ಕಾನೂನಿನ 79(2) ಪ್ರಕಾರ ಅವೆಲ್ಲಾ privilege land, ಬ್ರಿಟಿಷರ ಕಾಲದಿಂದ ಅವು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಇವೆ. ಆದುದರಿಂದ ಅವೆಲ್ಲಾ ಕಂದಾಯ ಇಲಾಖೆಯಲ್ಲಿಯೇ ಇರಬೇಕೆಂದೇ ನಾವು ಈಗ ಪ್ರಯತ್ನ ಮಾಡುತ್ತಿದ್ದೇವೆ. ಈ ಸದನದಲ್ಲಿ ಇದರ ಬಗ್ಗೆ ಒಬ್ಬರು ಮಾತನಾಡುವುದೇ ಇಲ್ಲವಲ್ಲ.

ಶ್ರೀ ಬಿ.ಬಿ. ನಿಂಗಯ್ಯ:-ಮಾನ್ಯ ಸಚಿವರೆ, ತಾವೇ ಸಭಾಧ್ಯಕ್ಷರಾಗಿದ್ದಾಗ ಬಹಳಷ್ಟು ಬಾರಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ. ಇದರ ಬಗ್ಗೆ ಚರ್ಚೆಯಾಗಿದೆ. ಇದರ ಬಗ್ಗೆ separate meeting ಕೂಡ ಆಗಿದೆ.

ಶ್ರೀ ವಿ. ಸುನೀಲ್‌ಕುಮಾರ್:-ನಾನು ಅದನ್ನೇ ಕೇಳುತ್ತಿರುವುದು, ಕುಮ್ಕಿ, ರೆವಿನ್ಯು, ಈ ತರಹ ಲ್ಯಾಂಡ್ ಎಲ್ಲವೂ deemed forest ಎಂದು ನಮೂದಾಗಿರುವುದರಿಂದ ಎಷ್ಟು ಎಕರೆ deemed forest ಅನ್ನು ವಿರಹಿತಗೊಳಿಸಬೇಕೆಂದು ಕ್ಯಾಬಿನೆಟ್‌ಗೆ ತಂದಿದ್ದೀರಿ ಎಂಬ ಬಗ್ಗೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:-ಮಾನ್ಯ ಉಪಾಧ್ಯಕ್ಷರೆ, ಅನೇಕ ಜನರಿಗೆ, ಕಾನು ಯಾವುದು, ಸೊಪ್ಪಿನಬೆಟ್ಟ ಯಾವುದು, ಕುಮ್ಕಿ ಯಾವುದು, ಬಾಣೆ ಯಾವುದು ಎನ್ನುವುದು ಗೊತ್ತಿಲ್ಲ. ಹೀಗಾಗಿ ಏನಾಗಿದೆಯೆಂದರೆ ನಾವು ಬಾಯಿ ಹೊಡೆದುಕೊಳ್ಳುತ್ತಿದ್ದೇವೆ ಏನಾದರೂ ಮಾಡಿ ಇದನ್ನು ತಪ್ಪಿಸಬೇಕೆಂದು.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಪಾಧ್ಯಕ್ಷರು:-ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ಹಾಕಿಕೊಳ್ಳೋಣ ಬಿಡಿ. ಆಗ ಇದರ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಲಿ.

ಶ್ರೀ ಬಿ. ರಮಾನಾಥ ರೈ:-ಮಾನ್ಯ ಉಪಾಧ್ಯಕ್ಷರೆ, ಒಂದು ಮಾತು. ಈಗ ಸುನೀಲ್‌ಕುಮಾರ್‌ರವರ ಮೂಲ ಪ್ರಶ್ನೆ, ಎಷ್ಟು ಎಕರೆ ಬಿಟ್ಟಿದೆ ಎಂದು ಹೇಳುವುದು.

ಶ್ರೀ ವಿ. ಸುನೀಲ್‌ಕುಮಾರ್:-ಎಷ್ಟು ಎಕರೆ ಬಿಡುವುದಕ್ಕೆ ತಾವು ಶಿಫಾರಸ್ಸು ಮಾಡುತ್ತಿದ್ದೀರಿ ಎಂಬ ಬಗ್ಗೆ ಹೇಳಿ.

ಶ್ರೀ ಬಿ. ರಮಾನಾಥ ರೈ:-ನನಗೆ ಮಾತನಾಡಲು ಅವಕಾಶ ಕೊಡಿ. ನಾನು ಹೇಳಿದ ಮೇಲೆ ನೀವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ. ನೀವು ಹೀಗೆ ಮಧ್ಯೆ ಮಧ್ಯೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ.

ಉಪಾಧ್ಯಕ್ಷರು:-ಮಾನ್ಯ ಸಚಿವರೆ, ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಹಾಕಿಕೊಂಡು ಚರ್ಚೆ ಮಾಡೋಣ ಬಿಡಿ. ಈಗ detail ಆಗಿ ಚರ್ಚೆ ಮಾಡುವುದಕ್ಕೆ ಈಗ ಸಮಯವಿಲ್ಲ. ಈಗ ನಾಳೆ ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳೋಣ ಬಿಡಿ.

ಶ್ರೀ ಬಿ. ರಮಾನಾಥ ರೈ:-ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಈಗ ಕ್ಯಾಬಿನೆಟ್‌ಗೆ ಬಂದಿದೆ. ಈಗ ನಿಖರವಾಗಿ deemed forest ಎಷ್ಟು ಎಂದು ಹೇಳುವುದನ್ನು ನಾವು ಒಂದು ಸಾಮಾನ್ಯ 3 ಲಕ್ಷ ಹೆಕ್ಟೇರ್ ಜಮೀನು ಸಾಧಾರಣ ಈ ಒಂದು deemed forest ವ್ಯಾಪ್ತಿಗೆ ಬರುತ್ತದೆ ಎಂದು ಹೇಳತಕ್ಕಂಥದ್ದು, ಮೊದಲು 10 ಲಕ್ಷವಿತ್ತು, ಇದರ ಬಗ್ಗೆ ನಾವು ಸಾಕಷ್ಟು workout ಮಾಡಿದೆವು. ಬಹುಶ: ಬಿಟ್ಟಿರತಕ್ಕಂಥದ್ದಲ್ಲ, deemed forest ಎಂದು ಹೇಳುವುದನ್ನು ನಾವು ಕರಾರುವಕ್ಕಾಗಿ ಅದನ್ನು ಸುಪ್ರೀಂಕೋರ್ಟ್‌ಗೆ affidavit ಕೊಡಬೇಕು. ಮತ್ತೆ ಜನರು ನಮ್ಮನ್ನು ಇದರ ಬಗ್ಗೆ ಪ್ರಶ್ನೆ ಮಾಡಬಾರದು ಎನ್ನುವ ಅಭಿಪ್ರಾಯ ನಮ್ಮಲ್ಲಿಯೂ ಕೂಡ ಇದೆ. ನಿಮಗೆಷ್ಟು ಆಸಕ್ತಿಯಿದೆಯೋ ಅಷ್ಟೇ ಆಸಕ್ತಿ ನಮಗೂ ಇದೆ.

ಶ್ರೀ ವಿ. ಸುನೀಲ್‌ಕುಮಾರ್:-ನಾನು ಅದರ ಬಗ್ಗೆ ನಿಮಗೆ ಅಭಿನಂದನೆಯನ್ನು ಹೇಳಿದ್ದೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ. ರಮಾನಾಥ ರೈ:-ಆಯಿತು, ನಾವು ಮಾಡುತ್ತೇವೆ, ಈ ಸಮಸ್ಯೆ 1997 ರಿಂದಲೂ ಇದೆ, ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ವರ್ಷದಲ್ಲಿ ಅದನ್ನು ಸರಿಪಡಿಸಬೇಕೆಂದು Supreme Court direction ಕೊಟ್ಟಿದೆ. ಆದರೆ ಇದುವರೆಗೂ ಅದು ಆಗಿರಲಿಲ್ಲ. ಎಷ್ಟೋ ಸರ್ಕಾರಗಳು ಬಂದು ಹೋಯಿತು. ಆದರೂ ಯಾರು ಮಾಡಲಿಲ್ಲ. ಆದರೆ ನಾವು ಇದನ್ನು ಸರಿಪಡಿಸಲು ಜಂಟಿ ಸರ್ವೆಯನ್ನು ಮಾಡುತ್ತಿದ್ದೇವೆ. 1997 ನೇ ಇಸವಿಯಿಂದ ಇದನ್ನು ಮಾಡಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶನ ಕೊಟ್ಟಿದೆ. ಈ ಜಂಟಿ ಸರ್ವೆಯನ್ನು ಯಾರು ಮಾಡಿದ್ದರು? ನಾವು ಈಗ ಜಂಟಿ ಸರ್ವೆಯನ್ನು ಮಾಡುತ್ತಿರುವುದು. ಜಂಟಿ ಸರ್ವೆಯನ್ನು ಮಾಡಿ ನಾವು ಇದನ್ನು ಕ್ಯಾಬಿನೆಟ್‌ಗೆ ತಂದು ತದನಂತರ Supreme Court ಗೆ affidavit ಅನ್ನು ಕೊಡುತ್ತಿದ್ದೇವೆ.

ಉಪಾಧ್ಯಕ್ಷರು:-ಆಯಿತು. ಈಗ ಮಾನ್ಯ ಗೋವಿಂದ ಕಾರಜೋಳರವರೆ, ತಾವು ಮಾತನಾಡಿ.

**ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ದೊಡ್ಡಬೆಲೆ ಗ್ರಾಮದ ಸರ್ಕಾರಿ ಸರ್ವೆ ನಂಬರ್ 07 ರಲ್ಲಿ ಸುಮಾರು 20 ವರ್ಷದಿಂದ ವಾಸವಿರುವ ಎಸ್‌ಸಿ/ಎಸ್‌ಟಿ ಜನಾಂಗದ 300 ಕುಟುಂಬದವರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ.**

\- - -

ಶ್ರೀ ಗೋವಿಂದ ಎಂ. ಕಾರಜೋಳ:-ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ದೊಡ್ಡಬೆಲೆ ಗ್ರಾಮದ ಸರ್ಕಾರಿ ಸರ್ವೆ ನಂಬರ್ 07 ರಲ್ಲಿ ಸುಮಾರು 20 ವರ್ಷದಿಂದ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಸೇರಿದಂಥ 300 ಕುಟುಂಬಗಳು ವಾಸವಾಗಿವೆ. ಇವರನ್ನು ಒಕ್ಕಲೆಬ್ಬಿಸುವುದಕ್ಕೆ ಕೆಲವು ಭೂಮಾಫಿಯಾಗಳು ಮತ್ತು ಕೆಲವು ಅಧಿಕಾರಿಗಳು ಸೇರಿಕೊಂಡು ಅವರನ್ನು ಹೊರಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ಈಗಾಗಲೇ 94C ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕಾಗಿ ನಾನು ಕಂದಾಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಅವರ ಗಮನವನ್ನು ಸೆಳೆಯುತ್ತೇನೆ. ಅವರಿಗೆ ರಕ್ಷಣೆ ಕೊಡಬೇಕು ಮತ್ತು ಅವರಿಗೆ ಹಕ್ಕು ಪತ್ರ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**( ಮಾನ್ಯ ಕಂದಾಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಿದೆ )**

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಸುದೀರ್ಘವಾದಂಥ ಲಿಖಿತ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಒಂದು

ಹಂತದಲ್ಲಿ ಅನ್ಯಾಯ, ಅತ್ಯಾಚಾರ ಆಗಿರತಕ್ಕಂಥದ್ದು ನಿಜ. ಈಗಾಗಲೇ ಕೆಲವು ಜನರಿಗೆ ಹಕ್ಕುಪತ್ರವನ್ನು ಕೊಟ್ಟಿದೆ. ಇನ್ನು ಕೆಲವರಿಗೆ ಕೊಡಬೇಕಾದ್ದು ಇದೆ. ಆದುದರಿಂದ ಇಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರ, ಅನ್ಯಾಯದ ಬಗ್ಗೆ ಏನಿದೆ ಇದರ ಬಗ್ಗೆ ಸುದೀರ್ಘವಾದಂಥ ತನಿಖೆಯನ್ನು ಮಾಡುತ್ತೇವೆ, ಯಾರನ್ನೂ ಇದರಲ್ಲಿ ಬಿಡುವಂಥ ಪ್ರಶ್ನೆಯೇ ಇಲ್ಲ. ಅವರಿಗೆ ರಕ್ಷಣೆ ಕೊಡಬೇಕೆಂದು ನೀವು ಹೇಳಿದ್ದೀರಿ, ಅವರಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:-Thank you.

ಉಪಾಧ್ಯಕ್ಷರು:-ಮುಂದಿನ ಗಮನ ಸೆಳೆಯುವ ಸೂಚನೆ ಮುನಿರತ್ನರವರದ್ದು ಇದೆ. ಈಗ ಸದನದಲ್ಲಿ ಅವರು ಇಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಬಿ.ಬಿ. ನಿಂಗಯ್ಯನವರದು ಇದೆ. ನಿಂಗಯ್ಯನವರೆ ಗಮನ ಸೆಳೆಯಿರಿ.

(ಮುಂದು)

D 13.06.2017/7.40/50/HBU-CP

ಉಪಾಧ್ಯಕ್ಷರು : ಮಾನ್ಯ ಮುನಿರತ್ನರವರು ಕೇಳಿ, ಅವರು ಇಲ್ಲ. ಮಾನ್ಯ ಬಿ.ಬಿ. ನಿಂಗಯ್ಯನವರು ಕೇಳಿ.

( ಈ ಹಂತದಲ್ಲಿ ಮಾನ್ಯ ಸದಸ್ಯರಾದ ಮುನಿರತ್ನ ರವರು ಸದನದಲ್ಲಿ ಹಾಜರಿರಲಿಲ್ಲ)

**ವಿಷಯ : ಮೂಡಿಗೆರೆ ತಾಲ್ಲೂಕಿನಲ್ಲಿ ಮಲೆನಾಡು ಸರ್ಕ್ಯುಟ್ ಯೋಜನೆಗೆ ಅಪೂರ್ಣಗೊಂಡಿರುವ ಕಟ್ಟಡವನ್ನು ಪೂರ್ಣಗೊಳಿಸಲು ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ**

ಶ್ರೀ ಬಿ.ಬಿ. ನಿಂಗಯ್ಯ(ಮೂಡಿಗೆರೆ) : ಮಾನ್ಯ ಉಪಾಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನಲ್ಲಿ ಮಲೆನಾಡು ಸರ್ಕ್ಯುಟ್ ಯೋಜನೆಗೆ ಅಪೂರ್ಣಗೊಂಡಿರುವ ಕಟ್ಟಡವನ್ನು ಪೂರ್ಣಗೊಳಿಸಲು ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

( ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಬಿ.ಬಿ.ನಿಂಗಯ್ಯ : ಮಾನ್ಯ ಉಪಾಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ತುರುವೆ ಗ್ರಾಮದ ಕೊಟ್ಟಿಗೆಹಾರ ಬಳಿ ಪ್ರವಾಸೋದ್ಯಮ ಇಲಾಖೆಯಿಂದ ಕಳಸ, ಹೊರನಾಡು. ಮಲೆಯ ಮಾರುತ, ಭದ್ರ ರಿವರ್ ರ್‍ಯಾಪ್ಟಿಂಗ್ ಮತ್ತು ಚಿಕ್ಕಮಗಳೂರು ಚಾರ್ಮುಡಿಘಾಟ್ ಮಾರ್ಗವಾಗಿ ಧರ್ಮಸ್ಥಳ, ಕುಕ್ಕೆ ಸುಬ್ರಮ್ಮಣ್ಯ ಮತ್ತು ಮಂಗಳೂರು ಕಡೆಗೆ ಸಂಚರಿಸುವ ಪ್ರಯಾಣಿಕರು ಮತ್ತು ಪ್ರವಾಸಿಗರಿಗೆ ಯಾವುದೇ ಪ್ರವಾಸಿ ತಾಣಗಳಿಲ್ಲದಿರುವುದರಿಂದ ಮಲೆನಾಡು ಸರ್ಕ್ಯುಟ್ ಯೋಜನೆಯಡಿ ರೂ. 59.12 ಲಕ್ಷ ಅನುದಾನ ಮಂಜೂರಾಗಿದ್ದು, ಪ್ರಾರಂಭಿಸಿರುವ ಕಟ್ಟಡದ ಕಾಮಗಾರಿ ನಡೆಯುತ್ತಿದ್ದು, ಅಪೂರ್ಣವಾಗಿದೆ. ಅದನ್ನು ಪೂರ್ಣಗೊಳಿಸುವುದಕ್ಕೆ ಹಣ ಬಿಡುಗಡೆ ಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಪ್ರಿಯಾಂಕ್ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದೇನೆ. ಮಾನ್ಯ ಸದಸ್ಯರು ನೀಡಿದ ಸಲಹೆಯಂತೆ ಉಳಿದ ಹಣವನ್ನು ಬಿಡುಗಡೆ ಮಾಡಿ ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಅದಲ್ಲದೆ ಮಾನ್ಯ ಸದಸ್ಯರು ಇನ್ನು ಹೆಚ್ಚಿನ ಅನುದಾನ ಕೊಡಬೇಕೆಂದು ತಿಳಿಸಿದ್ದಾರೆ. ಆ ಕಟ್ಟಡದ ನೀಲಿನಕ್ಷೆ ನೋಡಿ, ಪರಿಶೀಲನೆ ಮಾಡಿ ಖಂಡಿತವಾಗಿ ಮಾಡಿಸಿಕೊಡುತ್ತೇವೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಉಪಾಧ್ಯಕ್ಷರೆ, ಕೊಟ್ಟಿಗೆ ಹಾರ ತಮಗೆ ಗೊತ್ತಿರುವ ಹಾಗೆ ಒಂದು ಜಂಕ್ಷನ್. ಅಲ್ಲಿ ಕಾಮಗಾರಿಗೆ 59 ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಅದು ಸಾಕಾಗುವುದಿಲ್ಲ. ಇಡೀ ರಾಜ್ಯದ ಜನ ಧರ್ಮಸ್ಥಳ, ಶೃಂಗೇರಿ, ಹೊರನಾಡು ಮತ್ತು ಮಂಗಳೂರಿಗೆ ಹೋಗುವಂಥ ಪ್ರದೇಶ. ಹಾಗಾಗಿ ಅಲ್ಲಿಗೆ ಒಂದು ಹೆಚ್ಚಿನ ಸೌಲಭ್ಯ ಒದಗಿಸಿ ಕೊಡಬೇಕು. ಬಹಳ ಕಡಿಮೆ ಅನುದಾನ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಅಲ್ಲಿ ಕಟ್ಟಿರುವ ಕಟ್ಟಡದಲ್ಲಿ ಅನ್ಯೆತಿಕ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಚಟುವಟಿಕೆಗಳು ನಡೆಯುತ್ತಿವೆ. ಅದಕ್ಕೆ ಅಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಿ, ಮೂಲಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸಚಿವರು ಮಾಡಿಕೊಡುತ್ತೇವೆಂದು ಹೇಳಿದ್ದಾರಲ್ಲ. ಈಗ ಬಿ.ಸುರೇಶ್ ಗೌಡರು ಕೇಳಿ.

**ವಿಷಯ :ತುಮಕೂರು ವ್ಯಾಪ್ತಿಯ ಬುಗಡನ ಹಳ್ಳಿಯ ಕೆರೆಯಿಂದ ದೇವರಾಯಪಟ್ಟಣ ಮೂಲಕ ಮೈದಾಳ ಕೆರೆಯಲ್ಲಿ ನೀರು ಸಂಗ್ರಹಿಸಿ ಕೈಗಾರಿಕಾ ಪ್ರದೇಶಗಳಿಗೆ ನೀರು ಪೂರೈಸುವ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ**

ಶ್ರೀ ಬಿ. ಸುರೇಶ್‌ಗೌಡ(ತುಮಕೂರು ಗ್ರಾಮೀಣ) : ಮಾನ್ಯ ಉಪಾಧ್ಯಕ್ಷರೆ, ತುಮಕೂರು ವ್ಯಾಪ್ತಿಯ ಬುಗುಡನ ಹಳ್ಳಿಯ ಕೆರೆಯಿಂದ ದೇವರಾಯಪಟ್ಟಣ ಮೂಲಕ ಮೈದಾಳ ಕೆರೆಯಲ್ಲಿ ನೀರು ಸಂಗ್ರಹಿಸಿ ಕೈಗಾರಿಕಾ ಪ್ರದೇಶಗಳಿಗೆ ನೀರು ಪೂರೈಸುವ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

(ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಬಿ. ಸುರೇಶ್‌ಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ನಾನೊಂದು ಮನವಿಯನ್ನು ಕೊಟ್ಟಿದ್ದೆ. ತಾವು ನನಗೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಿಮ್ಮ ಇಲಾಖೆ ಏಕೆ ಇಷ್ಟು ಸುಳ್ಳು ಉತ್ತರ ಕೊಡುತ್ತದೆ ಎಂದು ಬೇಸರವಾಗಿದೆ. ಏಕೆಂದರೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿಲ್ಲ. ವಿಶೇಷವಾಗಿ ಮೈದಾಳ ಕೆರೆಗೆ ಹೇಮಾವತಿ ನೀರು ತರುವುದಕ್ಕೆ ಮೂರು ಮುಖ್ಯವಾಗಿ bottle necks ಇದೆ. ಅಲ್ಲಿ ತುಮಕೂರು ಮಹಾನಗರ ಪಾಲಿಕೆಯ ಕಮಿಷನರ್ ಹರ್ಷದ್ ಆರ್. ಷರೀಫ್ ಅವರು ದಿನಾಂಕ:

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ
ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

22.12.2015 ರಲ್ಲಿ ಸ್ವಾಮಿಯವರಿಗೆ ಒಂದು ಪತ್ರ ಬರೆದಿದ್ದಾರೆ. CEO, CDO, KIADB not to draw Hemavathi water from Bugadana halli tank to Dabaspet industrial area ಎಂದು ಒಂದು ಕಾಗದ ಬರೆದಿದ್ದು, ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ. ಬುಗಡನ ಹಳ್ಳಿ ಕೆರೆಯಲ್ಲಿ jack well ಮಾಡುವುದಕ್ಕೆ ಅನುಮತಿ ಕೊಡುವುದಕ್ಕೆ ಅವರು objection ಹಾಕಿ, ಇವರನ್ನು ಅಲ್ಲಿ allow ಮಾಡುತ್ತಿಲ್ಲ. ಬುಗಡನ ಹಳ್ಳಿ ಕೆರೆ ನನ್ನ ಕ್ಷೇತ್ರದಲ್ಲಿ ಬರುತ್ತದೆ. ಆ ಕೆರೆಯಿಂದ ನಾವು ನಗರಕ್ಕೆ ನೀರು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು, ರೈತರು ಕೂಡ ತ್ಯಾಗ ಮಾಡಿದ್ದಾರೆ. ಆದರೆ ಇವತ್ತು ಡಾಬಸ್‌ಪೇಟೆಗೆ ನೀರು ತೆಗೆದುಕೊಂಡು ಹೋಗುವುದಕ್ಕಿಂತ ಮುಖ್ಯವಾಗಿ ಸಿದ್ಧಗಂಗಾ ಮಠದಲ್ಲಿ 10 ಸಾವಿರ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿಗೆ ಒಂದು ದೇವರಾಯನ ಕೆರೆಯಿಂದ provision ಮಾಡಿದ್ದಾರೆ. ಅಲ್ಲಿ ಕುಡಿಯುವ ನೀರು ಕೊಟ್ಟರೆ 10 ಸಾವಿರ ಮಕ್ಕಳ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಆ ಮಠ ಕೂಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ನಾವು ವರ್ಷಕ್ಕೆ ಏನಿಲ್ಲವೆಂದರೂ 50 ರಿಂದ 100 ಬೋರ್‌ವೆಲ್ ಹಾಕುತ್ತೇವೆ. ಅಲ್ಲಿ 1,000 ಅಡಿ ಬೋರ್ ಕೊರೆದರೂ ನೀರು ಬರುತ್ತಿಲ್ಲ. ಅಲ್ಲಿ ಫ್ಲೋರೈಡ್ ನೀರಿನ ಸಮಸ್ಯೆ ಇದೆ ಮತ್ತು ಪ್ರತಿದಿವಸ ಸಿದ್ಧಗಂಗಾ ಮಠಕ್ಕೆ ನೀರಿನ ಸಮಸ್ಯೆ ಇದೆ. ಎರಡನೆಯ bottle neck ಇರುವುದು ಬುಗಡನ ಹಳ್ಳಿಯಿಂದ 2 ಕಿಲೋಮೀಟರ್ ದೂರದಲ್ಲಿ ಇದೆ. ಅಲ್ಲಿ ಒಂದು alignment ಮಾಡಬೇಕು. ಅಲ್ಲಿ ಸರ್ವೆ ಮಾಡುವುದಕ್ಕೆ ಹೋದಂಥ ಸಂದರ್ಭದಲ್ಲಿ ರೈತರು ವಿರೋಧ ಮಾಡಿ ಅಲ್ಲಿಂದ ಓಡಿಸಿದ್ದಾರೆ. ಅಲ್ಲಿ 4(1) ಇತ್ತು, ಈಗ 28(4) ಹೊಸ ಕಾನೂನನ್ನು ಕೇಂದ್ರ ಸರ್ಕಾರ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ತಂದಮೇಲೆ, ಈ ಕಾನೂನು ಬದಲಾವಣೆ ಆದಮೇಲೆ 28(4) ಅಡಿ ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಇಲ್ಲಿಯವರೆಗೂ ಸರ್ವೆ ಮಾಡಿಲ್ಲ. ನಮಗೆ ಇನ್ನು ಮುಖ್ಯವಾಗಿ 3 ಕಿಲೋಮೀಟರ್ ಬುಗಡನ ಕೆರೆಯಿಂದ ಮೈದಾನ ಕರೆಗೆ ಬರಬೇಕಾಗಿದೆ. ಅದರ ಮಧ್ಯದಲ್ಲಿ ದೇವರಾಯಪಟ್ಟಣದ ಕೆರೆ ಎಂದು ಮಠಕ್ಕೆ ನೀರು ಕೊಡುವುದಕ್ಕೆ ಒಂದು ಕೆರೆ ಇದೆ. ಅಲ್ಲಿಂದ 2 ಕಿಲೋಮೀಟರ್‌ನಿಂದ ನೀರು ತರುವುದಕ್ಕೆ ಸರ್ವೆಯಾಗಬೇಕು. 4(1) ಮತ್ತು 6(1) ಬದಲು 28(4) ಅಡಿಯಲ್ಲಿ ಸರ್ವೆ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು ಬಹಳ ಸಲ ಮನವಿ ಮಾಡಿಕೊಂಡರೂ ನಿಮ್ಮ ಅಧಿಕಾರಿಗಳು ಕಿವಿಯ ಮೇಲೆ

ಹಾಕಿಕೊಂಡಿಲ್ಲ. ಮೈದಾಳಕ್ಕೆ ಹೋಗಬೇಕಾದರೆ ಒಂದು ರೈಲ್ವೆ ಟ್ರಾಕ್ ಪಕ್ಕ ಸರ್ವೆ ಮಾಡಿದ್ದಾರೆ. ನಾನು ರೈಲ್ವೆ ಮಂತ್ರಿಗಳಾದ ಮಾನ್ಯ ಸುರೇಶ್ ಬಾಬು ಅವರನ್ನು ಮೂರು ಬಾರಿ ಭೇಟಿ ಮಾಡಿದೆ. ಅವರು, ನಮ್ಮ ಇಲಾಖೆ ಯಾವುದೇ ಕಾರಣಕ್ಕೂ ರೈಲ್ವೆ ಲೈನ್ ಪಕ್ಕದಿಂದ 30 ಮೀಟರ್‌ವರೆಗೂ ನಾವು ಯಾವುದೇ ಕಟ್ಟಡ ಕಟ್ಟುವುದಕ್ಕಾಗಲಿ, ಪೈಪ್‌ಲೈನ್ ಹಾಕುವುದಕ್ಕಾಗಲಿ ಅವಕಾಶ ಕೊಡುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದರು. ನಿಮ್ಮ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೆ, ಅನಾವಶ್ಯಕವಾಗಿ ಡಿಲೇ ಮಾಡಿ ಇದನ್ನು ಅನುಷ್ಠಾನ ಮಾಡಬಾರದೆಂದು ಇದೆ. ಕೈಗಾರಿಕಾ ಸಚಿವರು, ಉನ್ನತ ಶಿಕ್ಷಣ ಸಚಿವರಾಗಿದ್ದಾಗ ತುಮಕೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಸಮಸ್ಯೆ ಇತ್ತು, ಇವತ್ತು ಆ ಸಮಸ್ಯೆಯನ್ನು ಬಗೆಹರಿಸಿ ತುಮಕೂರು ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ತಮಗೆ ವಿನಂತಿ ಮಾಡುವುದೇನೆಂದರೆ ಕೈಗಾರಿಕಾ ಪ್ರದೇಶಕ್ಕೆ ನೀರು ಕೊಡಬೇಕು. ನೀವು ಅಲ್ಲಿನ ಲೋಕಲ್ ಎಂಎಲ್ಎ ಮಾನ್ಯ ರಫೀಕ್ ಅಹಮದ್ ಅವರ ಜೊತೆ ಮಾತನಾಡಿ, ಅಲ್ಲಿ ಜಾಕ್‌ವೆಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಗ ಬುಗುಡನಹಳ್ಳಿ ಕೆರೆಯಲ್ಲಿ ನೀರಿಲ್ಲ. ಇನ್ನೂ ಎರಡು ತಿಂಗಳು ಆ ಕೆರೆಗೆ ನೀರು ಬರುವುದಿಲ್ಲ. ನಾವು ಈ ಸಂದರ್ಭದಲ್ಲಿ ಅಲ್ಲಿ ಜಾಕವೆಲ್ ಮಾಡಲಿಲ್ಲವೆಂದರೆ ಇನ್ನೂ ಎರಡು ವರ್ಷಗಳ ಕಾಲ ನೀರು ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ತಕ್ಷಣ ತಾವು ಒಂದು emergency meeting ಕರೆಯಬೇಕು. KIADB ಯವರು ಬರೀ ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ಅವರು ಈ ರೀತಿ ಸುಳ್ಳು ಮಾಹಿತಿ ಕೊಡುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ ನಾವು ಇದನ್ನು ಹಕ್ಕುಚ್ಯುತಿಗೆ ಹಾಕುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಕೆಲವು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ KIADB ಯವರು ನನ್ನ ಗಮನಕ್ಕೆ ತಂದಿಲ್ಲ. ತಾವು ಜಾಕ್‌ವೆಲ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ರೈತರ agitation ಬಗ್ಗೆ ಪ್ರಸ್ತಾಪ ಮಾಡಿದಿರಿ, ಈ ಎಲ್ಲಾ ವಿಷಯಗಳ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ. ಒಂದು ವೇಳೆ ಇದರ ಬಗ್ಗೆ ಅವಶ್ಯಕತೆಯಿದ್ದರೆ ಒಂದು ಸಭೆಯನ್ನು ಕೂಡ ಕರೆಯುತ್ತೇನೆ. ಮುಖ್ಯವಾಗಿ ಈ ಯೋಜನೆಯ ಪ್ರಕಾರ ಡಾಬಸ್‌ಪೇಟೆ, ಸೋಂಪುರ, ಅವ್ವೇರಹಳ್ಳಿ ಮತ್ತು ಕೈಗಾರಿಕೆ ಪ್ರದೇಶಕ್ಕೆ ನಾವು 15 ಎಂ.ಎಲ್.ಡಿ. ನೀರು ಸರಬರಾಜು ಮಾಡಬೇಕೆಂದು ಏನಿದೆ, ಇದಕ್ಕೆ ನಾವು 36.86 ಕಿಲೋಮೀಟರ್ ನಾವು ಪೈಪ್‌ಲೈನ್



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹಾಕುವುದಕ್ಕೆ ಐ.ವಿ.ಆರ್.ಸಿ.ಎಲ್. ಕಂಪನಿಗೆ ಈ ಕಾಮಗಾರಿಯನ್ನು ವಹಿಸಿ ಕೊಟ್ಟಿರುವುದು ನಿಜ. ಅವರು ಕೇವಲ 13 ಕಿಲೋಮೀಟರ್ ಕೆಲಸ ಮಾಡಿದ್ದಾರೆ. ಈಗ ಬಹಳ ಮಂದಗತಿಯಿಂದ ಕೆಲಸ ನಡೆಯುತ್ತಿದೆ. ಅದಕ್ಕೆ ಕಂಪನಿಗೆ ಸಹ show-cause notice ಕೊಟ್ಟಿದೆ. ಈ ಕಾಮಗಾರಿಗೆ ಏನು ಭೂಮಿ ಬೇಕಾಗಿತ್ತು ಎಂದು ದಿನಾಂಕ 12 ಅಥವಾ 13ನೇ ತಾರೀಖು ಅಂದರೆ 2-3 ದಿವಸದ ಹಿಂದೆ ಫೈಲ್ ಬಂದಿತ್ತು, ಅದಕ್ಕೆ 28(4) approve ಮಾಡಿದ್ದೇನೆ. ಅಲ್ಲಿ ಮುಖ್ಯವಾಗಿ ನೀರು ಬರಬೇಕು ಹೌದಲ್ಲವೇ? ಹಾಗಾಗಿ ತಾವು ಈಗ ಹೊಸ ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ.

ಉಪಾಧ್ಯಕ್ಷರು : ಒಂದು ಸಭೆ ಕರೆಯುತ್ತಾರೆ.

ಶ್ರೀ ಬಿ. ಸುರೇಶ್‌ಗೌಡ : ಮೊದಲನೆಯದಾಗಿ ಅಲ್ಲಿ ಎರಡು ಬಾಟಲ್ ನೆಕ್ ಬರುತ್ತದೆ. ಇನ್ನೊಂದು ರೈತರು ಬಂದು agitation ಮಾಡಿ ಸರ್ವೆ ಮಾಡುವುದಕ್ಕೆ ಬಂದಾಗ ಓಡಿಸಿದ್ದಾರೆ. ಅದು ಕೂಡ ಸರ್ವೆಯಾಗಿಲ್ಲ. ಮೂರನೆಯದು ರೈಲ್ವೆ ಟ್ರಾಕ್ ಅಲೈನ್‌ಮೆಂಟ್ ಚೇಂಜ್ ಆಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಇದರ ಬಗ್ಗೆ ಸಭೆ ಮಾಡಿ ಇದನ್ನು ಇತ್ಯರ್ಥ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ. ಸಭೆಯನ್ನು ಅಧಿವೇಶನ ಆದನಂತರ ಆದಷ್ಟುಬೇಗ ಮಾಡುತ್ತೇನೆ. ಅದಕ್ಕೆ 15 ದಿವಸವಾದರೂ ಬೇಕಲ್ಲವೇ?

ಶ್ರೀ ಬಿ. ಸುರೇಶ್‌ಗೌಡ : ಧನ್ಯವಾದಗಳು.

ಉಪಾಧ್ಯಕ್ಷರು : ಈಗ ಹೆಚ್.ಕೆ. ಕುಮಾರಸ್ವಾಮಿಯವರು ಕೇಳಿ. ನಿಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿದೆಯೋ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ನಾಳೆ ಕೊಡುತ್ತಾರೆ.

ಉಪಾಧ್ಯಕ್ಷರು : ಮಾನ್ಯ ಗುರುಪಾಟೀಲ ಶಿರವಾಳ ರವರು ಕೇಳಿ.

**ವಿಷಯ : ಯಾದಗಿರಿ ಜಿಲ್ಲೆ ಸುರಪುರದ ನಾಗನೂರ ವಿ.ಎಸ್.ಎಸ್ ಬ್ಯಾಂಕ್ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿಕೊಂಡಿದ್ದರೂ ಅವರ ವಿರುದ್ಧ ಈವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ**

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ) : ಮಾನ್ಯ ಉಪಾಧ್ಯಕ್ಷರೆ, ಯಾದಗಿರಿ ಜಿಲ್ಲೆ ಸುರಪುರದ ನಾಗನೂರ ವಿ.ಎಸ್.ಎಸ್ ಬ್ಯಾಂಕ್ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿಕೊಂಡಿದ್ದರೂ ಅವರ ವಿರುದ್ಧ ಈವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

(ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಗುರುಪಾಟೀಲ ಶಿರವಾಳ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆದಿದ್ದೆ, ಅದಕ್ಕೆ ಉತ್ತರ ಬಂದಿದೆ. ನಾನು ಹೋದ ಅಧಿವೇಶನದಲ್ಲಿ ದಿನಾಂಕ 22.03.2017 ರಂದು ಸುರಪುರ ತಾಲ್ಲೂಕು ನಗನೂರ ವಿ.ಎಸ್.ಎನ್.ಎನ್. ಸೊಸೈಟಿಯಲ್ಲಿ ಕಾರ್ಯದರ್ಶಿಯವರು 134 ರೈತರ ಹೆಸರಿನಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ಸುಮಾರು 37 ಲಕ್ಷ ರೂ.ಗಳ ದುರುಪಯೋಗ ಮಾಡಿಕೊಂಡಿದ್ದಾರೆಂದು ಗಮನವನ್ನು ಸೆಳೆದಿದ್ದೆ. ತಾವು ಆ ಸಂದರ್ಭದಲ್ಲಿ ವರದಿ ತರಿಸಿ 60 ದಿವಸದೊಳಗಾಗಿ ಕ್ರಮವಹಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಯಾವುದೇ ಕ್ರಮವಾಗಿಲ್ಲ. ಅದಕ್ಕೆ ತಕ್ಷಣ ವರದಿ ತರಿಸಿ ತಪ್ಪಿತಸ್ಥರ ಮೇಲೆ ಕ್ರಮ ಆಗಬೇಕೆನ್ನುವ ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ದಿನಾಂಕ : 03.06.2017 ರೊಳಗೆ ವಿಚಾರಣಾ ವರದಿ ಸರ್ಕಾರದ ಮುಂದಿದ್ದು, ಅದು ಪರಿಶೀಲನೆಯಲ್ಲಿದೆ. ತಪ್ಪಿತಸ್ಥರು ಯಾರಿದ್ದರೂ ಕೂಡ ಅವರ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಿರ್ದೇಶನವನ್ನು ನೀಡುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಅಪ್ಪಚ್ಚುರಂಜನ್ ರವರು ಕೇಳಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

13-06-2017

**ವಿಷಯ : ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಆರಂಭಗೊಂಡಿರುವ ಮೆಡಿಕಲ್ ಕಾಲೇಜಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೇ ಕಟ್ಟಡ ನಿರ್ಮಾಣ ಮಾಡಿರುವ ಹಾಗೂ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ**

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್)(ಮಡಕೇರಿ) : ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಆರಂಭಗೊಂಡಿರುವ ಮೆಡಿಕಲ್ ಕಾಲೇಜಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೇ ಕಟ್ಟಡ ನಿರ್ಮಾಣ ಮಾಡಿರುವ ಹಾಗೂ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

(ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಎಂ.ಪಿ. ಅಪ್ಪಚ್ಚು(ರಂಜನ್) : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಮೆಡಿಕಲ್ ಕಾಲೇಜು ಪ್ರಾರಂಭವಾಗಿದೆ. ಅಲ್ಲಿನ ಕಟ್ಟಡದ ಕಾಮಗಾರಿಯ ಕಾಲಮಿತಿಯಾದರೂ ಕೂಡ ಪೂರ್ಣಗೊಳಿಸಲಿಲ್ಲ. ಆದ್ದರಿಂದ ಬಹಳಷ್ಟು ಸವಲತ್ತುಗಳಿಂದ ವಂಚನೆಯಾಗಿದೆ. ಅಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ. ಅಲ್ಲಿರುವ ಮಕ್ಕಳಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಕೆಲಸವನ್ನು ಯಾವಾಗ ಮಾಡುತ್ತೀರೆಂದು ಹೇಳಬೇಕು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದೆ. ಈ ವಿಚಾರದಲ್ಲಿ ವಿಳಂಬವಾಗಿರುವುದು ನಿಜ. ಅದಕ್ಕೆ ಹಲವಾರು ಕಾರಣಗಳಿವೆ, ಕೊಡಗಿನಲ್ಲಿ ಕೆಲಸ ಮಾಡುವುದು ಬಹಳ ಕಷ್ಟ ಇದೆ ಎನ್ನುವುದು ಅವರಿಗೂ ಗೊತ್ತಿದೆ. ನಾವು 75 ಲಕ್ಷ ರೂಪಾಯಿ ಫೈನ್ ಕೂಡ ಇಲ್ಲಿಂದ ಹಾಕಿದ್ದೇವೆ. ಆದಷ್ಟುಬೇಗ ಆ ಕಾಮಗಾರಿಯನ್ನು ಮುಗಿಸುವುದಕ್ಕೆ ಮೇಲಿಂದ ಮೇಲೆ ನಾವು ರಿವ್ಯೂ ಮಾಡಿಸುತ್ತಿದ್ದೇವೆ, ನಮ್ಮ ಕಾರ್ಯದರ್ಶಿಯವರು ಕೂಡ ಅಲ್ಲಿಗೆ ಹೋಗಿದ್ದರು. ಈ ಸಾರಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಮಗೆ MCI ನಿಂದ permission ಸಿಕ್ಕಿದೆ. ಈ ವರ್ಷ ಕೂಡ MCI ನವರಿಗೆ convince ಮಾಡಿ 150 ಸೀಟಿಗೆ permission ತೆಗೆದುಕೊಂಡಿದ್ದೇವೆ. ಅಲ್ಲಿ ನೀರಿನ ಸಮಸ್ಯೆ ಇದೆ, ನೀರನ್ನು ಬೇರೆ ಕಡೆಯಿಂದ ತೆಗೆದುಕೊಂಡು ಬರಬೇಕು, ಅದಕ್ಕೆ 6.50 ಕೋಟಿ ರೂಪಾಯಿ ಎಸ್ಟಿಮೇಟ್ ಆಗಿದೆ. ಅದಕ್ಕೆ ಬೇಕಾಗಿರುವ ಹಣವನ್ನು ಒದಗಿಸಿ ಆದಷ್ಟುಬೇಗ ಈ ಕೆಲಸವನ್ನು ಮಾಡಿಸಬೇಕೆನ್ನುವ ಕಮಿಟ್‌ಮೆಂಟ್ ಇದೆ. ಈ ಕೆಲಸವನ್ನು ಆದಷ್ಟುಬೇಗ ಮಾಡಿಸುತ್ತೇವೆ. ಅವರು ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದರು, ಆ ಮಾಹಿತಿ ಉತ್ತರದಲ್ಲಿ ಇರಲಿಲ್ಲ, ಬಿಟ್ಟುಹೋಗಿತ್ತು, ಅದನ್ನು ತರಿಸಿಕೊಂಡಿದ್ದೇನೆ. 161 ಕೋಟಿ ರೂಪಾಯಿಯಲ್ಲಿ ಈಗಾಗಲೇ 138 ಕೋಟಿ ರೂಪಾಯಿ ಖರ್ಚಾಗಿದೆ. ಅದನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೇನೆ. (ಮುಂದು)

13-06-17 - 7.50 - (51) - RD-CP

**ವಿಷಯ: ಮೂಡಿಗೆರೆ ತಾಲ್ಲೂಕಿನ ಕಳಸ ಪಟ್ಟಣದ ಮಹಾವೀರ ರಸ್ತೆಯ ದುರಸ್ತಿ ಮತ್ತು ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡದೇ ಇರುವ ಬಗ್ಗೆ.**

ಶ್ರೀ ಬಿ.ಬಿ.ನಿಂಗಯ್ಯ(ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಕಳಸ ಪಟ್ಟಣದ ಮಹಾವೀರ ರಸ್ತೆಯ ದುರಸ್ತಿ ಮತ್ತು ಅಭಿವೃದ್ಧಿಗೆ ರೂ.75.00 ಲಕ್ಷಗಳನ್ನು ಮಂಜೂರು ಮಾಡಿದ್ದರೂ ಇದುವರೆವಿಗೂ ಅನುದಾನ ಬಿಡುಗಡೆ ಮಾಡದೇ ಇರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

(ಮಾನ್ಯ ಸಚಿವರು ನೀಡಿದ ಹೇಳಿಕೆಯನ್ನು ಲಗತ್ತಿಸಿದೆ)

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಹಳ ಸ್ಪಷ್ಟವಾಗಿದೆ. ತಾವು ಇದರ ಬಗ್ಗೆ ಪ್ರಶ್ನೆ ಕೇಳುವ ಅಗತ್ಯವೇ ಇಲ್ಲ. ಈಗಾಗಲೇ ರಿಪೇರಿಗೆ ಮತ್ತು ಅಭಿವೃದ್ಧಿಗೆ 75 ಲಕ್ಷ ರೂ.ಗಳು ಬೇಕಾಗಿದೆ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದರ ಬಗ್ಗೆ ದಿನಾಂಕ:29.05.2017ರಂದು estimate ಬಂದಿದೆ. ಅದನ್ನು ಪರಿಶೀಲನೆ ಮಾಡಿ, ಮಾನ್ಯ ಸಚಿವರು, ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆಂದು ತಮಗೆ ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಉಪಾಧ್ಯಕ್ಷರೆ, ಕಳಸ ಒಂದು ಮುಖ್ಯ ಪಟ್ಟಣವಾಗಿದ್ದು, ಅದಕ್ಕೆ ಕೊಟ್ಟಿರುವಂಥ ಹಣ ಕೊಟ್ಟು ಒಂದು ವರ್ಷವಾಗಿದೆ, ಇನ್ನೂ ಹಣ ಬಿಡುಗಡೆಯಾಗಿಲ್ಲ. ಒಂದು ನಿರ್ದಿಷ್ಟ ಸಮಯದಲ್ಲಿ ಬಿಡುಗಡೆ ಮಾಡಿಸಿ ಕೊಡಬೇಕು.

ಉಪಾಧ್ಯಕ್ಷರು: ಬೇಗ ಮಾಡಿಸಿ ಕೊಡಿ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಸಚಿವರು, ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಪುನ: ಅವರಿಗೆ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಎಂ.ರಾಜಣ್ಣನವರೆ, ಹೇಳಿ.

**ವಿಷಯ: ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಎಂ.ಎಸ್.ಐ.ಎಲ್. ಮದ್ಯದಂಗಡಿಗಳನ್ನು ಮಂಜೂರು ಮಾಡುವ ಬಗ್ಗೆ.**

****

ಶ್ರೀ ಎಂ.ರಾಜಣ್ಣ(ಶಿಡ್ಲಘಟ್ಟ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಘನ ಸರ್ಕಾರ ಎಲ್ಲಾ ಕ್ಷೇತ್ರಗಳಿಗೆ ಎಂ.ಎಸ್.ಐ.ಎಲ್. ನಿಂದ ತಲಾ 4 ಕೇಂದ್ರಗಳನ್ನು ಕೊಟ್ಟಿದೆ. ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರಕ್ಕೆ ಕೊಟ್ಟಾಗ, ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನನ್ನ ಬಳಿ ಬಂದು ಚರ್ಚೆ ಮಾಡಿ, ಕೊಟ್ಟಿದ್ದರು. ಆದರೆ ಕೇಂದ್ರಗಳನ್ನು ಏನು ಮಂಜೂರು ಮಾಡಿದ್ದಾರೋ, ಅದನ್ನು ನಮ್ಮ ಅಧಿಕಾರಿಗಳು ದುರುಪಯೋಗ ಮಾಡಿಕೊಂಡು, ನಾನು ಕೊಟ್ಟಂಥ ಸ್ಥಳವನ್ನು ಬದಲಾಯಿಸಿ, ಮಾಜಿ ಮಂತ್ರಿಗಳು, ಮಾಜಿ ಶಾಸಕರು ತಿಳಿಸಿದ ಕಡೆ ಮಾಡುತ್ತಿದ್ದಾರೆ. ಅದನ್ನು ಸರಿ ಪಡಿಸಬೇಕು, ನಾನು ಹೇಳಿದ ಜಾಗಗಳಿಗೆ ಕೊಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

(ಮಾನ್ಯ ಮಂತ್ರಿಗಳು ನೀಡಿದ ಹೇಳಿಕೆಯನ್ನು ಲಗತ್ತಿಸಿದೆ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಯಾರು ಶಿಫಾರಸ್ಸು ಮಾಡುತ್ತಾರೆ, ಯಾರು ಬಿಡುತ್ತಾರೆನ್ನುವಂಥ ಪ್ರಶ್ನೆಯಲ್ಲ. ಇದು ಶಾಸಕರ ಅಧ್ಯಕ್ಷತೆಯಲ್ಲಿ ಕುಳಿತು ಚರ್ಚೆಯಾಗಿ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತೀರ್ಮಾನವಾಗುವಂಥದ್ದಲ್ಲ. ಎಲ್ಲೆಲ್ಲಿ demand ಇದೆಯೆಂಬನ್ನು ನೋಡಿ ಕೊಡಬೇಕಾಗುತ್ತದೆ. ತಾವು ಕೇಳಿದ ಜಾಗದಲ್ಲಿ ವಿರೋಧ ಬಂದ ಹಿನ್ನೆಲೆಯಲ್ಲಿ ಕೊಡುವುದಕ್ಕೆ ಆಗಿಲ್ಲ.

ಶ್ರೀ ಎಂ.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿದ ಜಾಗದಲ್ಲಿ ವಿರೋಧ ಏನೂ ಇಲ್ಲ. ಅಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ NOC ಕೊಟ್ಟಿದ್ದಾರೆ, ಜನರು support ಮಾಡಿದ್ದಾರೆ, ಎಲ್ಲವೂ ಆಗಿದೆ. ಅಲ್ಲಿ ಸರ್ಕಾರದ ಸುತ್ತೋಲೆ ಇದೆ, ಅದನ್ನು M.S.I.Lನ ಎಂ.ಡಿಯವರೆ ಕೊಟ್ಟಿದ್ದಾರೆ. ಅದರಲ್ಲಿ ಶಾಸಕರನ್ನು ಸಂಪರ್ಕಿಸಿ ಮಾಡಿ ಎಂದು ಕೊಟ್ಟಿದ್ದಾರೆ. ಅದರಲ್ಲಿ ಮಾಜಿ ಶಾಸಕರನ್ನು ಸಂಪರ್ಕಿಸಿ ಎಂದು ಕೊಟ್ಟಿಲ್ಲ. ನಾನು ಹೇಳಿದ್ದೇನೆ, ಅಲ್ಲಿ ಮಾಡಿಕೊಂಡು ಹೋಗಿ ಎಂದು ಹೇಳಿದಾಗ, ಅದನ್ನು ಬಾರ್‌ಗಳು ಎಲ್ಲಿವೆ, ಅಲ್ಲಿಗೆ ಕೊಟ್ಟಿದ್ದಾರೆಯೇ ಹೊರತು, ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ಗ್ರಾಮೀಣ ಪ್ರದೇಶವಿದೆ, ಅಲ್ಲಿಗೆ ಕೊಟ್ಟಿಲ್ಲ. ಅದು ಎಲ್ಲಿಗೆ ಅವಶ್ಯಕತೆ ಇದೆ ಅಲ್ಲಿಗೆ ಕೊಡಲಿ, ಎಲ್ಲಿ sale ಆಗುತ್ತದೆ ಅಲ್ಲಿಗೆ ಕೊಡಲಿ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಈಗ ಯಾರು ವಿರೋಧ ಮಾಡಿದ್ದಾರೆನ್ನುವುದಕ್ಕಿಂತ ಹೆಚ್ಚಾಗಿ, ಸ್ಥಳ ಸೂಕ್ತವಾಗಿದ್ದರೆ ಅಲ್ಲೆ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ಎಂ.ಎಸ್.ಐ.ಎಲ್.ನವರು ಡಿ.ಡಿ. ಕೊಟ್ಟಿದ್ದಾರೆ. ಆ ಡಿ.ಡಿ.ಯನ್ನು ಮೂರು ತಿಂಗಳು ಇಟ್ಟುಕೊಂಡು, ಜಿಲ್ಲಾಡಳಿತವು ಆ ಡಿ.ಡಿಯನ್ನು ಮತ್ತೆ ವಾಪಸ್ಸು ಕಳುಹಿಸಿದ್ದಾರೆ.

ಶ್ರೀ ಕೆ.ಎಸ್.ಮಂಜುನಾಥ ಗೌಡ: ಮಾನ್ಯ ಮಂತ್ರಿಯವರೆ, ಅಲ್ಲಿ ಏನಾಗುತ್ತಿದೆ.

ಉಪಾಧ್ಯಕ್ಷರು: ಚರ್ಚೆ ಆಯಿತು ಬಿಡಿ. ಈ ವಿಷಯ ಮಾನ್ಯ ಎಂ.ರಾಜಣ್ಣನವರು ಕೇಳಿರುವುದು.

ಶ್ರೀ ಕೆ.ಎಸ್.ಮಂಜುನಾಥ ಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ಈ ಸದನದಲ್ಲಿ ಎಂ.ಎಲ್.ಎ.ಗಳಿದ್ದರೆ, ಕೆಲವು ಬ್ರೋಕರ್ಸ್ ಇರುತ್ತಾರೆ, ಅವರು ಹಣವನ್ನು ತೆಗೆದುಕೊಂಡು, ಅವರಿವರ letter ಅನ್ನು ತೆಗೆದುಕೊಂಡು ಇಲ್ಲಿ ನಿಮ್ಮ ಹತ್ತಿರ ಬರುತ್ತಿದ್ದಾರೆ. ಅದು ಆ ರೀತಿಯಾಗುತ್ತಿರುವುದು, ಇಲ್ಲಿ ಬರೀ ಎಂ.ಎಸ್.ಐ.ಎಲ್. ನದು ಅಲ್ಲ. ಅದೇ ರೀತಿ transferಗಳದ್ದು ಒಂದು ದೊಡ್ಡ ದಂಧೆಯಾಗಿ ಕುಳಿತಿದೆ. ಸಣ್ಣ ಸಣ್ಣ PDO, EOಗಳ ಬಳಿ ಹಣವನ್ನು ವಸೂಲಿ ಮಾಡಿಕೊಂಡು,

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯಾರ ಯಾರದ್ದೊ letterಗಳನ್ನು ತೆಗೆದುಕೊಂಡು ಬಂದು, ಇಲ್ಲಿ ಕೆಲಸ ಮಾಡಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಕೈಗಾರಿಕೆ ಮಂತ್ರಿಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ಚರ್ಚೆ ಇದೆ.

ಉಪಾಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ: ಉಪಾಧ್ಯಕ್ಷರೆ, ಇರಲಿ ಮಾಡೋಣ, 9 ಗಂಟೆಯವರೆಗೂ ಆಗಲಿ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ: ಅದು ಬೇರೆ ವಿಚಾರ. ಮಾನ್ಯ ರಾಜಣ್ಣನವರೆ, ತಾವು ಈಗ ಹೇಳಿದ್ದೀರಿ, ಸ್ಥಳ ಸೂಕ್ತವಾಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ, ಬಿಡಿ.

ಉಪಾಧ್ಯಕ್ಷರು: Ok, ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ರಾತ್ರಿ 7 ಗಂಟೆ 53 ನಿಮಿಷಗಳಿಗೆ ಮುಕ್ತಾಯಗೊಂಡು ಪುನ:
ದಿನಾಂಕ: 14.06.2017ರಂದು ಬೆಳಿಗ್ಗೆ 10.30 ಗಂಟೆಗೆ ಸೇರಲು
ನಿಶ್ಚಯಿಸಿತು)**

*******

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.